UNIVERSAL LIBRARY
OU_200016
UNIVERSAL LIBRARY

K83
.K19C
K48934
ಕೃಷ್ಣ, ಅ.ನಾ.
ಬೆಂಗಾಲಿ ಚೆಲುವೆ 1953

OSMANIA UNIVERSITY LIBRARY

Call No. K83 K19C Accession No. K4897.

Author ಕಸ್ತೂರಿ ನಾ.

Title ಚೆಂಗಾಲಿ ಚೆಲುವ 1953

This book should be returned on or before the date last marked below.

ಪ್ರಥಮ ಮುದ್ರಣ ೧೯೫೩

ಬೆಲೆ : ರೂ. ೨–೮–೦

[ಎಲ್ಲ ಹಕ್ಕುಗಳೂ ಕಾದಿಡಲಾಗಿವೆ]

ಮುದ್ರಣಕಾರರು :

ಬಿ. ಎಸ್. ನಾರಾಯಣರಾವ್,

"ಓಂಕಾರ್ ಪ್ರೆಸ್", ಅರಳೇಪೇಟೆ, ಬೆಂಗಳೂರು ನಗರ.

# ಕಾದಂಬರಿಗೆ ಮೊದಲು

ಪ್ರಿಯಬಂಧುಗಳೇ,

ಇದೀಗ ನಮ್ಮ ಬಾಳಬೆಳಕು ಸಾಹಿತ್ಯಮಾಲೆಯ ಹದಿಮೂರನೆಯ ಕಿರಣ. ಈವರೆಗಿನ ಹನ್ನೆರಡರಲ್ಲಿ ಶ್ರೀ ಮೂರ್ತಿಗಳವರ "ದೇವರು ಯಾರು" ಒಂದನ್ನು ಬಿಟ್ಟರೆ ಉಳಿದುವೆಲ್ಲವೂ 'ತಿರುಕ'ನವೇ. ಹಿಂದೊಮ್ಮೆ ನಾವು ನಮ್ಮೀ ಸಾಹಿತ್ಯಮಾಲೆಯು ತಿರುಕನಿಗೇ ಮೀಸಲಾದುದಲ್ಲ, ಪ್ರಸಿದ್ಧ ಸಾಹಿತಿಗಳೆಲ್ಲರ ಕೃತಿಗಳನ್ನೂ ಪ್ರಕಟಿಸುವ ಹಂಬಲ ನಮಗಿದೆ ಎಂಬುದಾಗಿ ನಿವೇದಿಸಿಕೊಂಡಿದ್ದೆವು. ಆದರೆ ನಮ್ಮ ಬಡತನಕ್ಕೆ ಯತ್ಕಿಂಚಿತ್ತಾದರೂ ಸಂಭಾವನೆಯನ್ನು ಕೊಟ್ಟು ಬೇರೆ ಬೇರೆ ಲೇಖಕರ ಸಾಹಿತ್ಯಗಳನ್ನು ಓದುಗರಿಗೆ ಒದಗಿಸಬೇಕೆಂಬ ನಮ್ಮ ಬಯಕೆಯು ಈಡೇರದುದರಿಂದ ನಾವು ಒಳಗೊಳಗೇ ನೊಂದುಕೊಂಡಿದ್ದೆವು. ಈ ನಮ್ಮ ನೋವನ್ನು ಅರಿತೋ ಏನೋ ನಮ್ಮ ಆತ್ಮೀಯ ಸಹೋದರರೂ ಹಿರಿಯ ಸಾಹಿತಿಗಳೂ ಆದ ಶ್ರೀ ನಾ. ಕಸ್ತೂರಿಯವರು ತಮ್ಮ ಈ ಅಮೂಲ್ಯವಾದ ಕಾದಂಬರಿಯನ್ನು ನಮ್ಮ ಮಡಿಲಲ್ಲಿಟ್ಟು ನಮ್ಮನ್ನು ಹರಸಿದ್ದಾರೆ. ಈ ಬಗ್ಗೆ ನಾವು ಅವರಿಗೆ ಚಿರಋಣಿಗಳು. ನಿಜವಾದ ಕವಿಯು ತನ್ನ ಕೃತಿರಚನೆಗೆ ಅವತಾರಿಕ ಪುರುಷರ, ರಾಜರಾಣಿಯರ, ಶ್ರೀಮಂತರ ವಿಲಾಸ ಜೀವನವೇ ತನ್ನ ಕಥಾವಸ್ತುವಾಗಬೇಕೆಂದು ಹಲುಬದೆ ಜೀವನ ನಿರ್ವಹಣಕ್ಕಾಗಿ ಅಹರ್ನಿಶ ದುಡಿಯುವ ಬಡಕೂಲಿಯ ಹೊಟ್ಟೆಯ ಹೋರಾಟವನ್ನೇ ಹೃದಯಂಗಮವಾಗಿ ಬರೆಯಬಲ್ಲನೆಂಬುದನ್ನು ಅಶ್ಲೀಲತೆಗೆ ಎಡೆಗೊಡದ ತಿಳಿಹಾಸ್ಯದ ರಸದೂಟವನ್ನು ಕೊಡುವುದರಲ್ಲಿ ಸಿದ್ಧಹಸ್ತರಾದ ಶ್ರೀ ಕಸ್ತೂರಿಯವರು ತಮ್ಮ ಕಾದಂಬರಿಯಲ್ಲಿ ಚಿತ್ರಿಸಿ ತೋರಿಸಿದ್ದಾರೆ. ಅವರೀಕೃತಿಯು ಓದುಗರ ಮೆಚ್ಚುಗೆಗೆ ಪಾತ್ರವಾದರೆ ನಾವು ಧನ್ಯರು. ತಮ್ಮ ಬಿಡುವಿಲ್ಲದ ಕಾರ್ಯದಲ್ಲೂ ಅಚ್ಚಿನ ಕರಡುಗಳನ್ನು ತಿದ್ದಿ ಸೂಕ್ತ ಸಲಹೆಯನ್ನಿತ್ತ

ಶ್ರೀ ಎಂ. ವಿ. ಸೀತಾರಾಮಯ್ಯನವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸ ದಿದ್ದರೆ ತಪ್ಪಾಗುತ್ತದೆ.

ಈ ಕಾದಂಬರಿಗೆ ಮುಂಚಿತವಾಗಿಯೇ ಶ್ರೀ ಮೂರ್ತಿಗಳವರ "ಸಾಧನಾ" ಮತ್ತು ಶ್ರೀ ಅನಂತನಾರಾಯಣರವರ "ಅತ್ತಿಗೆ"ಯು ಪ್ರಕಟವಾಗಬೇಕಾಗಿತ್ತು. ಆದರೆ ಬಿಡುವಿಲ್ಲದ ಕಾರ್ಯದಲ್ಲಿ ತೊಡಗಿರುವ ಶ್ರೀ ಮೂರ್ತಿಗಳವರ "ಸಾಧನೆ"ಯಿನ್ನೂ ಸಿದ್ಧವಾಗಿಲ್ಲ. ಶ್ರೀ ಅನಂತ ನಾರಾಯಣರ "ಅತ್ತಿಗೆ" ಈ ಬಡವರ ಗುಡಿಸಲ ಹೊಸಿಲನ್ನು ತುಳಿಯಲು ಅಪೇಕ್ಷಿಸಲಿಲ್ಲ. ಹೀಗಾಗಿ ನಮ್ಮ ವಚನವನ್ನು ನಾವು ಪಾಲಿಸದವ ರಾಗಿದ್ದೇವೆ. ಆದರೂ ಮುಂದಿನ ವರ್ಷ ಇಂದಿನ ಪ್ರತಿಕೂಲ ವಾತಾವರಣ ದಲ್ಲೂ ನಾಡಿನ ಬೇರೆ ಬೇರೆ ಪ್ರಸಿದ್ಧ ಲೇಖಕರ ಗ್ರಂಥಗಳನ್ನು ಪ್ರಕಟಿಸಿ ಓದುಗರ ಅಪೇಕ್ಷೆಯನ್ನು ಈಡೇರಿಸಿಕೊಡುತ್ತೇವೆಂಬ ಭರವಸೆಯನ್ನು ನೀಡುತ್ತೇವೆ ಎಂದಿನಂತೆಯೇ ಈ ಹೊತ್ತಗೆಯನ್ನು ಪ್ರಕಟಿಸುವುದರಲ್ಲಿ ನಮಗೆ ನೆರವಾದ ಎಲ್ಲ ಬಂಧುಗಳಿಗೆ ನಮ್ಮ ನೆನಕೆಗಳು.

**ಪ್ರಕಾಶಕರು.**

# ಚೆಲುವ ಉವಾಚ

ಊಟ ಮಾಡುತ್ತಿದ್ದೆ. ಮೊಸರನ್ನಕ್ಕೆ ಉಪ್ಪು ಬೆರೆಸಿ ಕಲಸುವ ಸಮಯ. ಹೊರಬಾಗಿಲಾಚೆ ಯಾರೋ ಕೆಮ್ಮಿದರು. "ಯಾರು, ನೋಡು" ಎಂದೆ, ಅವಳಿಗೆ. ನೋಡಿದಳು. "ಯಾರೂ ಇಲ್ಲ. ನಿಧಾನವಾಗಿ ಊಟ ಮಾಡಿ! ಇವನೇ, ಈ ಚೆಲುವನೇ!"

ನಮ್ಮ ಹೊಸ ಮನೆಯನ್ನು ಕಟ್ಟಿದ ಕಂಟ್ರಾಕ್ಟರು ಜೋಡಿಸಿಕೊಟ್ಟ ಸಣ್ಣ ಜಿಂಕ್‌ಷೀಟ್ ಷೆಡ್ಡಿನಲ್ಲಿ, ನಮ್ಮ ಹಿತ್ತಿಲಲ್ಲೇ ವಾಸವಾಗಿದ್ದ ಚೆಲುವ, ಇದೇಕೆ, ಎಂದೂ ಇಲ್ಲದೆ ಇಂದು ಹೊರಬಾಗಿಲಾಚೆ ಕೆಮ್ಮಿದ, ಎಂಬುದು ಅರ್ಥವಾಗಲಿಲ್ಲ. ನನಗೆ ಆದ್ದರಿಂದ, ನಾನು ಅವಸರದಲ್ಲೇ ಊಟ ಮುಗಿಸಿದೆ.

ದಿನವೂ ಚೆಲುವನ ಓಡಾಟವೆಲ್ಲ ನಮ್ಮ ಹಿತ್ತಿಲಲ್ಲೇ. ನಾವು ನಳದ ಹತ್ತಿರಕ್ಕೋ, ಚಪ್ಪರದವರೆ ಹತ್ತಿರಕ್ಕೋ ಹೋದಾಗಲೆಲ್ಲ, ಚೆಲುವ ಷೆಡ್ಡಿನೊಳಗೆ ಆಗ ಇದ್ದರೆ, ಅವನು ತನಗೆ ತಾನೇ ಹಾಡಿಕೊಳ್ಳುತ್ತಿದ್ದ ಸ್ತೋತ್ರಗಳು ನಮ್ಮ ಕಿವಿಗೆ ಬೀಳದೇ ಇರದು. ಭಾನುವಾರವೊಂದನ್ನುಳಿದು ಮಿಕ್ಕ ಎಲ್ಲ ದಿನವೂ, ಅವನು ಬೆಳ್ಳಂಬೆಳಗೆ ಎದ್ದು, ಮುಖ ತೊಳೆದು, ಹಣೆಯ ಮೇಲೆ ಒಂದೇ ಒಂದು ಕೆಂಪು ಗೆರೆ ಎಳೆದು, ಒಲೆ ಹೊತ್ತಿಸಿ, ರಾಗಿ ಕುದಿಸಿ, ಚಟ್ನಿ ಅರೆಯುವುದನ್ನು ನಾವು ನೋಡಬಹುದು. ಗಂಡಸರು ಏಳುವ ಮೊದಲೇ ಅವನ ಅಡಿಗೆ ಕೆಲಸ ಹನ್ನೆರಡಾಣೆಯಷ್ಟು ಪೂರ್ತಿಯಾಗಿ ರುತ್ತದೆ; ಷೆಡ್ಡಿಂದೀಚೆ ಬಂದು, ಅವನು ಸೂರ್ಯದೇವನಿಗೆ ಕೈಮುಗಿಯು ತ್ತಿರುತ್ತಾನೆ. ಎದ್ದಿರಾ, ಎಂದು ನಮ್ಮನ್ನು ಪ್ರೀತಿ ಗೌರವಗಳಿಂದ ಸ್ವಾಗತಿಸು ತ್ತಾನೆ. ತನ್ನ ಕೆಲಸದ ಸ್ಥಳಕ್ಕೆ ಹೊರಡುವ ಮುನ್ನ, ಗಳಿಗೆಗೆ ಎರಡು ಬಾರಿ, ಗಂಟೆ ಎಷ್ಟು, ಎಂದು ನಮ್ಮನ್ನು ಕಾತುರತೆಯಿಂದ ವಿಚಾರಿಸುತ್ತಾನೆ. ಅವನ ಷೆಡ್ಡಿನೊಳಕ್ಕೆ ತಲೆ ತೂರಿಸಿ ಕಣ್ಣುಬಿಟ್ಟರೆ, ಅದರ ಅಚ್ಚುಕಟ್ಟನ್ನು ನೋಡಿ ನಮಗೆ ಅಚ್ಚರಿಯಾಗುವುದು.

ಹೊಸದಾಗಿ ಮನೆ ಕಟ್ಟಿಸುವುದಕ್ಕಾಗಿ ಊರಾಚೆ ಸೈಟ್ ಸಂಪಾದಿಸಿ, ಪ್ಲಾನ್ ಬರೆಸಿ ಒಪ್ಪಿಸಿ, ಕಂಟ್ರಾಕ್ಟರ್ ಗೊತ್ತುಮಾಡಿ, ಸಾಲದ ವ್ಯವಸ್ಥೆಯನ್ನು ಸರಿಪಡಿಸಿ, ಗುದ್ದಲಿ ಪೂಜೆಗಾಗಿ ಅಲ್ಲಿಗೆ ಹೋದ ದಿನವೇ ನನಗೆ ಚೆಲುವನ ಪ್ರಥಮ ಪರಿಚಯ. ಗುದ್ದಲಿ ಪಿಕಾಸಿಗಳಿಗೆ ಅಂದು ಅರಶಿನ ಕುಂಕುಮ ಹಚ್ಚಿದವನು ಅವನು. ಯಾವ ಕಂಟಕವೂ ಇಲ್ಲದೆ, ಸುಖಮಯವಾಗಿ ಅಲ್ಲಿ ಬಾಳಿ ಬದುಕುವಂತೆ, ಮನೆಯನ್ನು ಪೂರೈಸಿ ಕೊಡಪ್ಪ, ಪರಮಾತ್ಮ, ಎಂದು ನಾನು ಕಣ್ಣು ಮುಚ್ಚಿಕೊಂಡು ಕೈ ಜೋಡಿಸಿ ಪ್ರಾರ್ಥಿಸಿದಾಗ, ಚೆಲುವನೂ ಕೂಡ, ನನ್ನ ಅಂತರಂಗ ಮಿಡಿದದ್ದನ್ನು ಅರಿತವನಂತೆ, "ಆಗುತ್ತೆ, ಸ್ವಾಮಿ! ಏನೂ ತಾಪತ್ರಯವಿಲ್ಲದೆ ಮನೆ ಆಗುತ್ತೆ; ಇಲ್ಲಿ ನಿಮ್ಮ ಮಕ್ಕಳು ಮರಿ ಎಲ್ಲ ತಂಟೆ ತಕರಾರಿಲ್ಲದೆ ನೂರು ವರ್ಷ ಬಾಳೋ ಬಂಗಲಿ ಏಳುತ್ತೆ, ನೋಡ್ತಿರಿ" ಎಂದ.

ಆಗಲೇ ನನಗೆ ಕಂಟ್ರಾಕ್ಟರು ಹೇಳಿದ್ದು, "ತುಂಬಾ ಸಾಚಾ ಇಸಮು, ಇವನು; ಚೆಲುವ ಅಂತಾರೆ, ಇವನನ್ನ. ಚೆಂಗೂಲಿ ಚೆಲುವ. ಇಲ್ಲೇ ಒಂದು ಷೆಡ್ಡು ಹಾಕಿಕೊಡುತ್ತೇನೆ ಇವನಿಗೆ, ನಾಯಿಯ ಹಾಗೆ ಕಾಯುತ್ತಾನೆ, ನನ್ನ ಸಾಮಾನುಗಳನ್ನೆಲ್ಲ" ಎಂದರು. ಅವರ ಹೊಗಳಿಕೆಗೆ ಚೆಲುವ, ಅದುರಿ ಬಾಡಿದಂತೆ, ನಾಚಿ ತಲೆ ತಗ್ಗಿಸಿದ. "ಸುಮಾರು ಊರುಗಳ ನೀರು ಕುಡಿದಿದಾನೆ, ಇವನು" ಎಂದು ಅವರು ಮಾತು ಮುಂದುವರಿಸಿದಾಗಂತೂ, ಚೆಲುವನ ಬಲಗೈ ಅವನ ಹೆಕ್ಕತ್ತನ್ನು ಕೆರೆಯುವುದಕ್ಕೆ ಮೊದಲು ಮಾಡಿತು; ತಲೆ ಇನ್ನೂ ತಗ್ಗಿತು.

ಇಟ್ಟಿಗೆ ಗಾರೆ ತೇಗ ತಾರ್ಸಿ ಸೆಜ್ಜೆ ಸಿಮೆಂಟು ಇತ್ಯಾದಿಗಳನ್ನು ಕುರಿತ ಪಾಂಡಿತ್ಯ ನನಗಿಲ್ಲ; ಆದರೂ, ನಾನೇ ಖುದ್ದಾಗಿ ಬಿಸಿಲಲ್ಲಿ ಒಣಗದಿದ್ದರೆ, ನನ್ನ ಕಣ್ಣಿಗೆ ಮಣ್ಣೆರಚಿ ಕಿಸೆಯಿಂದ ಕಾಸು ಇಳಿಸಿಬಿಡುತ್ತಾರೆ ಕಂಟ್ರಾಕ್ಟರು, ಎಂಬ ಭ್ರಮೆಯಿಂದ, ನಾನು ವಾರಕ್ಕೆರಡು ಮೂರು ಸಲವಾದರೂ ಅಲ್ಲಿಗೆ ಹೋಗಿಬರುತ್ತಿದ್ದೆ. ಆಗ, ನನಗೆ ಚೆಲುವನ ಉತ್ಸಾಹ, ಅವನ ಸರಸ ಸಂಭಾಷಣೆ, ಅವನ ಲವಲವಿಕೆ ಇವುಗಳ ಅರಿವಾಯಿತು. ಅವನಿದ್ದೆಡೆ,

ಕೆಲಸದವರಿಗೆ ತ್ರಾಸವೇ ಇರುವುದಿಲ್ಲ; ಆಗಾಗ, ಅವನ ಮಾತಿನ ಮತಾಪಿಗೆ, ಎಲ್ಲರೂ ಒಟ್ಟಾಗಿ ನಕ್ಕು, ಕಂಟ್ರಾಕ್ಟರ ಕೋಪಕ್ಕೆ ತುತ್ತಾಗುತ್ತಿದ್ದರು.

ಮನೆ ಕಟ್ಟಿಸುವ ಖರ್ಚನ್ನು ಳಿಸಲು ಚೆಲುವನೂ ನನಗೆ ಒಂದೆರಡು ಸಲಹೆಗಳನ್ನು ಕೊಟ್ಟ. "ಚಿಕ್ಕದಾಗಿ ಕಟ್ಟಬೇಕು, ದೊಡ್ಡದಾಗಿ ಬಾಳಬೇಕು, ಸ್ವಾಮಿ, ಅದು ಜಾಣತನ" ಎಂದು ಉಪದೇಶ ಮಾಡಿದ. "ನಿಮ್ಮ ನಂಟರಿಷ್ಟರು ನೂರೆಂಟು ಹೇಳುತ್ತಾರೆ, ಅಲ್ಲೊಂದು ಬಾಗಿಲು, ಇಲ್ಲೊಂದು ಕಿಟಕಿ, ದುಬಾರಿ ಖರ್ಚಿನ ಬಾಬತ್ತುಗಳು ಒಂದೂ ಬೇಡಿ, ಸ್ವಾಮಿ; ನಮ್ಮ ಅಯ್ಯನವರಿಗೆ ಬಿಟ್ಟುಬಿಡಿ, ಅವರಿದರಲ್ಲೇ ನುರಿತವರು, ಕಂಡವರನ್ನೆಲ್ಲ ಕೇಳಿದರೆ ಕಂಡಾಪಟ್ಟೆ ಬೋಳಿಸಿಬಿಡುತ್ತಾರೆ" ಎಂದು ಎಚ್ಚರಿಸಿದ.

ಇಟ್ಟಿಗೆ ಹೊರುವ ಚೆಂಗೂಲಿಗೆ ಇಷ್ಟು ದುರಹಂಕಾರವೆ, ಎಂದು ನನಗನ್ನಿಸುತ್ತಿರಲಿಲ್ಲ. ಅವನ ಅನುಭವ, ಅವನ ವಿನಯ, ಅವನ ಪ್ರೀತಿ ಅಷ್ಟು ಹಿರಿದು.

"ಗೃಹಪ್ರವೇಶ" ನಡೆಸಿ, ನಾವು ನಮ್ಮ ಮನೆಯಲ್ಲಿ ವಾಸವಾಗಿರಲು ತೊಡಗಿದ ಮೇಲೂ, ಚೆಲುವನ ಷೆಡ್ಡನ್ನು ಕಿತ್ತು ವರ್ಗಾಯಿಸಿ ಅವನನ್ನು ನಮ್ಮ ಹಿತ್ತಲಿಂದ ದೂರ ಮಾಡಬೇಕೆಂದು ತೋರಲಿಲ್ಲ– ಕಂಟ್ರಾಕ್ಟರು ಆಗಿಂದಾಗ್ಗೆ ಸೂಚನೆ ಕೊಟ್ಟರು; ಆದರೆ, ಮನೆ ಮಕ್ಕಳಾದಿಯಾಗಿ ಎಲ್ಲರೂ ಅದನ್ನು ವಿರೋಧಿಸಿದರು. ಕೊನೆಗೆ ನಾನೇ ಖುದ್ದಾಗಿ ಹೋಗಿ, ಅವರನ್ನು ಕಂಡು, ಅವನನ್ನು ನನ್ನಲ್ಲೇ ಸಿಲ್ಲಿಸುವಂತೆ ಬೇಡಿಕೊಂಡೆ.

ಚೆಲುವನ ಯೋಗಕ್ಷೇಮವನ್ನು ವಿಚಾರಿಸುವ ನಂಟರಿಷ್ಟರು ಯಾರೂ ಇರಲಿಲ್ಲ. ಸಮುದ್ರ ತೀರಕ್ಕೆ ಅಲೆಗಳು ಹೊಡೆದು ಸಾಗಿಸಿ ತಂದ ಶಿಥಿಲವಾದ ಮರದ ತುಂಡಿನಂತೆ, ಅವನು ನಮ್ಮ ಹಿತ್ತಲಲ್ಲಿ ಸೇರಿದ್ದ. ಅವನನ್ನು ನಾನು ಅನಾಥನೆಂದೇ ಭಾವಿಸಿದ್ದೆ. ಖರ್ಚು ಕಳೆದು ಮಿಕ್ಕ ಹಣವನ್ನು ಅವನು ಯಾರಿಗೂ ಮನಿಯಾರ್ಡರ್ ಕಳುಹಿಸಿದಂತೆ ನಮಗೆ ತಿಳಿಯದು. ಆದ್ದರಿಂದ, ಅವನು ನಮ್ಮ ನೆರಳಿನಲ್ಲೇ ತನ್ನ ಆಯುಷ್ಯವನ್ನೆಲ್ಲ ಕಳೆಯುತ್ತಾನೆ, ಎಂದು ನಾವು ಭಾವಿಸಿದ್ದೆವು.

ನಮ್ಮ ಮನೆಯವರು ಅವನನ್ನು ಸಲಿಗೆಯಿಂದ ಮಾತನಾಡಿಸಿ, ಅವನಿಂದ ಚೂರು ಪಾರು ವಿಷಯ ಸಂಗ್ರಹಣ ಮಾಡಿ, ನನಗೆ, "ನೋಡಿ ಅಂದ್ರೆ! ಈ ಚೆಲುವ ಸಾಮಾನ್ಯನಲ್ಲ; ಇವನ ಕಥೆಯನ್ನು ನೀವು ಒಂದು ಪುಸ್ತಕವಾಗಿ ಹೊರಡಿಸಬಹುದು" ಎಂದು ಹೇಳುತ್ತಿದ್ದರು. "ಆಗಲಿ! ಪುರಸತ್ತು ಸಿಕ್ಕಾಗ ಅವನನ್ನು ಒಂದು ತಿಂಗಳು ದಿನವೂ ಸಂಜೆ ಎದುರಿಗೆ ಕೂರಿಸಿಕೊಂಡು, ಮೊದಲಿನಿಂದ ಈವರೆಗೂ ಸುಖದುಃಖ ಏರುಪೇರು ಹಿಗ್ಗುತಗ್ಗು ಎಲ್ಲವನ್ನೂ ಬರೆದು ಇರಿಸಿಕೊಳ್ಳುತ್ತೇನೆ. ನೀನು ಹೇಳಿದ್ದೂ ನಿಜವೆ. ಪ್ರತಿಯೊಬ್ಬ ಮನುಷ್ಯನಲ್ಲೂ ಒಂದು ಸೊಗಸಾದ ಕಾದಂಬರಿ ಹುದುಗಿದೆ. ದೀನ ದಲಿತ ಬಡವ ಗಮಾರ ಚೆಂಗೂಲಿ ಎಂದು ಸುಮ್ಮನೆ ಕೂಗೆಬ್ಬಿಸುತ್ತಿದ್ದರೆ ಸಾಲದು. ಸಾಕ್ಷಾತ್ ಕೂಲಿಯವನು ಒಬ್ಬ ಹೇಗೆ ಬದುಕಿ ಬಾಳುತ್ತಿದಾನೆ ಎಂದು ಅವನ ಬಾಯಿಂದಲೇ ಹೇಳಿಸುವ ಪುಸ್ತಕ ಒಂದೂ ಈವರೆಗೆ ಕನ್ನಡದಲ್ಲಿ ಬಂದಿಲ್ಲ, ಏಕೆ, ಇತರ ಭಾರತೀಯ ಭಾಷೆಗಳಲ್ಲೂ ಇಲ್ಲವೆಂದೇ ತೋರುತ್ತದೆ. ಶ್ರೀಮಂತರ ಜೀವನದಲ್ಲಿ ಸಿಗಲಾರದ ಸೆಣಸಾಟ ವೈವಿಧ್ಯ ಸಾಹಸ ಪಾಕ ಸೊಗಸು ನಮ್ಮ ಚೆಲುವನ ಚರಿತ್ರೆಯಲ್ಲಿ ದೊರೆಯಬಹುದು, ನೋಡೋಣ" ಎಂದೆ, ನಾನು.

ಆದರೂ, ಚೆಲುವನೆದುರು ನನ್ನ ಆಸೆಯನ್ನು ಹೇಳಲು ಹಿಂಜರಿದೆ. ಏಕೆಂದರೆ, ನನ್ನನ್ನು ಕಂಡಾಗಲೆಲ್ಲ ಅವನು ಅಂಜಿ ಹೆದರಿ ತಲೆತಗ್ಗಿಸಿ ನಾಚಿ ಹೆಕ್ಕತ್ತನ್ನು ಕೆರೆಯುತ್ತಿದ್ದ. ಅವನು ತನ್ನ ಇತಿಹಾಸವನ್ನು, ಬಿಚ್ಚುಮನದಿಂದ ನಾನು ಬರೆದುಕೊಳ್ಳುವಷ್ಟು ನಿಧಾನವಾಗಿ, ಕಾಂಡಕಾಂಡವಾಗಿ, ಸ್ಪಷ್ಟವಾಗಿ, ಹೇಳುತ್ತಾನೆಯೆ, ಎಂದು ನಾನು ಅನುಮಾನಿಸಿದೆ.

ಊಟ ಮುಗಿಸಿ, ಕೈತೊಳೆದು, ಎಲೆಗೆ ಸುಣ್ಣ ಸವರುತ್ತ, ನಾನು ಮುಂಬಾಗಿಲ ಕಡೆ ಹೋದೆ. "ಯಾಕೋ" ಅಂದೆ. "ಏನೂ ಇಲ್ಲ! ನಾನು ನಾಳೆ ಊರಿಗೆ ಹೋಗುತ್ತೇನೆ" ಅಂದ ಚೆಲುವ. "ಅ! ನಿನಗೆ ಊರು ಅಂತ ಒಂದಿದೆಯೆ?" ಅಂದೆ, ಚಕಿತನಾಗಿ. "ನನ್ನ ಮಗಳು ಅಳಿಯ ಇಬ್ಬರೂ ಬಂದಿದಾರೆ, ನನ್ನನ್ನ ಕರೆಯುವುದಕ್ಕೆ" ಅಂದ. "ನನ್ನ ಮಗಳ ಸಂಗಡ ಜಗಳ, ಅವಳ ಹೊಸಲುದಾಟುವುದಿಲ್ಲ, ಎಂದೆಲ್ಲ ಶಪಥಮಾಡಿದೇನೆ

ಅಂದೆಯಲ್ಲೋ" ಎಂದಳು, ನನ್ನ ಸಹಧರ್ಮಿಣಿ. ಅಷ್ಟರೊಳಗೆ, "ಚೆಲುವ ಊರಿಗೆ ಹೋಗುತ್ತಾನಂತೆ; ಇನ್ನು ನಮ್ಮ ಮನೆಯಲ್ಲಿರುವುದಿಲ್ಲವಂತೆ" ಎಂದು, ಹುಡುಗರೆಲ್ಲ ಅರಚಿಕೊಂಡು ಅತ್ತಿಂದ ಇತ್ತ ಓಡಾಡುವುದಕ್ಕೆ ಪ್ರಾರಂಭ. "ಇಷ್ಟು ದಿನ, ನಿಮ್ಮಂಥವರ ಸೇವೇಲಿ ಸವೆಸಿದೆ ಈ ದೇಹಾನ; ಈಗ, ಬಿಟ್ಟುಕೊಡಿ, ಸ್ವಾಮಿ" ಅಂದ. ನನ್ನ ಕಣ್ಣಲ್ಲಿ ನೀರುಬಂತು. "ಈ ಬೆಂಗಳೂರು ಕೊಂಪೆಯಲ್ಲಿ ಒಂಟಿ ಸಂಸಾರಹೂಡಿ, ಕಲ್ಲು ಮಣ್ಣು ಕಸ ಕಡ್ಡಿ ಬೇಯಿಸಿಕೊಂಡು ಯಾಕೆ ಒದ್ದಾಡುತ್ತೀ, ನಡಿ ಊರಿಗೆ, ಅಂತ ರಟ್ಟೆ ಹಿಡಿದೆಳೀತಿದಾರೆ, ಸ್ವಾಮಿ. ಊರಲ್ಲಿ ನಾಲ್ಕು ಕುರಿ ಹಿಡಿದು ಮೇಯಿಸಿದ ರಾಯಿತು ನಿನ್ನ ಜೀವನಕ್ಕೆ; ಕೈಕಾಲು ಗಟ್ಟಿಯಾಗಿರುವಾಗಲೇ, ನಿನ್ನ ಜ್ಞಾನ ನಿನ್ನ ಸುಪರ್ದಿನಲ್ಲಿರುವಾಗಲೇ ಬಂದುಬಿಡು; ಆಸ್ಪತ್ರೇಲಿ ಸತ್ತು ಮುನಿಸಿ ಪಾಲಿಟಿ ಗಾಡೀಲಿ ಪೋಲೀಸಿನವರು ಎತ್ತಿಹಾಕಿ ಬೇವಾರ್ಸಿ ಹೆಣಾನ ಹೂತರು ಅಂತ ಬಂದರೆ, ನಿನ್ನ ಹಿರೇರಿಗೆ ಅಪಮಾನ ಅಂತಾರೆ, ಸ್ವಾಮಿ. ನಾನೇನು ಮಾಡಲಿ, ಸ್ವಾಮಿ......ಬಿಡಲಾರೆ,... .ಇರಲಾರೆ.....ಹೂಂ ಅಂತ ಅಂದೇಬಿಟ್ಟೆ, ಹೋಗಿಬರ್‍ತೇನೆ" ಅಂದ, ಚೆಲುವ. ಅವನ ಗಂಟಲು ಬಿಗಿದುಬಂದಿತ್ತು.

ಅವನು ಹೋಗುವುದೇ ನ್ಯಾಯ ಅಂತ ನನ್ನ ತಾಯಿ ವಾದಿಸಿ ಅವಳನ್ನೂ ನನ್ನನ್ನೂ ಒಪ್ಪಿಸಿದರು. ಹುಡುಗರಿಗಂತೂ ಸಮಾಧಾನವೇ ಇಲ್ಲ.

ಆಗ ನನಗೆ ನೆನಪಾಯಿತು. "ಲೋ! ಚೆಲುವಾ! ನೀನು ಹುಟ್ಟಿದ್ದು ಬಾಳಿದ್ದು ಗಳಿಸಿದ್ದು ಗೆದ್ದದ್ದು, ಇದನ್ನೆಲ್ಲ ನೀನು ಹೇಳಬೇಕು, ನಾನು ಗುರುತುಹಾಕಿಕೊಳ್ಳಬೇಕು, ಆಮೇಲೆ ಅದನ್ನೆಲ್ಲ ಸೇರಿಸಿ ಒಂದು ಬುಕ್ಕು ಮಾಡಬೇಕು, ಅಂತ ಅಮ್ಮಾವರು ನನಗೆ ಹೇಳುತ್ತಿದ್ದರಲ್ಲೋ" ಅಂದೆ. "ಹೂಂ, ಸ್ವಾಮಿ! ಅಮ್ಮಾವರು ನನಗೂನೂ ಅದೇ ಮಾತು ಹೇಳಿದ್ದರು" ಅಂದ.

"ಹಾಗಾದರೆ, ಯಾವಾಗ?"

"ನೆನಪು ಇರುವಷ್ಟು ಹೇಳುತ್ತೇನೆ, ಇವತ್ತು, ನಾಳೆ....ನಾನೂನೂ ಇನ್ನೆರಡು ದಿನ ಇದ್ದೇ ಹೋಗುತ್ತೇನೆ. ಧರ್ಮರಾಯನಗುಡಿ, ಕರೀಕಲ್

ಆಂಜನೇಯ, ಕೋಟಿ ವೆಂಕಟರಮಣದೇವರು, ಇದಷ್ಟೊ ಮುಗಿಸಿಬಿಟ್ಟೇ ಹೋಗೋದು ನಾನು....ಈಗ ಹೊರಟೆ ಅಂದರೆ, ಮತ್ತೆ ಬೆಂಗಳೂರಿಗೂ ನನಗೂ ಋಣಾನುಬಂಧ ಇನ್ನು ಯಾವ ಜನ್ಮದಲ್ಲೋ'' ಎಂದ.

ಸಂಜೆ, ಕರೆದು ಕೂರಿಸಿಕೊಂಡೆ. ಒಂದು ತಟ್ಟೆತುಂಬ ಹುರಿಗಾಳು ಅವನ ಮುಂದಿಟ್ಟೆ.

ಹೇಳತೊಡಗಿದ.........................................

# ತಿರುಪತಿ ಸೇವೆ

ಚೆಲುವ ಅಂತ ನನಗೆ ಹೆಸರಿಟ್ಟದ್ದು ಯಾಕೆ ಗೊತ್ತೆ? ಹುಟ್ಟಿದಾಗ, ನನ್ನ ಬಣ್ಣ ನಮ್ಮ ಮನೆತನದ ಬಣ್ಣಕ್ಕಿಂತ, ರವೆಯಷ್ಟು ಗ್ಯಾರಂಟೀಲಿ ಕಡಮೆಯಾಗಿತ್ತಂತೆ. ಈಗ ನನ್ನನ್ನ ನೋಡಿ ನೀವು ಆ ಮಾತು ನಂಬುವುದೇ ಇಲ್ಲ.

ಬರುಬರುತ್ತ ಬಿಸಿಲಲ್ಲಿ ಕಂದಿ ಮಸಿಯಲ್ಲಿ ಮಾಸಿ ಕೆಸರಲ್ಲಿ ಕುಸಿದು ಯಥಾಪ್ರಕಾರ ನಾನೂ ನನ್ನ ಕುಲದ ಕಪ್ಪುಬಣ್ಣಕ್ಕೆ ಸೇರಿಕೊಂಡುಬಿಟ್ಟಿದೇನೆ. ಬಣ್ಣವೂ ಚೆನ್ನಾಗಿತ್ತಂತೆ, ಅಂದವೂ ಅಪರಂಜಿಯಾಗಿತ್ತಂತೆ, ಹೇಳುತ್ತಿದ್ದಳು ನನ್ನತಾಯಿ. ಹೆತ್ತವಳಿಗೆ ಹೆಗ್ಗಣವೂ ಮುದ್ದೇ ಅಲ್ಲವೆ?

ಅದೂ ಅಲ್ಲದೆ, ಮೇಲುಕೋಟೆ ದೇವರ ಹೆಸರು ಚೆಲುವನಾರಾಯಣ ಅಂತಲ್ಲವೆ? ಊರಿನವರು ಯಾರಾದರೂ, ಯಾಕೆ ನಿನ್ನ ಕೂಸಿಗೆ ಈ ಹೆಸರಂಟಿಸಿದೆ ಅಂದರೆ, ನನ್ನ ತಾಯಿ ಅದೇ ಕಾರಣವನ್ನೇ ಹೇಳುತ್ತಿದ್ದಳು.

ಇನ್ನು, ನಮ್ಮೂರಿನ ಹೆಸರು ಹೇಳಲೆ? ನನಗೇನೋ ಅದನ್ನ ಹೇಳೋಕೆ ಒಂಥ ತರಹ ಆಗುತ್ತೆ. ಊರು ಕೇರಿ ತೊರೆದು, ಪಾಪಿ ಪರದೇಶಿಯಾಗಿ, ಕಂಡವರ ಹಿತ್ತಲು ಕಾಯುತ್ತ ಬಿದ್ದಿರೋ ಈ ತಬ್ಬಲಿ ಬಾಯಿಂದ ಅದರ ಹೆಸರನ್ನೇಕೆ ಹೇಸಿಗೆ ಮಾಡಬೇಕು ಅನ್ನಿಸುತ್ತದೆ. ಆದರೂ, ನಿಮ್ಮ ಬಲವಂತ, ನನ್ನ ಪ್ರೇಮ. ಅಲ್ಲಾ, ಊರೋಕೆ ತಾವಿಲ್ಲದೆ ಹೋದರೆ, ಊರನ್ನೇಕೆ ದೂರಬೇಕು, ನಾನು? ನನ್ನ ಕಣ್ಣಿಗೆ ಬೆಳಕುಕೊಟ್ಟು, ಕಾಲಿಗೆ ನಡಿಗೆ ಕಲಿಸಿ, ಕಿವಿಗೆ ಹಾಡುತುಂಬಿದ ಊರು ಅದು; ನನ್ನ ಬಾಯಲ್ಲಿ ಮೊದಲು ಶಿವಾ ಅಂತ ಹೊರಡಿಸಿದ ಊರು. ಊಹೂಂ ಅಂದರೂ, ನಾನು

ಅದನ್ನ ಮರೆಯುವುದಕ್ಕಾಗುತ್ತದೆಯೆ? ಅಥವಾ, ನಾಲಗೆ ಹೂಂ ಅಂದರೂ ನಾಡಿ ಒಪ್ಪುವುದಿಲ್ಲ. ಈ ಹೊತ್ತಿಗೂ ನನಗೆ ಕನಸು ಬಿದ್ದಾಗಲೆಲ್ಲ, ನಾನು ಅದೇ ಊರಿನ ಮಾರಮ್ಮನ ಗುಡಿಯ ಮುಂದಿನ ಅರಳಿಕಟ್ಟೆಯ ಮೇಲಿಂದ, ಜೊತೆ ಹೈಕಳ ಸಂಗಡ, ಕೆಳಕ್ಕೆ ನೆಗೆದು ಕಾಲು ತುರಿಸಿಕೊಳ್ಳುತ್ತಿರುತ್ತೇನೆ. ಅಲ್ಲಿಯ ದನಕರ ಶ್ಯಾನುಭೋಗರ ಮನೆ ಹುಡುಗರು ಇವರೇ ನನ್ನ ದೋಸ್ತಿಗಾರರು.

ಅದರ ಹೆಸರು ಹೇಳೋಕೆ ಏಕೆ ಹೀಗೆ ಹಿಂದುಮುಂದು ಯೋಚಿಸುತ್ತಿದೀನಿ ಅಂದರೆ, ಹಾಳಾದವರು ಯಾರೋ ಹಿಂದಿನ ಜನ ಅದಕ್ಕೆ ಸೊಗಸಾದ ಒಂದು ಹೆಸರನ್ನಿಟ್ಟುಹೋಗಿದ್ದರು; ನಿಮ್ಮ ಬೆಂಗಳೂರಿಗೆ ಅಂಥ ಹೆಸರಿದ್ದರೆ ಚೆನ್ನ. ಅದು ಬಿಟ್ಟು, ದುಡ್ಡಿಲ್ಲ ಕಾಸಿಲ್ಲ ಸಂಪತ್ತೈಯ್ಯಂಗಾರರು, ಅಂತಾರಲ್ಲ, ಹಾಗೆ ನೆಟ್ಟಗೆ ನೂರುಮನೇನೂ ಇಲ್ಲದ ನಮ್ಮ ಹಳ್ಳಿಗೆ, ಸುತ್ತ ಹತ್ತುಮೈಲಿಯಲ್ಲಿರೋ ಯಾವ ಹಳ್ಳಿಗೂ ಇಲ್ಲದೆ ಇರುವ ಹೆಸರು, ಬಾಯಿತುಂಬ, ಮೂಗಿಲ್ಲದವಳಿಗೆ ಮೂಗುತಿ ಇಟ್ಟಹಾಗೆ, ತಿರುಮಲರಾಯನಪುರ ಅಂತ, ತಿಮ್ಮಪ್ಪ ಹತ್ತಿ ನಿಂತಿರೋ ಬೆಟ್ಟದ ಹೆಸರು.

ಮದ್ದೂರು ತಾಲ್ಲೋಕು; ಹೊಳೆಯಿಂದಾಚೆ. ಅಂದರೆ, ಇತ್ತಲಾಗಿಂದ ಹೋದರೆ, ಹೊಳೆಯಿಂದೀಚೆ; ಅತ್ತಲಾಗಿಂದ ಬಂದರೆ, ಹೊಳೆಯಿಂದಾಚೆ. ಅರ್ಥವಾಯಿತೆ? ನಿಮ್ಮಂಥವರಿಗೆ ಅದರ ಗುರುತು ಸಿಕ್ಕುವುದಿಲ್ಲ, ಬಿಡಿ. ದೊಡ್ಡರಸ್ತೆಗೆ ತೀರ ಹತ್ತಿರ, ಒಳ್ಳೇ ಕಟ್ಟುಮಸ್ತಾದ ಆಸಾಮಿಗೆ; ಕೊಂಚ ಮುದಿವಯಸ್ಸಿನವನಾಗಿದ್ದರೆ, ಆ ಮಾತು ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತೆ ನಾನು.

ಊರಿನವರು ನಾವು ಎಂಟುಹತ್ತು ಕುಳ, ತಿರುಪತಿ ವೆಂಕಟರಮಣಸ್ವಾಮಿ ಒಕ್ಕಲು; ಯಾವ ಕಾಲಕ್ಕೋ ದಾಖಲಾದದ್ದು. ನವರಾತ್ರಿ ಬಂತು ಅಂದರೆ ಆಯಿತು, ನಮ್ಮಪ್ಪ ಚಿಕ್ಕಪ್ಪ ಎಲ್ಲರೂ ನಡೀತಿದ್ದರು, ಪ್ರತಿವರ್ಷವೂ ತಪ್ಪದೆ, ಗಂಟುಮೂಟೆ ಕಟ್ಟಿಕೊಂಡು, ತಿಮ್ಮಪ್ಪನ ತಾವಿಗೆ, ಬೆಂಗಳೂರು ಮುಳಬಾಗಿಲು ದಾಟಿಕೊಂಡು, ಊರಿಂದ ಜನ ಹೋಗೋದು ಒಂದು ವರ್ಷ ತಪ್ಪಿತು ಅಂದರೆ ತೀರಿತು, ಕಟ್ಟಿಟ್ಟದ್ದು, ದೊಡ್ಡದೋ

ಸಣ್ಣದೋ, ಒಂದು ಮಾರಿರೋಗ; ಕೊಚ್ಚಿಕೊಂಡುಹೋಗುತ್ತೆ, ಬೆಳೆ ಪೈರು ಎಮ್ಮೆ ಬಾಣಂತಿ ಎಲ್ಲಾನ್ನೂ, ಹುಲ್ಲುಮೆದೆ ಸಹಿತ.

ತಿರುಮಲರಾಯನಪುರ ಅಂಬೋ ಹೆಸರು ಕೇಳಿ, ತಿಮ್ಮಪ್ಪನ ಜಾತ್ರೆಗೆ ಹೋಗೋ ದಾಸಯ್ಯಗಳೆಲ್ಲರೂ ನಮ್ಮೂರು ಹಾದು, ಗೋಹಿಂದಾ ಗೋಹಿಂದಾ ಅಂತ ಭಜನೆ ಕೂಗಿ, ದುಡ್ಡೆತ್ತುವರು. ನಾವೂನೂ ಅವರ ಸಂಗಡ ನಾಮ ಇಕ್ಕಿ ತಾಳಹಾಕಿ ಬಾಯಿ ಬತ್ತಿಸಿ ಊರಾಚೆಯಿಂದ ಊರೀಚೆ ವರೆಗೂ ಸೇರಿ ಅವರನ್ನು ಕಳಿಸಿಕೊಡುವೆವು. ದೇವರು ಕೊಟ್ಟ ಜೋಳಿಗೆ ಆದರೂ ಬಿಕ್ಕೆಬೇಡದೆ ತುಂಬೀತೆ? ಅಕ್ಕಿ ಬೇಳೆ ಕಾಣಿಕೆ ಕಂಬಳಿ ಊದುಬತ್ತಿ ಕರ್ಪೂರ ಕೊಟ್ಟು ಕಳಿಸಿ, ನಂತರ ಮೇಚಾಡುವೆವು.

ಅಷ್ಟು ಅಲಂಕಾರವಾದ ಹೆಸರು ನಮ್ಮೂರಿಗಿರಲೇಬಾರದಾಗಿತ್ತು. ಯಾವೂರಯ್ಯ ನಿನ್ನದು, ಅಂತ ಯಾರಾದರೂ ಕೇಳಿದರೆ, ನಾವೇನು ಮಾಡುತ್ತೇವೆ? ಸುಳ್ಳು ಹೇಳೋಕೆ ಜಾಣತನ ಇಲ್ಲ; ಪೇದೆಗಳು. ಎದೆ ಚಾಚಿಕೊಂಡು, ತಿರುಮಲರಾಯನಪುರ ಅಂತ ಮಾರುದ್ದ ಹೇಳೇಬಿಡುವೆವು. ಅವರ ತಲೆಯೊಳಗೇನು? ನಮ್ಮೂರ ಹೆಸರು ಅದೆಂಥದ್ದೊ ಮುಂಚಯ್ಯನದು ಕರೀಗೌಡನದು ಚಿಕ್ಕನಾಯಕನದು ದೊಡ್ಡಶಿಂಗಯ್ಯನದು ಒಂದು ಕೊಪ್ಪಲು ಒಂದು ಗುಂಡಿ ಒಂದು ಕೆರೆ ಅಂತ ಊಹೆ ಮಾಡಿರುತ್ತಾರೆ. ಅಥವಾ, ಸೂಳೆಯದೋ ನೂಲಿಗರವನದೋ ಸುಂಕದವನದೋ ಒಂದು ಪಾಳ್ಯ ವಾಗಿರುತ್ತದೆ ಅಂತ ತಿಳಿದಿರುತ್ತಾರೆ. ನಾವು ತಿರುಮಲರಾಯನಪುರ, ಅನ್ನುತ್ತಲೂ, ಅವರು, "ಹೋಗ್ರೋ! ಲ್ರೋ! ನಮ್ಮ ಹತ್ತಿರ ನಿಮ್ಮ ಡೋಂಗಿ ತೆಗೀತೀರಾ" ಅಂತ ಮೂಗು ಎಳೆದು ಮೂತಿ ತಿರುಗಿಸುತ್ತಾರೆ. ದೊಡ್ಡೋರ ನಂಟತನ, ಬಡವರಿಗೆ ಕಾಟ, ಅಂತ ಗಾದೆಯೇ ಇದೆಯಲ್ಲಾ.

ನಿಜ ಹೇಳಬೇಕಾದರೆ, ಅಂಥಾ ಆಡಾಊಡಿ ಹೆಸರನ್ನ ಹೊರೋಕೆ ನಮ್ಮ ಹಳ್ಳಿಗೆ ತ್ರಾಣವೇ ಇಲ್ಲ, ಈಗ. ಹಿಂದಕ್ಕೆ ಇತ್ತೋ ಏನೋ, ಬಲ್ಲವರಾರು? ಇದ್ದಿರಬಹುದು, ನಮ್ಮೂರಲ್ಲೂ, ಕೋಟೆ ಪೇಟೆ ಅರಮನೆ ಸೂಳೆಕೇರಿ ರತ್ನಪಡಿ ವ್ಯಾಪಾರ ಜೂಜಿನಕಟ್ಟೆ ಹನ್ನೆರಡುಕಂಬದ ತೊಟ್ಟಿಮನೆ

ಹೂವಿನ ಅಂಗಡಿ ಎಲ್ಲ. ಆದರೆ, ಇಷ್ಟು ಮಾತ್ರ ಹೇಳಬಹುದು. ನಾನು ಕಂಡಹಾಗೆ, ನನ್ನ ತಂದೆ ಕಾಲದಲ್ಲಿ ಇಲ್ಲ, ಈಗಂತೂ ಸುತರಾಂ ಸೊನ್ನೇನೆ. ರೆಕ್ಕೆ ಇಲ್ಲ, ಕೊಕ್ಕು ಇಲ್ಲ, ಗರುಡೈಯ್ಯಂಗಾರ್‍ರು ಅಂತಾರಲ್ಲಾ, ಹಾಗಿದೆ ನಮ್ಮ ಊರು. ತಿರುಮಲೆ ದೇವರ ಗುಡಿ ಇಲ್ಲ, ರಾಯನ ಆಸ್ಥಾನವಿಲ್ಲ, ಪುರ ಅಂದರೆ ಏನು ಅಂತ ಹೇಳೋ ಜನವೇ ಇಲ್ಲ.

ಈ ಅವಮಾನ ಸಾಲದು ಅಂತ, ಪೊನ್ನೆ ಯಾರೋ ಒಬ್ಬ ಪುಣ್ಯಾತ್ಮ ನಮ್ಮೂರು ಹೆಸರನ್ನ ದೊಡ್ಡರಸ್ತೆಯ ತನಕ ಎಳೆದುಕೊಂಡುಹೋಗಿ, ಅಲ್ಲೊಂದು ಕಂಬ ಹೂತು, ಅದರ ಮೇಲಕ್ಕೆ ಒಂದು ಚಪ್ಪಡಿ ಏರಿಸಿ, ಅಡ್ಡವಾಗಿ, ಗುಂಡುಗುಂಡಗೆ ಬರೆಸೇ ಬಿಟ್ಟಿದಾರೆ, ತಿರುಮಲರಾಯನಪುರ ಅಂತ. ಇಕೊ, ಈ ದಾರಿ ಹಿಡಿದು ಹೋದರೆ ಸಿಗ್ತದೆ ನಮ್ಮ ಹಳ್ಳಿ, ಅಂತ ಆ ಕಲ್ಲು ಕೂಗಿ ಸಾರುತ್ತದೆ, ದಾರಿಹೋಕರಿಗೆಲ್ಲ. ಕಂದಾಯದವರು ಚಂದಾ ಎತ್ತುವವರು ತಿರುಕರು ಕಂದಾರಿಯವರು ಹೆಂಡದ ಲಾರಿಗಳು, ಎಲ್ಲ ಕಾಟವೂ ಆ ಮಹಾರಾಯ ಆ ಕಲ್ಲು ಹಾಕಿಸಿದ ಮೇಲೆ ವಿಪರೀತ ಹೆಚ್ಚಿಹೊಯ್ತು, ನಮ್ಮೂರಲ್ಲಿ.

ಪಾಪ, ಯಾವನಾದರೂ, ಗ್ರಹಚಾರ ಕಡಿಮೆಬಿದ್ದು, ಆ ಕಲ್ಲಿನ ಮಾತು ಕಿವಿಗೆ ಹಾಕಿ ನಮ್ಮೂರತನಕ ಬಂದ, ಅಸ್ಸಿ! ಮೊದಲು ಅವನನ್ನ ಬಂದೆಯಾ ಅಂತ ಕೇಳೋದು, ನಮ್ಮೂರು ನಾಯಿಗಳು; ಊರು ಸಿಕ್ಕಿತು ಅಂತ ಅವನಿಗೆ ತಿಳಿಸೋದು ಗೊಬ್ಬರದಗುಂಡಿ ಸಾಲು; ರಸ್ತೆಗಳೆಲ್ಲ ಅಂಕು ಡೊಂಕು, ಸೊಟ್ಟಾಪಟ್ಟೆ; ಹಳ್ಳಕೊಳ್ಳ; ನಡುಬೀದೀಲೇ ಕಲ್ಲುಬಂಡೆಗಳು, ಜಾಲಿಮುಳ್ಳಿನ ನಡೆಮಡಿ; ಮನೆ ಮುಂದೆ ಚಕ್ರವಿಲ್ಲದ ಗಾಡಿಗಳು ಬರಡೆಮ್ಮೆಗಳು ಬೋಳುಕುರಿಗಳು ಬೆರಣಿಗೋಡೆ ಬಿರುಕಲು ಚರಂಡಿ. ನಾನು ಕಣ್ಣು ಬಿಟ್ಟಾಗಿನಿಂದ ಹಾಗೆಯೇ ಇದೆ ನಮ್ಮೂರು. ಆ ಮೇಲೆ ಆದದ್ದು ಎಂದರೆ, ಅದೊಂದೇ, ಕೋರ್ಟಿನವರ ಬಾವಿ.

ಹೇಳುತ್ತೇನೆ, ಅದ್ಯಾರೋ ಮಹಾತಾಯಿ, ಕೋರ್ಟಿನ ನರಸಪ್ಪನವರ ಹೆಂಡತಿ, ನಮ್ಮೂರಿನ ಮೇಲೆ ಮನಕರಗಿ, ಗಂಡನ ಹೆಸರಿನಲ್ಲಿ ಒಂದು ಬಾವಿ ಕೇಳಿಸಿದರು; ರಾಟೆ ಕಟ್ಟೆ ಕಟ್ಟಿಸಿದರು. ಆಕೆ ಅದನ್ನು ತೋಡಿಸಿದ್ದು,

ನಮ್ಮೂರವರ ಕೈಯಿಂದಲೇ. ನೊಳಕ್ಕೆ ಮೂರು ರೂಪಾಯಿ ಅಂತ ಕೂಲಿ ಮಾತಾಡಿದ್ದರು. ಅದನ್ನ ಕೊಟ್ಟಿದ್ದು ಯಾರಿಗೋ, ಇಸಕೊಂಡಿದ್ದು ಯಾರೋ, ಇವತ್ತಿನವರೆಗೂ ನಿರ್ಧರ ಇಲ್ಲ. ಅಂತೂ, ಒಬ್ಬರೂ ಉದ್ಧಾರ ಆಗಲಿಲ್ಲ, ಆ ಪೈಕಿ.

ಅದುವರೆಗೂ, ನಮ್ಮೂರಿಗೆ ನೀರಿನ ಆಸರೆ ಇದ್ದದ್ದು, ಊರಾಚೆ ಕುಂಟೆಯೊಂದೇ; ಹೊಳೆ ದೂರ ಆಗಿಹೋಯ್ತು. ಜನ ದನ ಶುಭಶೋಭನ ಮೀಯುವವರಿಗೆ ಸಾಯುವವರಿಗೆ, ಎಲ್ಲರಿಗೂ ಅದೊಂದೇ ಆಧಾರ. ಅದನ್ನ ಸಹಿಸಲಾರದೆ, ಒಬ್ಬ ಏನು ಮಾಡಿದ, ಬುದ್ಧಿವಂತ, ಕುಂಟೇನೀರು ಕೊಳೆ, ದುರ್ನಾತ, ಕ್ರಿಮಿಯಿದೆ ಅದರಲ್ಲಿ, ಅಂತ ಕೆಟ್ಟಸುದ್ದಿ ಹರಡಿಸಿದ. ಹಳ್ಳಿಯವ ರನ್ನು ಹಾಯಾಗಿ ಇರಗೊಡಿಸುವುದಿಲ್ಲ, ಈ ಹ್ಯಾಟ್‌ಮಂದಿ. ಅವನು ಆ ಮಾತು ಡಂಗೂರ ಹೊಡೆದನೋ ಇಲ್ಲವೋ, ಶುರುವಾಯಿತು ನೋಡಿ, ಅದುವರೆಗೂ ನೆಗಡಿ ಕೂಡ ಬರದ ಜನಕ್ಕೆಲ್ಲ ವಾಂತಿ ಭೇದಿ ಆಮಶಂಕೆ, ನೂರೆಂಟು.

ಸರಿ, ಅಂತ, ನಾವೆಲ್ಲ ಆಯಮ್ಮನ ಹುಮ್ಮಸ್ಸಿಗೆ ಹುರಿತುಂಬಿ ಆಕೆಯ ಧರ್ಮದ ಬಾವಿಕೆಲಸವನ್ನು ಮುಂದುವರಿಸಿದೆವು. ಆದರೆ, ಆಕೆ ಗಂಡ ನರಸಪ್ಪ ಅಂತ ಇದ್ದವರು, ಎಂಥ ಅನ್ಯಾಯದ ಗಂಟು ಗಳಿಸಿದ್ದನೋ ಏನೋ— ಮಾಡಿದ ಪಾಪಕ್ಕೆ ಮನವೇ ಸಾಕ್ಷಿ—ನೋಡಿ ಸಾಕಿದ್ದು ಕೋಡಗ ನಾಯಿತು. ತೋಡಿದ ಕಡೆ, ನೀರು ಇಂಗೇಹೋಯ್ತು. ತೇವ ತೋರುವುದು, ತಲಪುವುದರೊಳಗೆ ಕೆಳಕ್ಕೆ ತೂರೇಬಿಡೋದು. ಆಯ್ತು ಇದರ ಕರ್ಮ ಅಂತ ಊರಿನವರೆಲ್ಲ ತಲೇ ಮೇಲೆ ಕೈಯಿಟ್ಟು ಕೂತರು. ಆ ತಾಯಿ ಮಾತ್ರ ಅತ್ತೇ ಬಿಟ್ಟರು; ಶ್ರೀರಂಗಪಟ್ಟಣದ ಕಡೆ ಹೊರಟೇಹೋದರು. ತಿರುಗ ಅವರ ಸುದ್ದಿ ನಮ್ಮೂರು ಮುಟ್ಟಲೇ ಇಲ್ಲ. ಏನಾದರೋ, ಏನು ಕಥೆಯೋ?

ಯಾಕೆ ಹೇಳುತ್ತ ಬಂದೆ ಅಂದ್ರೆ, ನಮ್ಮೂರಿನ ಹಣೇಬರಹ ಎಷ್ಟು ವೈನಾಗಿದೆ ಅಂದ್ರೆ, ಊರು ಹಗೆ, ನೀರು ನಂಜು; ಕೈನೀಡಿ, ಕೂತಲ್ಲೇ ಕೋ ಅಂದವರಿಗೇನೇ ಕೈಕೊಟ್ಟುಬಿಡ್ತದೆ. ಎಲೆಮುರಿಕಾಯಿ ಅಂತ ತಮ್ಮ ಪಾಡಿಗೆ ತಾವು ಹೋಗದೆ, ಅದನ್ನ ಪತ್ತೆಹಚ್ಚಿ, ಹಣ್ಣಾದಾಗ ಇದನ್ನ ಕಾಗೆ

ಅಳಿಲು ತಿಂದು ಹಾಳುಮಾಡುತ್ತವಲ್ಲಾ ಅಂತ ಯಾರಾದರೂ ಅದನ್ನ ಜೋಪಾನವಾಗಿರಿಸೋಣ ಅಂತ ಬಟ್ಟೇಲಿ ಸುತ್ತಿ ಕಟ್ಟುವುದಕ್ಕೆ ಹೊರಟರೆ ಕಾಯಿ ಮೇಲಿನ ಕಣಜ ಸಿಟ್ಟಿಗೆದ್ದು, ಹೊಡೆದೇಬಿಡುತ್ತದೆ ಆ ಉಪಕಾರೀನ.

ಹೆತ್ತಮಕ್ಕಳಲ್ಲಿ ಮುತ್ತಿನ ಸಮಾನದವರನ್ನೆಲ್ಲ, ಊರಾಚೆ ಅಟ್ಟಿಸಿರೋ ಗ್ರಾಮ, ಇನ್ನು, ಹೊರಗಿನವರನ್ನ ಬಾ ಅಂತ ಬರಮಾಡಿಕೊಳ್ಳುತ್ತದೆಯೆ, ಪ್ರೀತಿಯಿಂದ ?

ಊರು ಕೇರಿ ದೇಶ ಅಂತ ಧಾವಂತ ಮಾಡಬಾರದು, ದೇಶವೆಲ್ಲ ನಮ್ಮ ಸಂಸಾರ, ಹದಿನಾಲ್ಕು ಲೋಕಗಳೂ ನಮ್ಮ ಮನೆ ಅಂತ ಭಾವಿಸಬೇಕು, ಅಂತಾರಲ್ಲಾ, ಸಾಧುಸಂತರು, ಅಂಥವರಿಗೆ ನಮ್ಮ ಊರು ಸೊಗಸಾದ ಇಸ್ಕೂಲು.

ಆ್ಞ? ನನ್ನ ಮನೆಯೆ? ಅಯ್ಯೋ, ಅದನ್ನ ನಾನು ಏನು ಅಂತ ಹೇಳಿಕೊಳ್ಳಲಿ. ಬೇಸಾಯ ಗೀಸಾಯ ಮಾಡಿಕೊಂಡು, ಗೋಟಡಕೆಗೆ ಗತಿ ಇಲ್ಲದಿದ್ದರೂ ಗೌಡ ಅಂತ ಸುಳ್ಳು ತೇಗು ಬಿಡುತ್ತಾ, ಉಂಡ ಎಲೇನ ಆಚೆ ಎಸೆಯುವುದಕ್ಕೆ ಮೊದಲು ಎಣ್ಣೆ ಸವರಿ ಬಿಸಾಕೋ ಬೂಟಾಟಿಕೆ ಜನ, ನಮ್ಮ ಹಿರೇರು.

ನನ್ನ ಮುಖ ಹೇಗಿತ್ತು ಅಂತ ನನ್ನ ತಂದೆ ಕಂಡದ್ದೇ ಇಲ್ಲ. ರಾಮೇಶ್ವರದಲ್ಲೇ ಶನೀಶ್ವರ ಬಡಿಯಿತು, ಅವರಿಗೆ. ನಾನು ಈ ಭೂಲೋಕಕ್ಕೆ ಬಂದ ಎಂಟನೇ ದಿನವೇ ತಿರುಪತಿ ಬೆಟ್ಟದ ಕೆಳಗೆ ಕಾಲರಾ ಬಡಿದು ಅವರು ದೇವರಪಾದ ಸೇರಿದರು.

ಮನೇಲಿ ಇನ್ನು ಯಾರು ? ಕಳೆದುಳಿದದ್ದು, ನನ್ನ ತಾಯಿ, ನನಗಿಂತ ಹಿರಿಯವು ಎರಡು ಹೈಕಳು, ನಾನೊಬ್ಬ, ಈಗಲೋ ಆಗಲೋ ಅನ್ನುವ ಕೂಸು; ನನ್ನ ಕೂಡ ಹುಟ್ಟಿದವ ಇನ್ನೊಬ್ಬ, ಲಕ್ಷ್ಮಣ; ನಾವಿಬ್ಬರೂ ಅವುಳಿಜವುಳಿ.

ನಾನು, ಅಲ್ಲ, ನಾವು ಹುಟ್ಟಿದ ಇಸವಿ ತಿಂಗಳು ತಾರೀಖು ನಕ್ಷತ್ರ ಕೇಳುತ್ತೀರಾ ? ನಾನೇನು ಮಾರಾಜರೆ, ವರ್ಧಂತಿ ಮಾಡಿಸಿಕೊಳ್ಳೋಕೆ ? ಅಥವಾ, ನನಗೆ ಯಾರಾದರೂ ಜಯಂತಿ ಮಾಡುತ್ತಾರೆಯೆ ? ನವಮಿ-

ರಾಮನವಮಿ, ಅಂತ ಹಬ್ಬಮಾಡಿ, ಆ ರಾಮಲಕ್ಷ್ಮಣರ ಹುಟ್ಟಿದ ಹಬ್ಬಾನ ಕೊಂಡಾಡುತ್ತಾರಲ್ಲಾ, ಅಂಥ ಪ್ರಚಂಡರೆ, ನಾವು ? ನಾನೇನೋ, ಯಾವತ್ತೋ ಒಂದು ದಿನ ಕೇಳಿದೆ, ನನ್ನ ತಾಯೀನ, ನನ್ನ ಹುಟ್ಟಿದಹಬ್ಬ ಎಂದು ಬರುತ್ತೆ ಅಂತ. ಅದಕ್ಕೆ ಅವಳಂದಳು, ನೋಡು ಮಗು, ನಮ್ಮ ಮನೆ ಗಿಡ್ಡೆಮ್ಮೆ ದಾರಿತಪ್ಪಿ ಕೆರೆಮಗ್ಗುಲ ಕೆಸರಿನಲ್ಲಿ ಹೂತು ಕೂತಿತ್ತಲ್ಲಾ, ಅದರ ಮೂರನೆಯದಿನ ನಿನ್ನ ಹಡೆದದ್ದು, ಅಂತ. ಆ ಎಮ್ಮೆ ಕತೆ ಮುಗಿಯಿತು; ನನ್ನ ಕತೆ ಪ್ರಾರಂಭ ಆಯಿತು. ನೋಡಿಕೊಳ್ಳಿ, ಲೆಕ್ಕ.

ಅವುಳಿಜವುಳಿ ಹಡೆದರೆ, ರಾಮಲಕ್ಷ್ಮಣ ಅಂತ ಹೆಸರಿಡಬೇಕು ಅಂತ ಊರಗೌಡರೆಲ್ಲ ನನ್ನ ತಾಯೀನ ಬಲವಂತಮಾಡಿದರು. ಆದರೆ, ಅವಳೊಪ್ಪಲಿಲ್ಲ. ರಾಮನೂ ಲಕ್ಷ್ಮಣನೂ ಒಂದೇ ತಾಯಿಗೆ ಹುಟ್ಟಿದ್ದರೆ, ಆ ಮಾತು; ಒಬ್ಬ ಗಂಡನ ಇಬ್ಬರು ಹೆಂಡಿರಲ್ಲಿ ಅಣ್ಣ ತಮ್ಮ ಅಂತ ಬಂದವರು ಅವರು, ಭರತ ಶತ್ರುಘ್ನ ಅಂತ ಇಡಿ, ಒಪ್ಪುತ್ತೇನೆ-ಅಂದಳಂತೆ. ಕೊನೆಗೆ, ಒಂದಕ್ಕಾದರೂ ಲಕ್ಷ್ಮಣ ಅನ್ನಿ, ಎಂಬ ಒತ್ತಾಯದ ಮೇಲೆ, ಅವನು ಲಕ್ಷ್ಮಣ ಆದ, ನಾನು ಚೆಲುವ ಅನ್ನಿಸಿಕೊಂಡೆ ಹಟ ಅಂದ್ರೆ ನನ್ನ ತಾಯಿ ಹೆಸರು ಎತ್ತಬೇಕು.

ಅಪ್ಪನನ್ನ ಸಾಯಿಸುವುದಕ್ಕೆ ಒಬ್ಬ ಮಗ ಸಾಲದು ಅಂತಲೋ ಏನೋ ಇಬ್ಬರಿಳಿದೆವು ಅಖಾಡಕ್ಕೆ. ಲಕ್ಕನನ್ನ ನನ್ನ ತಾಯಿ ಹೊಳೆಯಾಚೆ ಹಳ್ಳಿಯವಳೊಬ್ಬಳಿಗೆ ಎತ್ತಿ ಕೊಟ್ಟೇಬಿಟ್ಟಳು, ಅನಾಮತ್ತಾಗಿ, ಒಂದೊಂದೆಡೆಗೆ ಒಬ್ಬೊಬ್ಬನನ್ನ ನಾನು ಹೇಗೆ ಸಾಕಲಿ ಅಂತ. ಅಲ್ಲದೆ, ಆ ಇಸುಕೊಂಡ ಹೆಂಗಸಿಗೆ ಮಕ್ಕಳೇ ಇರಲಿಲ್ಲ. ತಾಯಿ ಹಂಬಲ ಕಾಡಿಸುತ್ತಿರೋದು ಅವಳನ್ನ. ತೆಗೆದುಕೊಂಡು ತಬ್ಬಿ ಮುದ್ದಾಡಿಸುತ್ತಾ, ಯಶೋದಾಮ್ಮನಿಂದ ಕೃಷ್ಣನನ್ನ ದೇವಕಿ ಸಾಗಿಸಿದ ಹಾಗೆ, ನಡೆದೇಬಿಟ್ಟಳು. ಲಕ್ಕ ಅವರ ಮನೆಗೆ ಸೇರಿದ ಟೈಮು ಎಂಥದ್ದು, ಅಂತೀರಿ ಒಳ್ಳೇ ಚಿನ್ನದಮಳೆ ಮುಹೂರ್ತ. ಬೆಳೆ ಬಂಗಾರ ಎಲ್ಲ ಹೆಚ್ಚಿತು ಅವರ ಮನೇಲಿ. ಆಕೇನೂ ನಾಲ್ಕೈದು ಮಕ್ಕಳನ್ನ ಹೆತ್ತಳು. ಲಕ್ಕನಿಗೆ, ಪಾಪ, ಅವರು ಲಗ್ನ ಗೊತ್ತುಮಾಡಿದ್ದರು. ಆದರೆ, ತಲೇ ಮೇಲೆ ಕಾದುಕೂತಿರೋ ಕಾಳಿಂಗಸರ್ಪ, ವಿಧಿ, ಅವನಿಗೆ ಲಕ್ವಹೊಡಿಸಿ,

ಪ್ರಾಣಾನ ಕಿತ್ತುಕೊಂಡು ಹೋಯಿತು, ಲಗ್ನಕ್ಕಿನ್ನೊಂದು ತಿಂಗಳಿದೆ ಅನ್ನುವಾಗ.

ಲಕ್ಕ ಹೊರಡೋ ದಿನವೇ ನನಗೂ ಬುಲಾವ್ ಬರುತ್ತದೆ, ಅಂತ ಜೋಯಿಸರು ನುಡಿದಿದ್ದರು. ನನ್ನ ತಾಯಿ ಹೆದರುತ್ತಾನೇ ಇದ್ದಳು. ಹುಷಾರಾಗಿ ಕಾಪಾಡಮ್ಮ, ಒಂದೇ ಗೊನೇಲಿ ಎರಡುಕಾಯಿ, ಎಂದು ಅವಳು ಆ ಹೆಂಗಸಿಗೆ ಪದೇಪದೇ ಹೇಳುವಳು. ಆದರೆ, ಅವನು ಹೋದಾಗ, ನನ್ನ ತಾಯಿ ಬದುಕಿರಲಿಲ್ಲ. ಅವಳು ಆ ಲೋಕ ಸೇರಿದ್ದಳು. ಅಂತೂ ಒಂದೇ ಊರಲ್ಲಿ, ಅವುಳಿಜವುಳಿ ಇಬ್ಬರೂ ಬಾಳಬಾರದು ಎಂಬೋ ಶಾಸ್ತ್ರಕ್ಕೆ ಅನ್ಯಾಯ ಆಗಲಿಲ್ಲ. ಬದುಕಿದ್ದಾಗ, ಅವನು ಹೊಳೆಯಾಚೆ; ನಾನು ಈಚೆ; ಸತ್ತಮೇಲೆ, ಅವನು ಅಲ್ಲಿ, ನಾನು ಇಲ್ಲಿ.

ಇನ್ನೇನು? ರೈತರ ಜೀವನ............ನಿಮಗೆ ಗೊತ್ತಿಲ್ಲದೆ ಏನು? ಉಳುವುದು ಬಿತ್ತುವುದು, ಆ ಅಂತ ಬಾಯಗಲಿಸಿಕೊಂಡು ಆಕಾಶ ನೋಡೋದು, ಹುಯ್ಯೋ ಹುಯ್ಯೋ ಮಳೆರಾಯ ತೋಟದ ಬಾವಿಗೆ ನೀರಿಲ್ಲ, ಕೈಗೆ ಬಂದದ್ದು ಬಾಯಿಗೆ ಬಂದು, ಬಾಯಿಗೆ ಬಂದದ್ದು ಹೈಗೆ ಬಂದು, ಸಾಲಸೋಲ ಇಲ್ಲದೆ ಕಾಪಾಡಪ್ಪ ಅಂತ ಕೈಮುಗಿಯುವುದು, ಮೂಡುವಾಗಿ ನಿಂದ ಮುಳುಗುವವರೆಗೂ ಗೆಯ್ಮೆ, ಕತ್ತಲು ಮುಸುಕಿದರೆ, ಕಂಬ್ಳಿ; ಹಗಲೆಲ್ಲ ನೊಣ, ರಾತ್ರೆ ಸೊಳ್ಳೆ; ಈ ರೈಲು ಬಸ್ಸು ಬಂದಮೇಲೆ, ತಗಣೆ ಬೇರೆ ರಾತ್ರೆ ಹಗಲು.

ಹಳ್ಳಿಯಲ್ಲಿ ಒಂದು ದಿನ ಇದ್ದ ಹಾಗೇನೇ ಇನ್ನೊಂದು ದಿನ, ಒಂದು ವರ್ಷ ಇದ್ದ ಹಾಗೇನೇ ಥೇಟ್ ಇನ್ನೊಂದು ವರ್ಷ. ಈಚೆಗೆ ಆಗಿರೋ ಉಳ್ಟಾ ಸೀದಾ ವಿಷಯ ಅಲ್ಲ ನಾನು ಹೇಳೋದು. ನಾನು ಹೈದನಾಗಿದ್ದಾಗಿನ ಸಮಾಚಾರ. ಹಿಂದಕ್ಕೆ ನಮ್ಮೂರಲ್ಲಿ ಕುಸ್ತಿ, ಕೋಳಿ ಕಾಳಗ, ಟಗರಿನ ಕಾಳಗ, ಎಲ್ಲ ಇತ್ತಂತೆ. ಈಚೆಗೆ ಅವೆಲ್ಲ ಹೋದುವು. ಈಗ ಏನಪ್ಪ ಅಂದ್ರೆ, ನಾನೊಬ್ಬ ಲಾಯರನ್ನ ಇಡುತ್ತೇನೆ, ನೀನೊಬ್ಬನನ್ನ ಇಡು, ನಡಿ ಕೋರ್ಟಿಗೆ, ಅಲ್ಲೇ ಅವರಿಬ್ಬರ ಕುಸ್ತೀಲಿ, ನೀ ಗೆಲ್ಲುತ್ತಿಯೋ ನಾನು ಗೆಲ್ಲುತ್ತೇನೋ ನೋಡುವ, ಅಂತ ಪಂಥ ಹೂಡುತ್ತಾರೆ, ಹಳ್ಳಿಯವರು. ಇದೊಂದು ಚಟ

ಹೆಚ್ಚಿಹೋಗಿದೆ, ನಮ್ಮ ಜನರಲ್ಲಿ. ಬೇಡಿರೋ ಇಬ್ಬರೂ ಪಾಪರಾಗುತ್ತೀರಿ ಅಂದರೆ, ಆ ಅಮಲು ಹತ್ತಿದವರಿಗೆ ಕಿವೀನೇ ಕೇಳಿಸುವುದಿಲ್ಲ.

ಹುಂ. ಉಳಿದ ಹಳ್ಳಿ ಹೈಕಳಿಗಿಂತ ನಾನೇ ಮೇಲು ಎನಬೇಕು; ನನ್ನ ಜೊತೆಯವರು ಬೆಂಗಳೂರು ಪೇಟೇನ್ನೂ ಕಾಣದೆ ಕಣ್ಣುಮುಚ್ಚಿರೋರು ಬಹಳ ಮಂದಿ. ಒಂದು ಶೀಷೆ ಲೈಂಜೂಸ್ ಕುಡಿಯದೆ, ಮೈಸೂರ್‌ಪಾಕ್ ಜಾಮೂನು ಜಿಲೇಬಿ ಅಂದ್ರೆ ಯಾವ ಗಿಡದಲ್ಲಿ ಬೆಳೆಯುತ್ತೆ ಅಂತ ಕೇಳುತ್ತ, ಬರೇ ಬೀಡೀನ್ನೇ ಸೇದುತ್ತ ಸಿಗರೇಟಿನ ರುಚಿ ತಿಳಿಯದೆ—ಏಕೆ, ಬಿಳಿ ಸಕ್ಕರೆ ರುಚಿ ಗೊತ್ತಿಲ್ಲದೆ—ಜನ್ಮಾನ್ನೆಲ್ಲ ತಾಪತ್ರಯದಲ್ಲೇ ತೇದಿರೋರು ನೂರಾರುಜನ ಹಳ್ಳಿಗಳಲ್ಲಿ. ಆದರೆ, ನನ್ನ ಹಣೇಲಿ ತಿರುಪತಿಜಾತ್ರೆ ಬರೆದಿತ್ತಲ್ಲಾ, ಆದ್ದರಿಂದ, ನಾನು ಬದುಕಿದೆ.

ನನಗೆ ಆರೇಳು ವರ್ಷ ತುಂಬುತ್ತಲೂ ನಮ್ಮೂರು ಗೌಡರು ಒತ್ತಾಯ ಮಾಡಿದರು,—ಲೋ! ನಿಮ್ಮಪ್ಪನ ಸೇವೆ ನೀನೂ ಶುರುಮಾಡು, ಅಂತ. ನನ್ನ ಮನೆಯಲ್ಲಿ ಅಪ್ಪನ ಕೊಂಬು ಜಾಗಟೆ ಶಂಖ ದೀಪ ಎಲ್ಲ ಇತ್ತು ಆದರೆ, ತಾಯಿಗೆ ಗಾಬರಿ. ಅವನನ್ನ ತಿಂದ ಮಾರಿ ಎಲ್ಲಿ ತಿರುಪತಿ ಬೆಟ್ಟದ ಕೆಳಗೆ ನನ್ನನ್ನೂ ತಿನ್ನುವುದಕ್ಕಾಗಿ ಕಾದು ಕುಳಿತಿದೆಯೋ? ಬೇಡ ಬೇಡ ಅಂತ ತಡೆದಳು, ಎರಡುಮೂರು ವರ್ಷ. ಕಡೆಗೆ, ವೆಂಕಟರಮಣಾ, ನಿನ್ನ ಉಡಿಯಲ್ಲಿ ಹಾಕಿದೇನೆ, ಅಂತ ಕಣ್ಣೀರಿಟ್ಟಳು.

ಉದ್ದಕ್ಕೂ ನಡೆದೇ ಹೋಗುವೆವು, ನಾವು. ಈಗ ಏನು? ಹೀಗೆ ಹೋದ, ಹಾಗೆ ಬಂದ. ನಿನ್ನೆ ಇಲ್ಲಿದ್ದ, ನಾಳೆ ಮತ್ತೆ ಇಲ್ಲೇ ಇರುತ್ತಾನೆ. ನಡುವೆ ದೇವರ ಸೇವೆ ಮುಗಿದೇಹೋಗಿರುತ್ತದೆ. ಹೊರಟ ಮ್ಯ ಹೊರಟ ಹಾಗೇನೆ, ಕುಡಿದ ನೀರು ಅಲ್ಲಾಡಲಿಲ್ಲ ಅಂತ. ಬಂದುಬಿಡುತ್ತಾರೆ. ಜಂಬದ ಜಾತ್ರೆ. ನಿಧಾನವೇ ದಾನ, ಎಂಬೋದನ್ನರಿಯರು. ಋಣವಿದ್ದರೆ ಕಾವೇರಿ, ಹಣವಿದ್ದರೆ ತಿರುಪತಿ, ಅಂತ ಇಂಥವರೇ ಗಾದೆ ಮಾಡಿರೋದು. ಹೆಜ್ಜೆ ಹೆಜ್ಜೆಗೂ ಮೆಟ್ಟಿಲು ಮೆಟ್ಟಿಲಿಗೂ ಗೋಹಿಂದಾ ಅಂತ ಕೂಗ್ತಾ ಹೋದರೆ, ಬಸ್ ಹತ್ತಲೇ ಬೇಕಾಗಿಲ್ಲ, ಹೂ ಎತ್ತಿದಹಾಗೆ ನಮ್ಮನ್ನ ಅವನೇ ಏಳು

ಮಲೆಗಳನ್ನೂ ಹತ್ತಿಸಿ ತನ್ನೆದುರು ನಿಲ್ಲಿಸಿಕೊಳ್ಳುತ್ತಾನೆ. ಬಡವರ ಬಂಧು, ಅವನು. ಆ ಮಂಗಳಾರತಿ ನೋಡುವಾಗ, ನನಗೆ, ನಡೆದ ಸುಸ್ತು ಪಡೆದ ನೋವು ಎಲ್ಲ ಮರೆತೇಹೋದುವು.

ನಾನೂ ನಮ್ಮವರೂ, ತಿರುಪತಿ ಬ್ರಮ್ಮೋತ್ಸವಕ್ಕೆ ಹೊರಡೋದಕ್ಕೆ ಮುಂಚೆ, ಅರಶಿನದ ಬಟ್ಟೆ ಉಟ್ಟು, ಕೊಂಬು ಊದುತ್ತ, ಜಾಗಟೆ ಬಡಿದು, ಉರಿಯುವ ಪಂಜು ದೀಪ ಸಮೇತ ಕಾಣಿಕೆ ಎತ್ತುತ್ತಿದ್ದೆವು. ಆಗ, ನನ್ನನ್ನ, ಚಿಕ್ಕಹುಡುಗ ನಾನು, ಒಂದೊಂದು ಮನೆಯೊಳಕ್ಕೂ ಕರೆದು, ಮಣೆ ಹಾಕಿ ಕೂರಿಸಿ ಕಾಲು ತೊಳೆದು ಗೋಡೇಗೊರಗಿಸಿ ನಿಲ್ಲಿಸಿ, ಬಟ್ಟಲು ತುಂಬ ಹಾಲು ಬಾಯಿತನಕ ಕೊಡುವರು. ಎಳೇಕರು ಚಪ್ಪರಿಸಿಕೊಂಡು ಹಾಲು ಕುಡಿಯುವ ಹಾಗೆ, ನಾನೂನೂ ಬಟ್ಟಲಿಗೆ ತುಟಿ ತಗುಲಿಸಿ ಚೀಪುವೆ.

ಆದರೆ, ಹಾಲೆರೆಯುವುದಕ್ಕೆ ನಾವು; ಹಣೆಯಲ್ಲಿ ಬರೆಯುವುದಕ್ಕೆ ನಾವೆ? ಅದಕ್ಕೂ ಬಂದ, ಒಬ್ಬ ಕಂಟಕ. ಈಗ, ನೀವೆಲ್ಲ ಹಾಲೆಂದರೆ ಅಮೃತ, ಅದನ್ನೇ ಬಳಸಬೇಕು, ಹಾಲಿನ ಸೊಸೈಟಿ ಮಡಗಬೇಕು, ಹಾಲಿನ ಶೀಷೆ ತರಿಸಬೇಕು, ಅಂತ ಒದ್ದಾಡುತ್ತಿದೀರಲ್ಲ, ನನಗೆ ಆಗ ಅವನೇನು ಹೇಳಿದ ಗೊತ್ತೆ? "ಲೋ, ಚೆಲುವಾ! ಹಾಲು ಅಂದ್ರೆ ತೊಟ್ಟಿಲು ಮಕ್ಕಳಿಗೆ ಮಾತ್ರ ಲಾಯಕ್ಕು. ಬೆಳೆದ ಹೈಕಳು ಹಾಲು ಕುಡಿಯಬಾರದು. ಕುಡಿದರೆ, ದನವ ಹಾಗಾಗುತ್ತೀಯೆ; ಎಮ್ಮೆ ಹಾಗೆ ಮೂಗಿನ ಹೊಳ್ಳೆಗಳು ಬಾಯಿ ಬಿಟ್ಟುಕೋತವೆ. ಗಂಟಲು ದಪ್ಪನಾಗ್ತದೆ. ಬುದ್ಧಿ ಕೆಟ್ಟುಹೋಗ್ತದೆ, ಪೆಂಗ ಆಗ್ತೀಯೆ. ಕೊಡೋರಿಗೇನು? ಕಂಡವರ ಮಕ್ಕಳು. ನಿನ್ನ ಹುಷಾರಿ ಮೇಲೆ ನೀನಿರಬೇಡವೇ?" ಅಂದ. ಆವತ್ತಿನಿಂದ ನಾನು ಅದರ ತಂಟೆಗೇ ಹೋಗಲಿಲ್ಲ.

ಥತ್! ಇವನೆಂಥ ಇಪ್ಪೀಶ್ವರಯ್ಯ ದೇಶಕ್ಕೆಲ್ಲ ಹುಷಾರಿ ಹೇಳೋಕೆ, ಇವನಿಗೇನನುಭವ ಇದೆ, ಅಂತ ನಾನು ಆಗಲೇ ಎಚ್ಚರ ತೆಗೆದುಕೊಂಡು ಬಿಟ್ಟಿದ್ದರೆ, ನಿಮ್ಮ ಮಕ್ಕಳಹಾಗೆ, ನನ್ನ ಬುದ್ಧೀನೂ ಶುದ್ಧ ಆಗ್ತಿತ್ತೋ ಏನೋ? ಆದರೆ, ಲಭ್ಯ ಇಲ್ಲ. ಹೋದ ಜನ್ಮದಲ್ಲಿ, ನಾನು ಯಾವದೋ ಮಗು

ಬಾಯಿಂದ ಹಾಲಿನ ಬಟ್ಟಲು ಕಿತ್ತು ಚೆಲ್ಲಿರಬೇಕು, ಆದಕ್ಕೇ ಆ ಮನುಷ್ಯ ಬಂದು ನನ್ನ ಬಾಯಿಂದಲೂ ಬಿಟ್ಟಿ ಬಟ್ಟಲು ಕಿತ್ತೆಸೆದ.

ತಿರುಪತಿ ಜಾತ್ರೆ ಅಂದ್ರೆ, ಮೀಸಲು ಅಂತ ಇಡುತ್ತಾರೆ, ತಿಮ್ಮಪ್ಪನಿಗೆ ನಡೆದುಕೊಳ್ಳೋ ಜನ. ಅವತ್ತು ಊರಿನವರಿಗೆಲ್ಲ ಮುದ್ದೆ ಹಂಚುತ್ತಾರೆ; ಅನ್ನಾನೂ ಕೊಡುತ್ತಾರೆ, ಒಂದೊಂದು ಸಲ. ಮುಡುಪಿನ ಸೇವೆ ಅಂತ ಬೇರೆ ಮಾಡಿಸುತ್ತಾರೆ, ನಂಬಿಕೆ ಮಡಗಿರುವ ಜನ. ಅದಕ್ಕಾಗಿ, ಅಪಾರ ಖರ್ಚು ಮುಟ್ಟಿಸುತ್ತಾರೆ, ಕೆಲವರು. ನೂರರತನಕ ಏರಿದರೂ ಏರಿತು, ಅಂಗಡಿ ಸಾಲ. ನಾನೂನೂ ಆ ದೇವರ ಹೆಸರಿನಲ್ಲಿ, ನಾಮ ಬಳಿದು, ನವಿಲುಗರಿ ಕಂತೆ ಹಿಡಿದು, ಜಾಗಟೆ ಬಡಿದು, ಮನೆಮನೆ ಅಲೆದು, ಸಂಜೆ ಯೊಳಗೆ ಎಂಟಾಣೆ ಹತ್ತಾಣೆ ಪುಡಿಕಾಸು ಗಳಿಸಿ ತಂದದ್ದುಂಟು. ಅದೆಲ್ಲ ಒಂದು ಕಾಲ; ಯಾರೋ ತುರುಬು ನೆನೆದುಕೊಂಡ ಹಾಗೆ ನಾವೂನೂ ನೆನೆದು ಕೊರಗಬೇಕಾದ ಕಾಲ. ಈಗ, ಅಂಥ ಭಕ್ತೀನೂ ಇಲ್ಲ, ಭಯವೂ ಇಲ್ಲ, ಭಿಕ್ಷೇನೂ ಇಲ್ಲ. ಆ ದೇವರುಗಳ ಶಕ್ತಿ ಕೂಡ ಕುಗ್ಗಿಹೋಯ್ತು. ಏರೋಪ್ಲೇನ್ನಲ್ಲಿ ಹಾರಿಹೋಗಿ ಮೋಡಗಳಿಗೆ ಮಣ್ಣೆರಚಿ ಮಳೆ ಬೀಳಿಸುತ್ತಾನಂತೆ, ಮನುಷ್ಯ, ಈಚೆಗೆ. ಇನ್ನೂ ಆ ದೇವರು ಅಲ್ಲಿ ಕುಂತಿರೋದು ತಾನೆ ಏಕೆ? ತಲೆ ಮೇಲೆ ಮಣ್ಣು ಹುಯಿಸಿಕೊಳ್ಳೋದಕ್ಕೇನು?

ಅಲ್ಲ, ಸ್ವಾಮಿ! ಗುಡಿಯೊಳಗಿರುವುದೂ ಇಂಥ ಕಲ್ಲೇ ಅಲ್ಲವೆ. ಬಿದ್ದ ಕಲ್ಲು ಅಗಸನದು; ಎದ್ದಕಲ್ಲು ಪೂಜಾರಯ್ಯನದು; ಒಡೆದಕಲ್ಲು ಅಕ್ಕಸಾಲಿಗ ನದು. ಭಕ್ತರು ನೆರೆದು ಕೈಜೋಡಿಸಿ ಕಣ್ಣೀರು ಸುರಿಸಿ ಆ ಕಲ್ಲಿನ ಮುಂದೆ ನಿಂತು, ನೀನು ಒಡೆಯ, ನೀನು ಬಲ್ಲೆ, ನೀನು ಒಲ್ಲೆ ಅಂದರೆ ಇಲ್ಲ, ಮಳೆ ಕೊಡು, ಬೆಳೆ ಕೊಡು, ಮಾರೀನ ಸದೆಬಡಿ, ಅಂತ ಕೂಗಿಕೊಂಡರೆ, ಆ ಕಲ್ಲು ದನಿ ಕೊಡುತ್ತದೆ. ಬೊಗಳುತ್ತ ಬೊಗಳುತ್ತ ರಾಗ, ಹೊಗಳುತ್ತ ಹೊಗಳುತ್ತ ರಾಜ. ಈಗ, ಚೆಲುವಾ, ನೀನು ಭೀಮ ಕಣೊ, ಎತ್ತೋ ಆ ಭಾರನ ಅಂದ್ರೆ ನನ್ನ ತೋಳಿಗೂ ಬಲ ಬರುತ್ತೆ. ಅದನ್ನು ಬಿಟ್ಟು ನೀವು "ಸುಮ್ಮನೆ ಕೂತುಕೊ! ರಟ್ಟೆ ಕಳಚಿಬೀಳುತ್ತೆ, ನೀನೆಲ್ಲಿ ಎತ್ತಬಲ್ಲೆ" ಅಂತ, ನನ್ನ ಮುಖ ಮುರಿದರೆ, ಇದ್ದದ್ದೂ ಉಡುಗಿಹೋಗುತ್ತೆ; ಇರೋ ತಾಕತ್ತೂ ತಣ್ಣಗಾಗುತ್ತದೆ.

ಈಗೇನು? ಗುಡಿಯೊಳಗಿರೋ ಕಲ್ಲನ್ನ ಕಲ್ಲು ಅಂತಲೇ ವಾದಿಸುತ್ತಾರೆ. ಲಿಂಗ ಅಂತ ಕಾಣುವವರೇ ಕಮ್ಮಿ. ಖಾಯಿಲೆ ಹರಡಿತು ಅಂದ್ರೆ ಆಸ್ಪತ್ರೇನೇ ಹೊರತು ಬಿಲ್ಪತ್ರೇನ ಅರಸುವುದೇ ಇಲ್ಲ. ಗಂಟು ಕರಗಿಸುವುದಕ್ಕೆ ಅಲ್ಲಿ ಸೂಜೀಲಿ ಚುಚ್ಚಿಸಿಕೊಳ್ಳುತ್ತಾರೆ. ಕಾರಲ್ಲಿ ಕೂತು ಬೊಜ್ಜು ಬೆಳೆಸಿದ ತಪ್ಪಿಗೆ ಆ ಡಾಕ್ಟರ್ ಮಾತನ್ನ ತಲೆ ಮೇಲೆ ಹೊತ್ತು ಬೆಳಗ್ಗೆ ಎದ್ದು ಮೂರು ಮೈಲಿ ಬಿಸಿಬಿಸಿ ನಡೀತಾರೆ. ನಮಗಿಂತ ದೊಡ್ಡದೊಂದು ವಸ್ತು ಇದೆ ಜಗತ್ತಿನಲ್ಲಿ, ಅಂತ ಯೋಚನೆ ಮಾಡುವುದಕ್ಕೂ ಪುರಸತ್ತಿಲ್ಲ, ಸುಖ ಹುಡುಕೋ ಭರಾಟೀಲಿ. ಇರಲಿ, ಸ್ವಾಮಿ, ನನಗ್ಯಾಕೆ ದೊಡ್ಡವರ ಮಾತು, ಅವರವರ ಕರ್ಮ ಅವರವರಿಗೆ. ಅವನಿಗಿಷ್ಟ ಬಂದಾಗ, ಅವನೇ ಎಳೆದು ಕೊಳ್ಳುತ್ತಾನೆ, ಅವನ ಸಮೀಪಕ್ಕೆ. ಯಾಕೆ ಹೇಳೋಕೆ ಬಂದೆ ಅಂದರೆ, ದೇವರು ದಿಂಡರು ದೊಡ್ಡದು ಮೇಲಿನದು ಅಂತ ನಂಬಿಕೆ ಇರೋದು ಒಳ್ಳೇದು, ಮನುಷ್ಯನಿಗೆ, ಲೋಕಕ್ಕೆ. ನಮ್ಮ ಈ ಎಂಜಿನ್ ಇದೆಯಲ್ಲಾ, ಇದಕ್ಕೆ, ದೇವರು ಎನ್ನುವುದು ಒಂದು ಬ್ರೇಕ್ಕು. ಬ್ರೇಕ್ಕೇ ಇಲ್ಲದೆ ಬರೇ ಹಾರನ್ನನ್ನೇ ನಂಬಿಕೊಂಡು ಬಿಡೋಕಾಗ್ತದಾ, ಮೋಟಾರ್‌ನ?

ತಿರುಪತಿ ಜಾತ್ರೆ ನೆಪದಲ್ಲಿ, ನಾನು ಬೆಂಗಳೂರುಪೇಟೆ ಬವರಿಂಗ್‌ಪೇಟೆ ಮೂಡಲುಬಾಗಿಲು ಆಂಜನೇಯ ಮೋಟಾರು ಸೈಕಲ್ಲು ಬಸ್ಸು ಷಾಪು ಸೋಡಾ ಲೈಂಜೂಸು ಎಲ್ಲಾನೂ ನೋಡಿದೆ, ಅಷ್ಟು ಚಿಕ್ಕಂದಿನಲ್ಲೇ ರೈಲ್ನೂ ಕೂಡ ಒಂದೆರಡು ಸಾರಿ ಹತ್ತೇಬಿಟ್ಟೆ. ಅದರ ಮಜಾನ, ನನ್ನ ಜೊತೆ ಹೈಕಳ ಕೂಡ ಹೇಳ್ತಾನೇ ಇದ್ರೆ, ಪಾಪ ಅವಕ್ಕೆ ಬಾಯಲ್ಲಿ ನೀರೂರುವುದು, ಕಣ್ಣೆರಡೂ ದೊಡ್ಡದೊಡ್ಡ ಬಟ್ಟಲುಗಳು.

ಅದೆಲ್ಲ ಹಿಂದಿನ ಕತೆ. ಎಂಥೆಂಥ ಜಾತ್ರೆ ಮಾಡಿದರೂನೂ, ಹರಕೆ ಹೊತ್ತರೂ, ದೇವರು ಮಾತ್ರ ನಮ್ಮ ಪಾಲಿಗೆ ಕಲ್ಲಾಗಿಯೇ ಉಳಿದರು. ನನ್ನ ಇಬ್ಬರು ಅಣ್ಣಂದಿರನ್ನೂ ಮಾರಮ್ಮ ಹೊಡೆದುಕೊಂಡೇ ಹೋದಳು, ಬುಟ್ಟಿಗೆಹಾಕಿ. ಅಯ್ಯೋ, ನಮ್ಮ ಮನೆಯಲ್ಲಿ ಮಕ್ಕಳು ಉಳಿಯುವುದೇ ಕಷ್ಟ; ಮಕ್ಕಳ ಮಾತೇನು? ಹುಡುಗರೂ ಅಷ್ಟೆ. ಆಟ ಆಡುತ್ತಲೇ ಇರುತ್ತವೆ, ಬೆಳಗಾಗುವ ಹೊತ್ತಿಗೆ ಯಮ ಎಂಬೋ ಹುಲಿ ಬಂದು ಕತ್ತಲೆ

ಯೊಳಕ್ಕೆ ಕಚ್ಚಿಕೊಂಡು ಹೋಗಿರುತ್ತದೆ! ನಮ್ಮಮ್ಮನಂತೂ, ಚುಂಚನ ಕಟ್ಟೆ ಜಾತ್ರೇಲಿ ಮಾರುವುದಕ್ಕಾಗಿ ಮನೇಲಿ ಸಾಕಿ ಸಲಹಿ ಬೆಳಸೋ ಹೋರಿ ಕರುವಿನಷ್ಟೇ ಹುಷಾರಾಗಿ ಸಾಕುವಳು, ಗಂಡುಮಕ್ಕಳನ್ನ. ಆದರೂ, ಅವಳಿಗೂ ಮೋಸಮಾಡಿ, ಅವಳ ಕೈಗೂ ತಪ್ಪಿಸಿ, ಚಾಪೆ ಕೆಳಗಿನ ರಂಗೋಲಿ ಕೆಳಗಿಂದ ನುಸುಳಿಬಂದು ಪಾಶ ಹಾಕೇಬಿಡೋನು ಯಮರಾಯ!

# ಚೆಲುವನ ಮದುವೆ

ಕಳೆದುಳಿದವು ಮನೆಯೊಳಗೆ, ನಾನು, ನನ್ನ ತಾಯಿ, ಇಬ್ಬರೇ! ಬಡವಾ, ಮಡಗಿದಹಾಗಿರು, ಅಂಬಲಿ ಕುಡಿಯುವುದಕ್ಕೆ ಎರಡೇ ಎರಡು ಬಾಯಿ ಆದರೆ, ಅದೂ ಒಂದು ಅನುಕೂಲವೇ, ಅಂತ ನನ್ನ ತಾಯಿ ಸುಮ್ಮನಿರಬೇಕೋ ಬೇಡವೊ? ನನ್ನ ಮೂತಿ ಮೇಲೆ ಕರೀಗೆರೆ ಕಿರುಮೀಸೆ ಕಾಣಿಸುತ್ತಲೂ, ಇನ್ನೊಂದು ಬಾಯನ್ನೂ ತರೋಣ ಇವನ ಹೆಸರಲ್ಲಿ ಎಂಬ ಚಪಲ ಹತ್ತಿತು, ಅವಳಿಗೆ.

ಈಗೀಗ ಗಂಡುಹುಡುಗರಿಗೆ ವಿಪರೀತ ಅಹಂಕಾರ ಬಲಿತುಬಿಟ್ಟಿದೆ. ನಾನೇ ರಾಜ, ನಾನೇ ಮಂತ್ರಿ ಅಂತ ಚೋಟುದ್ದದ ಹೈದನೂ ಎದೆ ತಟ್ಟಿಕೊಂಡು ಕಣ್ಣಿಗೆ ಕುರುಡು ಹಚ್ಚಿಕೊಳ್ಳುವ ಕಾಲ ಬಂದಿದೆ. ನನ್ನ ಮಗ ಒಪ್ಪಲಿಲ್ಲ, ನನ್ನ ಮಾತು ಕಸಕ್ಕಿಂತ ಕಡೆ ಆಯಿತು, ಅಂತ ಹೆತ್ತವರು ಹಣೆ ಚೆಚ್ಚಿಕೊಳ್ಳುತ್ತಾರೆ, ಈಗ ಈ ಲಗ್ನದ ವಿಷಯದಲ್ಲಿ.

ಆಗ, ಅಂಥ ಮಾತೇ ಇಲ್ಲ. ಇಕೊ, ಈ ಹೆಣ್ಣು; ಇಕೊ, ಈ ಗಂಡು, ಅಂದರೆ ತೀರಿತು. ಅವರಿಗೆ ಗೊತ್ತು, ಕುಲ ಗೋತ್ರ ಗುಣ ನಡತೆ ಎಲ್ಲಿಂದ ತಂದರೆ ಹಸನು, ಎಲ್ಲಿಗೆ ಕೊಟ್ಟರೆ ಲಕ್ಷಣ, ಅನ್ನೋದು. ಒಂದುವೇಳೆ, ಅವರು ತಪ್ಪಿದರು ಅನ್ನಿ, ಹೋಗಲಿ ಇದೊಂದು ಜನ್ಮ, ಅವರೇ ಕೊಟ್ಟ ಜನ್ಮ, ಅವರ ಸೇವೇಲಿ ಸವೆದುಬಿಡೋಣ, ಅನ್ನೋ ಸಮಾಧಾನ ಮಕ್ಕಳಿಗೆ.

ನನ್ನ ತಾಯಿನೂ, ಪಾಪ ಹತ್ತಾರು ಊರು ಕೇರಿ ಸುತ್ತಿದಳು. ಹೆಣ್ಣು ದೂರದಿಂದ ತರಬೇಕು, ದನ ಹತ್ತಿರದಿಂದ ತರಬೇಕು ಅಂತ ಗಾದೆ ಇದೆ, ನಮ್ಮಲ್ಲಿ. ಎಲ್ಲೂ ಸರಿಯಾದ ಜನ ಸಿಕ್ಕಿ, ಹದವಾಗಲಿಲ್ಲ–ಏನೇನೋ ವೆತ್ಯಾಸ ಬಂದುಬಿಡೋದು, ನಡುವೆ. ನಾನು ಚೆಲುವಾ ಅನ್ನೋದು ಅವಳಿಗೊಂದು ಜಂಬ, ನನ್ನ ಬಣ್ಣಕ್ಕೆ ತಕ್ಕ ಹುಡುಗಿ ಅವಳ ಕಣ್ಣಿಗೆ ಬೀಳಲೇ

ಇಲ್ಲ. ನನ್ನ ಬಣ್ಣಾನ ಅತೀ ಹೊಗಳಿ, ಅವರ ಹುಡುಗೀನ ಹೀಯಾಳಿಸಿ, ಊರೆಲ್ಲ ವ್ಯಾಜ್ಯ ಎಬ್ಬಿಸಿ, ಹಿಂದಕ್ಕೆ ಬರುವಳು. ಜನ, ನನ್ನ ಮೇಲೆ ರೇಗಿ, ನನ್ನನ್ನ ಪರಂಗಿ, ಬಿಳಿಯ, ಅಂತ ಕೂಗಿ ಕಾಡುವರು.

ಆಗ, ಕೇಳಿ, ತಮಾಷೇನ! ನಿಮ್ಮ ಮುಂದೆ ಮುಚ್ಚೀನು, ಮರೆ ಏನು? ನಾನೇನೋ ನಮ್ಮಮ್ಮನ ಹತ್ತಿರ ನಾಚಿಕೊಂಡು ಹೇಳಿದೆ, ಒಂದು ಹುಡುಗಿ ಇರೋ ಸಂಗತೀನ! ಅವಳ ತಾಪತ್ರಯ ನೋಡಿ ನನಗೂನೂ ಮನ ರೋಸಿತ್ತು. ಕೆರೆ ಕೆಳಗೆ ಆ ಹುಡುಗಿ ಮನೆಯವರಿಗೆ ಒಂದಿಷ್ಟಗಲದ ಜಮೀನಿತ್ತು. ದನ ಕರ ಅಟ್ಟಿಸಿಕೊಂಡು ಬಂದು, ಅವಳೂ ಮೇಯಿಸುವಳು; ನೋಡಿದ್ದೆ. ನೋಡುವುದೇನು, ಮಾತೂ ಆಡಿಸಿದ್ದೆ, ಕೀಟಲೆ ಮಾತುಗಳನ್ನ. ಇತರೇ ಹೈಕಳು ಅವಳನ್ನೇನಾದರೂ ಅಂದುಗಿಂದರೆ, ಅವರನ್ನ ಹುಣಸೇಮರದ ತನಕ ಅಟ್ಟಿಸಿಕೊಂಡು ಹೋಗಿ, ಬೆನ್ನಮೇಲೆ ಬಾಸುಂಡೆ ಬರಿಸಿ ಬರುತ್ತಿದ್ದೆ. ಹೂಂ ಮತ್ತೆ! ಹೆಣ್ಣುಮಗು ಒಂದನ್ನ ಪೋಕರಿ ಹುಡುಗರು ಲೇವಡಿ ಮಾಡೋದನ್ನ ನೋಡಿ ಸುಮ್ಮನಿರು ಅಂತೀರಾ, ನನ್ನನ್ನ? ಹೆಣ್ಣಿನ ಮಾನ ಕಾಪಾಡು ಅಂತ ತಾನೆ ರಾಮಾಯಣ ಮಹಾಭಾರತ ಎಲ್ಲಾ ಹೇಳೋದು ನಮಗೆ?

ನಮ್ಮೂರು ಸುತ್ತ ಕಿರುಬನ ಕಾಟ ಜಾಸ್ತಿ. ಆ ಹೈಕಳು ಹುಲ್ಲುಮೆದೆ ಹಿಂದೆ ಅವಿತುಕೊಂಡಿದ್ದು, ಅವಳು ಅತ್ತಲಾಗೆ ಹರಿದು ಬಂದರೆ, ಗೂರ್ ಅಂತ ಕಿರಿಚುವರು. ಅದನ್ನ ಕೇಳಿ ಹೆಣ್ಣು ಜೀವ ಕಿಟೋ ಅಂತ ಅರಚುತ್ತ ಓಟಕಿತ್ತರೆ, ಪುಂಡರೆಲ್ಲ ಹೊರಗೆ ಬಂದು ನಗುವರು. ಅವರ ಪೈಕಿ, ಯಾವನಾದರೂ ಒಂಟಿಯಾಗಿ ಸಿಕ್ಕ ಅಂದರೆ ಸರಿ, ನಾನು, ಸದೆಬಡಿಯದೆ ಬಿಡುತ್ತಿರಲಿಲ್ಲ.

ಒಂದು ದಿವಸ, ಆ ಹುಡಗೀನ ಅದೆಂಥದ್ದೋ ಹಾವು ಕಚ್ಚಿತು, ಹೊಲದ ಹತ್ತಿರ. ಹುಳು ಮುಟ್ಟಿದರೆ, ನಿಮ್ಮ ಹಾಗೆ ನಾವು ಆಸ್ಪತ್ರೆ ಅಂತ ಅಬ್ಬರ ಎಬ್ಬಿಸೋದಿಲ್ಲ. ಪಕ್ಕದಲ್ಲೇ ಹಾರೋಹಳ್ಳಿ ಅಂತ ಊರಿದೆ. ಅಲ್ಲಿಗೆ, ಓಡಿಹೋಗಿ, ಜೋಯಿಸರೇ, ಅಂತ ಅವರ ಬಾಗಿಲ ಮುಂದೆ ಕೂಗುವೆವು. ಅವರೋ ಅವರ ಗಂಡುಮಕ್ಕಳೋ ಹೊರಗೆ ಬಂದು, ಎತ್ತಿ, ನಾಲ್ಕು

ಬೀರುವರು, ಒಂದೊಂದು ಕೆನ್ನೆಗೆ ಎರಡೆರಡು, ದವಡೆ ಪುಡಿಪುಡಿಯಾಗುವ ಹಾಗೆ, "ಹೋಯ್ತು! ಹೋಯ್ತು!" ಅನ್ನುತ್ತ. ಇತ್ತಲಾಗೆ, ಹಾವಿನ ವಿಷ ಹೋಗೇಬಿಡುತ್ತೆ, ಆ ಕ್ಷಣವೇ! ಒಂದೊಂದೇಟಿಗೂ, ಧುಂ ಧುಂ ಅಂತ ಕೆಳಕ್ಕಿಳಿದು ಮೈಬಿಟ್ಟು, ಆಚೆಗೆ ಹೋಗೇಬಿಡುತ್ತೆ; ದೇಹದಲ್ಲಿ ಪ್ರಾಣ ಮತ್ತೆ ಬಂದು ಕೂಡುತ್ತೆ. ಇದೇ ನಮ್ಮ ಆಸ್ಪತ್ರೆ; ನಮ್ಮೂರು ಚಿಕಿತ್ಸೆ. ಚಿಕಿತ್ಸೆ ಹಾವು ಕಚ್ಚಿತಲ್ಲ, ಅವನಿಗಲ್ಲ; ಹೋಗಿ ಹೇಳಿದವನಿಗೆ. ಗಳಿಗೆಯೊಳಗೆ ತಿಳಿಸದೆ ತಡಮಾಡಿದರೆ, ಉಳಿಯೋ ಸಂದರ್ಭ ಕಡಮೆ, ಏಟೂ ಜಾಸ್ತಿ ನಂಬರ್ ತಿನ್ನಬೇಕಾಗುತ್ತದೆ, ಡಜನ್‌ಗಟ್ಟಲೆ. ನೋಡಿದಿರಾ! ದೇವರು ಎಂಥ ಜಾದೂ ಮಾಡಿದಾನೆ, ಕೊಲ್ಲೋದಕ್ಕೆ ಒಂದು ಹಾವಿದ್ದರೆ, ಬದುಕಿಸೋದಕ್ಕೆ ಒಬ್ಬ ಜೋಯಿಸ.

ಆ ಹುಡುಗಿ ಅವ್ವಾ ಅಂತ ಅರಚಿಕೊಂಡು ಬಿದ್ದಿತ್ತು; ಓಡೋನು ಒಬ್ಬನನ್ನೂ ಕಾಣೆ. ಅವಕ್ಕೆಲ್ಲ ಭಯ. ಜೋಯಿಸರ ಹಿತ್ತಲ ಮಾವಿನ ಮರಕ್ಕೆ ಕಲ್ಲು ಬೀರಿ ಕಾಯಿ ಉದುರಿಸಿ ಆರಿಸಿ ಎತ್ತಿ ತಂದ ಹೈಕಳು ಅವು. ಆ ಕೋಪಕ್ಕೆ ಅವರು ಇನ್ನೂ ಬಲವಾಗಿ ಪೆಟ್ಟು ತಿನ್ನಿಸುತ್ತಾರೆ ಅಂತ ಅವಕ್ಕೆ ಗಾಬರಿ.

ನಾನೂನೂ ಆ ಮರಕ್ಕೆ ಕಲ್ಲು ಬೀರಿದ್ದೆ. ಆದರೆ, ಪಾಪ, ಆ ಹುಡುಗಿ ಪ್ರಾಣ ಮುಖ್ಯವೋ? ನಮ್ಮ ಹಲ್ಲು ಮುಖ್ಯವೋ? ನಾನೇ ಓಡಿದೆ; ಏಟು ಬಿದ್ದಾಗ ತಲೆ ಗಿರ್ರಂತ ತಿರುಗಿ, ತಾರಾಮಂಡಲ ಕಾಣಿಸಿತು. ಐದು ಬೆರಳುಗಳೂ, ಚಿತ್ರ ಬರೆದ ಹಾಗೆ, ಕೆನ್ನೆಗೆ ಅಂಟಿತ್ತು, ಮತ್ತೊಂದು ಶುಕ್ರವಾರದ ತನಕ; ಹುಡುಗಿ ಹುಷಾರಾದಳಲ್ಲಾ ಅಂತ, ಆ ಹಿಗ್ಗಿನಲ್ಲೇ ಕೆನ್ನೆ ಸವರುವೆ. ನಿಮ್ಮ ಷಹರಿನಲ್ಲಾದರೆ, ನನ್ನ ಕರೆಸಿ ಸಭೆ ಕೂಡಿಸಿ, ಮೆಡ್ಲೋಗಿಡ್ಲೋ ಕೊಡಿಸುತ್ತಿದ್ದಿರಿ, ಮಂತ್ರಿಗಳ ಕೈಯಿಂದ. ಆದರೆ, ಹಳ್ಳೀಲಿ ನನ್ನ ಸುದ್ದೀನ್ನೇ ಒಬ್ಬನೂ ಎತ್ತಲಿಲ್ಲ. ಆದರೆ, ಆ ಹುಡುಗಿಗೆ ಮಾತ್ರ, ನನ್ನ ಕಂಡಾಗಲೆಲ್ಲ, ನಾಚಿಕೆ ಪ್ರೀತಿ ವಿಶ್ವಾಸ, ಅವಳ ಕಣ್ಣಿಗೆ ಒಂದು ಹೊಸ ಹೊಳಪು; ಕೆನ್ನೇಲಿ ಒಂದು ಹೊಸ ಬಗೆಯ ಕೆಂಪು.

ಅವಳ ಸಮಾಚಾರವನ್ನೇ ನಾನು ನನ್ನ ತಾಯಿಗೆ ಹೇಳಿದ್ದು. ಅವಳದೂ ಒಂದು ತರಹದ ಗೋಳುಕಥೆಯೆ. ಹೆತ್ತ ತಾಯಿ ಅವಳನ್ನ ಹೊಲೆಮನೆಯಲ್ಲಿರುವಾಗಲೇ ಬೇರೊಬ್ಬಳಿಗೆ ಮನಸಾರ ಕೊಟ್ಟುಬಿಟ್ಟಳಂತೆ; ಶ್ರೀಕೃಷ್ಣದೇವರು ಕೂಸಾಗಿದ್ದಾಗ ಕೊಟ್ಟುಬಿಟ್ಟರಂತಲ್ಲಾ, ಹಾಗೆಯೇ. ಅದು ಏಕೆ ಅಂತೀರೋ, ಹೊಟ್ಟೆಯೊಳಗೇನೇ ಮಗುವಿಗೆ ಹಲ್ಲು ಹುಟ್ಟಿಬಿಡ್ತು. ಅಂಥದ್ದು ಜೀವಸಹಿತ ಜನನ ಆದರೆ, ಆ ಮನೆ ನುಣ್ಣಗಾಗುತ್ತೆ ಅಂತಾರೆ, ನಮ್ಮವರು. ಅಯ್ಯೋ, ಅಯ್ಯೋ, ಮದುವೆಯಾಗಿ, ಅವಳು ಬಸುರಾದಾಗಲೆಲ್ಲ ಅವಳಿಗೆ ಅದೇ ಗಾಬರಿ, ಎಲ್ಲಿ ತನಗೂ ಭಗವಂತ ಹಲ್ಲುಸಹಿತ ಹುಟ್ಟೋ ಮಕ್ಕಳನ್ನ ಕೊಟ್ಟುಬಿಡ್ತಾನೋ ಅಂತ, ಅಯ್ಯೋ ಪರಮಾತ್ಮಾ, ಇಂಥ ಮನೆಹಾಳು ಮಗುವನ್ನ ಏಕೆ ಕೊಟ್ಟೆ, ಯಾರು ಅತ್ತರು ಇದು ಹುಟ್ಟಲಿಲ್ಲ ಅಂತ, ಎಂದು ಆ ತಾಯಿ ಗೋಳಾಡುತ್ತಿದ್ದಾಗ, ಯಾರೋ ಒಬ್ಬಾಕೆ ಬಂದು, "ನನಗಂತೂ ಮಕ್ಕಳಿಲ್ಲ; ಬಂಜೆ ಬಾಳು ಎಂಜಲೆಲೆ ಸಮಾನ, ಹೆತ್ತವರು ಹೆಗ್ಗಣ ಅಂತ ಬಿಸಾಕಿದ್ದನ್ನ ಮುದ್ದಾಡಿಸಿ ಮನದ ದಾಹ ತೀರಿಸಿಕೊಳ್ತೀನೆ, ಕೊಡು, ಅಂದಳಂತೆ. ಬೇಕಾದರೆ ಸಾಕು, ಸಾಕಾದರೆ ಸ್ವಾಮಿ ಪಾದಕ್ಕೆ ಹಾಕು, ಅಂತ ಕೊಟ್ಟೇಬಿಟ್ಟಳಂತೆ, ನನ್ನದಲ್ಲ ಅಂತ.

ಹಾಗೆ ಕೊಟ್ಟ ಮೂರನೆಯ ದಿನವೇ, ಬಾಣಂತಿ ತೀರಿಕೊಂಡಳು........ ಅದೇ ಹುಡುಗಿಯನ್ನೇ ನಾನು ಆರಿಸಿದ್ದು. ನನ್ನ ತಾಯಿಗೆ ನಾನು, ನೋಡವ್ವ! ಈಗ ಏನೋ, ಸೊಟ್ಟ ಕನ್ನಡೀಲಿ ಕಾಣುವ ಮುಖದ ಹಾಗೆ ಕೆನ್ನೆ ಕೊಂಚ ಡೊಂಕಾಗಿದೆ, ಗೊಣ್ಣೆ ಸುರಿಸುತ್ತ ಕೊಳೆಯಾಗಿದೆ, ಆದರೆ, ಒಲ್ಲೆ ಎನ್ನಬೇಡ, ಪ್ರಾಯಕ್ಕೆ ಚೆನ್ನಾಗ್ತಾಳೆ, ಹುಡುಗಿ" ಅಂದೆ. ನೋಡಿದಿರಾ, ಹಳ್ಳಿ ಹೈಕಳಾದರೂ, ದೇವರು ಆ ವಯಸ್ಸಿನಲ್ಲೇ ನಮ ಬುದ್ಧೀನ ಚುರುಕ್ ಮಾಡಿರುತ್ತಾನೆ.

ಹೂಂ ಅಂತ ನನ್ನ ತಾಯಿ ಹೋಗಿ ಮಾತು ಪ್ರಾರಂಭಿಸಿದಳು. ಅವಳ ಸಾಕುತಂದೆಗೆ ಅನ್ನಕ್ಕೇನೂ ತಾಪತ್ರಯ ಇರಲಿಲ್ಲ. ನಾಲ್ಕೈದು ಜೊತೆ ಎತ್ತು, ಎಮ್ಮೆ ಹಸು, ಬಂಡಿ, ಕಾಳು ಕಡ್ಡಿ ಇತ್ತು; ಲೇವಾದೇವೀನೂ

ಮಾಡುತ್ತ ಬಡವರ ರಕ್ತ ಕೊಂಚ ಹೀರಿ ಪುಷ್ಟಿಯಾಗಿದ್ದ. ಆದರೂ, ಹೊಟ್ಟೀಲಿ ಹುಟ್ಟಿದ ಮಗಳಲ್ಲವಲ್ಲಾ ಅಂತ, ಬಡ ಗೌಡನಿಗೆ ಕೊಟ್ಟು ಕೈ ತೊಳೆದುಕೊಳ್ಳೋದಕ್ಕೆ ಒಪ್ಪಿದ. ಹಟ ಅಂದರೆ, ನನ್ನ ತಾಯಿಯದು. ಅವಳ ನಾಲಗೇನೂ ಹಾಗೆಯೇ. ಒಲಿದರೆ ಬೆಣ್ಣೆ, ಮುನಿದರೆ ದೊಣ್ಣೆ. ಸರಿ. ಮೆಚ್ಚಿದ ಹುಡುಗಿಗೆ ಬಿಚ್ಚೋಲೆಯೇ ಸಾಕು ಅಂತಾರಲ್ಲಾ, ಹಾಗೆ, ಕಡಿಮೆ ಖರ್ಚಿನಲ್ಲೇ ಲಗ್ನಾನೂ ಪೂರೈಸಿತು.

ಎಲ್ಲ ಅವರದೇ ಸಾಮಾನೂ ಸರಂಜಾಮು—ಕಾಯಿ ಬೆಲ್ಲ ಅಕ್ಕಿ ರಾಗಿ ಸೀರೆ ಕಣ ವೀಳ್ಯೇದೆಲೆ ಅಡಕೆ ಇತ್ಯಾದಿ. ಹೆಣ್ಣನ್ನ ಕರೆದುಕೊಂಡು ಬಂದರು. ಮುತ್ತ್ರಾಯನ ದೇವಸ್ಥಾನ ಅಂತ ಒಂದಿದೆ ನಮ್ಮೂರಲ್ಲಿ ಗುಡಿ. ಒಳ್ಳೇ ಖಡಾಖಂಡಿತ ದೇವರು. ಸುತ್ತ ಹತ್ತು ಹಳ್ಳಿ ಜನ ಆ ದೇವರೆಂದರೆ ನಡುಗಿ ಸಾಯುತ್ತಾರೆ. ವೈಷ್ಣವರೇ ಅರ್ಚಕರು; ಅಂದರೆ, ಆರಕ್ಕೋ ಮೂರಕ್ಕೋ ದೀಪ ಹಚ್ಚುತ್ತಾರೆ, ಅಷ್ಟೆ. ಅಯ್ಯೋ! ಲೋಕಕ್ಕೆಲ್ಲ ಬೆಳಕಾಗಿರುವ ಭೂಪನಿಗೆ ಆವಯ್ಯ ಅವನೇನು ದೀಪ ಹಚ್ಚಿಯಾನು? ಅವನ ಎದೆಯೊಳಗಿನ ಕತ್ತಲೆಗೆ ಅವನು ಹಣತೆ ಹಿಡೀಬೇಕು, ಅಷ್ಟೆ. ಆದರೆ, ನಮ್ಮಂತಹವರಿಗೆಲ್ಲ, ಅವನಿಗೂ ಅಷ್ಟೆ, ಅವನೂ ನಮ್ಮಂತಹವನೇ, ನಮಗೇನು ಹೆದರಿಕೆ ಅಂದರೆ, ದೀಪ ಹಚ್ಚಿದರೆ, ಕತ್ತಲೆ ಮಂಗಮಾಯ ವಾಗುತ್ತದಲ್ಲಾ. ಅನ್ನೋದೆ. ಗೂಬೆಗಳಿಗೆ ಕತ್ತಲೆ ತಾನೆ ಕಣ್ಣಿಗೆ ಹಿತ? ಬೆಳಕಿಗೆ ಹೆದರೋ ಬೇಕೂಫರು ನಾವೆಲ್ಲ. ಇರಲಿ–ನಮ್ಮೂರು ಮುತ್ತ್ರಾಯಪ್ಪನಿಗೆ ಎಣ್ಣೆಗೇನೂ ಬರ ಇಲ್ಲ. ದೇವರ ಹೆಸರಿನಲ್ಲಿ ಹತ್ತು ಹುಣಸೇಮರ ಇದೆ; ನಾಲ್ಕೈದು ಏಕ್ರೆ ಜಮೀನಿದೆ. ಅದರಲ್ಲಿ ಬರುವ ಕಾಳು ಕಡ್ಡಿ ಹಾಕಿ ಜಾತ್ರೆ ದಿನ ಭಾರಿ ಊಟ ಹಾಕ್ತಾರೆ. ಇದಲ್ಲದೆ, ಒಬ್ಬೊಬ್ಬರು ಒಂದೊಂದು ದಿನ ಸೇವೆ ನಡೆಸುತ್ತಾರೆ, ಅವರವರಿಗೆ ಆ ದೇವರು ಬುದ್ಧೀನೂ ಶಕ್ತೀನೂ ಕೊಟ್ಟಹಾಗೆ.

ಆ ದೇವರೆದುರಿಗೆ ನಾನು ನನ್ನ ಹೆಂಡತಿ ಕೈಹಿಡಿದೆ. ಅವಳು ಹೋದ ಮೇಲೆ, ಆಕೆಗೆ ಮಕ್ಕಳು ಮರಿಯಾಗಿ ಅವರು ಉಚ್ಚ್ರಾಯಸ್ಥಿತಿಗೆ ಬಂದಿದ್ದರು. ಅದರ ಮೇಲೆ ಆವರೂನೂ, ಅಧೂರಾಗಿ ನಡಸಿದರು; ನಂಟರಿಷ್ಟರಿಗೇನು

ಕಮ್ಮಿ, ಹೇಳಿ, ಮದುವೆ ಮುಂಜಿಗಳಲ್ಲಿ? ಮಸ್ತಾಗಿ ಸೇರಿದ್ದರು. ಹಾಗಲು ಹಳ್ಳಿಯಿಂದ ಪುರೋಹಿತರೂ ಬ್ರಾಂಬರೂ ಬಂದಿದ್ದರು. ದಾರಿ ಹುಯ್ದಾಗುತ್ತಲೂ ಅವರಿಗೆ ಎಂಟೆಂಟಚ್ಚು ಬೆಲ್ಲ ನಾಲ್ಕು ಸೇರು ಅಕ್ಕಿ ಎಂಟು ಕಾಯಿ ಒಂದು ರೂಪಾಯಿ ದಕ್ಷಿಣೆ ಮರ್ಯಾದೆ ಮಾಡಿದರು. ಹಿಗ್ಗಿಹೋದರು ಅವರು; ಹೀಗೆ ಕೊಡೋ ದಾನಿಗಳನ್ನ ಕಂಡೇ ಇಲ್ಲ ಅಂದರು. ಹಿಟ್ಟು, ಸಾರು, ಪಾಯಸ ಎಲ್ಲರಿಗೂ ಪುಷ್ಕಳವಾಗಿ ಕುತ್ತಿಗೆ ತನಕ ಬಡಿಸಿ ಉಣಿಸಿದಳು, ನನ್ನ ತಾಯಿ. ವಾಲಗದವರಿಗೆ ಕೂಲಿ ಕೊಟ್ಟು ಅತ್ತಲಾಗೆ ರವಾನಿಸಿದ ಮೇಲೆ, ಖರ್ಚೆಲ್ಲ ಲೆಕ್ಕ ಹಾಕಿದಾಗ, ಸಾಲವೇನೂ ಅಪಾರವಾಗಿ ಎತ್ತಬೇಕಾಗಿ ಬರಲಿಲ್ಲ. ಒಂದೇಕ್ರೆ ಹೊಲ ವನ್ನ ೭೫ ರೂಪಾಯಿಗಳಿಗೆ ಮಾರಿ ಅದನ್ನೂ ತೀರಿಸಿಬಿಟ್ಟೆವು ನಾವು, ಜಾಣತನದಲ್ಲಿ.

ಹುಡುಗಿ ಮನೆಗೆ ಬಂದು, ಶೋಭನ ಗೀಭನ ಆಗುತ್ತಲೂ, ನಾನು ಒಂದಷ್ಟು ದಿನ ವೈಮರಿತು ಮೋಜಿನಲ್ಲಿದ್ದುಬಿಟ್ಟೆ. ಬಡವರಿಗಿನ್ನೇನಿದೆ ಖುಷಿ, ಹೇಳಿ, ಸ್ವಾಮಿ? ಇದ್ದದ್ದ ಮೆದ್ದುಬಿಡೋದು, ಇಲ್ಲದ್ದ ಒದ್ದು ಬಿಡೋದು, ಇದುತಾನೆ ಅವರ ಹಣೇಬರಹ? ಹಾವಿನ ಬಾಯ ಕಪ್ಪೆಗಳು ಅವರು; ಅಲ್ಲೇ ಸಿಕ್ಕಿದ ಹುಳ ಹುಪ್ಪಟೇನ ಸರಕ್ಕಂತ ನಾಲಗೆ ತುದಿಯಿಂದ ಹಿಡಿದು ತಿನ್ನುವುದು, ಅದೇ ಸುಖ ಅದಕ್ಕೆ.

ಆರು ತಿಂಗಳಾಯಿತು; ಎಂಟೂನೂ ಆಗಿರಬಹುದು. ಮೊದಮೊದಲು ನನ್ನ ಚಿನ್ನ, ನನ್ನ ಮನೆದೀಪ, ಭಾಗ್ಯದ ಲಕ್ಷ್ಮಿ, ಪುಣ್ಯಾತಿಗಿತ್ತಿ, ಅಂತ ಅವಳನ್ನ ತಲೇ ಮೇಲೆ ಕೂರಿಸಿಕೊಂಡು ತಿರುಗಾಡುತ್ತಿದ್ದ ನನ್ನ ತಾಯಿ, ಸೊಸೇನ ಜಗಳಕ್ಕೆಳೆಯುವುದಕ್ಕೆ ಪ್ರಾರಂಭಿಸಿದಳು. ಗರ್‌ಗುರ್, ನಾಯಿ ಬೆಕ್ಕಿನ ಸಮಾಚಾರ ಷುರು ಆಯಿತು, ಹಟ್ಟಿಯೊಳಗೆ. ಅವಳು ಕುಡಿಯುವ ನೀರು ಕೊಟ್ಟರೂ, ಅದನ್ನ ನನ್ನ ತಾಯಿ ಅಗಿದೇ ನುಂಗುವಳು; ಮೊಸರಲ್ಲಿ

ಕಲ್ಲು, ಮುದ್ದೇಲಿ ಮರಳು, ಸಾರಲ್ಲಿ ನಾರು, ಎಸರಲ್ಲಿ ಕೆಸರು, ನಿಂತರೆ ತಪ್ಪು, ಕೂತರೆ ಬೆಪ್ಪು ; ಲಡಾಯೀನೇ ಮೂರು ಹೊತ್ತೂ.

ಇದೇನು ಹೊಸದಲ್ಲ ಅನ್ನಿ ; ಪ್ರಪಂಚ ಹುಟ್ಟಿದಲಾಗಾಯ್ತು ಪ್ರತಿ ಸಂಸಾರದಲ್ಲೂ ಆಗ್ತಾ ಇರೋದೇನೇ. ಅರಮನೇನ್ನೂ ಬಿಟ್ಟಿಲ್ಲ, ನೆರೆಮನೇನ್ನೂ ಬಿಟ್ಟಿದ್ದಲ್ಲ. ಹಿರೇ ಗಂಡಸೂ ಕಿರೇಗಂಡಸೂ ನಾವು ಹೇಗೋ ಹೊಂದಿಕೊಂಡು ಸರಿದುಕೊಂಡು ನಡಸಿಬಿಡ್ತೇವೆ ಜೀವನವನ್ನ, ಒಂದೇ ಸೂರಿನ ಕೆಳಗೆ. ಆದರೆ, ಹಿರೇದೊಂದು ಹೆಂಗಸು ಕಿರೇದೊಂದು ಹೆಂಗಸು ಒಟ್ಟಿಗೆ ಬಾಳಲಿ ಒಂದೇ ಮನೇಲಿ, ನೋಡುವ! ಮಾವ ಅಳಿಯ ಅನ್ಯೋನ್ಯವಾಗಿರುತ್ತಾರೆ. ಆದರೆ, ಅತ್ತೆ ಸೊಸೆ? ಊಹೂಂ. ಅದರ ಹಣೆಯಲ್ಲೇ ಬರೆದಿಲ್ಲ, ಹೊಂದಾಣಿಕೆ ಅನ್ನೋದು. ಅಲ್ಲಾ, ಹೆಂಡತಿ ಕೂಡ ಸರಸವಾಗಿರೋ ಮಗ, ತನ್ನನ್ನ ಮರೆತುಬಿಡ್ತಾನೆ, ತನಗೆ ಎರಡೆಣಿಸ್ತಾನೆ ಅಂತ ತಾಯಿ ಏಕೆ ಹೆದರಿ ಸಾಯಬೇಕೋ, ನಾ ಕಾಣೆ. ತಾಯಿ ಮಗ ಅಂದರೆ ಪ್ರೀತಿ, ಭಕ್ತಿ, ಗೌರವ, ಕರುಳು, ಕರುಣೆ; ಹೆಂಡತಿ ಗಂಡ ಅಂದರೆ, ಅದರ ಬಗೇನೇ ಬೇರೆ. ಅದಕ್ಕೂ ಇದಕ್ಕೂ ತಾಳೆ ಹಾಕುವುದಕ್ಕಾಗ್ತದೇನು? ತನಗೆ ಜೀವ ಕೊಟ್ಟಿದ್ದು ತಾಯಿ, ತನ್ನ ಮಗನಿಗೆ ಜೀವ ಕೊಡೋದು ಹೆಂಡತಿ. ಅದರ ಮೇಲೆ ಗಂಡಸು ಅವಳಿಗೋಸ್ಕರ ದೇಹ ತೇದು ಅವಳಿಗೋಸ್ಕರ ದುಡಿಯಬೇಕು. ಅದು ನ್ಯಾಯ. ಇವಳಿಗೋಸ್ಕರವೂ ಅವನು ದುಡಿಯಬೇಕು; ಇವಳನ್ನೂ ಅವನು ಜನ್ಮ ಜನ್ಮದಲ್ಲೂ ಪ್ರೀತಿಸಿ ಗೌರವಿಸಬೇಕು. ಅದು ಧರ್ಮ. ಇದನ್ನ ಅರಿತುಕೊಳ್ಳದೆ, ಹೆಂಗಸರು ಸುಂಸುಮ್ಮನೆ ಸಂಸಾರಗಳನ್ನ ಹಾಳುಮಾಡುತ್ತಾರಲ್ಲಾ, ಎಂಬೋದೆ ನನ್ನ ವ್ಯಥೆ.

ಬೆಳಗ್ಗಿಂದ ಬೆಳಗಿನವರೆಗೂ ಕದನ ಕಾದಾಟ ನೋಡಿ ನೋಡಿ, ನನಗೂನೂ ಒಳಗೊಳಗೆ ತುಸಪುಸ ಪ್ರಾರಂಭ ಆಯಿತು. ಥತ್! ಇದೆಂತಹ ಭಂಡ ಬಾಳು, ಇಬ್ಬರೂ ಕುತ್ತಿಗೆಗೆ ಕಲ್ಲು ಕಟ್ಟಿಕೊಂಡು ಹಾಳುಬಾವಿಗೆ

ಬಿದ್ದುಬಿಡೋಣ ಎನ್ನಿಸಿತು. ಅನ್ನ ಸೇರುತ್ತಿರಲಿಲ್ಲ; ನಿದ್ದೆ ಹತ್ತುವುದಿಲ್ಲ; ರಾತ್ರಿ ಎಲ್ಲ ಇವಳ ಕಣ್ಣೊರಸುವುದೇ ನನ್ನ ಕೆಲಸ; ಬೆಳಗ್ಗೆ ಎದ್ದರೆ ಅವ್ವನಿಗೆ ಸಮಾಧಾನ ಹೇಳುವುದು, ಇವರ ಪಂಚಾಯ್ತಿ ತೀರಿಸುವುದು, ಯಾಕಪ್ಪ ಹುಟ್ಟಿದೆ ಮನುಷ್ಯನಾಗಿ ಅಂತ ತಲೆಯ ಮೇಲೆ ಕೈ ಇಟ್ಟುಕೊಂಡು ಜಗಲಿ ಮೇಲೆ ಕೂತು, ಅಕ್ಕಪಕ್ಕದವರನ್ನಟ್ಟಿಸುವುದು.

# ಸಂತೆ ಸ್ನೇಹಿತ

ಆಗ ಒಂದು ದಿನ ನಾನು ಮದ್ದೂರು ಸಂತೆಗೆ ಹೋಗಿದ್ದೆ, ಮನೆಯಲ್ಲಾದ ರೇಷ್ಮೆ ಹುಳದ ಗೂಡು ಮಾರುವುದಕ್ಕೆ. ಅಲ್ಲಿ ನನಗೊಬ್ಬ ದೋಸ್ತಿ ಗಂಟುಬಿದ್ದ. ಅಲ್ಲಾ! ದೇವರು ಯಾವ ಯಾವ ರೀತಿಯಲ್ಲಿ ನಮ್ಮ ಹಿಂದೇನೆ ಕಾಲು ಸಪ್ಪಳ ಕೇಳಿಸದ ಹಾಗೆ ಬಂದು ಕಾಪಾಡುತ್ತಾನೆ ನೋಡಿ. ನಮ್ಮ ಎದೆಯ ಮೇಲೆ ಕಿವಿ ಇರಿಸಿ, ಅದು ಹೊಡೆದುಕೊಳ್ಳುವುದನ್ನೇ ಲಾಲಿಸುತ್ತಿರುತ್ತಾನೆ ನೋಡಿ. ಬೆನ್ನುಹತ್ತಿದ ಭೇತಾಳ ಅಂತಾರೆ ಜನ; ಆದರೆ, ಬೆನ್ನಮೇಲೆ ಕೂತು ನಮ್ಮನ್ನ ಸರಿಯಾದ ದಾರೀಲಿ ನಡಸೋ ದೇವರನ್ನ ಒಬ್ಬರೂ ಕಾಣರಲ್ಲಾ! ಬೆಟ್ಟದಿಂದ ಇಳಿದು ಮೂಡಲಾಗಿನ ಸಮುದ್ರಕ್ಕೆ ಓಡುವ ಕಾವೇರಿಯನ್ನೇ ಅವನು ಬೆಟ್ಟದ ಕಡೆ ತಿರುಗಿಸ್ತಾನೆ, ಪಶ್ಚಿಮ ವಾಹಿನೀಲಿ! ಹಾಗೆಯೇ, ಆ ಪರಮಾತ್ಮ ಬದುಕಿನ ದಾರಿಯನ್ನೇ ಬದಲಾಯಿಸಿಬಿಡ್ತಾನೆ, ನಿಮಿಷದಲ್ಲಿ. ಎಂಥ ಆಶ್ಚರ್ಯ ನೋಡಿ. ಅದಕ್ಕೆ ನೀವು ದೇವರು ಅನ್ನಿ, ವಿಧಿ ಅನ್ನಿ, ಗ್ರಹಚಾರ ಅನ್ನಿ, ಜಾತಕ ಅನ್ನಿ, ಎಲ್ಲ ಒಂದೇ. ಯಾವುದೋ ನಮ್ಮ ಕೈಮೀರಿದ ಶಕ್ತಿ ಅದು. ಅದರೆದುರು ನಾವು ಒಂದು ಹುಲ್ಲು ಕಡ್ಡಿ; ನಾವೇನು? ರಾಜ ಮಹಾರಾಜರುಗಳೇನೇ, ಇಟ್ಲರ್ ಅಂಥವನೇ, ಒಂದು ಗಾಳಿಪಟ; ಅವನು ಸೂತ್ರ ಎಳೆದ ಅಂದ್ರೆ ಆಯಿತು, ನಾವು ಎಷ್ಟರವರು! ಕಿತ್ತ ಅಂದ್ರೆ, ನಾವು ಗಿರಗಿರ ಬೀಳೋದೇ ಭೂಮಿಗೆ.

ಅವತ್ತು ನನಗೆ ಸಿಕ್ಕಿದನಲ್ಲಾ ಸಂತೇಲಿ, ಅವನು ಪೂರ ಘಾಟಿ. ಅವನ ಮಾತು ಅಂದ್ರೆ ಜೇನುತುಪ್ಪ. ಏಳು ಸೀಮೆಯನ್ನೂ ಎಂಟು ದಿಕ್ಕನ್ನೂ ಸುಟ್ಟು ಬೊಟ್ಟೆಟ್ಟುಕೊಂಡವನು ಅವನು. ಅವನು ನನ್ನನ್ನ ಉಡ್ಪಿ ಹೋಟ್ಲೊಳಗೆ ಎಳೆದು ಕೂರಿಸಿ ಎರಡು ಬೆರಣಿ ವಡೆ ತಿನ್ನಿಸಿ ಕಾಫಿ ಕುಡಿಸಿದ. ಬೀಡೀನೂ ಕೊಟ್ಟ. ಆಮೇಲೆ, ಹುಯ್ದು ನೋಡಿ, ಕಿವಿ

ಯೊಳಕ್ಕೆ ಹಾಲು ಸಕ್ಕರೆ. ನಾನೂ ಕಿವಿಯಾಡಿಸ್ತಾ ಕೂತಿದ್ದೆ. ಕೊನೆಗೆ ಅವನಿಗೆ ನನ್ನ ಮನ ನನ್ನ ಮಾನ ಎರಡನ್ನೂ ಮಾರಿದೆ.

ಹಿಂದೆ ನನ್ನ ಹೆಸರು ಕೂಡ ತಿಳಿಯದು ಅವನಿಗೆ. ನಾನು ಹೇಳಿದ ಮೇಲೇನೇ ತಿಳಿದದ್ದು. ಆದರೂ, ಗೊತ್ತಾದ ಮೇಲೆ, ಚೆಲುವಾ ಚೆಲುವಾ ಅಂತ ಅವನು ಅನ್ನೋದೇ ಸಾಕು, ಸೋಲುವುದಕ್ಕೆ. ಅಷ್ಟು ಸೀಯಾಗಿ ಬರುವುದು ಅದು ಅವನ ನಾಲಗೆ ತುದಿಯಿಂದ. ಜನ್ಮ ಜನ್ಮಾಂತರದ ನಂಟ ತನದ ಅಂಟು ಇರೋದು ಅವನ ದನಿಯಲ್ಲಿ. ಹಳ್ಳಿಯಲ್ಲೇ ಹುಟ್ಟಿ ಹಳ್ಳಿಯಲ್ಲೇ ಹೂಳಿಸಿಕೊಳ್ಳಬೇಡ ನಡಿ, ನನ್ನ ಕೂಡ ಬೆಂಗಳೂರಿಗೆ, ಅಂದ ಅವನು. ನನಗೇನು ಬೆಂಗಳೂರು ತೀರ ಹೊಸದಲ್ಲ. ಅಲ್ಲಿಯ ಬಾಳು ಬದುಕು ಕೊಂಚ ನೋಡಿದ್ದೆ; ನನಗೇನೋ ಬೆಂಗಳೂರು ಹಿಡಿಸಿರಲಿಲ್ಲ. ಆದರೂ, ಅವನ ಮಾತು ಬುರುಡೆಯೊಳಗೆ ಭರ್ತಿಯಾಗ್ತಾ ಆಗ್ತಾ, ಬೆಂಗಳೂರಿನಲ್ಲಿದೆ ಅಂತ ನಾನು ತಿಳಿದಿದ್ದ ದೊಂಬಿ ದೊಂಗಲು ಗಲಾಟೆ ಜಗಳ ಮೋಸ ಕುಹಕ ಎಲ್ಲಾನ್ನೂ ಮರೆತೆ ನಾನು. ಇಂದ್ರಲೋಕಕ್ಕೆ ತೀರ ಹತ್ತಿರ ಬೆಂಗಳೂರು ಅಂತ ಅನ್ನಿಸಿಬಿಟ್ಟೆ ಮಾರಾಯ. "ನಳ ಅಂತ ಇರುತ್ತೆ ಕಣೊ ಅಲ್ಲಿ; ಎಡಕ್ಕೆ ತಿರುಗಿಸು ನೀರು! ಬಲಕ್ಕೆ ತಿರುಗಿಸು ಬಂದ್!" "ನೀರಿಗೆ ರುಚಿ ಕಮ್ಮಿ ತೋರಿತು ಅನ್ನು. ಪಕ್ಕದಲ್ಲೇ ಇಂಥ ಹೋಟ್ಲು, ಇದಕ್ಕಿಂತ ಭಾರಿ; ಕಾಫೀನೋ ಟೀನೋ ಇನ್ನೂ ಬೆಂಕಿಯಾದದ್ದೋ ಎಲ್ಲ ಇವೆ ಅಲ್ಲಿ, ಎಡವಿ ಬಿದ್ದ ಕಡೆ." "ಸರ್ಕಾರೀ ಲೈಸೆನ್ಸ್ ಪಡೆದು, ಹುಳಿ, ಗ್ಯಾರಂಟಿ ಹುಳಿ ಇರೋ ಹೆಂಡ ಬೇಕೆ? ತಕೊ, ರಾಜ! ಬಾಟ್ಲಿಗಳಲ್ಲಿರೋ ಶೀಮೇದು ಬೇಕೆ, ಪರಂಗಿಯವರು ಕುಡಿಯೋದು? ತಕೊ, ನನ್ನ ಚಿನ್ನ." "ಬಣ್ಣದ ಬಟ್ಟೆ, ಬತ್ತಾಸು, ಬಿಸ್ಕತ್ತು, ಮಿಠಾಯಿ, ಕುಸ್ತಿ, ಸೂಳೇರು, ಸಂಗೀತ, ಜೂಜು, ಚೆಂಡಾಟ. ಬರೀ ಹುಡುಗಿಯರೇ ಎಕ್ಸಿಬಿಷನ್ ಮಾಡ್ತಾರೆ. ನಾಟಕ ಡ್ಯಾನ್ಸು ಬ್ಯಾಸ್ಕೋಪು." ಒಂದಲ್ಲ, ನೂರರ ಲೆಕ್ಕ ಹಿಡಿದ ಅವನು, ಮೋಹಿನಿ ಹಿಡಿದ ಹಾಗೆ ಹಿಡಿದ ನನ್ನನ್ನ. ಕೈಗೆ ಕೆಸರಾಗದೆ, ಬಾಯಿಗೆ ಮೊಸರು ಬೀಳುತ್ತೆ ಬೆಂಗಳೂರಲ್ಲಿ ಅಂತ ಚಪ್ಪರಿಸಿದ.

ಬಿಡಪ್ಪ! ಊರಿಗೆ ಹೋಗಿ ಯೋಚ್ನೆಮಾಡಿ, ಮುಂದಿನ ಸಂತೆಗೆ ಬರುತ್ತೇನೆ ಅಂತ ಮಾತು ಕೊಟ್ಟು ಕೈಮೇಲೆ ಕೈ ಇಟ್ಟು ಪ್ರಮಾಣ ಮಾಡಿ ಅವನಿಂದ ತಪ್ಪಿಸಿಕೊಂಡೆ. ಗುಂಗುಹು ಹುಳದ ಹಾಗೆ ಅವನ ಪಳಾನು ಬುರುಡೇನ ಕೊರೆಯುತ್ತಾನೇ ಇತ್ತು. ಬೆಂಗಳೂರಲ್ಲಿ ಒಂದು ಕಂಬಳಿ ಮೆಷೀನ್ ಮಡಗಿದಾನೆ, ಅಲ್ಲಿ ಸೇರಿಕೊಂಡರೆ ಕೈತುಂಬ ಸಂಬಳ ಕೊಡ್ತಾನೆ, ವ್ಯೆ ಬಗ್ಗಿಸಬೇಕಾಗಿಲ್ಲ, ತಲೆಯ ಮೇಲೆ ಹೊತ್ತು ತಿರುಗಿದರೆ ಸಾಕು, ಶನಿವಾರ ಸಂಜೆ ಆಯಿತು ಅಂದ್ರೆ ರೊಕ್ಕ ಎಣಿಸಿಬಿಡ್ತಾನೆ. ಭಾನುವಾರ ಪೂರ್ತ ನೀನು ಹೇಗೆ ಬೇಕಾದರೆ ಹಾಗೆ ಮೆರಿ, ಕೇಳೋರೇ ಇಲ್ಲ, ಅಂತ ಅವನು ಹೇಳಿದ್ದ. ಅವನಿದ್ದದ್ದೂ ಅಲ್ಲೇ ಅಂತೆ.

ಅದನ್ನೆಲ್ಲ ನನ್ನ ತಾಯಿ ಎದುರು ಉಪ್ಪು ಖಾರ ಸಕ್ಕರೆ ತುಪ್ಪ ಬೆರೆಸಿ ಹೇಳಿದೆ. ಅವಳಿಗೂ ಬೇಜಾರಾಗಿತ್ತು ನನ್ನ ಹೆಂಡತಿ ಕೂಡ ಏಗಿ ಏಗಿ. ಅವಳನ್ನ ಊರಿಂದ ದೂಡಬಹುದಲ್ಲಾ ಎಂಬ ಆಸೇಲಿ, ನನ್ನನ್ನ ಪಟ್ಟಣ ಸೇರಿಸಬೇಕಲ್ಲಾ ಎನ್ನುವುದು ಅವಳಿಗೆ ತೋರಲಿಲ್ಲ. ಸೊಸೆ ಕಾಟ ತಪ್ಪುತ್ತಲ್ಲಾ, ಎಂಬ ಸಮಾಧಾನ ಅವಳಿಗೆ. ಆದರೂ, ನಟನೆ. ಎರಡು ದಿವಸ ಒದ್ದಾಡಿ, ಕಡೆಗೆ ಅರ್ಧ ದನಿಯಲ್ಲಿ ಹೂಂ ಅಂದಳು. ನನ್ನ ಹಣೇಲಿ ದೇವರು ಏನೇನು ಕೊರೆದಿದಾನೋ ಅದನ್ನೆಲ್ಲ ಅನುಭವಿಸಿ ಬಿಡ್ತೇನೆ, ಒಲ್ಲೆ ಅಂದ್ರೆ ನಡೀತದಾ ಅಂದಳು ಹೊರೆಕ್ಕೆ ಹಣೆ ಚಚ್ಚಿಕೊಂಡಳು. ಒಬ್ಬಂಟಿಗನಾಗಿ ಅಲ್ಲಿ ಇರಬೇಡ. ಬೇಗ ಬಂದು ಇವಳನ್ನೂ ಕರೆದುಕೊಂಡು ಹೋಗು; ಹಿಟ್ಟು ಬೇಯಿಸಿ ಹಾಕಿ ನಿನ್ನ ಶುಶ್ರೂಷೆ ಮಾಡ್ತಾಳೆ, ಅಂದಳು. ಎರಡು ರೂಪಾಯಿ ನನ್ನ ಕೈಲಿಟ್ಟು, "ಕಯ್ಯಿ ಬಾಯಿ ಕಚ್ಚೆ ಜೋಪಾನ" ಅಂದಳು.

ಬೆಂಗಳೂರಿಗೆ ನಾನು ಒಬ್ಬನೇ ಬಂದೆ. ಆತ ಮುಂದಿನ ಸಂತೆ ದಿನ ಸಿಕ್ಕಲೇ ಇಲ್ಲ. ಹೀಗೆ ನನ್ನ ತಾತ, ಅವನ ತಾತ, ಅವನ ಮುತ್ತಾತ, ಓಬೀರಾಯನ ಕಾಲದಿಂದಲೂ ಹಸನಾಗಿಸಿ ಉತ್ತು ಬಿತ್ತಿ ಬೆಳೆ ತೆಗೆದು

ಕಣಜ ತುಂಬಿ ಬಾಳಿದ ಭೂಮಿ ಕಾಣಿ ಹೊಲ ಗದ್ದೆ ಇವನ್ನೆಲ್ಲ ಹಿಂದೆಬಿಟ್ಟು ಬೇರು ಕಿತ್ತೆಸೆದ ಬಳ್ಳಿಯ ಹಾಗೆ, ಬೆಂಗಳೂರು ಸೇರೇಬಿಟ್ಟೆ. ದುಡಿಯೋ ಎತ್ತಿಗೆ ಗಾಡಿಯಾದರೇನು, ಗಾಣವಾದರೇನು, ಕಪಿಲೆಯಾದರೇನು ಕಂತ್ರಿ ರಸ್ತೆಯಾದರೇನು ?

ಅಂಜನ ಹಚ್ಚಿ ಹುಡುಕಿದರೂ ಸಂತೆ ಸ್ನೇಹಿತನ ಮುಖವೇ ಕಾಣೆ. ಕಂಬಳಿ ಮೆಷೀನೇನೋ ಪತ್ತೆ ಆಯಿತು. ಆದರೆ, ಅವನ ಪರಿಚಯ ಒಬ್ಬರೂ ಹೇಳಲೊಲ್ಲರು. ಅವನ ಮನೆ ಇದ್ದ ಗಲ್ಲಿಯ ಹೆಸರು ಹೇಳಿದ್ದ ನನಗೆ. ಆದರೆ ಐನಾತಿ ವಿಷಯವನ್ನೇ ಮರೆತುಬಿಟ್ಟಿದ್ದೆ. ಗಲ್ಲಿ ಅಂಬೋದು ಮಾತ್ರ ನೆನಪಿನಲ್ಲಿ ಉಳಿದುಕೊಂಡಿತು. ಎಷ್ಟು ಗಲ್ಲಿ ಅಂತ ತಿರುಗೋದು ನಾನು, ಹುಚ್ಚು ಹಿಡಿದ ನಾಯಿಯ ಹಾಗೆ! ಅದೂ ಅಲ್ಲದೆ, ನಮ್ಮ ಹಳ್ಳಿಯಲ್ಲಾದರೆ ಮುತ್ತಜ್ಜ ಕಟ್ಟಿದ ಮನೆಯಲ್ಲೇ ಅದು ಮೂತಿ ಮೇಲೆ ಕುಸಿದು ಬೀಳುವ ತನಕ ಜನ ವಾಸವಾಗಿರುತ್ತಾರೆ. ಎಲ್ಲರ ಬದಕೂ ಎಲ್ಲರಿಗೂ ತಿಳಿದಿರುತ್ತದೆ. ಅದು ಬಿಟ್ಟು ಬೇರೆ ಹವ್ಯಾಸವೇ ಇಲ್ಲ, ಮುಂದಿಗೆ. ಇಲ್ಲಿ, ಹಾಗಲ್ಲ. ಹದಿನಾಲ್ಕು ಲೋಕಗಳಲ್ಲಾಗುವ ಸುದ್ದಿಯನ್ನೆಲ್ಲ ತಲೆಗೆ ತುಂಬಿಕೊಂಡು ತಾರಾಡ್ತಾರೆ ಜನ; ನೆರೆ ಮನೆಯವನು ಯಾವನು ಅಂತ ಗೊತ್ತಿರುವುದಿಲ್ಲ. ಆಮೇಲಿನ್ನೊಂದು : ಈವತ್ತು ಈ ಮನೆ ,ನಾಳೆ ಇನ್ನೊಂದು. ಬಾಡಿಗೆ ಬಿಸಾಕಿದ, ಒಳಕ್ಕೆ ನುಗ್ಗಿದ. ತಲೆ ತಾಕಿತು ಅಂದ್ರೆ, ಅವತ್ತೇ ಇನ್ನೊಂದು ಮನೆಗೆ ಹೊರಟ. ಒಂದು ತಾವು ಬೇರೂರಿ ಬೆಳೆಯುವ ಹಾಗೆಯೇ ಇಲ್ಲ. ಹಳ್ಳಿಯಲ್ಲಿ ಮರ ಬೆಳೆದ ಹಾಗೆ ಬೆಳೆಯು ತ್ತವೆ ಮನೆತನಗಳು, ನಾಲ್ಕು ಕಡೆಗೂ ಹಬ್ಬಿ, ನೆರಳು ಕೊಡುತ್ತ. ಇಲ್ಲಿ, ಕಂಬ ನಟ್ಟ ಹಾಗೆ ಅಷ್ಟೆ. ಜೀವ ಇಲ್ಲ, ಸತ್ವ ಇಲ್ಲ, ಹೂವಿಲ್ಲ, ಕಾಯಿಲ್ಲ, ನೆರಳಿಲ್ಲ. ಕಿತ್ತು ಇನ್ನೊಂದು ಗುಳಿಯೊಳಕ್ಕಿರಿಸಿದರೆ, ಅಲ್ಲೂ ಒಣಗಿ ಕೊಂಡು ಭಾರ ಹೊರುವುದೇ ಹಣೇಬರಹ, ಇಲ್ಲಿ.

ಇನ್ನೇನು ಭಗವಂತಾ! ನೀನು ತೋರಿಸಿದ ದಾರಿಯೇ ಗತಿ ಅಂತ, ನಾನೇ ಕೇಳಿದೆ ನಾಲ್ಕಾರು ಜನರನ್ನ. ಕಂಬ್ಳಿ ಮೆಷೀನ್ ಚೌಕದಲ್ಲಿ ನಿಂತು,

ಹೇಗಪ್ಪ ಇದರೊಳಕ್ಕೆ ಸೇರಿಕೊಳ್ಳೋದು, ಕೂಲಿ ಅಂತ ಅನ್ನಿಸಿಕೊಳ್ಳೋದು, ಅವರ ಮರ್ಮ ಏನು, ಅದಕ್ಕೆ ತಂತ್ರ ಯಾವುದು, ಅಂತ.

ಕಲಾಸಿಪಾಳ್ಯದಲ್ಲಿ ಕೆಂಗಯ್ಯ ಶೆಟ್ರು ಅಂತ ಒಬ್ಬರಿದ್ದಾರೆ, ಶ್ರೀಮಂತರು. ಹೋಗಿ ಅವರ ಕಾಲು ಹಿಡಿ, ನಿನ್ನ ಹೆಸರೂನೂ ನಮ್ಮದರ ಹಾಗೇನೇ ದಾಖಲಾಗುತ್ತೆ ಕಂಬ್ಳಿ ಮೆಷೀನಿಗೆ, ಅಂದ್ರು. ಅದ್ಯಾರಪ್ಪ? ಅಂಥ ದಯಾಸಾಗರ! ಕೂಲಿಕಾಲದಲ್ಲಿ ಹೊಟ್ಟೆಗಿಲ್ಲದೆ ನರಳುವವರ [illegible]ಳಿಸುವ ಕಿವಿಗಳೂ ಉಂಟೆ? ಭೋಜರಾಜ ಇನ್ನೂ ಇದಾನೆಯೇ ಭೂಲೋಕದಲ್ಲಿ? ಅಂತ, ಅವರ ಕಡೆ ಧಾವಿಸಿದೆ. ಅಂದ್ರೆ, ಅವರ ಮನೆ ವಿಚಾರಿಸಿದೆ.

ಷಹರಿನಲ್ಲಿ ನನ್ನಂಥವರ ಪಾಡು ನಾಯಿಗಿಂತ ಕಡೆ. ನಾಲಗೆ ಮೇಲಿದೆ ದಾರಿ, ಮಾತು ಬಲ್ಲವನಿಗೆ ಭಯ ಏನು, ಅಂತಾರೆ ಜನ. ಯಾರನ್ನಾದರೂ ಕೇಳಿದರೆ, ಸಲೀಸಾಗಿ ತೋರಿಸಿಕೊಡುತ್ತಾರಲ್ಲಾ, ಅಂತಾರೆ. ನಾನೂನೂ ಅದೂ ಸರಿ ಅಂತ ಇದ್ದೆ, ಈ ಬೆಂಗಳೂರಿಗೆ ಬರುವ ತನಕ.

ನಾಲ್ಕು ದಿನ ಪರದಾಡಿದೆ ನಾನು. ಈ ಊರಲ್ಲಿ ಕಲಾಸಿಪಾಳ್ಯ ಎಲ್ಲಿದೆ, ಅಲ್ಲಿ ಕೆಂಗಯ್ಯ ಶೆಟ್ರ ಮನೆ ಯಾವುದು, ಅಂತ ಪತ್ತೆ ಹಚ್ಚುವುದಕ್ಕೆ ರಸ್ತೆ ಮೇಲೆ ನಸುಕಿನಿಂದ ಸಂಜೆವರೆಗೂ ನೂರಾರು ಜನ ನೂಕು ನೂಕುತ್ತ ಹೋಗ್ತಿರುತ್ತಾರೆ, ನಿಜ. ಅವರನ್ನ "ಸ್ವಾಮಿ" ಅಂತ ಕೂಗಿ ನಿಲ್ಲಿಸೋದು ಹೇಗೆ? ಅವರಲ್ಲಿ ನಿಲ್ಲೋರು ಎಷ್ಟು ಮಂದಿ? ನಿಂತರೂ ನಮ್ಮ ಗೋಳು ಕೇಳೋರು ಎಷ್ಟು? ಕೇಳಿದರೂ, ತಿಳಿದುಕೊಳ್ಳೋರು ಎಷ್ಟು? ತಿಳಿದು ಕೊಂಡರೂ ನಮ್ಮ ಮೇಲೆ ದಯೆ ಇರುವವರು ಎಷ್ಟು? ದಯೆ ಇದ್ದರೂ, ನಮಗೆ ಬೇಕಾದ್ದನ್ನ ತಿಳಿದುಕೊಂಡಿರುವರು ಅಪರೂಪ. ಹೀಗಾಗಿ, ಬಲು ತ್ರಾಸಕ್ಕೆ ಬಿದ್ದೆ.

ಅಲ್ಲದೆ ಇನ್ನೊಂದು ತಾಪತ್ರಯ. ಅರ್ಧ ಮುಕ್ಕಾಲು ಜನಕ್ಕೆ ಬೆಂಗಳೂರಲ್ಲಿ ನಡೆಯುವುದಕ್ಕೇ ಬರದು. ಸದಾ ಸೈಕಲ್ಲಿನ ಮೇಲೆ ತಿರುಗು ತ್ತಿರುತ್ತಾರೆ. ಬೆನ್ನು ಬಗ್ಗಿಸಿ ಕೂತು ತಮ್ಮನ್ನು ತಾವೇ ತುಳಿದು ತುಳಿದು

ಮುಂದಕ್ಕೆ ದೂಡುತ್ತಿರುತ್ತಾರೆ. ಅರ್ಧ ಮುಕ್ಕಾಲು ಜನಕ್ಕೆ ಕನ್ನಡವೇ ಬರದು. ಮಹಾರಾಜರಾಡುವ ಮಾತು ಬರದ ಈ ಜನ ಅದೆಂಥ ಪ್ರಜೆಗಳು ಅಂತ ಅನ್ನಿಸಿತು ನನಗೆ. ನಾನು ಅವರನ್ನ ಕೆಂಗಯ್ಯಶೆಟ್ರ ಮನೆ ಎಲ್ಲಿ ಅಂತ ವಿಚಾರಿಸಿದರೆ, ಅವರು ಏನಯ್ಯ ಅಂತಾರೆ; ಎಂತಾಡೋ ಅಂತಾರೆ; ಎನ್ನಡಾ ಅಂತಾರೆ; ಕ್ಯಾ ಭಾಯಿ ಅಂತಾರೆ. ಹಾಗಂದ ಮೇಲೆ ಅವರೊಂದಿಗೆ ಮುಂದಿನ ಮಾತು ಸೊನ್ನೇನೆ.

ಕನ್ನಡ ಆಡುವವರೂ ಕೂಡ, ಇಂಗ್ಲೀಷಿನಲ್ಲಿ ಮಾತಾಡಿಸಿದರೇನೇ ಜವಾಬು ಕೊಡೋದು, ಇಂಗ್ಲೀಷಿನಲ್ಲಿ ಕಾಸ್‌ಪೀಸ್ ಅಂತ. ಅಪ್ಪಿತಪ್ಪಿ ಕನ್ನಡಾನೂ ಬಂದು ಆಡುವ ದೊಡ್ಡ ಮನಸ್ಸೂ ಇರುವವರು ಸಿಕ್ಕರೆ, ತೀರ ಎಳೆಯ ಹುಡುಗರನ್ನ ಮಾತಾಡಿಸುವುದಕ್ಕೆ ಭಯ. ಅವಕ್ಕೆ ಪೇಪ್ಪರ್ಮೆಂಟ್ ತಿನ್ನಿಸಿ ಮೈಮೇಲಿನ ಒಡವೆ ಕದ್ದು ಕತ್ತುಹಿಸುಕುವ ಗುಂಪು ಬಂದಿವೆ, ಯಾವನಾದರೂ ಅಂಥವ ಸಿಕ್ಕರೆ ಸದೆಬಡಿಯಿರೋ, ಅಂತ ಊರಲ್ಲೆಲ್ಲ ಬೊಬ್ಬೆ. ತೀರ ಹುಡುಗರಿಗೆ ಕೆಂಗಯ್ಯಶೆಟ್ರು, ಕಲಾಸಿಪಾಳ್ಯ ಗೊತ್ತಿಲ್ಲ; ತೀರ ಮುದುಕರಾದರೆ, ಮರೆತುಹೋಯ್ತು. ತೀರ ಹರೆಯದವರಾದರೆ, ನನ್ನ ಹತ್ತಿರ ನಿಂತುಕೊಳ್ಳುವುದು ಅಪಮಾನ; ತೀರ ಹಳ್ಳಿಯವನಾದರೆ ಅವನೂ ನನ್ನಂಥ ಕಮಂಗಿ, ಪರದೇಶಿ. ಹೋಗೋ ಲೋ ಅಂತ ಹೊಡೆಯುವುದಕ್ಕೇ ಬರ್‍ತಾರೆ ಕೆಲವರು, ನಿನ್ನ ಗೋಳು ನನಗೆ ಯಾಕೆ, ನನ್ನದೇ ಇದೆ ಬೆಟ್ಟದಷ್ಟು ಅಂತ ಅತ್ತೇ ಬಿಡ್ತಾರೆ ಇನ್ನು ಕೆಲವರು. ಪೋಲೀಸಿನವರನ್ನ ಕೇಳಬಹುದೋ ಏನೊ? ಹೆಂಗಸರನ್ನ ಮಾತನಾಡಿಸಿದರೆ ಎಂತೊ? ಅಂಗಡಿಯವರನ್ನ ಕೇಳೋಣ ಎಂದರೆ, ಈ ಗಮಾರನಿಗೆ ದಾರಿ ತೋರಿಸಿದರೆ ನಮಗೆ ಬರುವ ಲಾಭ ಎಷ್ಟು ಅಂತಾರೆ ಅವರು. ನೋಡಿದಿರಾ! ನೀವೇನೋ ಕೂತು ಹೇಳಿಬಿಡ್ತೀರಾ, ಯಾರನ್ನಾದರೂ ಕೇಳಿ ತಿಳಿದುಕೊ ಅಂತ. ಯಾರನ್ನ ಕೇಳುವುದು, ಹೇಗೆ ಕೇಳುವುದು, ಏನು ತಿಳಿದುಕೊಳ್ಳೋದು? ನಿಮಗೇನು? ನೀವು ಓದುಬರಹ ಕಲಿತಿರುವವರು. ಕನ್ನಡಕ ತಗಲಿಸಿಕೊಂಡಿರುವವರು; ಬಿಳಿ ಬಟ್ಟೆಯವರು; ಸ್ವಚ್ಛ ನಾಲಗೆಯವರು. ಮುನಿಸಿ

ಪಾಲಿಟಿಯವರು ಬರೆದಿರುವುದನ್ನೇ ನೋಡಿಕೊಂಡು ನೆಟ್ಟಗೆ ನಡೆದು ಗಬಕ್‌ನೆ ಹಿಡಿದುಬಿಡ್ತೀರಾ, ಬೇಕಾದ ಜಾಗಾನ. ಇಲ್ಲ, ಧೈರ್ಯವಾಗಿ ಪೋಲೀಸಪ್ಪನನ್ನೇ ಕೇಳಬಿಡ್ತೀರಿ. ಇಲ್ಲ, ಕಾಸು ಬಿಸಾಕಿ ಗಾಡಿ ಗೊತ್ತು ಹಚ್ಚಿ, ಕುದುರೆ ಕೈಲಿ ಎಳೆಸಿಕೊಂಡು ಜಟಕಾದವನ ಬಾಯಿಂದಲೇ ಬೀದಿ ಯಾವುದು ಮನೆ ಎಲ್ಲಿದೆ ಅಂತ ವಿಚಾರಿಸುತ್ತೀರಿ. ನಾವು ಹಳ್ಳಿ ಜನ ; ಹಾಗೆಲ್ಲ ಮಾಡುವುದಕ್ಕಾಗುತ್ತದೆಯೆ ?

# ಕಂಬ್ಳಿ ಸೇವೆ

ಕೊನೆಗೂ ಬಿಟ್ಟೆನೆ ? ಸಿಕ್ಕಿದರು ಕೆಂಗಯ್ಯ ಶೆಟ್ರು. ಸಣ್ಣ ಕೂಸೊಂದು ಬಾಗಿಲು ತೆರೆದು, ಮುಂದಕ್ಕೆ ಹೋಗಪ್ಪ ಅಂತ ಹೇಳಿತು, ನನ್ನನ್ನ ತಿರುಕ ಅಂತ ತಿಳಿದುಕೊಂಡು. ಆ ವಯಸ್ಸಿನಲ್ಲೇ ಅದಕ್ಕೆ ಹಾಗೆ ರೂಢಿ ಮಾಡಿಸಿ ಬಿಟ್ಟಿದಾರೆ, ದೊಡ್ಡೋರು. ಒಳಗೆ ಶೆಟ್ರು ದೇವರ ಪೂಜೆ ಮಾಡುತ್ತಿದ್ದರು. ಕುದುರೆಗಿಂತ ಅದೆಂಥದ್ದೋ ಬಿರುಸು ಅಂತಾರಲ್ಲಾ ಹಾಗೇನೇ ಗಂಟೆ ಶಬ್ದ ಮಂತ್ರದ ಶಬ್ದಕ್ಕಿಂತ ಬಿರುಸಾಗಿತ್ತು. ದೇವರಿಗೆ ಕೇಳಿಸಿತೋ ಇಲ್ಲವೋ ನಾ ಕಾಣೆ, ನನ್ನ ಕಿವಿ ತೂತು ಬಿತ್ತು. ಹೊರಗೆ ಬರುತ್ತಲೂ ಅಡ್ಡಬಿದ್ದೆ. ಹೊಟ್ಟೆಯ ಮೇಲೆ ಹೊಡೆಯಬಾರದು, ದೇವರೂ, ಅಂದೆ. ಬಡವ ನಿರ್ಗತಿಕ ಬರಬಾರದ ಜಾಗಕ್ಕೆ ಬಂದುಬಿಟ್ಟೆ ತಿಳಿಯದೆ, ಪುಟ್‌ಪಾತ್‌ನ ಮೇಲೆ ಮಲಗುತ್ತಾ ಇದೇನೆ, ಅಂತ ರಾಗ ಎಳೆದೆ. ಮೂತೀನ ಉದ್ದ ಮಾಡಿದೆ. ಆಗಲಿ, ಹೋಗು, ನಾಳೆ ಇದೇ ಟೈಮಿಗೆ ಬಾ, ಹತ್ತು ರೂಪಾಯಿ ಕೊಡು, ಮಾಡಿಸಿಕೊಡುತ್ತೇನೆ ಅಂದರು. ಅವರ ಶಿಪಾರ್ಸು ನಡೀತದೆ ಅಂದಮೇಲೆ ಹತ್ತು ರೂಪಾಯಿ ಮುಖ ನೋಡಬಾರದು. ಅವರ ಉಪಕಾರದ ಋಣ ನನ್ನ ಮೇಲೆ ಯಾಕೆ ಅಂತ ಕಿವಿಯಾಗಿನ ಹತ್ತ್ರಕಡುಕು ಮಾರಿ, ಅದನ್ನೂ ತೆತ್ತೆ.

ಅದರಾಚೆ ದಿನ ಮೆಷಿನ್ ಆಫೀಸ್ ಗೋಡೆ ಮೇಲೆ ನನ್ನ ಹೆಸರು ಅಂಟಿಸಿದರು, ತಿರುಮಲಾಪುರದ ಚೆಲುವ ಬಾ ಅಂತ. ಮಾರನೆಯ ದಿನ ದಿಂದ, ನೋಡಿ, ನಾನೂ ಒಬ್ಬ ಕೂಲಿ ಅನ್ನಿಸಿಕೊಂಡೆ. ಕೂಳೊದಗಿಸೋ ರೈತ ಅನ್ನೋದು ಹೋಯಿತು; ಕೂಳಿಗಾಗಿ ಕಂಡವರ ಸೇವೆ ಮಾಡೋ ಕೂಲಿಯಾದೆ. ಸಾವಿರದಲ್ಲೊಬ್ಬನಾದೆ. ಮೆಷೀನು ಎಂಬ ಆ ಭೂತದ ಜೀತದ ಆಳಾದೆ "ಬನ್ನಿರೋ....ೀ....ೀ....ೀ" ಅಂತ ಅದು ಅರಚಿ

ಕೊಳ್ಳೋದು, ಬಾಗಿಲು ತೆರೆದುಕೊಂಡು ಬೆಳ್ಳಂಬೆಳಗಾಗುತ್ತಲೂ "ಬಂದೆ" ಅಂತ, ಓಡುವೆ ಅದರ ಹತ್ತಿರಕ್ಕೆ. "ಹೋಗ್ರೋ....೦....೦....೦" ಅಂತ ಅಟ್ಟುವುದು ಅದು ಕಳ್ಳಂಕತ್ತಲಾಗುತ್ತಲೂ........ಹೊರಟೆ ಅಂತ ಓಡುವೆ ಅದರ ಹತ್ತಿರದಿಂದ..........ನಾನೊಬ್ಬನೇ ಅಲ್ಲ. ನನ್ನಂಥ ಜೀತದಾಳು ಸಾವಿರಾರು ಅದಕ್ಕೆ; ಆಹಾರ ಕೊಡುವುದಕ್ಕೆ, ಎಣ್ಣೆ ಹಚ್ಚೋದಕ್ಕೆ, ಮೈಉಜ್ಜುವುದಕ್ಕೆ, ಕೈ ಕಾಲು ತಿಕ್ಕುವುದಕ್ಕೆ, ನೆಟ್ಟಗೆ ತೆಗೆಯುವುದಕ್ಕೆ.....

ಹದಿನಾಲ್ಕು ರೂಪಾಯಿ ಸಂಬಳ ಮಾಡಿಸಿಕೊಟ್ರು, ಕೆಂಗಯ್ಯ ಶೆಟ್ರು, ವಾರ ಒಂದಕ್ಕೆ ಮೂರೂವರೆ ರೂಪಾಯಿ. ಸೇರಿದ ಎರಡು ಮೂರು ತಿಂಗಳು, ಹೊಸದರಲ್ಲಿ ಅಗಸ ಗೋಣೀನ ಎತ್ತಿ ಎತ್ತಿ ಒಗೆದ ಹಾಗೆ, ಸಂಜೀವಿನಿ ತಾ ಅಂದರೆ ಹನುಮಂತ ಸಂಜೀವಿನಿ ಬೆಟ್ಟಾನ್ನೆ ಹೊತ್ತು ತಂದ ಹಾಗೆ, ನಾನು ಮೈಮೇಲೆ ಜ್ಞಾನ ಇಲ್ಲದೆ ದುಡಿದುಬಿಟ್ಟೆ. ಎಲ್ಲರೂ ಬೈಯುವರು, ಇದೇನಿದು ನಿನ್ನ ಅಪ್ಪನ ಮನೇನೆ? ಯಾಕೆ ಹೀಗೆ ಸಾಯುತ್ತೀಯೆ ಅಂತ.

ಒಂದಷ್ಟು ದಿನ ಮೂಟೆ ಉರುಳಿಸಿದೆ, ಆಮೇಲೆ ಕೂದಲು ತೂಕ ಮಾಡುವ ತ್ರಾಸಿಗೆ ಹೋದೆ. ಅಲ್ಲಿಂದ ಅದನ್ನ ಬಿಸಿನೀರಿಗೆ ಹಾಕುವ ತಾವು ಕೆಲಸ ಮಾಡಿದೆ. ಅಲ್ಲಿ ನಾತ ಜಾಸ್ತಿ. ಹೀಗೆ ನಾಲ್ಕೈದು ಜಾಗ ಸುತ್ತಿದೆ. ಬೆಪ್ಪ! ಒಂದೇ ಕಡೆ ಕಚ್ಚಿಕೊಂಡಿದ್ದರೆ, ಅಲ್ಲೇ ಮೊಳೆ ಹೊಡೆಸಿಕೊಂಡು ಕೂತಿದ್ದರೆ, ವರ್ಷಕ್ಕೆ ಐವತ್ತೋ ಅರವತ್ತೋ ಫಂಡ್ ಬರುತ್ತಿತ್ತಂತೆ, ಯಾರೋ ಹೇಳಿದರು, ಆಮೇಲೆ. ಆಗ, ಮೂಗಿನ ಮೇಲೆ ಬೆರಳಿಟ್ಟೇನು ಪ್ರಯೋಜನ? ಆತುರಗಾರನಿಗೆ ಬುದ್ಧಿ ಮಟ್ಟ ತಾನೆ? ಜೀತದ ಭರಾಟೇಲಿ ಅಮಲು ಹತ್ತಿಬಿಟ್ಟಿತ್ತು ನನಗೆ. ಆ ಮೆಷಿನ್ನಿನ ಆಡಾಉಡಿ, ಅದರ ಭರಾಟೆ, ಆ ಚಕ್ರದ ಸಾಲು ಸುತ್ತೋ ಸದ್ದು, ಆ ಧೂಳು ಧಾವಂತ, ಎಲ್ಲಾನ್ನೂ ನೋಡಿ, ಎಳೇ ಮಕ್ಕಳ ಹಾಗೆ ಕೈ ಚಪ್ಪಾಳೆ ಹೊಡೆದು ಕುಣಿದುಬಿಟ್ಟೆ. ಎಲಾ ಇವನೆ! ಪರಂಗಿಯವನು ಅಂದ್ರೆ ಮಾಯಾಸುರನ ತಾತ ಇರಬೇಕು. ಎಂಥೆಂಥ ಎಂಜಿನ್ ಮಾಡಿ ಇರಿಸಿ ದಾನೆ! ಅವನು ಹಾಕಿದ ತಾಳಕ್ಕೆ ಕುಣೀತವೆ ಅವು; ಹೇಳಿದ ಚಾಕರಿ

ಮಾಡಿ ಪೂರೈಸುತ್ತವೆ, ಅವು. ಬೇಲು ಬಿಚ್ಚುವುದಕ್ಕೊಂದು, ಉಣ್ಣೆ ಎಕ್ಕುವುದಕ್ಕೊಂದು, ನೀರು ಕಾಯಿಸುವುದಕ್ಕೊಂದು, ಹಬೇನ ಹತೋಟಿ ಯಲ್ಲಿಡುವುದಕ್ಕೊಂದು, ಲಾಡಿ ತಯಾರಿಸುವುದಕ್ಕೊಂದು, ನೂಲುವುದಕ್ಕೆ ನಲವತ್ತೆಂಟು, ನೇಯುವುದಕ್ಕೆ ನೂರಾರು, ನೇದದ್ದನ್ನ ಹದಮಾಡುವುದ ಕ್ಕೊಂದು, ಮಡಿ ಮಾಡುವುದಕ್ಕೊಂದು, ಕತ್ತರಿಸುವುದಕ್ಕೊಂದು, ಪ್ಯಾಕ್ ಮಾಡುವುದಕ್ಕೊಂದು, ಎಲ್ಲ ಆ ಬಿಳೀ ಚರ್ಮದ ಮಹಿಮೆ ; ಅವನ ತಲೆ ಯೊಳಗಿನ ಮೆದುಳು ಥೇಟ್ ಅಪರಂಜೀನೇ ಅಂತ ಬಿಟ್ಟ ಕಣ್ ಬಿಟ್ಟ ಹಾಗೆ ಕೂತಿರುವೆ, ನಾನು, ನೋಡುತ್ತ.

# ಶರಭಣ್ಣನ ಮನೆ

ಹೀಗೆ ಬಾಯಿ ಬಿಡುತ್ತ, ಆರು ತಿಂಗಳು ಕಳೆದೆ. ಆಮೇಲೆ ಕೇಳಿ, ಆಮೇಲೇನೇ ನನಗೆ ನನ್ನ ತಾಯಿಯ ಜ್ಞಾಪಕ, ಅವಳ ಸೊಸೆ ಮೇಲೆ ನಿಗ ಬಂದದ್ದು.

ಷಹರು ಅಂದ್ರೆ, ಅದೊಂದು ಭಾರಿ ಮಾರಿ, ಮಾಯಾವಿ. ನಾವೆಲ್ಲ ಅವಳ ಗುಡೀಲಿ ಕಡಿಯೋದಕ್ಕೆ ತಂದ ಕೋಣಗಳು.

ನನ್ನನ್ನೇ ನೆನೆದು ಕೂತಿರುವ, ನಾನು ಯಾವಾಗ ಬಂದು ಕರೆದು ಕೊಂಡು ಹೋಗುತ್ತೇನೆ ಅಂತ ಕಾಯುತ್ತಿರುವ ಚಾತಕಪಕ್ಷಿ, ಆ ನನ್ನ ಹೆಂಡತಿ, ಆ ಹೆಣ್ಣುಜೀವದ ನೆನಪು ಯಾವಾಗ ಬಂತು ನನಗೆ? ಆರು ತಿಂಗಳ ಕನಸು, ಒಡೆದು, ನಾನೆದ್ದಾಗ! ಮೊದಲೇ ಚೆಲುವೆ, ಇನ್ನು ಮುನಿದರೆ ಹೇಗೋ, ಅಂತ ಅವಳನ್ನ ಕಂಡು ಮಾತನಾಡಿಸುವುದಕ್ಕೂ ನನಗೆ ದಿಗಿಲು

ತಕ್ಷಣವೇ, ಬಾಡಿಗೆ ಮನೆ ಹುಡುಕುವುದಕ್ಕೆ ಪ್ರಾರಂಭ ಮಾಡಿದೆ. ಅವುಳಿ ಶರಭಣ್ಣ ಅಂತ ಒಬ್ಬರಿದ್ದರು, ಚಿಲ್ರೆ ಅಂಗಡಿಯವರು, ಅರಳೆ ಪೇಟೇಲಿ. ಅವರನ್ನ ಯಾರೋ ನಿಮ್ಮಂಥ ಪುಣ್ಯಾತ್ಮರು ತೋರಿಸಿಕೊಟ್ಟರು. ನಿಮ್ಮ ಮನೆ ಹಿಂಭಾಗದ ಜೋಪಡೀನ ಕೊಡಿ, ದೇವರು, ನನ್ನ ಸಂಸಾರ ಕುದುರಿಸಿಕೊಳ್ಳುತ್ತೇನೆ, ಅಂದೆ. ಕೊಟ್ಟರು, ದನದ ಕೊಟ್ಟಿಗೆ ಪಕ್ಕದ ರೂಮೊಂದನ್ನು ಖಾಲಿ ಮಾಡಿಸಿದರು. ಒಂದೂಕಾಲು ರೂಪಾಯಿ ಗೊತ್ತುಮಾಡಿದರು, ತಿಂಗಳಿಗೆ.

ಆವಾಗೇನು ? ನೀವು ನಂಬುತ್ತೀರೋ ಇಲ್ಲವೊ ? ರೂಪಾಯಿಗೆ ಹದಿನಾರು ಸೇರು ರಾಗಿ ! ಎಂಟು ಸೇರು ಅಕ್ಕಿ, ಎಲ್ಲೆಂದರಲ್ಲಿ, ಪೋಲೀಸಪ್ಪ ನೆದುರಿಗೇನೇ, ಯಾರೆಂದರವರಿಗೆ ಬೆಳ್ಳಂಬೆಳಕಿನಲ್ಲೇ ಉರಿಯೋ ಬಿಸಿಲಿನಲ್ಲೇ ಅಳೆಯುವರು. ಒಳ್ಳೇ ಸವೀಕದ ಕಾಲ, ಅದು. ಹೆಂಡತೀನೂ ನಾನೂ ಸುಖವಾಗಿ ಜೀವನ ನಡೆಸಿ,........ಊಹೂಂ! ಅವಳನ್ನ ಮೇಷೀನಿಗೆ ಸೇರಿಸಲಿಲ್ಲ ನಾನು, ಗುಣವಂತೆ ಹೆಣ್ಣು ಗುಂಪಿನಲ್ಲಿ ಏಕೆ ನುಗ್ಗಬೇಕು, ಅಂತ. ಆದರೂ, ಶರಭಣ್ಣನವರ ಮನೇಲಿ ಆ ಹೆಂಗಸರಿಗೆ ಕೊಂಚ ಸಹಾಯ ಮಾಡುವಳು. ಕುಟ್ಟುವುದು ಕೇರು ವುದು ತೊಳೆಯುವುದು ಬಳಿಯುವುದು ಸಾರಿಸುವುದು ಗುಡಿಸುವುದು, ಒಸಿಶಾಸ್ತ್ರ ಮಾಡೋದು ಮನೆ ಒಳಗೆ, ಹೊರಗಲ್ಲ, ಹೀಗೆ ಮಾಡಿ ಬಾಡಿಗೆ ಹಣದಷ್ಟು ಅವಳೂ ದುಡಿಯುವಳು.

ತಾಯಿಗೂ ನಾನು ನಾಲ್ಕೋ ಐದೋ ಕಳುಹಿಸುವೆ, ಅವ ರಿವರ ಹತ್ರ. ಆರು ತಿಂಗಳಿಗೊಂದು ಸಲ ಒಂದು ಬಣ್ಣಾನೂ ತೆಗೆದು ರವಾನಿಸುವೆ.

ಹುಟ್ಟಿದಾಗಿನಿಂದ ಕಾಣದೆ ಇದ್ದರೂ, ಮೆಷೀನ್ ಕೆಲಸ ನನಗೆ ಚೆನ್ನಾಗಿ ಅಂಟಿಕೊಂಡಿತು ; ಒಗ್ಗಿಹೋಯ್ತು. ತ್ರಾಸಿಂದ ಕೀ ಜಾರಿಗೆ ಕೀ ಜಾರಿಂದ ಕಾರ್ಡಿಗೆ ಕಾರ್ಡಿಂದ ಲೋಲಿಂಗಿಗೆ, ಹೀಗೆ ಸರಸರಾ ಅಂತ ದೊಂಬರು ಕಂಬ ಹತ್ತುವಹಾಗೆ ಹದಿನಾಲ್ಕು ರೂಪಾಯಿಂದ ಮೂವತ್ತರ ವರೆಗೂ ಏರಿದೆ. ಸಲಸಲಕ್ಕೂ ಆಯಾ ಗುಡಿ ಪೂಜಾರಿಗಳಿಗೆ ದಕ್ಷಿಣೆ ತೆತ್ತೆ, ಅನ್ನಿ. ಅವೆಲ್ಲ ಮಾಮೂಲು ; ಕೈವೊಟಕು ಮಾಡಿದರೆ ನಮಗೇ ಸೊನ್ನೆ ; ದೇವರುಗಳೂ ಕೂಡ ಏನಾದರೂ ತಾ, ಏನು ತಂದಿದೀಯಾ, ಅಂತಲೇ ಕೇಳುತ್ತಾರೆ. ಅದೂ ಅಲ್ಲದೆ, ಅವರುಗಳ ಮನೆ ಯೋಗ ಕ್ಷೇಮವನ್ನು ಟೈಂ ಸಿಕ್ಕಿದಾಗ ಹೋಗಿ ವಿಚಾರಿಸುವೆ. ಹೆಂಚು ಕೈಯಾಡಿ ಸುವುದಕ್ಕೆ ಜನ ಸೇರಿದಾಗ ನಾನು ಕೊಂಚ ಕೈ ಆಡಿಸುವೆ. ಸೌದೆ ಒಡೆಯೋ ಅಂದರೆ ಸೊಂಟ ನೋವು ಅಂತ ಸಬೂಬು ಹೇಳದೆ,

ಕೊಡಲಿ ಕೊಡಿ, ಎನ್ನುವೆ. ನನಗಾಗೀನೇ ಖುಷಿ ಹತ್ತಿದ ಹಾಗೆ ನಟಿಸಿ, ಅವರ ಮನೆ ಎಮ್ಮೇನ ಕೀಲೀನಾಗಿ ತೊಳೆದು ತಂದು ಅಂಗಳದಲ್ಲಿ ನಿಲ್ಲಿಸುವೆ. ಊರಿಂದ ಹುಣಿಸೆ ಹಣ್ಣು ತರಿಸಿ, ಬೀಜ ಎಲ್ಲಾ ಚೆನ್ನಾಗಿ ಬಿಡಿಸಿ, ಉಂಡೆ ಮಾಡಿ, ಮುಟ್ಟಿಸುವೆ. ಹೀಗೆ, ಸವರುತ್ತಾ ಸವರುತ್ತಾ, ಸಮಯ ಕಾದು, ಬತ್ತಿ ಮಾತೆತ್ತುವೆ. ಸಲೀಸಾಗಿ ಬೀಳುವರು ಅವರು ಹಳ್ಳಕ್ಕೆ; ಹಳ್ಳದಿಂದ ನನ್ನನ್ನ ಎತ್ತುವರು. ನಮ್ಮ ಹಳ್ಳಿಯಲ್ಲಿ, ನಮ್ಮ ಹಿತ್ತಿಲ ಗಿಡದಲ್ಲಿ ಬೆಳದದ್ದು, ದೇವರು, ಇಸ್ಕೊಂಡು ಉಪ್ಪಿನಕಾಯಿ ಹಾಕಿ ಊಟ ಮಾಡಿ, ಮೊಸರನ್ನಕ್ಕೆ ಚೆನ್ನಾಗಿರುತ್ತೆ ಅಂತ, ಬೆಂಗಳೂರು ಪೇಟೆಯಿಂದಲೇ ನಿಂಬೇಹಣ್ಣು ಕೊಂಡು, ಮೂವತ್ತೋ ನಲವತ್ತೋ ಕಾಣಿಕೆ ಒಪ್ಪಿಸುವೆ. ಬಟ್ಟೆ ಗಿಟ್ಟೆ ಪುಷ್ಕಳವಾಗಿ ಒಗೆದುಟ್ಟು, ಅವರ ಮನೆ ಕೂಸುಗಳನ್ನು ಕುತ್ತಿಗೆ ಮೇಲೆ ಕೂರಿಸಿ ಆಡಿಸುವೆ. ಅವಳೂ ಕೂಡ ಅವರ ಹೆಂಗಸರ ಮುಂದೆ ತನ್ನ ತವರುಮನೆ ಅತ್ತೇ ಮನೆ ತಾಪತ್ರಯಗಳನ್ನ ಕಣ್ಣೀರೊರಸಿಕೊಳ್ಳುತ್ತ ರಾಮಾಯಣ ಮಾಡುವಳು. ಹೀಗೆಲ್ಲ ಮಾಡದೆ ಇದ್ದರೆ ಪ್ರಪಂಚ ನಡೀತದೆಯೇ? ಅಳುವ ಮಕ್ಕಳಿಗೇ ಹಾಲು. ಇವೆಲ್ಲ ನಾಟಕ. ವೇಷ ಕಟ್ಟಿ ಇಳಿದ ಮೇಲೆ, ವೇಷಕ್ಕೂ ತಕ್ಕ ಭಾಷೆ, ಭಾಷೆಗೆ ತಕ್ಕ ನಟನೆ, ನಟನೆಗೆ ತಕ್ಕ ಬಿಗುಮಾನ, ಹಾಗಿದ್ದರೇನೇ, ನಾಟಕದ ಪ್ರೊಪ್ರೈಟರಿದಾನಲ್ಲಾ ಆ ಪರಮಾತ್ಮ, ಆತ ನಮ್ಮನ್ನ ಮೆಚ್ಚುವುದು.

ಕಂಬ್ಳಿ ಮೆಷೀನ್‌ನವ ನಮ್ಮನ್ನ ದಡ್ಡರು ಗಮಾರರು ಅರೆಬೆತ್ತಲೆಯವರು ಅಂತ ಹೀನಾಮಾನಾ ಕಾಣುತ್ತಿರಲಿಲ್ಲ; ಒಂದಿಂಕ್ರ ಕೂಡ ಮೋಸ ಮಾಡುತ್ತಿರಲಿಲ್ಲ. ದುಡಿಯೋ ಎತ್ತಿಗೆ ಮೇವು ಹಾಕದೆ ಇದ್ದರೆ ಅವನನ್ನ ದಡ್ಡ ಅನ್ನೋದಿಲ್ಲವೆ ಜನ? ನಮ್ಮ ಹೊಟ್ಟೆ ಬಟ್ಟೆ ಕಟ್ಟೆಯಾದರೂ ನಾವು ಅದಕ್ಕೆ ಗ್ರಾಸ ಕಾಣಿಸಬೇಡವೆ? ತಿಂದದ್ದನ್ನ ಇಲ್ಲ ಅಂದ್ರೆ ನನ್ನ ನಾಲಗೆ ಸೀದು ಹೋಗಲಿ. ಪಟ್ಟ ಸುಖವನ್ನು ಪಟ್ಟೆ ಎನಬೇಕು. ನಾಚಿಕೆ ಏನು ಅದಕ್ಕೆ?

ನೋಡಿ! ಮೂರು ತಿಂಗಳಿಗೊಮ್ಮೆ ಅದಷ್ಟು ಕಾಲ ಒಪ್ಪತ್ತೂ ತಪ್ಪಿಸಿಕೊಳ್ಳದೆ ಯಾರು ಹಾಜರಿ ಬಂದಿರುತ್ತಾರೋ ಅವರಿಗೆಲ್ಲ ಒಂದು ಜೊತೆ ಪಂಚೆ ಅಥವ ಒಂದು ಸೀರೆ, ಒಂದು ಸೇರು ಅಕ್ಕಿ ಇನಾಮು ಕೊಡುವರು. ಅಷ್ಟೇ ಅಲ್ಲ; ಒಂದು ಸೇರು ಮಿಠಾಯಿ ಬೇರೆ, ಬಾಗಿಲಲ್ಲಿ ಪೊಟ್ಟಣ ಕಟ್ಟಿ, "ಮಕ್ಕಳುಮರಿಗೆ ಕೊಡೋ, ನೀನೇ ತಿಂದು ಹಾಕಬೇಡ" ಎನ್ನುತ್ತ ಚುಡಾಯಿಸುವರು. ಹೆಸರು ನಂಬರು ಎರಡನ್ನೂ ಹಿಡಿದು ಕೂಗಿ ಕೂಗಿ ಕೊಡುವರು, ಅದನ್ನೆಲ್ಲ. ಖಾಯಿಲೆ ಕಸಾಲೆ ತಿಥಿ ತೀಟೆ ಅಂತ ತಪ್ಪಿಸಿಕೊಂಡಿದ್ದಿರಿ ನೀವು, ಆಯಿತು, ಮೂರು ನಾಮವೇ. ಆ ರೂಂ ಹತ್ತಿರ ಸುಳಿಯುವ ಹಾಗೆಯೇ ಇಲ್ಲ. ಇಣಿಕಿ ನೋಡಿದರೆ, ಮೂತಿ ಮೇಲೆ ಹೊಡೆಯುವರು. ಅಷ್ಟು ಶಿಸ್ತು, ಆ ಪರಂಗಿಯವನದು.

ಆಮೇಲಿನ್ನೊಂದು ತಮಾಷೆ. ಬುಳ್ಳಪ್ಪನ ಹೋಟಲಿಗೆ ಕಂಟ್ರಾಕ್ಟ್ ಕೊಟ್ಟಿರುವರು—ಕಾಫಿ, ರೊಟ್ಟಿಗೆ. ಅವರ ಕಡೆಯವರು ಬೆಳ್ಳಂಬೆಳಗ್ಗೆ ಮೆಷೀನ್ ಬಾಗಿಲಲ್ಲೇ ಗಡಿಗೆ ಗೂಡೆ ರೆಡಿ ಮಾಡಿಕೊಂಡು ಕೂತಿರುವರು. ದೊಡ್ಡ ಶಿಲ್ಪಿ ಇತ್ತಲ್ಲ, ಅಲ್ಲಿ, ಉದ್ದನೆಯದು, ಅದು ಏಳು ಗಂಟೆಯ ಮುಳ್ಳನ್ನ ನೋಡುತ್ತಾನೇ, ಗಂಟಲು ಅದುಮಿಕೊಂಡಿರೋದು, ನೆಟ್ಟಗೆ ನಿಗಿರಿತು ಎಂದರೆ ಸರಿ, ಕೂಗೋದು; ಅದಕ್ಕೆ ಹಿಂದೆ, ಸಣ್ಣ ಶಿಲ್ಪಿ ಕೂಗುತ್ತಲೂ ಬಾಗಿಲು ತೆಗೆಯುವರು. ಆಗ ಬಿರ್ರನೆ, ಒಳಕ್ಕೆ ಹೋದ ವರಿಗೆಲ್ಲ ಒಂದೊಂದು ರೊಟ್ಟಿ, ಒಂದೊಂದು ಲೋಟ ಕಾಫಿ ಕೊಡುವರು, ಬಿಸಿಬಿಸಿಯಾಗಿ. ನಮ್ಮದೇ ಲೋಟ. ಯಾಕೆ ಹೀಗೆ ದೌಡಾಯಿಸುತ್ತೀರಿ, ದೊಡ್ಡ ಲೋಟ ಹಿಡಿದುಕೊಂಡು, ಅಂತ ಇವಳು ಬೈಯುವಳು. ನಾಲ್ಕು ಹೆಜ್ಜೆ ಉದ್ದವಾಗಿಟ್ಟರೆ, ದೇವರೇ ಕೊಡೋವಾಗ, ಮನೇ ರೊಟ್ಟೀನೇ ತಿಂದೇನು ಅನ್ನೋ ದುರಹಂಕಾರ ಏಕೆ? ಅವನೇನು ಅವನ ಅಪ್ಪನ ಮನೆ ಆಸ್ತಿಯಿಂದ ತೋಡಿ ತರುತ್ತಾನೇನು? ನಾವು ದುಡಿದು ಸಂಪಾದಿಸೋ ಲಾಭದಲ್ಲಿ ನಷ್ಟಮಾಡಿಕೊಳ್ಳುತ್ತಿದಾನೆ, ಅಷ್ಟೇ ಕಣೆ. ಒಂದು ರೊಟ್ಟಿ ಕೊಟ್ಟರೆ ಅದರ ಬೆಲೆಯು ಡಬ್ಬಲ್ ಲಾಭ ದಕ್ಕುತ್ತೆ ಅಂತ ತಿಳಿದೇ ಇದಾನೆ,

ಅವನು. ನಾನೇನು ಗೋವಿಂದಾ ಅಂತ ತಿರುಪೆ ಕಾಫಿಗೆ ಲೋಟ ನೀಡುತ್ತಿಲ್ಲ ಕಣೆ, ಅಂತ ಹೇಳಿ, ನನ್ನ ಕಾಲಿಗೆ ಬುದ್ಧಿ ಹೇಳುವೆ. ಬಾಗಿಲಲ್ಲಿ ತೋರಿಸೋಕೆ ಅಂತ ಒಂದು ಸ್ಪೆಷಲ್ ಲೋಟಾನ್ನೇ ಮಡಗಿದ್ದೆ; ಗೋಪುರ ಅಳೆದರೆ ಅಚ್ಚೇರು ಹಿಡಿಸೋದು; ಎಲ್ಲರೂ ಹಾಸ್ಯ ಮಾಡೋರು, ಹೊಟ್ಟೆ ಬಾಕ, ತೋಳ, ಅಂತ. ಆದರೂ ಬೇಜಾರಿಲ್ಲದೆ ಹಾಕುವರು; ಕುಡಿಯುವೆ; ಆಮೇಲೆ ಹೊಟ್ಟೆ ಹೊತ್ತುಕೊಂಡು ಓಡಿದರೆ ಗಳಗಳ ಅನ್ನುವುದು ಒಳಗೆ, ಸುಮಾರು ಹೊತ್ತಿನವರೆಗೂ.

ನನ್ನ ಹೆಂಡತೀನೂ ನಾನೂ ಒಂದು ಒಂದೂವರೆ ವರ್ಷ ಬೆಂಗಳೂರು ಪೇಟೆಯಲ್ಲಿ ಆನಂದವಾಗಿದ್ದೆವು. ನಮಗೇನು? ಇಬ್ಬರೇ ಇಬ್ಬರು; ಚಿಕ್ಕವರ ಕಾಟ ಇಲ್ಲ, ದೊಡ್ಡವರ ಅಂಕೆ ಇಲ್ಲ; ಲಂಗಿಲ್ಲ ಲಗಾಮಿಲ್ಲ. ನಾವು ಅಟ್ಟದ್ದೇ ಅಡಿಗೇ, ಪಟ್ಟದ್ದೇ ಸುಖ; ಉಪವಾಸ ಬಿದ್ದರೆ ಅದೂ ಒಂದು ಹಬ್ಬಾನೇ. ಬೆಂಗಳೂರಲ್ಲಿರೋ ದೇವಸ್ಥಾನಕ್ಕೆಲ್ಲಾ ನಾವು ಆಗ ಹೋಗಿ ಬಂದೆವು; ಮಾರ್ಕೆಟ್ಟಲ್ಲಿ ಸಿಗೋ ತರತರದ ಹೂವನ್ನೆಲ್ಲ ನಾನು ಅವಳಿಗೆ ಮುಡಿಸಿದೆ. ಗುಲಾಬಿ ಅಂದ್ರೆ ಏನೂ ಅಂತ ನಮ್ಮ ಹಳ್ಳಿ ಜನಕ್ಕೆ ಗೊತ್ತಿಲ್ಲದ ಕಾಲ ಸ್ವಾಮಿ ಅದು. ಸೇಬಿನಹಣ್ಣು, ಸಪೋಟ, ಗೂದೇ ಹಣ್ಣು, ಗೋಡಂಬಿ, ಮೈಸೂರುಪಾಕ್, ಜಾಮೂನು, ಜಿಲೇಬಿ, ಬಾಸುಂದಿ, ಕಿಸ್‌ಮಿಸಿ, ಅಯ್ಯೋ ಅಯ್ಯೋ, ಅದೇಕೆ ಕೇಳುತ್ತೀರಿ, ಎಲ್ಲದರ ರುಚೀನೂ ನೋಡಿದೆವು. ಕರಗವಂತೂ ಎರಡು ಕರಗ ಪೂರ್ತ ನೋಡಿದೆವು, ನಿದ್ದೆ ಕೆಟ್ಟು. ಸಂಜೆ ಆಯಿತು ಅಂದ್ರೆ ಬೀದಿ ಮಗ್ಗುಲಲ್ಲೆ ಬಾಣಲಿ ಇರಿಸಿ ಕೊಂಡು ಕರೀತಾರಲ್ಲಾ ಅಂಬೊಡೆ, ಅದರ ಹೆಸರು ಕೇಳಿದರೆ ಸಾಕು, ಅವಳಿಗೆ ಬಾಯಲ್ಲಿ ನೀರು. ಸರಿ ಹದಿನೈದಾದರೂ ತರಬೇಕು, ಶನಿವಾರ ಶನಿವಾರ, ನಾನು ಮನೆಗೆ; ಅವಳಿಗೆ ಹತ್ತು, ಮಿಕ್ಕಿದ್ದು ನನ್ನ ಪಾಲು.

ಆಗ ಬಂತು ನೋಡಿ, ಬೆಂಗಳೂರಿಗೆ, ಹಾಳುಮಾರಿ; ಅದೆಂಥದ್ದು, ಇನ್‌ಫ್ಲುವೆಂಜಾ ಅಂತಾರಲ್ಲಾ, ಆ ರೋಗ; ಮನೆಯೊಳಗೆ ಒಬ್ಬ ಸತ್ತರೆ ಇನ್ನೊಬ್ಬನೂ ಸಾಯುವ ತನಕ ಕಾಯುತ್ತಾ ಕೂತಿರುವರು, ಹೊರುವವರು,

ಎರಡನ್ನೂ ಒಟ್ಟಿಗೆ ಸಾಗಿಸೋಣ ಅಂತ. ಅದು ಹೇಗೆ ಬಂತೋ, ನೆಲದೊಳಗಿಂದಲೋ, ನೀರಿನಲ್ಲಿ ಸೇರಿಕೊಂಡೋ, ಗಾಳಿಯಲ್ಲಿ ತೂರಿ ಕೊಂಡೋ, ಅದೇನು ಪ್ರೇತವೊ, ಎಂಥ, ಪಿಶಾಚಿಯೋ, ಯಾವ ದೇವರ ಶಾಪವೋ, ಯಾವ ದೆವ್ವದ ಕಾಟವೋ, ಯಾವ ಮಾರಿಯ ಕೋಪವೋ, ತಿಮ್ಮಪ್ಪನೇ ಬಲ್ಲ, ಅಥವಾ ಅವನಿಗೂ ಅಷ್ಟಷ್ಟೇಯೋ? ಊರೂರೇ ದೋಚಿಕೊಂಡು ಹೋಯಿತಲ್ಲಾ, ನಾಲ್ಕೈದು ತಿಂಗಳಲ್ಲಿ? ಬೆಂಗಳೂರು ಪೇಟೇಲಿ ಉಳಿದವರೊಬ್ಬರೂ ಅಲ್ಲಿಂದಾಚೆ ಗೆಲುವಾಗಿ ನಕ್ಕಿದ್ದೇ ಕಾಣೆ. ಗಂಜಿ ಕಾಯಿಸುವುದಕ್ಕೆ ಜನ ಇಲ್ಲ, ಒಂದು ಮನೇಲೂ; ಕಾಯಿಸುವ ಮಾತು ಹೇಳುತ್ತೇನೆ ನಾನು, ದಡ್ಡ; ಕಾಯಿಸಿದ ಗಂಜೀನ ಬಾಯಿಗೆ ಹುಯ್ಯುವ ಜನಾನೂ ಇಲ್ಲ. ಮುನಿಸಿಪಾಲಿಟಿಯವರು ಗಾಡಿ ಗಾಡಿ ತುಂಬಿಕೊಂಡು ಹೋಗೋರು ಹೆಣಗಳನ್ನ. ಗಾಡೀಲೇ ಗಂಜಿ ತಂದು ಮನೆಯೊಳಗೆ ಉಸಿರೆಳೆಯುತ್ತಾ ಇದ್ದ ಹೆಣಗಳ ಗಂಟಲು ನೆನೆಸುವರು. ಅದಕ್ಕೂ ಜನ ಸಿಗದೆ ಹೋಯ್ತು, ಕೊನೆಕೊನೆಗೆ. ಅವರಿಗೂ ಬಂತು, ರೋಗ.

ಆ ಇನ್‌ಫ್ಲುವೆಂಜಾನ್ನೋದು ನಮ್ಮ ಅವುಳಿ ಶರಭಣ್ಣನಿಗೂ ಬಡಿಯಿತು. ಅವನ ತಾಯಿ ಅವನ ಮಗ, ಮೂರು ಜನವೂ ಹರಹರ ಅಂದರು. ಇನ್ನು ಹಿತ್ತಲ ಮನೆಯಲ್ಲಿ ನಾವಿಬ್ಬರೂ ಇದ್ದೆವು ಜೀವಸಹಿತ. ಎಲ್ಲಿ ನಮ್ಮನ್ನೂ, ಬನ್ರೋ ಬಡ್ಡಿ ಮಕ್ಕಳಿರಾ, ಅಂತ ಕರೀತದೋ ಅಂತ, ನಾನು ಮೊದಲು ಅವಳನ್ನು ಮೆಲ್ಲಗೆ ಪುಸಲಾಯಿಸಿ ಊರಿಗೆ ರವಾನಿಸಿದೆ, ಕಲಾಸಿಪಾಳ್ಯದಲ್ಲೇ ಒಂದು ಮನೆಗೆ ನನ್ನ ಅಡ್ರೆಸ್ಸನ್ನೂ ಬದಲಾಯಿಸಿದೆ. ಅಲ್ಲೆಲ್ಲ ಒಂದು ರೌಂಡ್ ಹೊಡೆದಾಯಿತು, ಆ ಖಾಯಿಲೆ; ಎರಡನೆಯ ಬಾರಿ ಬರುವುದಿಲ್ಲ ನಾಚಿಕೆ ಕೆಟ್ಟು ಅಂತ ಜನ ಹೇಳುತ್ತಿದ್ದರು. ನನ್ನನ್ನ ಅಟ್ಟಿಸಿಕೊಂಡು ಯಮ ಅಲ್ಲಿಯತನಕ ಬರಲಿಲ್ಲ ಸದ್ಯ.

ಅಂತೂ ಇಂತು, ಜ್ವರದ ಬಾಧೆ ಕಡಮೆಯಾಯಿತು, ಊರಿಗೆ; ನೂರೆಂಟು ಕೋಮಿನವರು ನೂರೆಂಟು ದೇವರನ್ನು ಮರೆಹೊಕ್ಕು, ಕುರಿ

ಕಡಿದು ಕೋಣನ ಕೊಟ್ಟ್ಯು, ತಮಟೆ ಬಡಿದು, ಕೆಂಡಾ ಹಾರಿ, ಸಿಡಿ ನಡೆಸಿ, ಪಿಂಡ ಹಾಕಿ, ಅದನ್ನ ಕಡೆಗೂ ಓಡಿಸಿದರು, ಮಡ್ರಾಸ್ ಕಡೆಗೆ. ಇನ್ನೇನು ಇವಳನ್ನ ಹಿಂದಕ್ಕೆ ಕರೆಸೋಣ, ಕಲಾಸಿಪಾಳ್ಯದ ಮನೇನೂ ಅನುಕೂಲ ವಾಗಿದೆಯಲ್ಲಾ ಅಂದರೆ, ಇವಳು ಸ್ನಾನಾನೇ ಮಾಡಿಲ್ಲ, ಮೂರು ತಿಂಗಳು ಬಸುರಿ, ಅಂತ ಸಮಾಚಾರ ಬಂತು ಭಗವಂತಾ, ಇದೂ ನಿನ್ನ ಲೀಲೆ, ಅಂತ ನಾನು ಅನತ್ತು........ಯಾಕೆ, ಸ್ವಾಮಿ,........ನಿಜ ಹೇಳುತ್ತೇನೆ...... ಹಿಗ್ಗಿ ಹೀರೇ ಕಾಯಾಗಿ ಹೋದೆ. ಅಪ್ಪ ಅಂತ ತಬ್ಬಿಕೊಳ್ಳೋಕೆ, ಒಂದು ಹೀಚು, ಅಂದ್ರೆ, ಯಾರಿಗೆತಾನೆ ಕಣ್ಣಲ್ಲಿ ನೀರು ಬರೋಲ್ಲ, ನೀವೇ ಹೇಳಿ.

# ಧರ್ಮಾಂಬುಧಿ ಕೆರೆ

ಓಕುಳೀಲಿ ಸಿಡಿಲೆದ್ದಿತು ಅಂತಾರಲ್ಲ, ಹಾಗೆ, ಅಷ್ಟರಲ್ಲಿ ನಮ್ಮ ಮೆಷೀನಿಗೇನೆ ಬಂತು ತಲೇ ನೋವು. ನಾನು ನೆಚ್ಚಿದ ಬಾವೀನೆ ಬತ್ತಿ ಹೋಗಬೇಕೆ? ಸರಕ್ಕನೆ ಸೀನೀರು ಉಪ್ಪನೀರಾಗಬೇಕೆ? ಎಂಥದ್ದೋ ಒಂದು ಭಾರಿ ಜಗಳ ಅಂಟಿಕೊಂಡಿತು, ಲಟಾಪಟಿ, ಮಾಲೀಕರಿಗೂ ನಮಗೂನೆ. ಹೇಗಾಯಿತು ಜಗಳ ಅಂತ ಐವತ್ತೆಂಟು ಜನ ಐವತ್ತೆಂಟು ತರಹ ಹೇಳಿದರು, ಯಾಕೆ ಹಾಗಾಯಿತು, ಅಂತ; ಒಂದಕ್ಕೊಂದು ತಾಳೇನೇ ಆಗದು. ಇವ ಏನೋ ಹೇಳಿದನಂತೆ; ಅವ, ಮುಚ್ಕೋ, ಕೆಟ್ಟ ಮಾತಾಡಬೇಡ ಅಂದನಂತೆ; ಇವ, ನೀನ್ಯಾರೋ ನನ್ನ ಬಾಯಿ ಕಟ್ಟೋಕೆ ಅಂದನಂತೆ; ಕೈ ಕೈ ಮಿಲಾಯಿಸಿತು ಅಂತಾರೆ, ಇಲ್ಲ ಅಂತಾರೆ; ಬೆಂಚು ಕುರ್ಚಿ ಮುರೀತು ಅಂತಾರೆ, ಇಲ್ಲ ಅಂತಾರೆ; ಹಾಗಲ್ಲ ನಡೆದದ್ದು, ದೊಡ್ಡ ಮನಸ್ಸು ಮಾಡಿ ಎರಡಾಣೆ ಕೂಲಿ ಜಾಸ್ತಿ ಕೊಡಪ್ಪ ಸಾಧ್ಯವಾದರೆ ಅಂತ ಕೈ ಮುಗಿದು ಕೇಳಿದೆವು, ಹಲ್ಲುದುರಿಸಿ ಬಿಟ್ಟೇವು ಹೆಚ್ಚು ಮಾತಾಡಿದರೆ, ನಿಮಗೆ ಕೊಡೋದೇ ದಂಡ ಅಂತ ನೆಟ್ಟಗೆ ನುಗ್ಗೇಬಿಟ್ಟ ಪರಂಗಿಯವ ಎದೇ ಮೇಲೆ, ತಳ್ಳೇ ಬಿಟ್ಟ ಚರಂಡೀಲಿ, ಕುತ್ತಿಗೇ ಮೇಲೆ ಇಕ್ಕೇ ಬಿಟ್ಟ ಕೈನ ಅಂತ ಇನ್ನೊಂದು ಸೆಟ್‌ನವರು ಇನ್ನೊಂದು ವರಸೆ ಹೇಳುತ್ತಾರೆ; ಯಾರನ್ನೊ ಒಬ್ಬನನ್ನ ಡಿಸ್‌ಮಿಸ್ ಮಾಡಿದರು ಅಂತಾರೆ; ಸಸ್‌ಪೆಂಡು ಮಾಡಿದರೂ ಅಂತಾರೆ; ನಿಜ ಹುಡುಕುವುದಕ್ಕೆ ನಮ್ಮಂಥ ಮಂದಿಗೆ ನಿಧಾನ ಎಲ್ಲಿ ಬಂತು? ಅವ ಹೇಳಿದ್ದಕ್ಕೆ ಅಲ್ಲೇ ಹೂಂ ಅನ್ನೋದು; ಇವ ಕೂಗಿದ್ದಕ್ಕೆ ಇಲ್ಲೇ ಕಿವಿ ಕೊಡೋದು. ತಪ್ಪು ಅವನಲ್ಲೂ ಉಂಟು, ಇವನಲ್ಲೂ ಉಂಟು, ಇವ ಅಷ್ಟು ದುಡುಕಬಾರದು, ಎಂಬ ತಾಳ್ಮೆ ನಮ್ಮಂಥವರಿಗೆಲ್ಲಿ ಬರಬೇಕು? ತಾಳ್ಮೋ, ಅಷ್ಟು ಉಛಾಯಿಸಿ ಮಾತಾಡಬಾರದು, ಎಂಬ ನಯನೀತಿ

ಹೇಳೋರೇ ಇರೋಲ್ಲ, ನಶೀಬು ಬಿಗಡಾಯಿಸಿದಾಗ. ಹಂಗೂ ಸೈ ಹಿಂಗೂ ಸೈ ಅಂತ ಅವನೂ ಒಂದಿಷ್ಟು ಸಡಿಲವಾಗಬೇಕು, ಇವನೂ ಒಂದಿಷ್ಟು ಬಿಗಿ ಬಿಡಬೇಕು; ಅದು ಗ್ರಾಸ್ತರ ಲಕ್ಷಣ; ಆದರೆ ನಮ್ಮ ಮಧ್ಯಸ್ಥಿಕೆ ಯಾರು ಕೇಳುತ್ತಾರೆ? ಮುಖ್ಯ, ಕುದಿ ಬಂದಿದ್ದ ಹಾಲಿಗೆ ಹುಳಿ ಬಿತ್ತು. ಎಲ್ಲರ ಸಂಗಡ, ನಾನೂನೂ ಈಚೆಗೆ ಬಂದೆ. ಬರದೆ ಇದ್ದರೆ, ಬಾಲ ಆಡಿಸಿಕೊಂಡು ಅದರೊಳಗೆ ಹೋದರೆ. ರಟ್ಟೆ ಹಿಡಿದೆಳೆದೇಬಿಡೋರು ಸೆಕ್ಷನ್ನಿನವರು. ಸರಿ, ಮೆಷೀನ್‌ನವ ಜಗ್ಗಲೇ ಇಲ್ಲ. ನೀವೆಲ್ಲ ತಂಟೆ ಕೋರರು; ಆರು ತಿಂಗಳ ತನಕ ನಾವೇನು ಹೆದರೋದಿಲ್ಲ, ನಿಮುಗೆಲ್ಲ ಕೂಲಿನಾಲೀ ಬವುನೀಸ್ ಎಲ್ಲಕ್ಕೂ ಪೆಂಗ್‌ನಾಮ, ಅಂದ. ಪೋಲೀಸಪ್ಪ ನನ್ನ ಕರೆಸಿ ಕಾವಲಿಟ್ಟ. ಯಾರ ಹಣೇಗೆ ನಾಮ ಅಂತ ನಮುಗೆ ಗೊತ್ತು, ನಿನ್ನ ಹಣೇಗೇನೇ, ಅಂತ ನಾವೂ ಕಿರಿಚಿದೆವು. ಅವನು ಓ ಅಂದ್ರೆ ನಾವು ಠೋ ಅಂದೆವು.

ಧರ್ಮಾಂಬುಧಿ ಕೆರೆ ಏರೀ ಮೇಲೆ ಭಾರಿ ಮೀಟಿಂಗ್ ಮಾಡಿದರು. ನಾವೆಲ್ಲ ಕೆಲಸಕ್ಕೆ ಹೋಗದೆ, ಶುಕ್ರವಾರ ಅವತ್ತು, ಅಲ್ಲೇ ಗಿರಕಾಯಿ ಸಿದೆವು ಕಡ್ಲೆಕಾಯಿ ತಿನ್ನುತ್ತ. ಅರವದಲ್ಲಿ, ತೆಲುಗಿನಲ್ಲಿ, ಇಂಗ್ಲೀಷಿನಲ್ಲಿ, ನಮ್ಮ ಕನ್ನಡದಲ್ಲಿ, ಎಲ್ಲ ಹನುಮಂತನ ಬಾಲದಹಾಗೆ ಬೆಳಸಿದರು ಮಾತು. ಕಣ್ಣಿಂದ ಕಿಡಿ ಬಾಯಿಂದ ಬೆಂಕಿ ಕಾರಿದರು. ಇದನ್ನೆಲ್ಲ ಹೊಂಚು ಹಾಕ್ತ ಕೇಳ್ತಿದ್ದ, ಪರಂಗಿಯುವನು. ಅವನೇನು ಮಾಡಿದ? ಶನಿವಾರ ಮೆಷೀನ್‌ನ ಬಂದ್ ಮಾಡಿದ. ಒಳಕ್ಕೆ ಸೇರಿಕೊಂಡು ನಂತರ ಕೀಟಲೆ ಎಬ್ಬಿಸಿದರೆ, ಲಕ್ಷಾಂತರ ರೂಪಾಯಿ ಮಾಲಿದೆ ಅವನದು ಅಲ್ಲಿ; ಅದರ ನಿಗ ಅವನಿಗೆ. ಶೀಮೆಯಿಂದ ತರಿಸಿ ಮಡಗಿದ್ದ ಇಂಜನ್ ಗಿಂಜನ್ ಮಗ್ಗ ಪ್ರೆಸ್ಸು ಎಲ್ಲ ಅಪಾರ ಇತ್ತು.

ಸರಿ, ಅವತ್ತೂ ಯಥಾಪ್ರಕಾರ ಕೆರೆ ಏರೀ ಮೇಲೆ ಮೀಟಿಂಗ್ ಮಡಗಿದರು, ನಮ್ಮವರು. ಅವತ್ತು ನಾನು, ಮೇಜು ಹಾಕಿಸಿದ್ದರಲ್ಲಾ, ಲೆಕ್ಚರ್ ಹೊಡೆಯುವನು ಮುಷ್ಟಿ ಗುದ್ದೋಕೆ ಅಂತ. ಆದರ ಕಾಲಿನ

ಹತ್ತಿರವೇ ಕೂತಿದ್ದೆ. ನನ್ನ ಗ್ರಹಚಾರ ಏನು ಅಂತೀರಾ? ಅವರ ಉಗುಳೆಲ್ಲ ನನ್ನ ಮೈ ಮೇಲೇನೇ. ಅವತ್ತೂ ಆಯಿತು ಅರವತ್ತು ಭಾಷೇಲಿ, ಫ್ರೆಂಚೆ, ಪರಂಗಿಯವನಿಗೆ. ತೆಲುಗು ಮುಗಿದು, ತುರುಕ್ಕೂ ಪೂರೈಸಿ, ಕನ್ನಡ ಬಂದಾಗ ನನ್ನ ಕಿವಿ ನೆಟ್ಟಗಾಯಿತು. ಇತ್ತ ಹುಲಿ ಅತ್ತ ದರಿ, ಅಂತ ಪ್ರಾರಂಭ ಮಾಡಿದ ಅವನು. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಅಂತ, ಬಿಳೀಮೇಸ್ತ್ರಿ ಸಂಬಳಕ್ಕೂ ನಾಡ ಮೇಸ್ತ್ರಿ ಕೂಲಿಗೂ ತಾಳೆ ಹಾಕಿದ. ಒಂದು ನಾಯಿ ಸಾಕುವುದಕ್ಕೆ ಅವನು ೫೦ ರೂಪಾಯಿ ಖರ್ಚು ಮಾಡುತ್ತಿದಾನೆ, ಅಂದ. ಬಂಗಲಿಗಳಿರುವ ಜಾಗ ನೋಡಿ, ನಮ್ಮ ಗುಡಿಸಲುಗಳಿರುವ ಕೆರೆ ಅಂಗಳದ ಕೊಚ್ಚೆ ನೋಡಿ ಅಂದ. ನಮ್ಮ ಕೊಳಕು ನಮ್ಮ ಖಾಯಿಲೆ ಕಸಾಲೆ ನಮ್ಮ ನಮ್ಮಲ್ಲಿರೋ ಪಾರ್ಟಿ ಇದನ್ನೆಲ್ಲ ತೆಗೆದ. ಜನ ರೇಗಿದರು. ಏಕೆಂದರೆ, ಅವನು ಯಾರು ಅದನ್ನೆಲ್ಲ ಹೇಳಿ ನಮ್ಮನ್ನ ಹೀಯಾಳಿಸೋಕೆ? ಆಗ ಅಲ್ಲೇ ಕೂತಿದ್ದ ಮುಡಿಬಟ್ಟೆಯವರೊಬ್ಬರು, ಲಾಯರಂತೆ ಅವರು, ಎದ್ದು, ಸದ್ದು ಸದ್ದು ಎಂದು ಕೂಗಿದರು. "ಅಣ್ಣ ತಮ್ಮಂದಿರೇ!" ಅಂತ ಬೆಣ್ಣೆಯಲ್ಲಿ ಕೂದಲು ತೆಗೆದರು. ನಾಲಿಗೆಗೆ ಜೇನುತುಪ್ಪ ಸವರಿ ಮಾತಾಡಿದರು.

ಬಿಳಿಯವನಿಗಾಗಲಿ ಕರಿಯವನಿಗಾಗಲಿ, ದುಡ್ಡಿನ ಮದ ಅನ್ನೋದು ಒಂದೇ. ಅದರಿಂದ ಕಣ್ಣಿಗೆ ಮಂಜು ಬರುತ್ತೆ. ಕಿವಿಗೆ ಬಲ ಕುಗ್ಗುತ್ತೆ. ಹೊಗೆಗೆ ಮೇಲುಮೇಲಕ್ಕೇನೇ ದೃಷ್ಟಿ. ನೀರಿಗೆ ಹಾಗಲ್ಲ. ನೀರು ಮನುಷ್ಯನ ಕರುಣೆ ಇದ್ದ ಹಾಗೆ; ಕೆಳಕ್ಕೆ ಇಳಿಯುತ್ತದೆ. ಹಣ ಎನ್ನುವುದು ಹೊಗೇ ಸಮಾನ. ಉರಿ ಇದ್ದ ಕಡೆ ಹೊಗೆ. ಆದ್ದರಿಂದ ನಾವು ರೇಗ ಬಾರದು. ಪರಂಗಿಯವನೂ ದೇವರಲ್ಲಿ ನಂಬಿಕೆ ಇಟ್ಟಿದ್ದಾನೆ; ಅವನು ಹೇಳುವ ಹೆಸರು ಬೇರೆ ಇರಬಹುದು, ಆದರೂ ಆ ದೇವರು ಬಡವರ ಹೊಟ್ಟೆಮೇಲೆ ಬಂಗಲಿ ಕಟ್ಟಿ ಬದುಕು ಅಂತ ಅವನಿಗೆ ಹೇಳಿಲ್ಲ; ಅವನಿಗೂ ತಾಯಿ ತಂದೆ ಗುರು ಹಿರಿಯರು ಮಕ್ಕಳು ಮರಿ ಗೀತೆ ಗುಡಿ ಎಲ್ಲ ಇವೆ; ನಾವು ಈಗ ಅವನನ್ನ ಕಂಡು, ನಮ್ಮ ಕಷ್ಟಗಳನ್ನೆಲ್ಲ ಹೇಳೋಣ; ನಮ್ಮ

ದಣಿ ಅವನು ; ನಾವೀಗ ಮಿಲ್ಲಿಗೆ ನುಗ್ಗಿ ಮೆಷೀನ್ ನಡೆಸದೆ ಹೋದರೆ, ನಮ್ಮ ಹೊಟ್ಟೇಲಿ ತಾಳ, ಅವನ ಹಿಟ್ಟಿಗೆ ಮಣ್ಣು. ಹಾಲಿಗೆ ಹುಳಿ ಬಿದ್ದರೆ, ಅದು ತಿರುಗಿ ಹಾಲಾಗುವುದಿಲ್ಲ. ಅದರೊಳಗೆ ಕಡೆಗೋಲಿರಿಸಿ, ಹಗ್ಗ ಕಟ್ಟಿ ಗರಗರ ಅಂತ ಎಳೆದು, ಬೆಣ್ಣೆ ತೆಗೆದು, ಸೌದೆ ಒಡ್ಡಿ, ಕಾಯಿಸಿದರೆ, ತುಪ್ಪ ಬಂದರೆ ಬಂತು, ಇಲ್ಲದಿದ್ದರೆ ಇಲ್ಲ. ಇಷ್ಟೆಲ್ಲ ತಾಪತ್ರಯ ಯಾಕೆ? ಹಾಲನ್ನ ಹಾಲಾಗಿಯೇ ಉಳಿಸೋಣ, ಅಂದರು.

ಕಟುಕರ ಮನೇಲಿ ಬಸವ ಪುರಾಣ ಓದಿದನಂತೆ ಒಬ್ಬ ದಡ್ಡ; ಹಾಗಾಯಿತು ಆ ಲಾಯರು ಮಾಡಿದ್ದು. ನನ್ನ ಸುತ್ತಿದ್ದವರೆಲ್ಲ ಕಟ ಕಟ ಅಂತ ಹಲ್ಲು ಕಚ್ಚಿಕೊಂಡು, ಆ ರುಮಾಲಿನ ಕಡೆ ನುಗ್ಗೇ ಬಿಟ್ಟರು ಏಕ್‌ದಂ. ಪಾಪ! ಅವರು ಕೈಚೀಲಾನ್ನೂ ಅಲ್ಲೇ ಬಿಟ್ಟು, ಕಿತ್ತರು ಓಟ, ದೊಡ್ಡ ರಸ್ತೇ ಕಡೆ.

ಇನ್ನು ಯಾರಪ್ಪ ಬರುತ್ತಾರೆ, ಪೂಂಗಿ ಊದುವುದಕ್ಕೆ ಅಂತ, ನಾನೂ ಕೂತಿದ್ದೆ. ಅರವದವ ಬಂದ. ಲೆಕ್ಚರ್ ಕೊಡೋಕೆ ಅರವವೇ ಸೊಗಸು. ಸಿಡಿಲಿನ ಹಾಗೆ ಅವನು ಸೆಟೆದುಕೊಂಡು ಸಿಂತ. ಹದಿನಾಲ್ಕು ಲೋಕಾನ್ನು ಸುಟ್ಟು ಬೊಟ್ಟಿಟ್ಟವನ ಹಾಗೆ, ಮೀಸೆ ಕುಣಿಸಿದ, ಹಣೆಗಣ್ಣು ತೆರೆದು ಸುತ್ತ ನೋಡಿದ. ಜನ ಎಲ್ಲ ಆ ಅಂತ ಬಾಯಿಬಿಟ್ಟು ಕೊಂಡು ಕೂತಿದ್ದರು. ನಡುನಡುವೆ, ಅಂಗೈ ಕೆಂಚಗಾಗುವಷ್ಟು ಕೈ ಚಪ್ಪಾಳೆ ಬೇರೆ.

ಈ ಬೆಂಗಳೂರಲ್ಲಿ, ಇವನು ಎಸೆಯುವ ಎಂಜಲಿಗೆ ಬಾಯಿ ಚಪ್ಪರಿಸಿಕೊಂಡು ನಾವೇಕೆ ಬಿದ್ದಿರಬೇಕು? ನಮಗೇನು ಬೇರೆ ಗತೀನೇ ಇಲ್ಲವೇ? ಹುಟ್ಟಿಸಿದ ದೇವರು ಇವನು ಹಾಕುವ ಹುಲ್ಲನ್ನೇ ಮೇಯುತ್ತಾ ಇರು ಅಂತಾನೆಯೆ? ನಮಗಿರೋದು ಇದೊಂದೇ ಆಸರೆ ಇಲ್ಲ. ದೇಶ ವಿಶಾಲವಾಗಿದೆ. ಆಸೇತುಹಿಮಾಚಲ ಹದಿನಾಲ್ಕು ಲೋಕಗಳಿವೆ.

ಅಲ್ಲೆಲ್ಲ ಇಂಥ ಜುಜುಬಿ ಜನ ಅಲ್ಲ; ಕೋಟೀಶ್ವರರಿದಾರೆ. ಅವರು ಇಲ್ಲಿಯದಕ್ಕಿಂತ ಭಾರಿ ಗಿರಣಿಗಳನ್ನಿಟ್ಟಿದಾರೆ. ಕೂಲಿಯವರಿಗೆಲ್ಲ ಅಲೋವನ್ಸು ಬವುಸೀಸು ಮನೆ ಬಾಡಿಗೆ ಟ್ರಾಂ ಚಾರ್ಜು ಎಲ್ಲ ಸೇರಿ ತಿಂಗಳಿಗೆ ೧೦೦ ರೂಪಾಯಿಗಿಂತ ಹೆಚ್ಚು ಕೊಡುತ್ತಾರೆ. ತಿರುಗ ನೋಡಿದರೆ, ಅವರು ಬರೀ ಕರೀ ಜನ. ಇಲ್ಲೇನಿದೆ, ಮಣ್ಣು? ಅಲ್ಲಿ ದಿನಸಿ ಬೆಲೆ ಕೂಡ ಬಲು ಅಗ್ಗ. ಕೊಡೋ ದಣಿ ನಗುನಗುತ್ತಾ ಕೊಟ್ಟರೆ, ಮೈಗೆ ಅಂಟುತ್ತೆ. ಇವನು ಅಳುತ್ತಾ ಕೋಡೋದನ್ನ ತಿಂದರೂ ಅರಗೋದಿಲ್ಲ. ಬನ್ರೋ, ಎಲ್ಲರೂ ಬೊಂಬಾಯಿಗೆ ಹೋಗೋಣ, ಅಂದ, ಅವನು.

ನೂರು ರೂಪಾಯಿ ಅಂದಾಗ, ನನ್ನ ಬಾಯಲ್ಲಿ ನೀರೂರಿತು. ನಾನೆದ್ದು ನಿಂತೆ. ಆಗ, ಇನ್ನೊಬ್ಬನೂ ಎದ್ದ, ಲೆಕ್ಚರ್ ಕೊಡೋಕೆ. ಅವನು ಮೆಲ್ಲಗೆ ರಾಗ ತೆಗೆದ. "ಬೊಂಬಾಯಿ ಗಿಂಬಾಯಿ ಅಂತ ಗಾಳಿ ಗೋಪುರ ತೋರಿಸಬೇಡ, ದಮಯ್ಯ. ದೂರದ ಬೆಟ್ಟ ನುಣ್ಣಗೆ, ಹತ್ತುವ ಬೆಟ್ಟದ ತುಂಬ ಬಂಡೆ; ಅಲ್ಲಿಗೆ ಹೋಗಿ ಪೇಚಾಡಿಕೊಂಡು, ಹಳೇ ಗಂಡನ ಪಾದವೇ ಗತಿ, ಅದೇ ಉಂಡೇನು ಕದ ತೆಗಿ ಅಂತ ಗೋಳಾಡುವುದು ಬೇಡ. ಹಿತ್ತಲ ಗಿಡ ಮದ್ದಲ್ಲ, ಸರಿ. ಆದರೆ ಅತ್ತಲಗಿಡ ಮದ್ದೇನು? ಅದು ಏಕೆ ವಿಷವಾಗಿರಬಾರದು? ನೋಡೋಣ, ನಿಧಾನಿಸೋಣ. ಮೊದಲು ನಮ್ಮ ಪೈಕೀನೇ ಬುದ್ಧಿವಂತರಾದ ಇಬ್ಬರಾಳನ್ನ ಆರಿಸಿ, ನಮ್ಮ ಖರ್ಚಿನಲ್ಲೇ ಅಲ್ಲಿಗೆ ಕಳುಹಿಸಿ, ಆ ಸ್ವರ್ಗದಲ್ಲಿ ಏನೇನಿದೆ, ಅಲ್ಲಿ ನಿಜಾಂಶ ಕೊಡೋದೆಷ್ಟು, ಕೈಗೆ ದಕ್ಕೋದೆಷ್ಟು ಸುಲಿಗೆ ಎಷ್ಟು, ಮಿಗೋದೆಷ್ಟು ಅಂತ ತಿಳಿದು ಬರೋದಕ್ಕೆ ಹೇಳೋಣ'' ಅಂದ.

ಎಲ್ಲರೂ ಅವನ ಮಾತಿಗೂ ಚಪ್ಪಾಳೆ ತಟ್ಟಿದರು. ಆಸಾಮಿ ಬಲು ಹುಷಾರಿ ಇದಾನೆ, ಅಂತ ಅನೇಕರು ಮೆಚ್ಚಿದರು ಆದರೆ, ಬಲಗಡೆ ಮೂಲೆಯಿಂದ ಅವನ ಎದುರು ಪಾರ್ಟಿಯವರು, "ಮೆಷೀನ್ ಕಡೆ

ವಕೀಲಿ ವಹಿಸುತ್ತಾನೆ; ತಳ್ರಿರೋ ಆಚೆ" ಅಂತ ಕೂಗಿ ರೇಗಿದರು. ಅವನನ್ನಟ್ಟಿಸಿಕೊಂಡು ಹೋದರು. ನನಗೆ, ಅಯ್ಯೋ ಪಾಪ ಎನ್ನಿಸಿತು. ದಡ್ಡರ ಗುಂಪಿನಲ್ಲಿ ಬುದ್ಧಿವಂತ ಬಾಳುವ ಹಾಗಿಲ್ಲ ಎನ್ನಿಸಿತು.

ಆದರೂ ಅರವದವನ ಮಾತನ್ನು ಅವನು ಅಷ್ಟು ಅನಾಮತ್ತಾಗಿ ಗುಮಾನಿಸಬಾರದಾಗಿತ್ತು. ಬೊಂಬಾಯಿ ವಿಷಯವಾಗಿ ಅವನು ಬರೀ ಬುರುಡೇನ ಹೊಡೆದರೆ, ಅವನು ಬಚಾವಾಗುತ್ತಾನೆಯೇ? ನಾಳೆ ಅವನ ಬೇಳೇಕಾಳಿನ ಗುಣ ಬಯಲಿಗೆ ಬೀಳದೆ ಇರುತ್ತದೆಯೆ? ಬೊಂಬಾಯಿ ಅಂದ ಮೇಲೆ ಹಿಡಿ ಹಿಡಿ ಕೊಡೋ ಪುಣ್ಯಾತ್ಮರು ಅಲ್ಲಿ ಇರಲೇಬೇಕು. ನಮ್ಮೂರು ಸರ್ಕಾರಕ್ಕೇನೇ ಸಮಯ ಬಿದ್ದರೆ ಸಾಲ ಕೊಡೋ ಸಾಹುಕಾರರು ಅಲ್ಲಿ ಮೆರೀತಿದಾರೆ ಅಂತ ಆ ಅರವದವನೇ ಹೇಳಲಿಲ್ಲವೇ? ಅಂದಮೇಲೆ ಅವರು ಸ್ಥಿತಿಗತಿ ಅರ್ಥ ಮಾಡಿ ಅರವದವನೇ ಹೇಳಲಿಲ್ಲವೆ? ಅದರ ಮೇಲೆ ಅವರು ಸ್ಥಿತಿ ಗತಿ ಅರ್ಥಮಾಡಿಕೊಳ್ಳಬೇಡವೆ? ಸಂತೆ ಗಿಂತೇಲಿ ಬೊಂಬಾಯಿ ದೇಖೋ ಅಂತ ಬೂದುಗಾಜಲ್ಲಿ ಚಿತ್ರ ತೋರಿಸುತ್ತಾನಲ್ಲಾ ಅದನ್ನಾದರೂ ನಂಬಬಾರದೆ, ಇವರು? ನನ್ನ ತಲೆಯೊಳಗೆ, ಬೊಂಬಾಯಿ ಎಂಬ ಮಾತು ಬಲವಾಗಿ ಸೇರಿಕೊಂಡುಬಿಟ್ಟಿತು.

ಆದರೆ, ನಮ್ಮ ಮಿಲ್ಲಿನವರದೆಲ್ಲ ಸೋಡಾಸೀಸೆ ಹುಮ್ಮಸ್ಸು; ಬಾಟ್ಲೆ ತೆರೆದಾಗ, ಬುರು ಬುರು ಗಾಳಿ; ಕ್ಷಣದೊಳಗೆ, ತಣ್ಣಗಾಗಿ ಬರೀ ನೀರು. ಅವರ ರೋಷ ಉಕ್ಕಿತು, ಉಕ್ಕಿದಷ್ಟೇ ಬೇಗ, ಆರಿತು. ಗಂಡ ಹೆಂಡಿರ ಜಗಳ ಗಳಿಗೆಯೊಳಗೆ ಪರ್ಯವಸಾನ. ಸೋಮವಾರವೋ ಮಂಗಳ ವಾರವೋ ಅವನು ಕದ ತೆಗೆದು ಬೋಲ್ಡು ಹಾಕಿದ. ಬುಳ್ಳಪ್ಪನ ಹೋಟ್ಲು ಗಡಿಗೆ ಗೂಡು ತಂದಿಟ್ಟ. ಸರಿ! ಕುರಿ ಮಂದೆಯ ಹಾಗೆ, ಎಲ್ಲರೂ ಓಡೋಡಿ ಬಂದು ಒಳಕ್ಕೆ ತೂರಿದರು. ಹಾಕಿದ ಕದನ್ನಕ್ಕೆ ಬಾಲ ಆಡಿಸೋ ಕುನ್ನಿಗಳಾದರು ಎಲ್ಲರೂ! ಅರವದವನ ಮಾತು

ಮೂಲೆಗೆ ಬಿತ್ತು. ನಮ್ಮವರು ಇಂಥ ಜನ ಅಂತ ಪತ್ತೆ ಹಚ್ಚೇನೇ ಪರಂಗಿಯವನು ನಮ್ಮೂರಲ್ಲಿ ಮೆಷೀನ್ ಮಡಗಿದ. ಇಲ್ಲದೆ ಇದ್ದರೆ, ಹಾಯಾಗಿ ಅವನ ಊರಲ್ಲೇ ಮಡಗುತ್ತಿದ್ದ! ನಾವು ಸಾವಿರ ಬೆಕ್ಕು ಸೇರಿದರೂ ಅವನ ಊರಿನ ಒಂದು ಹುಲೀಸಮ ಬರುವುದಿಲ್ಲ ಅಂತ ಅವನಿಗೆ ಗೊತ್ತು.

# ಕರೀಕಲ್ ಆಂಜನೇಯ

ನಾನು ಮಾತ್ರ ಬೊಂಬಾಯಿ ಮರೆಯಲೇ ಇಲ್ಲ. ಇವಳು ಊರಿಗೆ ಹೋದ ಮೇಲೆ, ನಾನೂ ಒಂದು ಮೆಷೀನಾಗಿಬಿಟ್ಟೆ. ಹಸಿವಿಲ್ಲ, ನಿದ್ದೆ ಇಲ್ಲ, ಕೋಪ ಇಲ್ಲ, ಕನಿಕರ ಇಲ್ಲ. ಸ್ಪೈರನ್ ಕೂಗುತ್ತಲೂ ಕಾಲು ತಾನಾಗಿಯೇ ಓಡುವುದು; ಮೂಟೆ ತಲೆ ಮೇಲಕ್ಕೇರುವುದು. ಇಸ್ಕ್ರೂ ತಿರುಗಿಸಿದ ಗೊಂಬೆ ಹಾಗೆ ಓಡಾಡಿದೆ. ನನಗೆ ನನ್ನ ಮನೆಯೇ ವನವಾಗಿ ಹೋಯಿತು. ಕೋಣೆ ಪೂರ ಗುಂ ಅಂತ ಇರುವುದು. ಗೋಡೆಗಳಲ್ಲೆಲ್ಲ ಗುರ್ರಂತ ನನ್ನನ್ನೇ ನೋಡುವುವು. ಅವಳ ಬಾಚಣಿಗೆ ತುಂಡು, ಹರಕು ಸೀರೆ, ಕುಪ್ಪಸದ ಚೂರು ಬಿದ್ದಿದ್ದರೆ, ಅವೇ ನನ್ನ ಹಿಂದೇನೇ ಬರುವ ಹಾಗೆ ತೋರುವುವು. ರಾತ್ರೆಯಂತೂ ಏನೋ ಒಂದು ತರಹ ಭೀತಿ, ಬೇಜಾರು.

ಆದರೆ ಒಂದು ಒಂದೂವರೆ ತಿಂಗಳೊಳಗೆ ಎಲ್ಲ ಸರಿಹೋಗ್ತಾ ಬಂತು. ಸ್ನೇಹಿತರೊಂದಿಗೆ ಕಾಲ ಕಳೆಯುವುದನ್ನ ಅಭ್ಯಾಸ ಮಾಡಿದೆ. ಅವರ ಮನೆಗಳಲ್ಲೇ ರಾತ್ರಿ ಎಲ್ಲ ಬಿದ್ದಿರುವೆ. ಪಡಖಾನೆಗೆ ಹೋಗುವ ಚಟಾನ್ನೂ ಕಲಿಸಿಬಿಟ್ಟರು, ಹಾಳಾದವರು ನನಗೆ. ಆದರೆ, ನಾಚಿಕೆ ಕೆಟ್ಟು ಚರಂಡೀಲಿ ಉರುಳಾಡುವಷ್ಟು ಕೆಡಲಿಲ್ಲ, ಅಣ್ಣಿ. ತಲೆ ಹಾಗೊಂದು ಸಲ ಗಿರ್ರೆನ್ನುವಾಗ, ಎದ್ದುಬಿಡುವೆ. ಮನೇ ಕಡೆ ಬರೋವಾಗ ನನ್ನ ಲಗಾಮು ನನ್ನ ಕೈಯಲ್ಲೇ ಹಿಡಿದಿರುವೆ.

ಆದರೆ, ಹೆಚ್ಚು ದಿನ ಹೀಗೆ ನಡೆಸಲು ಸಾಧ್ಯವಾಗಲಿಲ್ಲ-ಕೊನೆ ಕೊನೆಗೆ ನನ್ನ ನಡತೆ ಮೇಲೆ ನನಗೇ ಗುಮಾನಿ ಷುರು ಆಯಿತು. ಮಿಲ್ಲಿನಲ್ಲಿ ಅರವದ ಹೆಂಗಸರು ತೆಲುಗು ಹೆಂಗಸರು ಹೆಚ್ಚು. ನನ್ನ

ಗ್ರಹಚಾರಕ್ಕೆ ಅವು ಒಂದೊಂದೂ ಒಂದೊಂದು ರೀತಿ ಚೆನ್ನಾಗಿರಬೇಕೆ? ಎಲ್ಲ ಹಾಳು ಈ ಪ್ರಾಯದ್ದೇ ತಪ್ಪು. ಯಾರನ್ನು ಕಂಡರೂ ನನಗೆ ಹೆಂಗ್ಹೆಂಗೋ ಆಗೋದು. ದಾರಿ ತಪ್ಪಿಸಬೇಡ, ಭಗವಂತಾ, ಅಂತ ನಾನು ಎಷ್ಟು ಬಡಕೊಂಡರೂ ಭಗವಂತ ಕೇಳಲಿಲ್ಲ. ಚೆಲುವಾ, ಒಸಿ ಸುಣ್ಣ ಕೊಡು, ಚೆಲುವಾ ವಿಳ್ಳೇದೆಲೆ ಇದೆಯ್ಯ, ಚೆಲುವಾ ಎರಡಾಣೆ ಸಾಲ ಕೊಡುತ್ತೀಯಾ, ಅಂತ ಆ ಮೋಹಿನಿಯಾಟದವರು ನನ್ನನ್ನೇ ಮಾತನಾಡಿಸಿ ಹಳ್ಳಕ್ಕೆ ಎಳೆಯುವರು. ಉಪ್ಪು ಖಾರ ತಿನ್ನೋ ದೇಹ. ಕೆಟ್ಟು ಪಟ್ಟಣ ಸೇರು, ಅಂತಾರೆ ಹಿರಿಯರು. ಆದರೆ ಇನ್ನೆಲ್ಲಿ ಕೆಡುವುದು? ಕೆಡೋಕೆ ಪಟ್ಟಣವೇ ಸರಿ. ನಮ್ಮ ಹಳ್ಳಿ ಹೆಂಗಸರ ಚಹರೇನೇ ಬೇರೆ. ಈ ಥಳಕು ಬಳಕು, ತಲೆಗೆ ಎಣ್ಣೆ ಹಚ್ಚಿಕೊಂಡು, ಮುಖಕ್ಕೆ ಸಾಬೂನು ಹಚ್ಚಿಕೊಂಡು, ದಿನಕ್ಕೊಂದು ಬಣ್ಣ ತೊಟ್ಟು ಕೊಂಡು, ಬಂಗಾರ ಸಿಂಗಾರ ಅಂತ ಮೆರೆಯುತ್ತಾರೆಯೆ, ಅವರು? ಇವು ಹಾಗಲ್ಲ. ಇವು ತುರುಬು ಮುಡಿದುಕೊಳ್ಳೋ ರೀತಿ, ಬಣ್ಣ ಬಣ್ಣದ ಸೀರೇನ ತರಹೇವಾರಿ ಉಡುವ ಠೀವಿ, ತಲೇ ಮೇಲೆ ಅರಳೆ ಮೂಟೆ ಹೊತ್ತುಕೊಂಡು ಸೊಂಟಕ್ಕೆ ಕೈಯೂರಿಕೊಂಡು ಉಸ್ಸಪ್ಪ ಅಂತ ನಿಧಾನ ವಾಗಿ ನಡೆಯೋದು ನುಲಿಯೋದು, ಎಲೆ ಅಡಿಕೆ ಮೆದ್ದು ಅದನ್ನ ಉಂಡೆ ಮಾಡಿ ಕೆನ್ನೆಯೊಳಗಿರಿಸಿಕೊಂಡು ಪಿಚಕಾರಿಯಿಂದ ಬಿಟ್ಟಹಾಗೆ ಉಗುಳುವ ಫೇಶನ್ನು, ಒಂದೇ ಒಂದು ಹೂವನ್ನ ಇವತ್ತು ಇತ್ತಕಡೆ ನಾಳೆ ಅತ್ತ ಕಡೆ ಮುಡಿದು ಬರೋ ಮಝು-ಕಾಮನ ಬಿಲ್ಲಿನ ಒಯ್ಯಾರವೆಲ್ಲ ಒಬ್ಬಳಲ್ಲೇ ಇರೋದು, ಹೂವು, ಸೀರೆ, ಕುಪ್ಪಸ, ಒಡವೆ, ಸೇರಿದರೆ-ಇವೆಲ್ಲ ನನಗೆ ಇವಳು ಬೆಂಗಳೂರಲ್ಲಿರೋ ತನಕ ಗೊತ್ತೇ ಆಗಲಿಲ್ಲ. ಇವಳು ಅತ್ತಲಾಗೆ ಹೋದಳು, ಇತ್ತಲಾಗೆ ಪರಮಾತ್ಮ ಬೀಳೋ ಬೀಳೋ ಅಂತ ನನ್ನ ನೂಕುವುದಕ್ಕೆ ಪ್ರಾರಂಭ. ಹಳ್ಳಿಯಲ್ಲಿ, ಪಾಪ, ನಮ್ಮ ಹೆಂಗಸರಿಗೆ ಸಿಗುವ ಹೂವಂತೂ ಬರಿಯ ಸೊಪ್ಪೇನೆ. ಮರುಗ, ಪಚ್ಚೇತೆನೆ. ಅದೂ ಜಾತ್ರೆಗೆ ಹೋದಾಗ ಮಾತ್ರ. ಇವು ಮೆಲ್ಲಗೆ ಮನಸ್ಸಿನೊಳಗೇನೇ ಹಾಡು ಹೇಳಿಕೊಂಡು ಕೂತಿರೋದು-ಅಕ್ಕ ಅಮ್ಮ

ಅಂತ ಕೂಗಿ ಒಬ್ಬರಿಗೊಬ್ಬರು ರೇಗಿಸಿ ನಗುವಾಗ ಒಳ್ಳೇ ಮೈಸೂರು ಮಲ್ಲಿಗೆ ಹೂವನ್ನ ನಾಲ್ಕೂ ಕಡೆ ಚೆಲ್ಲಿದ ಹಾಗೆ ಇರುತ್ತದೆ........ಇವು, ಒಳ್ಳೆ ರಂಭೆ ತಿಲೋತ್ತಮೆ ಅವತಾರಗಳ ಹಾಗೆ ಕೊರಳೆತ್ತಿ ಹಾಡುತ್ತಾನೇ ಕೆಲಸ ಮಾಡುವುವು; ಪದ ಹೇಳಿಕೊಳ್ಳುತ್ತಲೇ ಗಂಟು ಇಳಿಸುವವು. ನಮ್ಮ ಹತ್ತಿರಕ್ಕೆ ನಡೆದು ಬರುವುದೇ ಒಂದು ಚೆಂದ, ಅಂದರೆ ನಮ್ಮ ಹತ್ತಿರ ಮಾತಾಡಿ ಹೋಗೋದನ್ನ ಹಿಂದಿನಿಂದ ನೋಡುತ್ತಿರೋದೇ ನಮಗೊಂದು ಖುಷಿ.

ನಮ್ಮನ್ನ ಇವು ಗೇಲಿ ಮಾಡಿದರೂ ನಮಗೆ ಇವನ್ನ ಬೈಯಬೇಕು ಎನ್ನಿಸುವುದಿಲ್ಲ. ಅದು ಬಿಟ್ಟು ಜೇಬಿನಲ್ಲಿ ಕಡಲೆಕಾಯಿ ಇದ್ದರೆ, ಎರಡು ಕೊಡೋಣ ಅನ್ನಿಸುತ್ತದೆ. ಸುಮ್ಮನೆ ಒಬ್ಬಳೇ ಹೋಗುತ್ತಿದ್ದರೆ, ಏನವ್ವ! ಚೆನ್ನಾಗಿದೀಯಾ, ಅಂತ ವಿಚಾರಿಸೋಣ ಅನ್ನಿಸ್ತದೆ. ಅದಕ್ಕೆ ಅವೇನಾದರೂ ಮುತ್ತು ಉದುರಿಸಿ ಉತ್ತರ ಕೊಟ್ಟರೆ, ಆ ಜಾಡನ್ನೇ ಹಿಡಿದು, ಯಾವೂರು, ಎಲ್ಲಿ ಮನೆ, ಯಾವ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದಿಯಾ, ನಿನ್ನ ಸಂಬಳವೆಷ್ಟು ಅಂತ ಹೀಗೆಯೇ ಹೋಗುತ್ತದೆ, ಮಾತಿನ ಹುಚ್ಚು ಹೊಳೆ. ಆ ಸಮಯಕ್ಕೆ ಯಾರೂ ನಮಗೆ ಬ್ರೇಕ್ ಹಾಕೋರೇ ದಿಕ್ಕಿಲ್ಲ. ಎಳೀತಾನೇ ಇರುತ್ತದೆ ಕರ್ಮ. ಲೋ! ಹುಷಾರಿ, ಅಂತ, ಬೆನ್ನ ಮೇಲೆ ಗುದ್ದೋಕೆ ಒಬ್ಬ ದೋಸ್ತೀನೂ ಸಿಕ್ಕೊಲ್ಲ. ಇರೋ ದೋಸ್ತಿ ಎಲ್ಲಾ ಅಂಥ ಅಪಾಪೋಲಿಗಳೇ. ಬೆಂಗಳೂರಿನಲ್ಲಿ ನಮಗೆ ಸಿಗುವ ಪುರಾಣ ಪುಣ್ಯಕಥೇನೂ ಅಂಥವೇ! ಬಯಸ್ಕೋಪಿನಲ್ಲೂ ಅದೇನೇ. ಹರಿಕಥೆ, ಕೀರ್ತನೆ, ಪುರಾಣ ಅದರಲ್ಲೂ ಅಂಥದ್ದೇ.

ವಿಶ್ವಾಮಿತ್ರ ಅಂತೆ ಮೇನಕೆ ಅಂತೆ, ಶಂತನು ಅಂತೆ ಬೆಸ್ತರವಳಂತೆ, ಥೂ ಥೂ. ಒಳಗೆ ಮಾತ್ರ ದೇವರು ಕೂತುಕೊಂಡು, ಬಡ್ಡಿಮಗನೆ ಬೇಡ ಅಂತದೆ, ಮೊದಲಿಗೆ. ನೀನು ಯಾವ ದೇವರು ಮಹಾ, ಕಂಡಿದೇನೆ ಹೋಗೋ ಅಂತ ನಾವು ನಾಲ್ಕು ಸಲ ಅಟ್ಟಿದರಾಯಿತು, ಹಾಳಾಗಿ

ಹೋಗು ಅಂತ ಅದೂ ಬಾಯಿ ಮುಚ್ಚಿಕೊಂಡು, ತಮಾಷೆ ನೋಡುತ್ತ ಇರುತ್ತದೆ.

ದೊಡ್ಡೋರು ಅನ್ನಿಸಿಕೊಂಡಿರೋರು, ವಿದ್ಯಾವಂತರು, ಭಾರಿಭಾರಿ ನೌಕರೀಲಿರೋರು, ನಮ್ಮ ಮೆಷೀನ್‌ನಲ್ಲಿ ಇರೋ ನೂರಾರು ರೂಪಾಯಿ ಸಂಬಳದವರು, ಅವರೂ ಜಾರುತ್ತಾರೆ, ಎಷ್ಟೋ ಸಲ; ದೇವರು ದಿಂಡರು ಧರ್ಮ ಕರ್ಮ ಅಂತ ಉಪವಾಸ ಬಿದ್ದು, ಒಣಗಿಕೊಂಡಿದ್ದು, ನೂರು ಹೊತ್ತೂ ಮಂತ್ರ ಹೇಳುತ್ತಾ ಮೂಗು ಹಿಡಿದು ಕೂತವರೆಲ್ಲ ಉದ್ಧಾರಾಗಿ ರೋದು ಅಷ್ಟರಲ್ಲೇ ಇದೆ, ಅಂತ ನುಡೀತಾನೇ ಇರುತ್ತದೆ, ಹೃದಯ. ಸತ್ತಮೇಲೆ ಗಾಣಕ್ಕೆ ಹಾಕಿ ಅರೆಯೋದನ್ನ ತಪ್ಪಿಸಿಕೊಳ್ಳಬೇಕು ಅಂತ ಇಲ್ಲಿ ಒಳ್ಳೇ ಗಾಣದ ಎತ್ತಿನ ಹಾಗೆ ಬಾಯಿಗೆ ಕುಕ್ಕೆ ಕಟ್ಟಿಕೊಂಡು ಸಾಯಬೇಕೇನು? ಇರುವಷ್ಟು ದಿನ ಇದ್ದದ್ದನ್ನೆಲ್ಲ ಬಳಸಿಕೊಂಡು ಸುಖ ವಾಗಿರೋದು ಬಿಟ್ಟು ಅದು ತಪ್ಪು, ಇದು ಪಾಪ, ಅಂತ ತಾಪತ್ರಯ ಪಡೋದು ಯಾವ ಶೀಮೇ ನ್ಯಾಯ? ಅನ್ನಿಸುವುದು, ಒಂದೊಂದು ವೇಳೆ. ದೇವರು ಗೀವರು ಸ್ವರ್ಗ ಗಿರ್ಗ, ನರಕ ಗಿರಕ ಒಂದೂ ಇಲ್ಲ, ಅಂತ ಅನ್ನಿಸೋದು ನನಗೆ. ಕೊನೆಗೂ ಎಳೆದೇ ಬಿಡ್ತು, ಹಳ್ಳಕ್ಕೆ....

ಛೆ! ಈ ಊರು ಬಿಟ್ಟು ಬಿಡಬೇಕು, ಬೊಂಬಾಯಲ್ಲಾದರೆ ಭಾಷೆ ಗೀಷೆ ಏನೂ ತಿಳಿಯೋದಿಲ್ಲ, ಮಾತು ಕತೆ ಯಾವುದೂ ಗೊತ್ತಾಗೋದಿಲ್ಲ, ಅಲ್ಲಿಯ ಹೆಂಗಸರು ಹತ್ತಿರ ಬಂದರೆ ಮಾತಾಡಿಸೋದಕ್ಕೆ ಎದೆ ಡವ ಡವ ಅನ್ನುತ್ತೆ, ಅದೇ ಸರಿ ನನ್ನನ್ನ ಹತೋಟಿಯಲ್ಲಿರಿಸುವುದಕ್ಕೆ; ಅಲ್ಲಿ ಹೋಗಿ ಇನ್ನೊಂದು ಜನ್ಮ ಎತ್ತೋಣ, ಹೊಸ ಊರಾದರೆ ಹೊಸ ಆಳು, ಅಂತ ತೀರ್ಮಾನ ಮಾಡಿದೆ.

ಅಲ್ಲದೆ, ಇವಳ ಮುಂದೆ ಇನ್ನು ಹೇಗೆ ಮುಖ ತೋರಿಸುವುದು? ನನ್ನನ್ನೆನೋ ಇವಳು ಎರಡನೇ ಶ್ರೀರಾಮ ಅಂತಲೇ ತಿಳಿದಿದ್ದಾಳೆ.

ಇವಳಿಗೆ ಮೋಸ ಮಾಡಿ, ಗ್ರಾಸ್ತ ಅಂತ ಇನ್ನು ಇವಳ ಹತ್ರ ಲಲ್ಲೆ ಮಾಡೋದು ಹೇಗೆ, ಅನ್ನೋದು ದೊಡ್ಡ ಬಾಧೆ ನನಗೆ; ಅಲ್ಲದೆ, ಇಲ್ಲಿ ನನ್ನ ಹಿಡಿದಿದ್ದಳಲ್ಲಾ, ಒಬ್ಬಳು ಲಂಕಿಣಿ, ಅವಳ ಕಾಟಾನೂ ಬರುಬರುತ್ತಾ ಜಾಸ್ತಿಯಾಯಿತು. ಇದ್ದ ಕಾಸನ್ನೆಲ್ಲ ಕಿತ್ತುಕೊಂಡಳು. ಎಷ್ಟು ತೆತ್ತರೂ ದುರಾಸೆ. ಅದೂ ಅಲ್ಲದೆ, ಅವಳಿಗೆ ಹಾಳು ಗಂಡ ಇದಾನೆ, ಆ ಚಂಡಾಲ ಊರಿಗೆ ಹೋಗಿದ್ದವ ಇನ್ನೆಗಡು ದಿನಕ್ಕೆ ಬಂದುಬಿಡುತ್ತಾನೆ, ಅನ್ನೋ ಸಮಾಚಾರವನ್ನೂ ಅವಳೇ ಬೊಗಳಿದಳು. ಸರಿ! ಕಂಬಿ ಕೀಳೋದೆ ಮೇಲು. ಹಾಳು ಈ ಜನ್ಮ ಎಲ್ಲಾದರೂ ಸಾಗಲಿ, ಇನ್ನು ಹೆಣ್ಣಿನ ಸಾವಾಸಾನೇ ಬೇಡ, ಎತ್ತಲಾಗಾದರೂ ಈ ಘಟಾನ ಉರುಳಿಸಿಬಿಡೋಣ, ಅಂತ ಮನಸ್ಸು ಗಟ್ಟಿ ಮಾಡಿಕೊಂಡೆ. ಕರೀಕಲ್ ಆಂಜನೇಯನೆದುರು ಹೋಗಿ ನಿಂತು—ಇಲ್ಲ; ಎದುರಿಗೆ ನಿಲ್ಲಲು ನಾಚಿಕೆ, ಓರೆಯಾಗೀನೇ ನಿಂತೆ—ಪೂಜೆ ಮಾಡಿಸಿದೆ, ಹೋಗಲೇ? ಬೇಡವೆ? ಅಂತ ದೇವರನ್ನ ಕೇಳಿದೆ. ದೇವರ ಬಲಗೈಯಿಂದ ಒಂದು ಸಂಪಿಗೆ ಹೂವು ಕೆಳಕ್ಕೆ ಬಿತ್ತು. ಸರಿ, ಟಿಕೇಟ್ ತೆಗೆದುಕೊಳ್ಳೋದು ಅಂತ ನಿಶ್ಚಯಿಸಿದೆ. ದೇವರೇ ಹೊರಡು ಅಂದ, ನನ್ನನ್ನ....ಏಕೆಂದರೆ, ಅವಳ ಗಂಡ ಬಂದು, ನನ್ನ ಸುದ್ದಿ ತಿಳಿದರೆ, ನನ್ನನ್ನ ಉಳಿಸುವುದಕ್ಕೆ ದೇವರ ಕೈಯಲ್ಲೂ ಸಾಧ್ಯವಿಲ್ಲವೋ ಏನೋ? ಅಪ್ಪಳಿಸಿಬಿಟ್ಟೇನು, ಅಂತ ಕೈ ಎತ್ತಿ ನಿಂತಿದಾನೆ ಆಂಜನೇಯ, ಸರಿ! ಆದರೆ ಯಾರನ್ನ? ನಾಳೆ ಬರುವ ಗಂಡನನ್ನೋ, ಇವತ್ತು ಇರುವ ಮಿಂಡ ನನ್ನೋ?.....ಅವನ ಜವಾಬಿಗೆ ನಾನು ಕಾಯಲಿಲ್ಲ.

ಪುಣ್ಯಕ್ಕೆ ಅವತ್ತು ಶನಿವಾರ; ಬರುವ ವಾರದಿಂದ ನಾನು ಇರುವುದಿಲ್ಲ ಅಂತ ಅರಳಿಕಟ್ಟೆ ಮೇಲೆ ಕೂತಿದ್ದವರೊಬ್ಬರಿಂದ ಅರ್ಜಿ ಗುಜಾರಾಯಿಸಿ, ಸೆಕ್ಷನ್ ಸಾಹೇಬರಿಗೆ ಕೊಟ್ಟು, ಆಫೀಸಿನಿಂದ ವಾರದ ಕೂಲಿ ಪಡೆದುಕೊಂಡೆ; ಹೋಗೋದೇ ಉಂಟಂತೆ, ಮರ್ಯಾದೆಯಿಂದಾನೇ ಹೋಗೋಣ, ಅಂತ ನಮ್ಮ ಗುಂಪಿನವರಿಗೆ ಸುದ್ದೀನೇ ತಾಕಿಸಲಿಲ್ಲ; ಒಂದಿಷ್ಟು ಬಟ್ಟೆ ಗಿಟ್ಟೆ ಗಂಟು ಮಾಡಿಕೊಂಡೆ; ಮುಖಕ್ಷೌರ ಮಾಡಿಸಿಕೊಂಡೆ;

ಕಲಾಪತ್ತಿನ ಪಂಚೆ ಒಂದು ಕೊಂಡುಕೊಂಡೆ. ಕೊಂಚ ಜರ್ಬಿನಲ್ಲೇ ಹೋದರೆ, ನೂರಕ್ಕೆ ನೂರೈವತ್ತೂ ಕೊಡುತ್ತಾರೆ ಅಂತ ನನ್ನ ಊಹೆ. ಕಂತ್ರಿನಾಯಿ ಕಜ್ಜಿ ತುರಿಸಿಕೊಂಡು ಬಾಗಿಲಮುಂದೆ ಬಂದರೆ, ಕಲ್ಲೇ ಗತಿ; ಜಾತಿ ನಾಯಿ ಕಿಲೀನಾಗಿ ತೊಗಲಿನ ಪಟ್ಟಿ ಸಹಿತ ಬಾಲ ಆಡಿಸಿದರೆ, ಅದಕ್ಕೆ ಬಿಸ್ಕತ್ತು, ಹಾಲು. ಇದೇ ಜಗತ್ತಿನ ನಿಯಮ, ನನಗೆ ತಿಳಿದ ಮಟ್ಟಿಗೆ.

# ಬೊಂಬಾಯಿಗೆ

ಲೋ! ದೇವರು ಮಾಡಿದ ಹಾಗೆ ಮಾಡಿಸಿಕೋ, ಅಂತ ಹದಿಮೂರು ರೂಪಾಯಿ ಮೂರಾಣೆ ತೆತ್ತು ಅರಸೀಕೆರೇ ಮೇಲೆ ಬೊಂಬಾಯಿಗೆ ಅದೆಲ್ಲಿದೆಯೋ, ಎಂತೋ ಏನೋ, ವಿಚಾರ ಮಾಡದೆ, ಹೊರಟೇಬಿಟ್ಟೆ. ದಾರಿ ಉದ್ದಕ್ಕೂ ಗಾಡಿಯೊಳಗಿನ ಜನ ನಿನ್ನ ಹೆಸರೇನು, ಯಾವ ಊರು ಎಲ್ಲಿಗೆ ಏಕೆ ಅಂತ ಕೇಳುತ್ತಾನೇ ಇದ್ದರು. ನಾನು ಯಾರಿಗೂ ಬಿಟ್ಟು ಕೊಡಲಿಲ್ಲ ಗುಟ್ಟು, ಮುಂದಿನ ಸ್ಟೇಷನ್ನಿಗೆ, ಮದುವೆ ಲಗ್ನಕ್ಕೆ, ನಂಟರದು ಅಂತ ಬುರುಡೆ ಬಿಡುತ್ತಲೇ ಇದ್ದೆ. ನನಗೆ ಭಯ—ಎಲ್ಲಿ ನನ್ನ ಮನ ತಿರುಗಿಸಿ ಬಿಡ್ತಾರೋ, ಕೆಟ್ಟದ್ದು ನುಡಿದು ಬಿಡುತ್ತಾರೋ, ಅವಳಿಗೆ ಸುದ್ದಿ ಮುಟ್ಟಿಸಿ ಬಿಡುತ್ತಾರೋ ಅಂತ.

ಕೊನೆಗೆ ನನ್ನ ಕೈಯಲ್ಲೂ ತಡೆಯಲಿಕ್ಕಾಗಲಿಲ್ಲ. ಹುಬ್ಬಳ್ಳಿ ತನಕ ತಡೆದೆ, ಅಲ್ಲಿಂದಾಚೆ ಬೊಂಬಾಯಿಗೆ ಹೋಗೋ ಜನ ಜಾಸ್ತಿ. ಅವರನ್ನು ನೋಡುತ್ತಲೂ ನನಗೂ ಜಂಭ ಏರಿಬಿಡ್ತು ತಲೇಗೆ. ಹೌದು! ನಾನು ಬೊಂಬಾಯಿಗೇ ಹೋಗುತ್ತೇನೆ, ನಾನು ಬಟ್ಟೆ ಮೆಷೀನ್ ಕಲಿತಿದೇನೆ, ನನ್ನ ಬರಹೇಳಿದಾರೆ ನನ್ನ ದೋಸ್ತಿಯವರು, ಅಂದೆ. ನನ್ನ ಗುಮಾಸಿ ಇದ್ದ ಹಾಗೇನೇ, ಅವರೂನೂ ಬಗೆ ಬಗೆಯಾಗಿ ಹೆದರಿಸಿದರು. "ಅಲ್ಲವೋ ಗೌಡಾ! ನಿಜವಾಗಿಯೂ ನೀನು ಪೂರೈಸುತ್ತೀಯಾ?" ಅಂತ ಮೂಗಿನ ಮೇಲೆ ಬೆರಳಿಟ್ಟರು....ತಮ್ಮ ಮೂಗಿನ ಮೇಲೆ....; ಒಬ್ಬರ ಮುಖ ಒಬ್ಬರು ನೋಡುವುದಕ್ಕೆ ಹತ್ತಿದರು....ಆಕಡೆ ಯಾವುದಕ್ಕೂ 'ಹತ್ತು'ತ್ತಾರೆ....ಅವರಿಗೆಲ್ಲ ನನ್ನ ಜವಾಬು ಒಂದೇ, ಹೆಂಗೋ, ಏನೋ, ನನ್ನ ಜ್ಞಾನ ಅಂಟಿ ಹೋಗಿದೆ, ಬಿಡಿ, ನನ್ನ ಪಾಡು ನನಗೆ,

ನನ್ನ ಹಣೇ ಮೇಲೆ ಬರೆದಂತೆ ಆಗಲಿ....ನನ್ನ ತಲೆ ಪೂರ್ತ ಕೆಟ್ಟು ಹೋಗಿತ್ತು ಅನ್ನಿ. ಸಿನ್ನ ಊರು ಯಾವುದು ಅಂತ ಅವರು ಕೇಳಿದರೆ, ನನಗೆ ರೇಗೋದು. ಊರು ಕಟ್ಟಿಕೊಂಡು ಇನ್ನು ನನಗೇನಾಗಬೇಕು ? ಊರು ಕೇರಿ ಎಲ್ಲ ಎಲ್ಲೋ ಎದೆಯೊಳಗೆ ಮಸಕು ಮಸಕು. ಅವರು ಹೇಳಿದ ಬುದ್ಧಿವಾದವೆಲ್ಲ ಯಾರಿಗೆ ಬೇಕಾಗಿತ್ತು ? ಅವರೂ, ಪಾಪ, ಅಲ್ಲಿ ತಣ್ಣೀರು ಕುಡಿಯಬೇಡ, ಬರೀ ಹೊಟ್ಟೆಯಲ್ಲಿರಬೇಡ, ಬಾಟ್ಲಿ ಹೆಂಡ ಮುಟ್ಟಬೇಡ, ಕಂಡು ಕಂಡವರ ಹತ್ತಿರವೆಲ್ಲ ಸಲಿಗೆ ಬೆಳಸಬೇಡ, ಮುಂಚೇನೇ ಕೂಲಿ ಗೊತ್ತು ಮಾಡದೆ ಕುದುರೆ ಗಾಡಿಗಳಲ್ಲಿ ಕೂರಬೇಡ, ಗಾಡಿ ಹತ್ತುವ ಮೊದಲು ಕುದುರೆ ಹೊಡೆಯುವವನ ಕಿವಿ ನೋಡು, ಒಬ್ಬನೇ ಎಲ್ಲಿಗೂ ಕತ್ತಲಾದ ಮೇಲೆ ಗಂಟು ಇಟ್ಟುಕೊಂಡು ಹೋಗಬೇಡ, ಬೀಡ ಅಂತ ಭಂಗಿ ಸೇರಿಸಿ ಕೊಟ್ಟುಬಿಡುತ್ತಾರೆ, ಅದನ್ನಿಸುಕೊಂಡು ಮೆಲ್ಲಬೇಡ, ರಾತ್ರಿ ಕೆಲವು ರಸ್ತೆಗಳಲ್ಲೂ ತಿರುಗಬೇಡ ಎಂದೆಲ್ಲ ಎಚ್ಚರಿಕೆ ಕೊಟ್ಟರು. ಅವರ ಮಾತು ಕೇಳಿದರೆ, ಮನುಷ್ಯ ಮನುಷ್ಯನನ್ನೆ ಕಿತ್ತು ತಿನ್ನೋ ಕಟುಕರ ಊರು, ಕದೀಮರಿಗೂ ಕಳ್ಳರಿಗೂ ತವರೂರು, ಬೊಂಬಾಯಿ, ಅನ್ನಿಸೋದು ನನಗೆ. ಅಲ್ಲ ಸ್ವಾಮಿ ! ಎಂಥಾ ನರಕ ತಾನೇ ಇರಲಿ ಒಂದು ಊರು, ಅಲ್ಲೂ, ಬಾ ಕೂತುಕೊ, ಊಟ ಆಯಿತೆ, ಅಂತ ವಿಚಾರಿಸೋರು ಇರೋದಿಲ್ಲವೆ ? ತಾಯಿ ಅನ್ನೋ ಒಂದು ವಸ್ತು ಎದೆ ಹಾಲು ಕೊಟ್ಟು, ರಾಮನ ಕಥೆ, ಕ್ರಿಷ್ಣನ ಕಥೆ ಹಾಡಿ ತೊಟ್ಟಿಲು ತೂಗೋ ಯಾವ ಊರನ್ನೂವೆ ಕಾಲಿಂದ ತಲೇವರೆಗೂ ನರಕ ಅಂತ ನಾನೊಪ್ಪಲಾರೆ. ಅವರು ನನಗೆ ಹೇಳಿದ ಹೆದರಿಕೆ ಮಾತುಗಳು ನಿಜವಾದರೆ ಬೊಂಬಾಯಿಯಲ್ಲಿ ಒಬ್ಬನಿಗೂ ತಾಯಿ ಮಗ, ಅಣ್ಣ ತಮ್ಮ, ಇದ್ದಹಾಗೆಯೇ ತೋರಲಿಲ್ಲ. ಬೊಂಬಾಯಿಯಲ್ಲೂ ಗಂಡ ಹೆಂಡತಿ ಪ್ರೀತಿ ವಿಶ್ವಾಸ ಇರೋದಿಲ್ಲವೆ ? ಇದ್ದರೆ ತಾನೆ, ಮನೆ ಮಠ, ಬೀದಿ ಬಾಗಿಲು, ನಯ ನೀತಿ, ರಂಗೋಲಿ ದೀಪ ? "ಸರಿ, ಇವ ಒಬ್ಬ ಸಿಕ್ಕ ಹಳ್ಳೀ ಗಮಾರ, ಇವನನ್ನೊಂದಿಷ್ಟು ಚುಡಾಯಿಸಿ ಗಾಬರಿ ಪಡಿಸೋಣ, ರೈಲಿನ ಬೇಜಾರು ಕಳಿಯುತ್ತೆ, ಮೊದಲೇ ಪುಕ್ಕ ಅಂತ ತೋರುತ್ತೆ,

ಮೈಮೇಲೆ ಕಪ್ಪೆ ಎಸೆಯೋಣ, ಇವನನ್ನೊಂದಿಷ್ಟು ಕುಕ್ಕೋಣ'' ಅಂತ ಅವರು ಒಳಗೊಳಗೇ ನಿಶ್ಚಯ ಮಾಡಿಕೊಂಡಿರಬೇಕು ಅಂತ ನಾನೂನೂ ಓತಿಕ್ಯಾತನ ಹಾಗೆ ತಲೆ ಆಡಿಸುತ್ತಾ ಕೂತಿದ್ದೆ, ಅವರ ಮಾತಿಗೆಲ್ಲ. ಮಿರ್ಜ, ಬೆಳಗಾವಿ ತನಕಾನೇ ನಮ್ಮ ಮಾತು ಚಾಲ್ತಿ, ಅಲ್ಲಿಂದಾಚೆ ಅದೆಂಥಾದ್ದೋ ಸಾಂಗ್ರೆ ಗೂಂಗ್ರೆ ಅಂತಾರೆ ಮರಾಠಿಯಂತೆ, ಪೂಣೇದು. ಲೋಂಡ ಅನ್ನೋ ಸ್ಟೇಷನ್‌ನಲ್ಲಿ ಒಬ್ಬ ಚೌರದವ ಸಿಕ್ಕಿದ. ತನ್ನ ಗಲ್ಲದ ಮೇಲೆ ಬೆರಳಾಡಿಸುತ್ತ, ಇಳಿ ಮಾರಾಯ, ಇಲ್ಲೇ ಮಾಡ್ತೇನೆ, ಅಂದ. ತಕೋ ರಾಜಾ, ನಿನ್ನ ಸೇವೇನೂ ನಡೀಲಿ, ಅಂತ ಇನ್ನೊಂದು ಸಲ ಅಲ್ಲೇ ಮಾಡಿಸಿಕೊಂಡೆ. ಆಗ ನಾನು ಒಳ್ಳೇ ಕಟ್ಟಮಸ್ತಾಗಿದ್ದೆ ಅನ್ನಿ; ಪ್ರಾಯದ ಕಾಲ, ಭಾರಿ ಕಡಿದುಬಿಡುತ್ತೇನೆ, ದೂರ ದೇಶಕ್ಕೆಲ್ಲ ಹೋಗಿ ಶೀಮೇನ್ನೆಲ್ಲ ಗೆದ್ದುಬಿಡುತ್ತೇನೆ ಭೂಪ, ಎಂಬ ಖುಷಿ ಬೇರೆ. ಮುಖ ದಲ್ಲಿ ಒಳ್ಳೇ ಬೆಳಕು ಇತ್ತು, ಆಗ.

ಅತ್ತ ಕಡೆ ರೈಲು ಭೂಮಿ ಒಳಗಿಂದಾನೇ ಹೋಗುತ್ತೆ. ಒಳ ಗಿಂದೊಳಗೆ ಗವಿ ತೋಡಿ, ಆ ದಾರೀಲೇ ಎದೆ ಗಟ್ಟಿಮಾಡಿಕೊಂಡು ರೈಲನ್ನು ಬಿಡುತ್ತಾನೆ. ಕತ್ತಲು. ಇದೇ ಸಮಯ ಅಂತ ಗಂಟು ಹೊಡೀತಾರಲ್ಲಾ ಜನ ಅಂತ, ಅದರೊಳಕ್ಕೆ ಗಾಡಿ ಹೋಗುತ್ತಲೂ, ದೀಪ ಹಚ್ಚುತ್ತಾನೆ. ಆದರೆ ನನಗೆ ಅದು ಬೇಕಿರಲಿಲ್ಲ. ನಾನೇನು ಮಾಡಿದ್ದೆ, ಗೊತ್ತೆ? ಇಲ್ಲಿಂದ ಹೊರಡುವ ಮೊದಲೇ, ಲೋಟು ಗೀಟು ಎಲ್ಲಾನ್ನೂ ರಾಜನ ತಲೆ ಕಾಸು ಮಾಡಿ, ಇಮ್ಮಣ್ಣೆ ಚೀಲಕ್ಕೆ ಹಾಕಿ, ಸೊಂಟದಲ್ಲಿ ಬಿಗಿದಿದ್ದೆ. ಏನೂ ಇಲ್ಲದ ತಿರುಕನ ಹಾಗೆ, ಜಪ್ಪಯ್ಯ ಅಂತ ಕೂತಿದ್ದೆ. ಆದ್ದರಿಂದ ನಾನೇನೂ ಅಲ್ಲಾಡಲಿಲ್ಲ. ಹಗಲಲ್ಲೇ ರಾತ್ರಿ ಬಂದರೂ, ನನಗೇನೂ ಭಯ ಇಲ್ಲ.

ಅಂತೂ ಇಂತೂ, ದಾರಿ ಸವೆಯಲೇ ಇಲ್ಲ, ಇನ್ನೆಷ್ಟು ದೂರ ಇನ್ನೆಷ್ಟು ದೂರ ಅಂತ ಪಕ್ಕದವರನ್ನ ವಿಚಾರಿಸುತ್ತಲೇ ಇದ್ದೆ. ರೈಲಲ್ಲಿ

ಕೂತು ಹೋಗುವುದು ಎಲೆ ಅಡಿಕೆ ಜಗಿದು ಉಗುಳುವ ಹೊತ್ತು ಮಾತ್ರ ವಾದರೆ, ಚೆನ್ನ. ಇಲ್ಲ, ಟೇಶನ್ ಟೇಶನ್ನಿಗೂ ಮೈಲಿಗಿಂತ ದೂರ ಇರ ಬಾರದು. ಲಟಕ ಪಟಕ ಅಂತ ಹೊತ್ತು ಮೂಡುವಾಗಿನಿಂದ ಮುಳುಗು ವಾಗಿನವರೆಗೂ ತಿರುಗ ಮೂಡುವವರೆಗೂ ಚಕ್ರ ತಿರುಗುತ್ತಲೇ ಇದ್ದರೆ, ಆಕಳಿಸಿ ಆಕಳಿಸಿ ಸಾಕಾಗಿ ಹೋಗುತ್ತದೆ. ಗುಡಿಯೊಳಗೆ ಲಿಂಗ ಕೂತ ಹಾಗೆ ಕೂತಿದ್ದರೆ, ಅದೇನು ಸುಖ? ಆ ರೈಲೋ, ಬೆಟ್ಟ ಕಂಡರೆ ಹೆದರಿ ಪ್ರದಕ್ಷಿಣೆ ಮಾಡುತ್ತೆ; ಇಳಿಜಾರು ಅಂದರೆ, ಜೋಪಾನ; ಉತಾರ ಅಂದ್ರೆ ಉಬ್ಬಸ.

ನನ್ನ ಪಕ್ಕದಲ್ಲಿದ್ದವರು, "ಲೋ, ಗೌಡ! ಬೊಂಬಾಯಿ ಅಂದರೆ ನಿನ್ನ ಮಗ್ಗಲು ಹಳ್ಳಿ ಅಂತ ಇದ್ದೀಯೇನೋ?" ಅಂತ ನಗುವರು, ನನ್ನ ಪೇಚಾಟ ನೋಡಿ. ಇನ್ನೂ ನೂರು ಮೈಲಿ, ಇನ್ನೂ ಎಂಬತ್ತು ಮೈಲಿ, ಅಂತ ಲೆಕ್ಕ ಹೇಳುವರು. ಸುಮ್ಮನೆ ಬಿದ್ದುಕೊಳ್ಳೋ ಅನ್ನುವರು. ಬೆಂಚು ಖಾಲಿಯಾದಾಗ ರಂಗನಾಥದೇವರ ಹಾಗೆ ಕಾಲು ನೀಡುವೆ, ಅಷ್ಟರೊಳಗೆ ಕುರಿ ಮಂದೆ ನುಗ್ಗಿದ ಹಾಗೆ ನುಗ್ಗುವರು ಮಂದಿ; ಸರಿ! ಶಾಪ ಹಾಕುತ್ತ, ಎದ್ದು ಕೂರುವೆ ಗರುಡಪ್ಪನ ಹಾಗೆ.

ಕಿಟಕಿಯಾಚೆ ನೋಡುತ್ತ ಕೂತುಕೊಳ್ಳುವುದೆಂದರೆ, ನನಗೆ ಬಲು ಸಂತೋಷ. ಬೆಳಗ್ಗೆ ಮುಂಜಾನೆ, ಮೂಡಲಲ್ಲಿ ಕಿರಣ ತೋರುವುದೇ ಒಂದು ಚೆಂದ. ಸಂಜೆ ಹೊತ್ತು, ಮೋಡಗಳು ಮಾಡಿರುವ ಬಣ್ಣದ ಚಪ್ಪರದ ಕೆಳಗೆ ಸೂರ್ಯದೇವರು ಕೆಂಚಗೆ ಮುಖಮಾಡಿಕೊಂಡು, ರೇಗಿದ ಅಳಿಯನ ಹಾಗೆ ಹಸೇ ಮೇಲೆ ಕೂತಿರುವುದೇ ಒಂದು ಚೆಂದ. ಒಂದು ದಿನ ಏನಾಯ್ತು, ಅಂತೀರಾ. ಅದನ್ನ ನಾನು ಯಾವತ್ತೂ ಮರೆಯುವ ಹಾಗೆಯೇ ಇಲ್ಲ. ರಾತ್ರಿ ಎಲ್ಲ ತೂಕಡಿಸುತ್ತ ತಗಣೆ ಕಡಿತ ತಿನ್ನುತ್ತ ಅಕ್ಕಪಕ್ಕದವರ ತೋಳಿನ ಮೇಲೆ ತಲೆ ಇರಿಸಿ ಮೈ ಕೈ ಕೆರೆಯುತ್ತಾ ಇದ್ದೆ. ಬೆಳಕು ಹರಿಯುವುದಕ್ಕೂ, ಯಾವುದೋ ಒಂದು ಸಣ್ಣ ಊರು ಟೇಶನ್

ಸಿಕ್ಕುವುದಕ್ಕೂ ಟೈಂ ಸರಿಹೋಯ್ತು. ಆ ಟೇಶನ್ನ ಎಲ್ಲಿ ಕಟ್ಟಿದಾನೆ ಅಂದ್ರೆ, ಆದರ ಎಡಕ್ಕೊಂದು ಕರೀಕಲ್ ಗುಡ್ಡ, ಬಲಕ್ಕೊಂದು ಕರೀ ಕಲ್ ಗುಡ್ಡ, ಆತುಕೊಂಡಿದೆ, ಅದನ್ನ. ಠಣ್ ಅಂತ ಅವ ಗಂಟೆ ಹೊಡೆದರೆ, ಠಣ್ ಠಣ್ ಅಂತ ಎರಡು ಗುಡ್ಡಗಳೂ ಒಟ್ಟಿಗೆ ಕೂಗುವುವು, ಅದನ್ನಣಕಿಸಿ, ಟೇಶನ್ ಮುಂಭಾಗದಲ್ಲೇ ಹಳ್ಳ, ಆ ಹಳ್ಳದಲ್ಲೇ ಒಂದು ಕೂಗಿಗಾಚೆ, ಹಳ್ಳಿ. ಅಲ್ಲೇನು ಹೆಚ್ಚು ಹೊತ್ತು ನಿಲ್ಲಲಿಲ್ಲ ನಮ್ಮ ರೈಲು, ಎಳೆನೀರು ಕುಡಿದು ಮುಗಿಸುವಷ್ಟು ಕೂಡ ನಿಲ್ಲಲಿಲ್ಲ. ಆದರೂ, ನೋಡಿ, ಅಷ್ಟರೊಳಗೆ, ಆ ಹಳ್ಳಿ, ಅದರ ಮನೆಗಳು, ಅವುಗಳ ಸುತ್ತ ಎಂಥ ಗಂಜಿ ಕಾಯಿಸುತ್ತಿದಾರೆ ಅಂತ ಹೊಂಚು ಹಾಕುತ್ತ ಅಡುಗೆ ಮನೆ ಕಿಟಕಿಯಲ್ಲೇ ನೋಡುತ್ತ ಇದ್ದ ಹೊಗೆ, ಆ ಮನೆಗಳಿಂದ ಹಸುರು ನೆಲದ ಮೇಲೆ ನಡೆಮುಡಿ ಹಾಸಿದ ಹಾಗೆ ಟೇಶನ್ ಕಡೆಗೆ ಬರುತ್ತಿದ್ದ ರಸ್ತೆ, ಆ ರಸ್ತೇಲಿ ಓಡೋಡಿ ಬರುತ್ತಿದ್ದ, ಒಬ್ಬಳು ಹೆಂಗಸು, ಇಷ್ಟನ್ನೂ ನಾನು ಕಂಡೆ; ತುಂಬ ಪ್ರಾಯ ಆಕೆಗೆ. ಟೇಶನ್ ಮಾಸ್ತರ ಮನೆಗೆ ಹಾಲು ಕೊಡುವುದಕ್ಕೆ ಅಂತ ಓಡಿಬರುತ್ತಿದ್ದಳು ಅಂತ ಕಾಣುತ್ತೆ. ದೇವಲೋಕದ ರಂಭೆ ಅವಳ ಮುಂದೆ ಲಂಕಿಣಿ. ಆಗ ನನಗನ್ನಿಸಿತು, ಥೂ! ಈ ಬೊಂಬಾಯೀನೂ ಬೇಡ, ಈ ಗಡಿಬಿಡೀನೂ ಬೇಡ, ಹಾಯಾಗಿ ಆ ಹಳ್ಳಿಯಲ್ಲಿ ಒಂದು ಹಟ್ಟಿ ಕಟ್ಟಿಕೊಂಡು, ಆಕೇನ ಮದುವೆ ಮಾಡಿಕೊಂಡು ಲೋಕದ ಜಂಜಡಾನೆಲ್ಲ ಮರೆತುಬಿಡಬೇಕು, ಅಂತ.

ಅಲ್ಲಿಂದಾಚೆ ನಾಲ್ಕೈದು ಟೇಶನ್ ತನಕ ಆ ಕನಸು ನನ್ನಟ್ಟಿಸಿಕೊಂಡೇ ಬಂತು. ನನ್ನ ಕರ್ಮ ನಾನು ಅನುಭವಿಸಲೇ ಬೇಕಲ್ಲವೆ? ನಾನು ತಂದ ಬುತ್ತೀನ ನಾನು ಉಣ್ಣಲೇ ಬೇಕು; ಇನ್ನೊಂದಕ್ಕಾಸೆ ಪಟ್ಟರೆ, ಕೊಟ್ಟಾನೆಯೆ ಅವನು?

ಕಡೆಯ ನೂರು ಮೈಲಿ, ನಿಜಕ್ಕೂ ಸಾವಿರ ಅನ್ನಿಸಿಬಿಟ್ಟಿತು. ಅಂತೂ, ಬೊಂಬಾಯಿಗಿಂತ ಆಚೆಯಂತಲ್ಲಾ, ಕಾಶಿ! ಅದಕ್ಕೂ ಆಚೆಯಂತಲ್ಲಾ, ಭೀಮ ದುರ್ಯೋಧನ ಇಬ್ಬರೂ ಕಾಳಗ ಮಾಡಿದ ಜಾಗ,

ಕೃಷ್ಣ ತೇರು ನಡೆಸಿದ ಜಾಗ, ರಾಮನ ಪಟ್ಟಾಭಿಷೇಕ ಜರುಗಿದ ಜಾಗ.... ಎಷ್ಟು ಅಪಾರ ನಮ್ಮ ದೇಶ, ಇಲ್ಲಿಂದ ಅಲ್ಲಿಯ ತನಕ.

ಹಾಗೂ ಹೀಗೂ ಓಲಾಡುತ್ತ ತೂರಾಡುತ್ತ ಬೊಂಬಾಯಿ ಹತ್ತಿರಕ್ಕೆ ಹೋದ, ರೈಲಿನವ. ಗಾಡಿಯೊಳಗಿದ್ದವರೆಲ್ಲ, ಮಲಗಿದ್ದ ಕೂಸುಗಳೆನ್ನೆಬ್ಬಿಸಿ, ಎತ್ತಿಕೊಂಡರು. ಹಾಸಿಗೆ ಗಂಟು ಇಳಿಸಿ ಜೋಡಿಸಿ ಲೆಕ್ಕ ನೋಡಿಕೊಂಡರು. ಅಂಗಿ ಪೇಟ ಕೊಡವಿ ಸರಿಪಡಿಸಿ ಕೂತರು. ಬೆಂಚಿನ ಅಡಿಯಿಂದ ಪಾತ್ರೆ ಪದಾರ್ಥ ಇತ್ತಲಾಗೆ ಎಳೆದರು. ಆಗ, ನನಗೆ ತಿಳಿಯಿತು, ನಮ್ಮ ಕುಬೇರನ ಪಟ್ಟಣ ಸಿಕ್ಕೇ ಬಿಡ್ತು ಅಂತ.

ಅಲ್ಲಾ, ನಾನೆಲ್ಲಿಯವನು ? ನನ್ನಂಥ ಬಡಪಾಯಿ, ಹಳ್ಳೀಲಿ ಹುಟ್ಟಿದ ದಾಸಯ್ಯ, ಬೊಂಬಾಯಿ ಪಟ್ಟಣಕ್ಕೆ ಹೋಗುವುದಾದರೂ ದಿಟವೆ, ಸಾಧ್ಯವೆ, ಯಾರಾದರೂ ನಂಬುತ್ತಾರೆಯೆ ಅಂತ ಅನ್ನಿಸಿತು, ಎದೆ ಹೊಡೆದುಕೊಂಡಿತು, ಕಣ್ಣಲ್ಲಿ ಒಂದು ತೊಟ್ಟು ನೀರೂ ಸೇರಿತು. ಬಾಯಿಕಿಲ್ಲ ಅಂದ್ರು ಒಂದು ಸ್ಟೇಷನ್ನ. ಅದೇ ಬೊಂಬಾಯಿ ಅಂದರು. ಅಲ್ಲಿ ಇಳಿಯೋಣವೇ ಅಂತ ಎದ್ದು ಗಂಟನ್ನ ತಲೇ ಮೇಲಿಟ್ಟು ಬಾಗಿಲ ಕಡೆ ಸರಿದೆ. ಆಗ ಯಾರೋ, ಬೇಡ ತಮ್ಮ, ಇದಲ್ಲ ಜಾಗ, ಇಲ್ಲಿಂದ ನೀನು ಬಟ್ಟೆ ಮೆಷೀನ್‌ಗೆ ನಡೆದು ಪೂರೈಸುತ್ತೀಯ, ಬೋರಿ ಬಂದ್ರು ಅನ್ನೋದು ಬರುತ್ತಾ ಇದೆ, ಅಲ್ಲಿ ಇಳಿದರೆ ನಿನಗೆ ಸಲೀಸ್ ಅಂದ್ರು. ಅಲ್ಲೇ ನೋಡು ಅಂತ ದೂರ ಏನನ್ನೋ ತೋರಿಸಿದರು, ಸಮುದ್ರ ಬಂದು ಊರನ್ನೊತ್ತಿಕೊಂಡಿತ್ತು ; ನೋಡಿದೆಯಾ ಅಂದ್ರು ; ಅಲ್ಲಿಂದ ನಿನಗೆ ಓಡಾಡುವುದಕ್ಕೆಲ್ಲ ಸರಾಗ ಅಂದ್ರು. ನೋಡುತ್ತಾ ಕುಳಿತಿದ್ದೆ. ಬೋರಿ ಬಂದ್ರು ಬಂತು. ಆ ಗಲಾಟೇಲಿ ನಾನು ಮುಖ್ಯವಾದದ್ದನ್ನೇ ಮರೆತುಬಿಟ್ಟೆ. ಇಳಿಯುವುದಕ್ಕೆ ಮೊದಲು ತಿರುಪತಿ ವೆಂಕಟರಮಣ, ಮುತ್ತರಾಯಪ್ಪ, ಕರೀಕಲ್ ಆಂಜನೇಯ ಮೂರು ದೇವರನ್ನೂ ನೆನೆಸಿಕೊಂಡು ಎದೆಯೊಳಗೇನೇ ಅಡ್ಡ ಬೀಳಬೇಕು, ನನ್ನ ಹೊಟ್ಟೆ

ಮೇಲೆ ಹೋಡೀಬೇಡಿರಪ್ಪೋ ಅಂತ ಕೈಮುಗಿಯಬೇಕು ಅಂತ ಕನ್ನಡ ಶೀಮೆ ಮುಗೀತಲ್ಲಾ, ಅಲ್ಲೇ ಆ ತಾವೇ, ದೃಢ ಮಾಡಿಕೊಂಡಿದ್ದೆ. ಹಾಳು ತುತ್ತತುದೀಗೆ ಬಂದಾಗ ತತ್ತರಿಸಿ ಹೋಗುತ್ತದೆ ಮನಸ್ಸು; ಗಡಿಬಿಡೀಲಿ ಗಾಬರೀಲಿ, ಎಲ್ಲೆಲ್ಲೊ ಅಡ್ಡ ಜ್ಞಾನ, ಅದಕ್ಕೆ. ಮರೆತೇ ಹೋಯ್ತು. ಸರಕ್ಕನೆ ಯಾರದೋ ಬಾಲ ಹಿಡಿದು ಇಳಿದೇ ಬಿಟ್ಟೆ, ಬಲಗಾಲಿಟ್ಟೆನೋ ಎಡಗಾಲಿಟ್ಟೆನೋ, ನೆನಪೇ ಇಲ್ಲ. ಸೋನೂ, ಧೊಂಡೂ, ಕಾಕಾ, ಭಾಯೀ, ಅಂತೆಲ್ಲ ಕೂಗಿಕೊಂಡು, ಜನ ಪರದಾಡು ತ್ತಿದ್ದರು. ನನ್ನ ಹೆಸರು ಒಬ್ಬನೂ ಕೂಗಲಿಲ್ಲ. ಗೇಟಿನ ಹತ್ತಿರ, ಒಬ್ಬ ಇಂಗ್ಲೀಷಿ ನವನನ್ನ ನಿಲ್ಲಿಸಿದ್ದರು; ಎಲಾ! ಬಾಗಿಲು ಕಾಯುವುದಕ್ಕೆ ಪರಂಗಿಯವ ನನ್ನೇ ಸಾವಿರಾರು ರೂಪಾಯಿ ತೆತ್ತು ಮಡಗಿದಾನಲ್ಲಾ ಬೊಂಬಾಯಲ್ಲಿ, ಅಂದುಕೊಂಡೆ. ಅವನ ಕೈಗೆ ಟಿಕೇಟ್ ಕೊಟ್ಟೆ; ಯಾಕೋ ಬಂದೆ? ಯಾರು ಹೇಳಿದರೋ ಇಲ್ಲಿಗೆ ಬರುವುದಕ್ಕೆ, ಏನೋ ನಿನ್ನದು ಕೆಲಸ ಇಲ್ಲಿ, ಅಂತೆಲ್ಲ ಕೇಳದೆ ಮಾಡದೆ ಅವನು ನನ್ನನ್ನ ಬೊಂಬಾಯಿ ಯೊಳಕ್ಕೆ ಬಿಟ್ಟೇಬಿಟ್ಟ ಪುಣ್ಯಾತ್ಮ! ನಿದ್ದೇಲಿ ನಡೆಯುವವನ ಹಾಗೆ ಮುಂದಕ್ಕೆ ನಡೆದೆ. ರೈಲಿಂದ ಇಳಿದವರಿಗೆಲ್ಲ, ಅವರವರ ಕೆಲಸ ಅವರವರಿಗೆ, ಅತ್ತಕಡೆ ಇತ್ತಕಡೆ, ಚಲ್ಲಾಪಿಲ್ಲಿ. ಬಂದೆಯಾ ಬಾ, ಅನ್ನುವುದಕ್ಕೆ ಒಬ್ಬನೂ ಇರಲ್ಲಿಲ್ಲ ಅಲ್ಲಿ. ಎದ್ದೆಯಾ, ಊಟ ಆಯಿತೆ ಅಂತ, ವಿಚಾರಿ ಸುವವನೇ ಇರಲಿಲ್ಲ, ಅಲ್ಲಿ. ದಿಕ್ಕಿಲ್ಲ ದೆಸೆ ಇಲ್ಲ, ಗೊತ್ತಿಲ್ಲ ಗುರಿ ಅಲ್ಲ...........ದೇವರಾದರೂ ಕೈಹಿಡೀತಾನೆ ಅಂದ್ರೆ, ಅವನನ್ನೂ ನೆನೆಯಲಿಲ್ಲ; ದಡ್ಡ ನಾನು.

9]

# ಪುಟ್ಟಸಾತು

ಇನ್ನೇನು ? ಬೊಂಬಾಯಲ್ಲಿಳಿದೆ, ಗಿರಣಿಗೆ ಹೋದೆ, ಕೆಲಸಾನೂ ಸಿಕ್ಕಿತು, ಅಂತೀರಾ ? ಹಾಗಲ್ಲ ನಡೆದದ್ದು ; ಅದೊಂದು ದೊಡ್ಡ ರಾಮಾಣ್ಯ. ಕೂತುಕೊಳ್ಳಿ, ಹೇಳುತ್ತೇನೆ.

ಮೊದಲು ನನಗೆ ಕಾಟ ಕೊಟ್ಟದ್ದು, ಯಾವ ರೋಡು ಹಿಡಿದು ಹೋಗೋದು ಅನ್ನೋದು. ಆ ರೋಡುಗಳೋ, ಒಂದೇ ಚೌಕದಿಂದ ಎಂಟು ಮೂಲೆಗಳಿಗೂ ಹೋಗುತ್ತವೆ. ಒಂದೊಂದೂ ಒಂದೊಂದು ಮೈದಾನದಷ್ಟು ಅಗಲ. ಈ ದಡದಲ್ಲಿ ನಿಂತು ಕೂಗಿದರೆ ಆ ದಡದಲ್ಲಿ ನಿಂತವನಿಗೆ ಕೇಳಿಸುವುದಿಲ್ಲ. ನಡುವೆ ಗಾಡಿಗಳು, ಕಾರುಗಳು, ರೈಲೂವೆ, ಹೂಂ, ಇಂಜಿನಿಲ್ಲದ ರೈಲು ಬೇರೆ ಪುಟ್ಟದು ಕಂಬಿ ಮೇಲೆ ಘಣ ಘಣ ಅಂತ ಗಂಟೆ ಹೊಡೆದುಕೊಂಡು ಮುಂಗಾರಲ್ಲಿ ತುಂಬಿದ ಹೊಳೆ ಹರಿದ ಹಾಗೆ ಹರಿಯುವುದು. ಬೀದಿ ಆಚೆ ಈಚೆ ಬಂಗಲೆಗಳಿ ರೋವು ತಲೆಯ ಮೇಲೆ ಬೀಳೋ ಹಾಗೆ, ಆಕಾಶಕ್ಕೆ ತೂರಿಕೊಂಡು. ತಲೇ ಮೇಲಿನ ಚೌಕ ಬಿಗಿಯಾಗಿಲ್ಲದಿದ್ದರೆ ಮೇಲಿನ ಅಂತಸ್ತು ನೋಡುವಾಗ ಅದು ನೆಲದ ಮೇಲೆ ಬಿದ್ದೇ ಹೋಗುತ್ತದೆ. ಬಡವರ ಮನೆಗಳ ನಡುವೆ ಉಪ್ಪರಿಗೆ ಸಾಲು, ಕುರಿಮಂದೆ ನಡುವೆ ಹುಲಿ ಕೂತ ಹಾಗೆ. ರಸ್ತೆಗೆ ಕಾಲಿಟ್ಟರೆ, 'ಕೊಂದೇ ನೋಡಿಕೋ'—ಅಂತ ಅರಚಕೊಂಡು ಬರುತ್ತದೆ, ಸೈಕಲ್ಲು, ಗಾಡಿ, ಕುದುರೆ, ಕಾರು; ಎದೆ ಡವ ಡವ ಅಂತ ಹೊಡೆದು ಕೊಳ್ಳುತ್ತಾನೇ ಇರುತ್ತದೆ. ಪಂಚ ಪ್ರಾಣಗಳನ್ನೂ ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದೇ ಹಾಯಬೇಕು. ನಮ್ಮ ಬೆಂಗಳೂರು ಅದರ ಜೋಡಿ ನಿಲ್ಲಿಸಿದರೆ, ಹಾಳುಕೊಂಪೆ ; ಒಂದು ಊರಿನ ಮಹತ್ವ ತಿಳಿಯ ಬೇಕಾದರೆ ಇನ್ನೊಂದೂರು ನೋಡಬೇಕು ಅನ್ನಿ. ಎಲ್ಲರಿಗೂ ಅವರವರ

ಕೆಲಸವೇ ತುರುತು, ನಾನು ಯಾರನ್ನ ಕೇಳಿ ನನ್ನ ದಾರಿ ಹಿಡಿಯಲಿ? ನೀವೇನೋ ಸುಲಭವಾಗಿ ಹೇಳಿಬಿಡ್ತೀರಿ, ಯಾರನ್ನಾದರೂ ಕೇಳೋ ಕೇನೋ, ದಡ್ಡಾ, ಅಂತ. ಆಡೋದು ಸುಲಭ, ಮಾಡೋದು ಕಷ್ಟ. ಊರಿಗೆ ಹೊಸಬ, ಪೆದ್ದ ಅಂತ ನಾನೆ ಅವರ ಮುಂದೆ ಪಬ್ಲಿಕ್ ಮಾಡಿದರೆ, ಟೋಪಿ ಹಾಕೋ ಇಸಮ್ಮುಗಳಿಗೆ ಮುಂಡಾಸು ಬಿಚ್ಚಿ ತೋರಿಸಿದ ಹಾಗಲ್ಲವೇನು? ಅಲ್ಲೆಲ್ಲ ಜಂಟಲ್‌ಮನ್ನುಗಳೂ ಕೂಡ ಬರೀ ಮೋಸಗಾರರು, ಠಕ್ಕರು ಅಂತ ಬೇರೆ ರೈಲಿನಲ್ಲಿ ನನಗೆ ಹೇಳಿದ್ದರು. ಇಲ್ಲಿ ನಾನು ಹೋಗಿ ದಾರಿ ಕೇಳುವ ಇಸಮು, ಅವನೂನೂ ನನ್ನ ಹಾಗೇನೇ ಊರಿಗೆ ಹೊಸಬ ಆದರೆ? ಕುರುಡನಿಗೆ ಕುರುಡ ದಿಕ್ಕು ತೋರಿಸಿದ ಹಾಗಾಗೋಲ್ಲವೆ. ಅವ ಮುಂಗೋಪಿಯಾಗಿದ್ದರೆ ನನ್ನ ಪಾಡು? ಅಂಥದ್ದರಲ್ಲೂ, ಒಬ್ಬ ಪೋಲೀಸಪ್ಪನ ಹತ್ತಿರ ಹೋಗಿ 'ಗಿರಣಿ ಕಹೋ ಹೈ' ಅಂದೆ. ಆದರೆ, ನಾನು ಹೋದ ಹತ್ತಿರ ಸಾಲಲಿಲ್ಲವೋ ಏನೋ? ಅಥವ ನನ್ನ ಗಂಟಲಿನ ಎತ್ತರ ಸಾಲಲಿಲ್ಲವೋ ಏನೋ? ಇಲ್ಲ ಅವನ ಕಿವೀನೇ ಮಂದವೋ? ಇಲ್ಲ ರಸ್ತೆ ಮೇಲಿನ ಗಲಾಟೆ ಜಾಸ್ತಿಯೋ? ಆಯಪ್ಪ ಮರು ಮಾತೇ ಆಡಲಿಲ್ಲ. ಅವನ ಬೆನ್ನು ಒಂದು ಬಾರಿ ಬಳುಕಿತು ಅಷ್ಟೆ. ಬಿಡಪ್ಪಾ, ಅಂತ ಹಿಂದಕ್ಕೆರಡು ಹೆಜ್ಜೆ ಹಾಕಿದೆ. ಮತ್ತೆ ಅವನನ್ನ ಕಿವಿಯೋದಕ್ಕೂ ಭಯ. ಪಾದಕ್ಕೆ ಬಿದ್ದರೂ ನಾಗಪ್ಪ ಕಚ್ಚದೆ ಬಿಡ. ರಟ್ಟೆ ಮೇಲೆ ಕೈ ಹಾಕಿ, ಬಾರೋ ಮಾವನ ಮನೆಗೆ ಅಂದ್ರೆ ಆಮೇಲೇನು ಬಾಯಿ ಬಡಿದುಕೊಂಡರೆ ಬಿಡ್ತಾನೆಯೇ ಅವನು? ಕೈ ಬೆಚ್ಚಗೆ ಮಾಡೋಣ ಅಂದರೆ, ಅವನ ಕೈ ಎಷ್ಟು ತಂಪು ಅಂತ ನನಗೇನು ಗೊತ್ತು?

ಆ ಮೇಲೆ ಬಿಟ್ಟೆ ಆ ಪೋಲೀಸಪ್ಪನ ಸಹವಾಸಾನ. ಹ್ಯಾಟು ಬೂಟು ಇಕ್ಕಿರೋರನ್ನ ಕೇಳೋಕೆ ನಾಲಿಗೆ ಏಳಲಿಲ್ಲ. ಅವರೆಲ್ಲ ಕಾಸ್ ಪೀಸ್ ಅನ್ನುತ್ತಾ ಪರಂಗಿ ದೇಶದಿಂದ ಇಳಿದು ಬಂದಿರೋ ಇಂದ್ರ, ಚಂದ್ರ. ಅವರ ಕಣ್ಣಿಗೆ ನಾವೆಲ್ಲ ನಾಯಿಗಿಂತ ಕಡೆ. ಧೋತ್ರದವರೇ ಸರಿ ನನ್ನಂಥವರಿಗೆ, ಅಂದುಕೊಂಡೆ. ಆದರೆ ಅವ್ರೊಂದಕ್ಕೂ ನನ್ನ ಮಾತು

ಅರ್ಥವಾಗಲಿಲ್ಲ. ಕಡೆಗೆ ಬೀಡಿ ಬೀಡಾ ಚಿಲ್ಲರೆ ಅಂಗಡಿಯುವರೇ ಸರಿ ಅಂತ ಹೊಳೆಯಿತು. ಅಂಗಡಿಯುವರಾದರೆ ಗಿರಾಕಿಗಳಾಡೋ ಮಾತೆಲ್ಲ ಕಿವಿಗೆ ಬಿದ್ದು ಬಿದ್ದು ಎಲ್ಲಾ ಭಾಷೆಯ ಮೇಲೂ ನಿಗಾ ಇರುತ್ತದೆ. ಅರವಾನೂ ಆಡಬೇಕು, ಅವರು; ಕನ್ನಡಾನೂ ಆಡಬೇಕು. ಚಿಕ್ಕ ಪೇಟೇಲಿ ನನ್ನ ದೋಸ್ತಿಯೊಬ್ಬವ ಇದ್ದ; ಛಪ್ಪನ್ನೈವತ್ತಾರು ಭಾಷೇನೂ ಬರುವುದು.

ಇನ್ನು ಆ ಅಂಗಡಿಯವ ಸುಮ್ಮ ಸುಮ್ಮನೆ ಮಾತಾಡಿಸುತ್ತಾನೆಯೇ ಎರಡಾಣೆ ನಾಲ್ಕಾಣೆ ವ್ಯಾಪಾರ ಮಾಡದೆ? ನುಸುಳಿದೆ ಒಂದು ಕಡೆ. ಅಲ್ಲೊಂದು ಬಿಳೀ ಮೀಸೆಯ ಗೃಧ್ರ ಕೂತಿತ್ತು. ನನ್ನ ಗ್ರಹಚಾರಕ್ಕೆ ನೆರಳಿಗೆ ಅಂತ ಹೋಗಿ ಕೂತರೆ, ಮರ ಬೂರುಗ ಆಯಿತಲ್ಲಾ, ಅಂದು ಕೊಂಡೆ. ನುಗ್ಗಿದ ಮೇಲೆ ನಾಚಿಕೊಂಡು ಹಿಂದಕ್ಕೆ ಬರೋದುಂಟೆ? ಎರಡಾಣೆಗೆ ಬೀಡೀನೂ ವ್ಯಾಪಾರ ಮಾಡಿದೆ. ಆಮೇಲೆ ಕೇಳೇ ಬಿಡೋವ ಅಂತ ಕೆಮ್ಮುತ್ತ, ತಲೆ ಕೆರೆದೆ. ಆವ ಹೊರಕ್ಕೆ ಮಾತ್ರ ಹದ್ದು; ಹೃದಯ ಮಾತ್ರ ಗರುಡದೇವರದು. ಗಿರಾಕಿಗಳೂ ಇದ್ದರು ನಾಲ್ಕೈದು ಮಂದಿ; ಆದರೂ ನಯವಾಗಿ ಮಾತಾಡುವರು. ಹಿಂದೂಸ್ತಾನೀಲೇ ಹೇಳಿದರು, ಅಂತ ಕಾಣುತ್ತೆ. ಆ ಕಡೇ ಹಿಂದೂಸ್ತಾನಿಗೂ ನಮ್ಮ ಅರಳೇಪೇಟೇ ಹಿಂದೂಸ್ತಾನಿಗೂ ಹೊಂದಾಣಿಕೆಯೇ ಇಲ್ಲ. ಅವರೆಲ್ಲರೂ ಕಣ್ಣುಸನ್ನೆ ಮಾಡಿ ಕೈ ಬೀಸಿ, ಬೆರಳು ತೋರಿಸಿ, ಬಾಯಿ ಮಾತಾಡಿ ಕೊನೆಗೂ ನನ್ನ ತಲೆಯೊಳಕ್ಕೆ ವಿಷಯ ತುರುಕಿದರು ಅನ್ನಿ. ಏನೇನೋ ಅಂದರು, ಮಾರುದ್ದ, ಅವರು; ಕೊನೆಗೆ ಅಲ್ಲೆಲ್ಲೂ ಇಲ್ಲ, ಅತ್ತಲಾಗೆಲ್ಲೋ ಇದೆ, ಬಲಗಡೆ, ದೂರ, ಬಲು ದೂರದಲ್ಲಿ ಅನ್ನುವುದು ಮಾತ್ರ ಅರ್ಥ ವಾಯಿತು. ನನಗೆ ಬೇಕಾಗಿದ್ದುದೂ ಅಷ್ಟೇ ತಾನೆ? ಅತ್ತಲಾಗೆ ಹೋದೆ, ನಾನು. ಇನ್ನೂ ಒಸಿ ಅತ್ತಲಾಗೆ ಅಂದರು. "ನೋಡೋ ಅಲ್ಲಿ, ಬೆಟ್ಟ ಕೆರೆ ಗುಡ್ಡ ಕಲ್ಲು ಗುಂಪಾಗಿವೆಯಲ್ಲಾ, ಅಲ್ಲಿ....ಅಲ್ಲೇ ಅವೇ ಗಿರಣಿಗಳು.... ಇಲ್ಲಿಂದೆಲ್ಲ ಬೆಳ್ಳಂಬೆಳಗೂ ಲಾರಿಗಳಲ್ಲಿ ತುಂಬಿಕೊಂಡು ಹೋಗ್ತಾರೆ

ಜನಾನ. ಕುರ್ಲಾಘಾಟ್ ಕೂಪ್ರಾ ಅಂತ ಹೇಳಿಕೊಂಡು ಹೋಗು" ಅಂದ, ಅಲ್ಲೊಬ್ಬ ಅಂಗಡಿಯವ. ಪ್ರಯಾಸ ಪಡದೆ ಪ್ರಯಾಗ ಸಿಕ್ಕುತ್ತದೆಯೇ? ತುಂಬಾ ತ್ರಾಸ ಪಟ್ಟುಬಿಟ್ಟೆ, ಸ್ವಾಮಿ, ನಾನು ಫೂ ಫೂ ಫು.... ಅಷ್ಟು ದೂರ ಅತ್ತಲಾಗೆ ನಡೆಯೋದು; ಸುಸ್ತಾದಾಗ ಕೂರೋದು; ಕೂತರೆ ಸರಿ, ಪೋಲೀಸಿನವರು ಬಂದು ಅಟ್ರ ಪುಟ್ರ ಹೆದರಿಸೋದು! ಬೊಂಬಾಯಲ್ಲೇನು, ಒಂದು ಛತ್ರ ಇಲ್ಲ, ಒಂದು ಧರ್ಮಶಾಲೆ ಇಲ್ಲ, ಇದ್ದರೂ ನನ್ನ ಪಾಲಿಗೆ ಬರಲಿಲ್ಲ. ಒಂದು ಜಗಲಿ ಇಲ್ಲ, ಅರಳಿಕಟ್ಟೆ ಇಲ್ಲ, ನಾಯಿಗಿಂತ ಕಡೆಯಾಗಿ ಹೋದೆ. ಗಿರಣೀನೂ ಸಿಗಲಿಲ್ಲ, ನೌಕರೀಗೂ ಸೊನ್ನೆ. ಬಟ್ಟೆ ಎಲ್ಲಾ ಕೊಳೆ. ಗಂಟೂ ಕೂಡ ಕರಗ್ತಾ ಬಂತು. ಒಂದು ತಿಂಗಳವರೆಗೂ, ಹೀಗೇನೇ; ಕನ್ನಡ ಮಾತ್ನಾಡೋದೇ ಮರೆತುಬಿಟ್ಟೆ.

ಬೀದಿ ಕೊಳಾಯಲ್ಲಿ ಮುಖಾ ತೊಳೆದುಕೊಳ್ಳೋದು, ಹೋಟಲ್ನೋ ಅಂಗಡೀನ್ನೋ ನೋಡಿಕೊಂಡು ನುಗ್ಗೋದು. ಈವಾಗಿನಷ್ಟು ನಷ್ಟ ಇಲ್ಲ ಆಗ. ಪುರಿ ಕಡಲೆ ಮೂರುಕಾಸಿಗೆ, ಅಲ್ಲಿ ಅದಕ್ಕೆ ಏಕ್ ಪೈಸಾನ್ನೋರು—ಅಷ್ಟಕ್ಕೇ ತೆಗೆದುಕೊಂಡರೆ, ಈಗ ನಮಗೆ ಒಂದು ಮುಕ್ಕಿಗೂ ಸಾಲೊಲ್ಲ—ಆಗ, ಇಲ್ಲಿಂದ ಅಲ್ಲೀತನಕ ತಿನ್ನಬಹುದು, ಹಿಡಿ ಹಿಡಿ ಎಸೆಯುತ್ತಾ ಇದ್ದರೆ. ಇನ್ನೇನು? ಗೆಯ್ಮೆ ಇಲ್ಲ, ಗೆತ್ತಿಲ್ಲ. ಮೆಲ್ಲಮೆಲ್ಲಗೆ ತಿರುಗುವೆ? ಎರಡೂ ಕಡೆ ನೋಡಿಕೊಂಡೇ ಹೋಗುವೆ. ಬೋರ್ಡು ಹಾಕಿರುವರಲ್ಲಾ ಮನೇ ಬಾಗಿಲಲ್ಲಿ, ಅದ್ನೆಲ್ಲ ಭಾಷೆ ಬರದೇ ಇದ್ದರೂ ಓದೋವನ ಹಾಗೆ ಅಲ್ಲೇ ನಿಂತಿರುವೆ. ಯಾರಾದರೂ, ಜಾವು, ಎಂದರೆ, ನೌಕರಿ ಇದೆಯೆ, ತೋಟಕ್ಕೆ ನೀರು ಹಾಕ್ತೇನೆ, ಹಂ, ಮಾಲೀ, ಹೂಂ, ಎನ್ನುವೆ. ನನ್ನ ಮಾತು ಕೇಳುತ್ತಲೂ ಅವರು ಒಳಕ್ಕೆ ಹೋಗಿ ಬಾಗಿಲು ಬಡಿಯುವರು ಮುಖಕ್ಕೆ. ಚಾ ಪೀಯೋ ಅನ್ನೋರು ಕೈಗಾಡಿಯವರು, ಕೊಡ್ಲಾ ಒಂದು ಕಪ್ಪಾ ಅನ್ನುವೆ. ದೋ ಪೈಸಾ, ಅನ್ನೋರು. ಕುಡಿದು ಬಿಟ್ಟು ಕಾಸು ಬಿಸಾಕುವೆ. ಭಾತ್ ತೆಕ್ಕೊಳ್ಳುವೆ. ಕಾಗೆ ಕೂರಲಿ, ಬಿಸಿಲು ಬೀಳಲಿ ಅಂತ ಚೌಕದಲ್ಲಿ ನಿಲ್ಲಿಸಿರೊ ಘಾತುಕರ ಕಲ್ಲುಗೊಂಬೆಗಳೆದುರು ನಿಂತು,

ಏನು ತಪ್ಪು ಮಾಡಿದೆಯೋ ಪಾಪಿ ಈ ಶಿಕ್ಷೆಗೆ ಅಂತ ಕೊರಗುವೆ. ಸುತ್ತಿ ಸುತ್ತಿ ಸಾಕಾದರೆ, ತಣ್ಣಗೆ ಗಾಳಿ ಬೀಸುತ್ತದಲ್ಲಾ, ಸಮುದ್ರದಂಚಿನಲ್ಲಿ, ಅಲ್ಲಿಗೆ ಹೋಗಿ ಕೂರುವೆ. ಹಗಲೆಲ್ಲ ಫೋಟೋ ಹಿಡಿದ ಹಾಗೆ ಅಲ್ಲಾಡದೆ ನಿಂತಿರುವುದು ಗಿಡ ಮರ ಎಲ್ಲ. ಆದರೆ, ಸಂಜೆಗೆ ಗಾಳಿ ಸಮುದ್ರದ ದಂಡೇಲಿ ಚೆನ್ನಾಗಿ ಬೀಸುತ್ತೆ. ಆಹ! ಆ ಸಮುದ್ರ ಇದೆಯಲ್ಲಾ, ಬೊಂಬಾಯಿ ಸಮುದ್ರ! ಪರಮಾತ್ಮ ಏನು ಸೊಗಸಾಗಿ ಮಾಡವ್ನೆ ? ಸ್ವಾಮಿ! ಎಷ್ಟು ನೀರು ತುಂಬವನೆ! ಕುಡಿದು ಹಾಳುಮಾಡ್ತಾರೆ ಜನ ಅಂತ ತುಂಬ ಉಪ್ಪು ಬೆರೆಸಿ ಮಡಗವನೆ. ನಮ್ಮ ಕನ್ನಾಂಬಾಡಿ ಬುಕ್ಕಸಮುದ್ರ ನೀಲಸಂದ್ರ ಸೂಳೇಕೆರೆ ಎಲ್ಲಾ ಅದರ ಮುಂದೆ ಗುಟುಕುನೀರು ...ಪಾಪಿ ಸಮುದ್ರಕ್ಕೆ ಹೋದರೆ ಮೊಳಕಾಲು ನೀರು. ಆದರೆ, ಪುಣ್ಯಾತ್ಮರಾದರೆ, ಮುಳುಗೇ ಹೋಗ್ತಾರೆ. ಹನುಮಂತ ಹಾರಿದ್ದೂ ಅದರಂತೆಯೇ ಇನ್ನೊಂದು ಸಮುದ್ರಾನ ಅಂತಲ್ಲಾ! ಹಾ!! ನೋಟ ಓಡಿದ ಕಡೇನೆಲ್ಲ ನೀರೇನೆ! ನೋಡೋ ನನ್ನ ದರ್ಶನ, ಅಂತ ನಾವಿದ್ದ ಕಡೇಗೇ ಧಾವಿಸಿಕೊಂಡು ಬರುತ್ತೆ, ಹಲ್ಲು ಕಿರೀತಾ! ನಾವು ಸಿಕ್ಕಲೊಲ್ಲೆವು, ಅದು ಸುಮ್ಮನಿರ ಲೊಲ್ಲದು. ಎಳೆದುಕೊಳ್ಳುತ್ತೇನೆ ಅನ್ನುತ್ತದೆ ದೊಡ್ಡ ಜೀವ, ಉಳಿದು ಕೊಳ್ಳುತ್ತೇನೆ ಅನ್ನುತ್ತದೆ ಸಣ್ಣ ಜೀವ....ದೇವರು ದೊಡ್ಡವನು, ಅಂತ ನಾನು ತಿರುಪತೀಲೇ ತಿಳಿದುಕೊಂಡುಬಿಟ್ಟಿದ್ದೆ, ಮೂರು ಮೊಳದ ಈ ನರಮನುಷ್ಯ ಅಂಥ ಬೆಟ್ಟದ ಮೇಲೆ, ಆನೆ ಗಾತ್ರದ ಕಲ್ಲುಬಂಡೆಗಳನ್ನ ಕಡಿದು ಪೇರಿಸಿ ಅಂಥ ತೆಂಗಿನ ಮರದೆತ್ತರ ಗೋಪುರ ಕಟ್ಟಬೇಕಾದರೆ, ಅವನ ಎದೆಗೆ ಭಕ್ತಿ ತಲೆಗೆ ಬುದ್ಧಿ ತೋಳಿಗೆ ಬಲ ಬೆರಳಿಗೆ ನಯ, ಎಲ್ಲ ಅವನೇ ಕೊಟ್ಟ, ಅಲ್ಲವೆ ? ಎಡವಿ ಬಿದ್ದರೆ ಮಂಡಿ ಮುರಿದುಕೊಳ್ಳುವ ಈ ಮೂರು ಮೊಳದ ನರ ಪ್ರಾಣಿಗೆ ಹುಚ್ಚು ಹಿಡಿಸೋನೂ ಅವನೇ! ಕೆಚ್ಚು ತುಂಬುವವನೂ ಅವನೇ! ಕುಣಿಸುವವನೂ ಅವನೇ! ದಣಿಸುವವನೂ ಅವನೇ!

ಆದರೆ, ಒಂದು ಮಾತು. ಆ ಸಮುದ್ರದ ಮುಂದೆ ಯಾವ ಜಂಕಣಾಚಾರಿ ಗುಡೀನೂವೇ ಹಿಡಿ ಮಣ್ಣು! ನನಗೇನೋ ಹಾಗನ್ನಿಸಿ

ಬಿಟ್ಟಿತು. ನೀವೊಂದು ಸಲ ನೋಡಿ ಬನ್ನಿ. ಈಚೆಗೆ ಎದ್ದು ಬರಬೇಕು ಅನ್ನಿಸೋದೇ ಇಲ್ಲ, ನಮ್ಮಪ್ಪನ ಆರ್ಭಟ ಕೇಳಿದರೆ; ಮತ್ತುಹಿಡಿದು ಬಿಡ್ತದೆ, ತಲೇಗೆ. ನಮ್ಮ ಮೈಸೂರು ಸೀಮೇಲಿ ಸಮುದ್ರ ಇಲ್ಲದೆ ಇರೋದು ನಮ್ಮ ದುರಾದೃಷ್ಟ.

ತುಂಬಿದ ಕೊಡ ತುಳುಕುವುದಿಲ್ಲ, ಅಂತಾರೆ! ಸುಳ್ಳು! ತುಂಬಿದ ಸಮುದ್ರ ತುಳುಕುತ್ತೆ ಬಳುಕುತ್ತೆ ಹಾಡುತ್ತೆ ಕುಣಿಯುತ್ತೆ ಗರ್ಜನೆ ಮಾಡುತ್ತೆ. ಎದೆಯಾಗಿನ ಅಂಜುಬುರುಕುತನಾನೆಲ್ಲ ಉಧಾಯಿಸ್ತದೆ.

ಅಲ್ಲಿ, ಮರಳು ಹಾಸಿರುವ ಮೈದಾನದ ಮೇಲೆ, ಟೇಬಿಲ್ ಹತ್ತಿ ನಿಂತು, ಒಂದಿಷ್ಟು ಜನ, ದಿನವೂ, ಭಾಷಣ ಮಾಡುತ್ತಿರುತ್ತಾರೆ, ಜನ ಬೆದರುವ ತನಕ. ಸಮುದ್ರದ ಮುಂದೆ ಇವರದೇನು ಘೋಷ ಅಂತೀನಿ! ಎದೆ ಉಬ್ಬಬೇಕಾದರೆ, ನಮ್ಮ ಜೀವ ಎಷ್ಟು ದೊಡ್ಡದು, ನಮ್ಮಪ್ಪನ ಮೈಮೆ ಎಷ್ಟು ಅಪಾರ ಅಂತ ತಿಳೀಬೇಕಾದರೆ, ಟೇಬಿಲ್ ಮೇಲೆ ನಿಂತು ಕೂಗುವವರ ಕಡೆ ತಿರುಗದೆ, ಸಮುದ್ರದ ಕಡೆ ತಿರುಗಬೇಕು. ರಂಗನ ಮುಂದೆ ಶಿಂಗನೆ ಅಂತಾರೆ; ಆದರೂ ಆ ಶಿಂಗನ ಕಡೇನೇ ತಿರುಗುತ್ತಾರೆ, ಅಲ್ಲಿಯುವರೆಲ್ಲ.

ಆ ಸಮುದ್ರದ ಹೊಟ್ಟೆಯೊಳಗೆ, ಏನೇನಡಗಿದೆಯೋ, ಕಂಡವರು ಯಾರು? ತಿಮಿಂಗಿಲ ಇರಬಹುದು, ಮೈನಾಕ ಪರ್ವತ ಇರಬಹುದು; ನಾಗಲೋಕ ಇರಬಹುದು. ಶ್ರೀ ಕೃಷ್ಣನ ದ್ವಾರಕಾಪುರೀನ್ನೇ ನುಂಗಿ ಬಿಟ್ಟಿದೆಯಂತೆ, ಸಮುದ್ರ. ಇನ್ನು ಯಾವುದು ಶಾಶ್ವತ ಅಂತೀನಿ! ಅಲ್ಲಾ! ಇಂಥ ಸಮುದ್ರ ಬಳಸಿಕೊಂಡಿರೋ ಅಂಗೈಯಗಲ ನೆಲ ನೆಚ್ಚಿ ಕೊಂಡು ನಾವು ಪತ್ರ, ರೆಜಿಸ್ಟ್ರಾಫೀಸು, ಕೋರ್ಟು, ಕಚೇರಿ, ಕೌಲು ಕರಾರು ಅಂತ ಜಮೀನಿಗಾಗಿ ಜಗಳ ಆಡ್ತೇವಲ್ಲಾ, ಮಂಕರಲ್ಲದೆ ಇನ್ನೇನು?

ಅಂಥ ಪ್ರತಾಪ ಇರೋ ಸೂರ್ಯನಾರಾಯಣನನ್ನೇ ನುಂಗಿ ಬಿಡ್ತದೆ, ಸಮುದ್ರ, ಬೊಂಬಾಯಲ್ಲಿ!

ಸಮುದ್ರಾನೂ ಕಾಣಿಸದ ಹಾಗೆ ಕತ್ತಲೆ ಕವಿದುಬಿಟ್ಟರೆ, ಭೂಮಿ ತಾಯಿಯ ಹಾಗೇ, ನಾನೂನೂ ಕರೀ ಕಂಬಳಿ ಹೊದ್ದು ಬಿದ್ದುಕೊಳ್ಳುವೆ, ಯಾವುದಾದರೂ ಒಂದು ಅಂಗಡಿ ಹಜಾರದಲ್ಲಿ. ಇವತ್ತೊಂದು ಹಜಾರ, ನಾಳೆ ಇನ್ನೊಂದು. ಯಾವನಾದರೂ, ಹೋಯ್ ಅಂತ ಗದರಿಸಿದರೆ ಬಾಲ ಮುದುರಿಕೊಂಡು, ಕುಂಟುತ್ತ, ಬಟ್ಟ ಬಯಲಲ್ಲೇ ಮಲಗುವೆ.

ಬಿಡಿ, ಸ್ವಾಮಿ! ಯಾವ ಯಾವ ಊರು ಆಕಾಶದ ಕೆಳಗೆ ಮಲಗಿದ್ದುಂಟೋ, ನಾನು. ಲೆಕ್ಕ ಹಾಕಿದರೆ, ನಗು ಬರುತ್ತೆ........ ಮಲಗಿ ನಿದ್ದೆ ಹತ್ತದೆ ಇದ್ದರೆ, ಯೋಚನೆ ಮಾಡುವೆ....... ನನ್ನದೇನು ಮಹಾ! ದಶರಥನ ಮಗನಾಗಿ ಹುಟ್ಟಿ, ಜನಕ ಮಾರಾಯನನ್ನೇ ಹೆಣ್ಣು ಕೊಟ್ಟ ಮಾವನಾಗಿ ಪಡೆದು, ರಾಮನಿಗೂ ಬಂತಲ್ಲಾ, ಇದೇ ಗೋಳು! ಅರಿಶ್ಚಂದ್ರನಿಗೆ ಏನು ಕಮ್ಮಿ ಇತ್ತು? ನಳ ಮಾರಾಯನೇನು ಬಿಟ್ಟಿ ಬಿದ್ದು ಹೋದನೆ?........ಬಂದದ್ದನ್ನೆಲ್ಲ ಬಾ ಅನ್ನೋದೇ ಮೇಲು. ಮೇಲೆ ಬೀಳುವ ಅಲೆಗೆ ಅದರ ಮೇಲಕ್ಕೆ ತೇಲೋದೇ ಉಪಾಯ. ಸುಖ ಬಂದರೂ ಹೂಂ ಅನ್ನೋದು; ದುಃಖ ಬಂದರೂ ಹೂಂ ಅನ್ನೋದು. ಅದೀಗ ಬದುಕೋ ದಾರಿ. ಅದು ಬಿಟ್ಟು, ನಾನೂನು ನೈಜಾಮ ನಾಗಬೇಕು ಅಂದ್ರೆ, ಅವರ ಪಲ್ಲಕ್ಕಿ ಹೊರೋರು ಯಾರು, ತಂಬಾಕಿನ ಚೀಲ ರೆಡಿ ಮಾಡೋರು ಯಾರು, ಡಿರೆಸ್ ಮಾಡೋರು ಯಾರು, ಸೆಂಟ್ ಹಚ್ಚೋರು ಯಾರು, ನಜರ್ ಒಪ್ಪಿಸುವವರು ಯಾರು, ಹೊಗಳು ಭಟ್ಟರೆಲ್ಲಿಂದ..........? ಹೊರು ಅಂತಾನೆ, ದೇವನು ಒಬ್ಬನಿಗೆ; ಇಳಿಸು ಅಂತಾನೆ, ಇನ್ನೊಬ್ಬನಿಗೆ. ನಾವು ಯಾರು, ಅವನ ಆರ್ಡರ್ನ್ನ ಅದಲು ಬದಲು ಮಾಡೋಕೆ? ನಾವೇ ಸ್ವತಃ ಬಂದೆವೇನು ಇಲ್ಲಿಗೆ, ನಮ್ಮ ದೇಶ ನಮ್ಮ ಕುಲ ನಮ್ಮ ಕಸಬು ಇಂಥಿಂಥಾದ್ದು ಅಂತ ಆರಿಸಿಕೊಂಡು?

ಅಷ್ಟರಲ್ಲಿ, ನಿದ್ದೆ ಬರೋದು; ನಾನು ಬದುಕುವೆ. ನೋಡಿ ಸ್ವಾಮಿ, ನಿದ್ದೆ ಎಂಬ ಮದ್ದನ್ನ ನಮಗೆ ದಿನವೂ ದೇವರು ತಿನ್ನಿಸಿದನೋ, ನಾವು ಬದುಕಿದೆವು. ರಾತ್ರಿ ಕಗ್ಗತ್ತಲಾಯಿತು ಅಂದ್ರೆ, ಮೇಲುಗಣ್ಣು ತೇಲು ಗಣ್ಣಾಗಿ, ಮನುಷ್ಯ ಅಡ್ಡ ಆಗ್ತಾನೆ. ನಿದ್ದೆ ಬರದೆ ಇದ್ದವನು ರೋಗಿ ಅಥವ ಯೋಗಿ, ಅಥವ ದೇವರು. ಅವತ್ತವತ್ತಿನ ಆಸೆ ಆತಂಕ ಜಗಳ ಕದನ ಭಯ ಭೀತಿ ಪಳಾನು ಪಿತೂರಿ ಮುಝು ಮುರುಕ ಮಾನ ಅವಮಾನ ಎಲ್ಲಾನ್ನೂ ಗಂಟುಕಟ್ಟಿ ಮಡಗಿ, ಮನುಷ್ಯ ಅವನ ಒಳಗಿ ದಾನಲ್ಲಾ ಅಂತರಾತ್ಮ, ಅವನ ಕೂಡ ಬಿಂ ಅಂತ ಆನಂದವಾಗಿರುತ್ತಾನೆ, ನಿದ್ದೆಯಲ್ಲಿ. ರಾಜನಾಗಲಿ ರಾಯಸದವನಾಗಲಿ, ಚಕ್ರವರ್ತಿಯಾಗಲಿ ಚಕ್ರನಾಗಲಿ, ಎಲ್ಲರದೂ ಅಂತರಾತ್ಮ ಒಂದೇ; ಅಂತರಾತ್ಮನ ಕೂಡ ಅನುಭವಿಸುವ ಆನಂದವೂ ಒಂದೇ. ಹೆಣ್ಣು ಗಂಡು ಮಗು ಮುದುಕ ಕಟುಕ ಸಂನ್ಯಾಸಿ ಪರಂಗಿ ಪರದೇಶಿ ಹಿಟ್ಲರ್ ನೆಹರು ಎಲ್ಲರಿಗೂ ಅದೊಂದು ಅವಕಾಶ ಹಂಚಿದಾನೆ ದೇವರು, ತನ್ನಲ್ಲೇ ಮುಳುಗಿ ತಾನೇ ತಾನಾಗಿರುವುದಕ್ಕೆ. ಆಗ ಏನು? ಎಲ್ಲರ ಮನಸ್ಸೂ ಶುದ್ಧ; ಎಲ್ಲರ ಆಸೇನೂ ಬರಿದು; ನಾನು ನನ್ನದು ಎಂಬ ಅಹಂಕಾರಾನೇ ಇಲ್ಲ—ಎಲ್ಲರೂ ಒಂದೇ ಹೊಳೇಲಿ ಈಜುವ ಮೀನುಗಳು.

ಎಂಥ ನಿದ್ದೆ ಬರುವುದು ಅಂತೀರಾ, ನನಗೆ ಬೊಂಬಾಯಲ್ಲಿ? ಮಲಗಿದ ಕೊಂಚ ಹೊತ್ತು, ಕನಸು ಬೀಳೋದು. ಇವಳು ಇವಳ ಮುನಿಸು, ಅತ್ತೆ ಸೊಸೆ, ಕಂಬ್ಳಿ ಮೆಷೀನ್ ಕಡುಬು ಕಾಫಿ......ನಂತರ ನೋಡಿ, ಸತ್ತವನ ಸುಖ, ಆ ನಿದ್ದೇಲಿ!

ಆದರೆ, ಆ ಹಾಳು ಬೊಂಬಾಯಿ ಪಟ್ಟಣ ಇದೆಯಲ್ಲಾ ಅದಕ್ಕೆ ಮಾತ್ರ ನಿದ್ದೆ ಇಲ್ಲ. ರಾತ್ರಿ ಎಲ್ಲ ಕನವರಿಸುತ್ತ ಹೊರಳಾಡುತ್ತಿರುವುದೇ ತೊದಲುತ್ತಿರುವುದೇ ಅದರ ಹಣೇಬರಹ. ಅದಕ್ಕೇ, ಅಲ್ಲಿ, ಜನ ದಿನಬೆಳ ಗಾದರೆ ಒಬ್ಬರ ಮೇಲೊಬ್ಬರು ರೇಗಿಬೀಳೋದು, ಆಸ್ಪತ್ರೆಗಳಿಗೆ ನುಗ್ಗಿ ಬಾಟ್ಲೆ ಬಗ್ಗಿಸೋದು.

ಬೆಳಗಾಗುತ್ತಲೂ, ಎದ್ದೆ ಅಂದ್ರೆ ಅಲ್ಲೇ ಕೂತಿರುತ್ತದೆ, ಕಾಲ್ದೆಸೆಯಲ್ಲಿ ತಾಪತ್ರಯದ ಪಿಶಾಚಿ; ಬೆನ್ನು ಹತ್ತಿ, ಚಾವಟಿ ಬೀಸಿ "ನಡಿ! ನೌಕರಿ ಹುಡುಕು!" "ಇವತ್ತಿನ ಅನ್ನ ಯಾರು ಕೊಡುತ್ತಾರೆ, ನೋಡು" ಅಂತ ಗದರಿಸುತ್ತದೆ.

ಎರಡು ಮೂರು ಹತ್ತಿಗಿರಣಿಗಳಿಗೆ ಹತ್ತಾರು ಸಲ ನುಗ್ಗಿದೆ. ಎಲ್ಲ ಕಡೆಯಲ್ಲೂ ಬಂದ ದಾರಿಗೆ ಸುಂಕವಿಲ್ಲ, ಹೋಗಿ ಬಾ, ಅನ್ನೋದೇ ಉತ್ತರ. ಒಂದೊಂದು ಮಿಲ್ಲಿಗೂ ಅಲ್ಲೂ ಕೆಂಗಯ್ಯಶೆಟ್ಟರು ಬಹಳ, ಅವರ ಆಸೆಯೂ ಅಪಾರ. ಅವರಿಗಿರುವುದು ಹೊಟ್ಟೆಯಲ್ಲ, ಹಾಳು ಬಾವಿ, ತಳವಿಲ್ಲದ ಬಾವಿ. ಅವರ ರೇಟು ನನ್ನ ಕೈಲಿ ಪೂರೈಸುವುದು ಕಷ್ಟ. ನನ್ನನ್ನ ಮಾರಿದರೂ, ಅವರು ಕೇಳಿದಷ್ಟು ಹುಟ್ಟುತ್ತಿರಲಿಲ್ಲ. ಹೋಗೋ ನಿನ್ನ ಊರಿಗೇನೇ, ಅಲ್ಲೇ ನಿನಗೆ ಅನ್ನ, ಅಲ್ಲೇ ನಿನ್ನ ಮಸಾಣ, ಅಂತ ಲೆಕ್ಕ ಹಾಕಿದೆ.

ಉಳಿದಿದ್ದ ದುಡ್ಡೆಲ್ಲ ಎಣಿಸಿದೆ; ಹುಬ್ಬಳ್ಳಿ ತನಕ ಏನೂ ಭಯ ಇಲ್ಲ ಅಂತ ಅನ್ನಿಸಿತು. ಸರಿ, ಹೊಳೆ ತನಕ ಓಟ, ಅಂತ ಸುಮ್ಮನಾದೆ. ನಾಣ್ಯವಿಲ್ಲದವ ನೊಣಕ್ಕಿಂತ ಕಡೆ ಅಂತಾರಲ್ಲಾ, ಹಾಗಿತ್ತು, ನನ್ನ ಪಾಡು.

ಅವತ್ತು, ಅದೇನೋ ಹಬ್ಬ, ಅತ್ತ ಕಡೆಯುವರಿಗೆ. ಸಮುದ್ರದ ದಂಡೇಲಿ ವಿಪರೀತ ಜನ ಸೇರಿದ್ದರು. ಹೆಂಗಸರು ಮಕ್ಕಳು ಬಹಳ. ಬ್ಯಾಸಿಗೆ ಕಾಲ. ನಶಿ ನಶಿ ಬೆವರು ಮೈ ತುಂಬ. ಹೋಗಿ ಒಸಿ ಗಾಳಿ ಕುಡಿಯೋಣ ಅಂತ ನಾನೂ ಹೋಗಿದ್ದೆ. ಎಲ್ಲರೂ ಕಾಯೊಡೆದು ಕರ್ಪೂರ ಹಚ್ಚಿ ನೀರಿಗೆ ಕಾಸೆಸೆಯುತ್ತಿದ್ದರು. ಆ ಕಾಸಾರಿಸುವುದಕ್ಕೂ, ತಡೀಲಿಟ್ಟಿದ್ದ ಎಲೆ ಅಡಿಕೆ ಕಾಯಿಹೋಳಿಗೂ, ಬಡವರು ಬಗ್ಗರು ಹೊಂಚು ಹಾಕುತ್ತಿದ್ದರು ಹೈಕಳೆಲ್ಲ ಮೊಸಳೆಗಳ ಹಾಗೆ ಅಲೆಗಳೊಳಕ್ಕೆ ಗುಳುಂ ಅಂತ ಮುಳುಗಿ ಲಪಟಾಯಿಸಿಕೊಂಡು ಬೆತ್ತಲೇಲಿ ಈಚೆಗೆ ಬರುತ್ತಿದ್ದರು ನಾನೂನೂ ನಾಲ್ಕಾರು ಹೋಳು ಸಂಪಾದನೆ ಮಾಡಿದೆ. ಕಾಸಿಗೆಷ್ಟು ಬರ ಇದ್ದರೂ, ನೀರಿಗಿಳಿಯಲಿಲ್ಲ; ನನಗೆ ಭಯ. ಕಾಸು ಏಕೆ, ರತ್ನಗಳೇ

ಇವೆಯಂತೆ, ಸಮುದ್ರದ ತಳದಲ್ಲಿ. ಆದರೆ, ಮುಳುಗೇ ಹೋದರೆ, ಈಚೆಗೆ ತರೋರು ಯಾರು, ನನ್ನನ್ನ?

ಅಲ್ಲೇ ನಿಂತಿದ್ದೆ, ಹಲ್ಲು ಕಿರೀತಾ. ಆಗ, ಇದ್ದಕ್ಕಿದ್ದ ಹಾಗೆ ನನ್ನ ಕಿವಿ ಎದ್ದು ನಿಂತುಕೊಂಡಿತು....ಯಾರೋ ಇಬ್ಬರು ಕನ್ನಡ ಮಾತಾಡುತ್ತಿದ್ದರು. "ಲೋ! ಉಗಾದಿ ಹೊತ್ತಿಗೆ ಊರಿಗೆ ಹೋಗೋಣ ದುಡ್ಡು ಗಿಡ್ಡು ಜೊತೆ ಮಾಡಿಕೊಳ್ಳೋ"—ಅಂದ, ಒಬ್ಬ. ಆಗ ಇನ್ನೊಬ್ಬ, "ನೀನು ಹೇಳಬೇಕೇನೋ ನನಗೆ? ನಾನಾಗಲೇ ಊರಿಗೆ ಕಾಗದ ಬರೆದಾಯ್ತು" ಅಂದ.

ಗೌಡರು. ನನ್ನಷ್ಟೇ ಪ್ರಾಯ.

ದೇವರೇ ದೊರಕಿಸಿಕೊಟ್ಟ, ಬಿಟ್ಟರೆ ಕೆಟ್ಟೆ ಅಂತ ಬಿಗಿಯಾಗಿ ಅಂಟಿಕೊಂಡೆ, ಅವರಿಗೆ ನೋಡಿ ಸ್ವಾಮಿ, ಅವತ್ತಿನಿಂದ ನನ್ನ ಜೀವ ಹಸಿಯಾಯಿತು. ಹಿಡಿಯುವುದಕ್ಕೆ ಒಂದು ಕಂಬ ಕೊಡಪ್ಪ ಅಂತ ಕೈ ಮುಗಿದದ್ದಕ್ಕೆ, ದೇವರು ಎರಡು ಕಂಬ ಒಟ್ಟಿಗೆ ಕೊಟ್ಟ.

"ಏಯಪ್ಪ! ನೀನು ಹೀಗೆ ಅಂಟಿಕೊಂಡರೆ ಹೇಗಪ್ಪ" ಅಂದರು, ನನ್ನ ಕೊಡವಿಬಿಡೋಣ ಅಂತ. ಆದರೆ ನನಗೂ ಬುದ್ಧಿ ಇಲ್ಲವೆ? ಮುಳುಗಿಸಿ, ತೇಲಿಸಿ, ನಾನು ನಿಮ್ಮ ಬೆನ್ನು ಬಿಡುವುದಿಲ್ಲ ಇನ್ನು ಅಂತ ಹೆಗಲಿಗೆ ಕೈಹಾಕೇ ಬಿಟ್ಟೆ, ಮುಳುಗಿಸಿದರೆ ಮುಳುಗಿಸಲಿ ತೇಲಿಸಿದರೆ ತೇಲೋಣ ಅಂತ. ಬೇರುಸಹಿತ ಕಿತ್ತ ಗಿಡಕ್ಕೆ ಮತ್ತೆ ನೆಲ ಸಿಕ್ಕಿದ ಹಾಗಾಯಿತು.

# ತಬೇಲಿ

ಅವರಿಬ್ಬರೂ ಒಬ್ಬರು ಸಾಬರ ಹತ್ತಿರ ಕೆಲಸಕ್ಕಿದ್ದರು; ಕುದುರೆ ಚಾಕರಿ. ದಿನಕ್ಕೆ ಹತ್ತಾಣೆ ಕೂಲಿ. ಮಾಲೀಸ್ ಮಾಡಬೇಕು, ಕಸ ಎತ್ತಬೇಕು, ಹುಲ್ಲು ಹಾಕಬೇಕು, ಒಳ್ಳೇ ಷಿಷ್ಟಂ ಆ ಸಾಬರದು. ಕೋಚ್ ಗಾಡಿಗಳು ಮಡಗಿದ್ದ. ಕೋಚ್ ಒಂದಕ್ಕೆ ಬೆಳಗ್ಗೆ ಎರಡು ಕುದುರೆ, ಸಂಜೆಗೆ ಎರಡು; ಬೆಳಗಿನ ಕುದುರೆಗಳನ್ನ ಕೋಚಿನ ಸೇಜು ತಬೇಲಿಗೆ ತರುತ್ತಲೂ, ಅವು ಆರುತ್ತಲೇ ಅವಕ್ಕೂ ಮಾಲೀಸ್. ಅಲ್ಲೇ ತಬೇಲೀಲೇ ವಾಸ ಅವರು. ಸೇಠ್‌ಗೆ ಖುಷಿ ಬಂದರೆ ಆಗಾಗ ಐದು, ಹತ್ತು. ಸುಳ್ಳು ಪಳ್ಳು ಹೇಳಿ ಮನೇಲಿ ಮದುವೆ ಖಾಯಿಲೆ ಅಂದ್ರೆ ಸುಳ್ಳಿಗೆ ತಕ್ಕಂತೆ ಕೊಡ್ತಾನಂತೆ. ಕಥೇನೆಲ್ಲಾ ಹೇಳಿದರು. ಸೇಜುಗಳ ಹತ್ತಿರಾನೂ ಪುಡಿ ಕಾಸು ನಾಲ್ಕಾಣೆ, ಎಂಟಾಣೆ ಹೋಡೀಬಹುದಂತೆ. ಲಾಳದವನು ಹುಲ್ಲಿನವನು ಕಡಲೆ ಅಂಗಡಿಯವನು ಎಲ್ಲರೂ ಒಸಿ ಒಸಿ ಕೊಡುತ್ತಾರಂತೆ. ಅಂಥಾ ಲುಕ್ಸಾನೇನೂ ಇಲ್ಲ ಅಂತ ನಕ್ಕರು. ನಾನೂ ಹೋದೆ. ಬೆನ್ನು ಹತ್ತಿದ ಭೇತಾಳ ಅಂತ ನನ್ನನ್ನೂ ಸೇರಿಸಿದರು, ಅವರ ತಬೇಲಿಗೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆ; ನನಗೂ ರಾತೀವು ಕೊಟ್ಟ. ತೆರೆದ ಬಾಗಿಲು, ಈರಣ್ಣನ ಮಠ, ನಾನೂ ಸೇರಿಕೊಂಡೆ. ಅವರೂನೂ ಪಾಪ ನಂಟರಲ್ಲ, ಯಾತರದಲ್ಲ, ಆದರೂ ಕನ್ನಡದವನು ಎಂಬ ಕರುಣೆ ಒಂದೇನೇ; ನಮ್ಮೂರಲ್ಲಿ ನಾವು ಬೆಕ್ಕು ನಾಯಿ ಹಾಗೆ ಕಾದಾಡಿದರೂನೂ, ಹೊರಗಡೆ ಹೋದರೆ ಬಾಯಿ ಸಕ್ಕರೇನೇ. ಅದೇ ನೋಡಿ ನಾವಾಡೋ ಮಾತಿನ ಗುಣ. ತಿಂಗಳಿಗೆ ಹನ್ನೆರಡು ರೂಪಾಯಿ ಅಂತ ನನಗೆ ಮಾಡಿಸಿಕೊಟ್ಟರು. ತಬ್ಬಲಿ ದೇವರಿಗೆ ತಂಬಿಟ್ಟೇ ನೈವೇದ್ಯ, ಅಷ್ಟೇ ಸಾಕು ಅಂತ ನಾನೂ ಸುಮ್ಮನಾದೆ. ಅಂತೂ ಸುಖ ಸಿಗಬೇಕಾದರೆ ದುಃಖದ ಹೊಳೆ ಈಜಿ ಆಚೆ ದಡ ಮುಟ್ಟಲೇಬೇಕು.

ತಾಳಿದವ ಬಾಳಿಯಾನು. ಪಾಯಸ ಪರಮಾನ್ನ ಮಂಡಿಗೆ ಚಿರೋಟಿ ಎಲ್ಲಾನೂ ಎಲೆ ಮುಂದೆ ಕೂತ ತಕ್ಷಣ ಬಡಿಸುತ್ತಾರೆಯೆ? ಯಾವ ಯಾವುದೋ ಕಸ ಎಲ್ಲ ತಿಂದು ಹೊಟ್ಟೆ ಮುಕ್ಕಾಲು ಮೂರು ವೀಸೆ ಭರ್ತಿಯಾದ ಮೇಲೆ ತಾನೆ, ಅವು ಬರೋದು ಎಲೇಲಿ? ತಬೇಲೀಲಿ ಒಂದೇ ತಾಪತ್ರಯ, ವಾಸನೆ. ಕೆಳಗೆ ಕುದುರೆ, ಮೇಲೆ ತಗಡಿನ ಅಟ್ಟ; ಅಲ್ಲೇ ನಾವು ಕುಕ್ಕರ ಬಡಿಯೋದು, ಇಸ್ಪೀಟು ಆಡೋದು, ಬಿದ್ದು ಕೊಳ್ಳೋದು ಎಲ್ಲಾ ದೀಪಕ್ಕೆ ರಾತ್ರಿ ಬತ್ತಿದೀಪ. ಗೂಸಗೂಸ ಅಂತ ಕೆಳಗೆ ಕುದುರೆಗಳು ತಿನ್ನೋ ಸದ್ದು, ಚಕ್ ಚುಕ್ ಅಂತ ಕಾಲು ನೆಲಕ್ಕೆ ಬಡಿಯೋ ಸದ್ದು; ಠಣ್ ಠಣ್ ಅಂತ ಅವುಗಳ ಕಡಿವಾಣ ಜೀನೀಸಿನ ಸದ್ದು; ಹೂಂ ಹುಂ ಹುಂ ಹುಂ ಅಂತ ಒಳ್ಳೆ ಸಿದ್ದೆ ಬರೋ ಟೈಂನಲ್ಲಿ ಕೇನೀತಾ ಅದನ್ನ ಕುಲಗೆಡಿಸಿಬಿಡುವುವು. ಆದರೆ ಅದು ಅಭ್ಯಾಸವಾಗಿ ಬಿಟ್ಟಿತು ನನಗೆ ಅನ್ನಿ, ಮೀನಂಗಡಿಯವರಿಗೆ ಮೀನಿನ ವಾಸನೆಯ ಹಾಗೆ, ಹೂವಿನಂಗಡಿಯವರಿಗೆ ಹೂವಿನ ಪರಿಮಳ ಇದ್ದ ಹಾಗೆ. ಅಭ್ಯಾಸ ದಿಂದ ಸರಿಹೋಗುವುದು ಅನ್ನೋದೊಂದಿಲ್ಲದಿದ್ದರೆ, ಮನುಷ್ಯ ಹೇಗೆ ಬದುಕುತ್ತಿದ್ದನೋ ದೇವರೇ ಬಲ್ಲ. ಹತ್ತು ದಿವಸ ಒಂದೇ ತೆರನಾಗಿದ್ದು ಬಿಡಿ. ಮೊರಡು ಬೀಳುತ್ತೆ ಮನಸ್ಸು, ಮೆದುಳು, ಹೃದಯ ಎಲ್ಲ. ಸಾವಿರ ಉಳಿ ಪೆಟ್ಟು ಬಿದ್ದರೆ, ವಿಗ್ರಹ ಆಗದೇ ಹೋದರೂ, ಪೆಟ್ಟು ತಿನ್ನೋ ಅಭ್ಯಾಸ ಬಂದು ಬಿಡುತ್ತೆ, ಕಲ್ಲಾಗಿಬಿಡುತ್ತೀವೆ.

ಆದರೆ ಓ, ಅದನ್ನೇ ಮರೆತೆನಲ್ಲಾ! ಆರನೆಯ ದಿನವೋ ಏಳನೆಯ ದಿನವೋ ನನ್ನ ಮನಸ್ಸೂನೂ ಕೊಂಚ ತಿರುಗಿತು. ಲದ್ದೀದು ದುರ್ನಾತ ನನಗೂನೂ ಮೊದ ಮೊದಲು ಅಸಹ್ಯವಾಗಿತ್ತು. ವಾಕರಿಕೆ ಬಂತು. ಅಲ್ಲೇ ನನಗೊಬ್ಬ ತೆಲುಗರವ ಸಿಕ್ಕಿದ. ಅವನಿಗೆ ಕನ್ನಡ ಮಾತು ಬರೋದು, ಕೊಂಚ ಕೊಂಚ. ಅವನಂದ, ಈ ಸಹವಾಸ ನಿನಗೆ ಚೆನ್ನಿಲ್ಲಾ, ನೀನು ಗ್ರಾಸ್ತನಾಗಿ ಕಾಣಿಸುತ್ತೀಯಾ, ಕಣ್ಣಿಗೊತ್ತೋ ಪದಾರ್ಥ ಕಸದ ತಿಪ್ಪೇಲಿ ಬೀಳಬಾರದು. ನಾನು ಹಾರ್ಬರ್‌ನಲ್ಲಿದ್ದೇನೆ.

ನೀರಿನ ಮೇಲೆ ಹಡಗು ನಿಂತಿರುತ್ತದೆ. ಅದರೊಳಕ್ಕೆ ಕಲ್ಲಿದ್ದಲು ಸುರಿಯೋ ಕೆಲಸ. ಜಮೀನಿಂದ ಹಲಗೆ ಮಡಗಿ, ಸೇತುವೆಯ ಹಾಗಿಟ್ಟಿದಾನೆ, ಅದರ ಹೊಟ್ಟೆಯೊಳಕ್ಕೆ; ಅದರ ಮೇಲೆ ಹೊತ್ತುಕೊಂಡು ಹೋಗಿ ಒಳಗೆ ಸುರಿದು ಬಂದರಾಯಿತು, ಅಂದ. ದಿನಕ್ಕೆ ಒಂದೂಕಾಲು ರೂಪಾಯಿ ಸಂಬಳ ಅಂದ. ಕೂಲಿ ಅನ್ನಲಿಲ್ಲ ಭೂಪ. ಅದೂ ಒಂದು ಮಜಾನೇ ಅಂತ ನುಗ್ಗಿದೆ, ಅತ್ತ ಕಡೆ; ಯಾರಿಗೂ ಎಲ್ಲಿಗೆ ಹೋಗಿದ್ದೇನೆ ಅಂತ ಹೇಳಲಿಲ್ಲ.

ಆಹ, ಅದೆಂಥೆಂಥ ಹಡಗುಗಳು ಅಂತೀರಾ! ಅಂಥಾ ಸಮುದ್ರಾನ್ನೇ ತಟಾಯಿಸುವುವಂತೆ. ತಿಂಗಳುಗಟ್ಟಲೆ ನೀರಿನ ಮೇಲೆ ತೇಲಿ ಹೋಗ ಬಲ್ಲವಂತೆ. ಇಂಜಿನ್ನು ಒಳಗೆ ಆನೆಗಳು ಕೂತಹಾಗೆ ಕೂತಿರೋವು. ಅವಕ್ಕೆ ಕಲ್ಲಿದ್ದಲೇ ಸೌದೆ, ನೀರು ಕಾಯಿಸಿ ಹಬೆ ಎಬ್ಬಿಸುವುದಕ್ಕೆ, ರೈಲಿನ ಹಾಗೆ. ಅದರ ಹೊಟ್ಟೇ ಮೇಲೆ ಸರಿಯಾಗಿ ಪಂಪು, ಕೊಳಾಯಿ, ನಟ್ಟಿದಾರೆ; ಎರಡೋ ಮೂರೋ, ಅಂತಸ್ತಿನ ಮಧ್ಯೆ ಬುಕ್ ಬುಕ್ ಅಂತ ಉಗುಳುತ್ತಾ ಇರುತ್ತವೆ. ನಾಲ್ಕು ಮೂಲೆ ಚೌಕದ ಸಂದು ಮಾಡಿ, ಎರಡು ಮೂರು ಅಂತಸ್ತು ಒಳಕ್ಕಿಳಿಯೋಕೆ ದಾರಿ, ಏಣಿ ಮೂಲಕ. ಒಳಗೆಲ್ಲ ದಿನಸಿ ತುಂಬೋಕೆ ಜಾಗ, ಗಡಂಗು; ಷ್ಟೀಮರ್ ಅಂತಾರೆ, ಅದಕ್ಕೆ. ಷ್ಟೀಂ ಅಂದರೆ ಹಬೆಯಂತೆ. ಅದರ ತುಟಿ ಮಟ್ಟಕ್ಕೆ ನೀರು ಬರುತ್ತೆ ನೋಡಿ, ದಿನಸಿ ಇಜ್ಜಿಲು ತುಂಬಾಯಿತು ಅಂದರೆ. ತುಂಬಿಕೊಂಡು, ಸಮುದ್ರದ ಮೇಲೇನೇ ದೂರ ಹೋಗುತ್ತದಂತೆ,............ಪರಂಗಿಯವರ ಊರಿಗೆ. ರೂಪಾಯಿ ಮೇಗಿನ ರಾಜ ಇದಾನಲ್ಲಾ, ಅವನ ಊರು ತನಕಾನೂ, ಅದರಾಚೆ ಊರಿದ್ದರೆ, ಅಲ್ಲೀಗೂನೂ ಹುಡುಕಿಕೊಂಡು ಹೋಗ್ತದಂತೆ. ಇಂಜಿನ್ ನಡೆಸುವವರು ಕರೀ, ಹಳದೀ ಜನ........ಮೇಲುಸ್ತುವಾರಿ, ಬಿಳಿಯವ; ಪ್ರಚಂಡರು ಅಂದ್ರೆ, ಬಿಳಿಯವರು. ನಮ್ಮ ಕೈಲಿ ಕೆಲಸ ತೆಗೆಸೋಕೆ, ಜಾಣರು. ಸರಿ, ನಾನೂ ಹೊರಟೆ ಅತ್ತಕಡೆಯ ಹುಲ್ಲುಕಡ್ಡಿ ಮಕ್ಕರಿ ಹೊತ್ತುಕೊಂಡು, ಅದರೊಳಕ್ಕೆ. ರಾತ್ರಿಯಾಯಿತು ಅಂದ್ರೆ, ಕೈಗೆ

ಒಂದೂಕಾಲು ರೂಪಾಯಿ ಕೊಟ್ಟುಬಿಡೋನು..........ಮೂರು ದಿವಸ ಹೋದೆ. ನಾಲ್ಕನೆಯ ದಿವಸ, ತಲೇ ಬಲೀತು ಅಂತ, ಕಲ್ಲು ಹಾಯಬಾರದು ಅಂತ ಗೊತ್ತಾಯಿತು ನನಗೆ; ತಕೋ ನಿನ್ನ ಚಾಕರಿಗೆ ನಮಸ್ಕಾರ ಅಂದೆ. ಬಂದರ್‌ನವರನ್ನ ಬಂದೋಬಸ್ತು ಮಾಡಿಕೊಂಡಿರೋ ಮೇಸ್ತ್ರಿಗಳು ನಮಗೆ ತುಂಬಾ ಮೋಸ ಮಾಡುತ್ತಿದ್ದರು. ಕತ್ತಲಾಗುತ್ತಲೂ ಕೆಲಸ ಬಂದ್ ಅಂತಿದ್ದರಲ್ಲಾ....ಎಷ್ಟು ದುಡಿದರೂ ಈಚೆ ಬಿಡೋದಿಲ್ಲ....ಒಳಗೆ ದೀಪದ ಬೆಳಕಿನಲ್ಲಿ ಕತ್ತಲಾಗೋದೇ ತಿಳಿಯೋದಿಲ್ಲ; ಹಗಲು ರಾತ್ರಿ ಅಲ್ಲಿ ಒಂದೇ ಸಮ. ಪಾತಾಳಲೋಕ ಅದು. ಹೊರಗೆ ಬಂದಾಗ ಅವನನ್ನ ಬೈದರೆ ರೇಗಿಕೊಳ್ಳದೆ ನಕ್ಕೇಬಿಡೋನು. ಇನ್ನೊಂದೇನೆಂದರೆ, ಬಿಸಿಲಿನ ಬೇಗೆ, ಕಬ್ಬಿಣದ ಹಡಗಿನ ಶಾಖ ವಿಪರೀತ; ಹೊತ್ತು ಮುಳುಗೋ ತನಕ, ಮುಳುಗಿಡ ಮೇಲೂ. ಇನ್ನೊಂದು: ನಾನು ಬೆಂಗಳೂರಿಂದ ತೆಗೆದುಕೊಂಡು ಹೋಗಿದ್ದೆನಲ್ಲಾ ಬೊಂಬಾಯಿ ಎಂಬೋ ಭರ್ಜರೀಲಿ, ಆ ಜರೀ ಪಂಚೆ, ಅದು ಸಂಜೆ ಹೊತ್ತಿಗೆ ದಿನವೂ ಮಸಿ ತುಂಬಿ, ಅನ್ಯಾಯ, ಕಪ್ಪಗಾಗಿ ಬಿಡೋದು. ಜೋಗಿ ಜೋಗಿ ತಬ್ಬಿದರೆ, ಮೈ ಎಲ್ಲ ಬೂದಿಯಲ್ಲದೆ ಇನ್ನೇನು? ಕಣ್ಣಲ್ಲಿ ನೀರು ಸುರಿಸುತ್ತಾ ನಾನು ಅದನ್ನ ಉಟ್ಟುಕೊಂಡು ಮೂರು ಮೈಲಿ ಬರಬೇಕು, ತಬೇಲಿ ತಗಡಿಗೆ; ಕೊಳಾಯಿ ನೀರಿನಲ್ಲಿ ಕೈಕಾಲುತೊಳೆದುಕೊಳ್ಳೋಣ ಅಂದರೆ ಅದರ ಸುತ್ತ ಮೂವತ್ತು ನಲವತ್ತು ಜನ ಗಂಡಸರೂ ಹೆಂಗಸರೂ ರಂಪು ಎಬ್ಬಿಸುತ್ತಿರುತ್ತಾರೆ. ರಾತ್ರಿ ಹನ್ನೆರಡು ಗಂಟೆ ಹೊತ್ತಿಗೆ ಹೋಗಿ ಸೋಪು ಹಾಕಿ ಒಗೆದು ಒಣಗಿಸಿ, ಮರುದಿನ ತಲೆಗೆ ಲಪ್ಪಟ್ಟೆ ಸುತ್ತಿಕೊಂಡು ಹೋಗುವೆ. ಅವತ್ತೂನೂ ಅದರ ಗತಿ ಅಷ್ಟೇ ಅನಿಷ್ಟ. ಜಿಪುಣ ಮಾರಾಯ ಒಂದೊಂದು ಕರಿಬಟ್ಟೇನಾದರೂ ಕೊಡಯ್ಯ ಅಂದರೆ ಒಲ್ಲೆ ಅನ್ನುವನು. ನನ್ನ ಸ್ನೇಹಿತರು ಬೇರೆ, ಬೈತಾನೇ ಇದ್ದರು. "ಬಡ್ತಿ ಮಾಡಿಸ್ತೇವೆ. ಇಷ್ಟೊಂದು ಕುದುರೆ ತಿನ್ನುತ್ತವೆ. ನಿನಗಿಲ್ಲ ಅಂತಾನೆಯೇ? ಮೇಯುತ್ತಾ ಇಲ್ಲೇ ಬಿದ್ದಿರು, ಶಿವ ಕೊಟ್ಟದ್ದನ್ನು" ಅಂದರು. ಅದರಾಚೆ ದಿನ, ಆ ಮೇಸ್ತ್ರಿ ಮೂತಿಗೆ ಎಸೆದೆ ಅವನ ಚಾಕರೀನ. ನಿನ್ನ ಕೂಳೂ ಬೇಡ,

ನಿನ್ನ ಕಲ್ಲಿದ್ದಲು ಕಪ್ಪು ಬೇಡ, ಅಂದೆ. ಕಿವಿ ಮೂಗು ಎಲ್ಲ ತುಂಬಿಕೊಂಡಿದ್ದ ಕಾಡಿಗೆ ಹೋಗೋದಕ್ಕೆ ಮೂರು ತಿಂಗಳು ಹಿಡಿಯಿತು. ಅವನೂ ಒಳ್ಳೆಯವ, ಹೊರಟಾಗ ಹೋಗಿ ಬರ್ತೀಯ ತಮ್ಮಾ ಅಂದನಂತೆ ಮರಾಠೀಲಿ. ಸೇಠ್ ಹತ್ತಿರ ಶಿಪಾರ್ಸು ಮಾಡಿಸಿ, ನನಗೂ ಅವರು ೨೦ ರೂಪಾಯಿ ಮಾಡಿಸಿದರು. ರವೆಯಷ್ಟು ಉಪಕಾರ ಮಾಡಿದವರನ್ನೂ ಮರೆಯಬಾರದು; ತಂಪು ಹೊತ್ತಿನಲ್ಲಿ ನೆನಸಿಕೊಳ್ಳಬೇಕು. ಇಲ್ಲದಿದ್ದರೆ ನರಮನುಷ್ಯ ನಾಯಿಗಿಂತ ಕಡೆ, ಅಷ್ಟೆ. ನನ್ನ ಊಟಕ್ಕೂನೂ ಅವರೇ ಏರ್ಪಾಟು ಮಾಡಿಕೊಟ್ಟರು. ಬಿಸಿ ಮನೆ ಅಂತ ಒಂದಿರೋದು, ಆತ ಬೇಲಿಗೆ ಒಂದು ಫರ್ಲಾಂಗ್ ದೂರದಲ್ಲಿ. ನಮ್ಮ ಮೈಸೂರು ಸೀಮೆಯವನೇ ತೆಗೆದಿದ್ದ, ಭಿನ್ನರಾಯ ಪಟ್ಟಣದವನು, ನೋಡಿ ಅವನ ಜಾಣತನಾನ. ಮನೆ ಜನ, ಮಕ್ಕಳು ಮರಿ ಎಲ್ಲ, ಅಲ್ಲೀನೇ, ಅವನ ಒಟ್ಟಿಗೇನೆ. ಅವನ ಹೆಂಡತಿ, ಒಬ್ಬಳು ಹಿರೇ ಮಗಳು ಅವರೇ ಅಡಿಗೆಗೆ, ಬಡಿಸುವುದಕ್ಕೆ. ಕಿಲಕಿಲ ನಗುತ್ತಾನೆ ಬಡಿಸುವರು. ಹೊಟ್ಟೆ ಪಾಡು ಅಂದರೆ ಎಷ್ಟು ದೂರ ಎಳೆದುಕೊಂಡು ನಡೀತಿರುತ್ತದೆ. ಬೆಟ್ಟದ ಮೇಲೂ ಕೂತಿರುತ್ತಾರೆ, ನೀರಿನ ಮೇಲೂ ತೇಲುತ್ತಾರೆ. ಪಾರ್ಸಿ ರೋಡ್ ಸಬೇತ ಗಲ್ಲೀಲಿ ಬೋರ್ಡು ತೂಗಿದ್ದ ಅವ; ಗುರುತಿಗೆ ನಾವು 'ಬಿಸಿ ಮನೆ' ಅಂತ ಹೇಳುತ್ತಿದ್ದೆವು ಅದಕ್ಕೆ. ಮೀನು ಮಾಂಸ ಬೇಯಿಸುತ್ತಿರಲಿಲ್ಲ, ಪುಣ್ಯಾತ್ಮ. ನಷ್ಟ ಬಿದ್ದರೂ, ಭ್ರಷ್ಟನಾಗಬಾರದು. ಅಂತ ನಾನೂ ತಿನ್ನಲಿಲ್ಲ. ನಾವು ತಿರುಪತಿ ಒಕ್ಕಲಿನವರು. ಅದನ್ನೆಲ್ಲಾ ಮುಟ್ಟೋದೇ ಇಲ್ಲ. ಗೇಣುದ್ದ ಹೊಟ್ಟೆ ಇದು, ಎಷ್ಟು ಮಹಾ ಕೇಳುತ್ತೆ? ಸೊಪ್ಪು ಸೆದೆ ಗೆಡ್ಡೆ ಗೆಣಸು ಕಾಳು ಕಡ್ಡಿ ಸಾಕು, ಅದಕ್ಕೆ. ನಾವೇನು ಹುಲಿ ಕಿರುಬ ಕೆಟ್ಟು ಹೋದೆವೇನು? ನಮಗೆ ಅಂಥ ಕೋರೆ ಹಲ್ಲು, ಉದ್ದುದ್ದನೆಯ ಕತ್ತಿ ಉಗುರು, ಇವೆಯೇ? ಮತ್ತೆ ನಾವೇಕೆ ಉಗುರಿಗೆ ಬದಲಾಗಿ ಕುಡು ಗೋಲೆತ್ತಿ ಕುರಿ ಕಡಿದು ಅದನ್ನ ಬೇಯಿಸಿ ತಿನ್ನಬೇಕು. ಕುರಿ, ಪಾಪ, ಕುಪ್ಪಳಿಸಿ ಕುಣೀತದೆ; ತಾಯಿ ಹತ್ತಿರ ಓಡಿ ಹೋಗ್ತದೆ.

ನಾವು ಹಿಡಿಯುವುದಕ್ಕೆ ಹೋದರೆ. ಬಾಯಿಲ್ಲದ ಪ್ರಾಣಿ, ಸರಿ, ಆದರೂ ಒದ್ದಾಡುತ್ತದೆ; ಕಣ್ಣಲ್ಲಿ ನೀರು ಬಿಡುತ್ತದೆ, ಗೋಳಾಡುತ್ತದೆ. ಅದನ್ನು ಕೊಲ್ಲೋ ಮನುಷ್ಯ ಯಾವುದಕ್ಕೂ ಹೇಸ........ಏನೋ ಸ್ವಾಮಿ, ನಮಗದು ಒಗ್ಗುವುದಿಲ್ಲ. ಅದೇ ಲೈನ್ ಮೇಲೆ ಬಂದಿರುವವರು ಏನಾದರೂ ಮಾಡಿಕೊಳ್ಳಲಿ. ಅವರವರ ಕರ್ಮ ಅವರವರು ಅನುಭವಿಸಲಿ. ಕೊಂದ ಪಾಪ ತಿಂದರೆ ಹೋಗುತ್ತೆ ಅನ್ನೋದು ಅವರ ಧರ್ಮ; ನಮ್ಮದಲ್ಲ. ನನ್ನ ಹೊಟ್ಟೇನ ಮಸಣ ಮಾಡಬೇಡ, ಗದ್ದೆ ತೋಟ ಮಾಡಪ್ಪ ಸಾಕು ಅಂತ ನಾನು ವೆಂಕಟರಮಣನನ್ನ ದಿನವೂ ಕೈಮುಗಿವೆ, ನನ್ನ ಸ್ನೇಹಿತರು ಮಿಲಿಟರಿ ಹೋಟಲಿಗೆ ನುಗ್ಗಿ ಬಂದಾಗಲೆಲ್ಲ. ನನ್ನನ್ನ ಅವರು ಕರೆದುಕೊಂಡು ಹೋದ ದಿವಸ ಕಲಾಪತ್ತಿನ ಪಂಚೆ ಉಟ್ಟಿದ್ದೆ. ಕೋಟು ತೊಟ್ಟಿದ್ದೆ. ಇವನಿಗೆ ಇಲ್ಲೇ ಊಟ ಹಾಕಿ, ಕಾಸು ಕೊಡದೆ ಎದ್ದುಗಿದ್ದು ಬಿಡೋನಲ್ಲಾ, ಗ್ರಾಸ್ತ, ನಮ್ಮ ದೋಸ್ತಿ, ಅಂತ ಅವರಂದ್ರು, ನೇಮಕ ಮಾಡಿದರು. ಕಾಸಿಗೆ ಮೋಸ ಇಲ್ಲ ಅವನಲ್ಲಿ. ಹೊತ್ತಾರೆ ಗೋಧಿ ರೊಟ್ಟೀನೂ ಪಲ್ಯಾನೂ ಇಕ್ಕುವ, ಮಧ್ಯಾಹ್ನ ಅಂದ್ರೆ ಎರಡು ಗಂಟೆ ಟೈಮಿಗೆ ಹಿಟ್ಟು ಮಾಡುವ, ರಾಗೀ ತರಿಸುತ್ತಾ ಇದ್ದ ರಾಗೀನ, ಹೈನ್ ರಾಗಿ, ಅರಸೀಕೆರೆಯಿಂದ, ಅಕ್ಕಿ ಅನ್ನಾನು ಬೇಯಿಸುವ. ಎರಡೆರಡು ತುತ್ತು ಕೊಡುವ. ಆ ಬಿಸಿ ಮನೆ ಗೌಡಾನೂ ಇನ್ನಿಲ್ಲ ಅನ್ನುವಷ್ಟು ಬುದ್ಧಿವಾದ ಹೇಳಿದ ನನಗೆ, ಹಾರ್ಬರ್ ಕೆಲಸ ಅಪಾಯ, ಕಲ್ಲಿದ್ದಲು ಉಷ್ಣ, ಕಣ್ಣು ಹಾಳಾಗ್ತದೆ; ಕಣ್ಣಿರುವ ತನಕ ನೋಟ, ಕಾಲಿರುವ ತನಕ ಓಟ; ಮೇಲಿಂದ ಕಿರೇನು ಗಿರೇನು ಕಬ್ಬಿಣದ ತೊಲೆಗಳನ್ನೇ ಎತ್ತಿ ಹಾಕಿ ಬಿಡ್ತದೆ ಬುರುಡೆ ಮೇಲೆ; ಬೆಣ್ಣೇ ಹಾಗೆ ಮಾತಾಡೋರೆಲ್ಲ ನಾಳೇ ಸುಣ್ಣ ತೀಡ್ತಾರೆ, ಟೋಪಿ ಇಕ್ತಾರೆ ಅಂದ; ತೆಲುಗರು ಗುಜರಾತಿಗಳು ಅಂತ ಅವರಿವರ ಹಿಂದೆ ಅಲೆಯಬೇಡ. ಪರಸ್ಥಳದಲ್ಲಿ ಬೆನ್ನೆಲ್ಲ ಕಣ್ಣಾಗಿ ಓಡಾಡು. ನಮ್ಮ ನಂಟಸ್ತನಾನೇ, ಚಂದ ಅಂದ. ಸುಮಾರು ೬೦, ೭೦ ಜನ ಕನ್ನಡ ದವರು ಊಟಕ್ಕೆ ಬರುವರು. ಅವರೂ ಅವನ ಮಾತಿಗೆ ಹೂಂ

ಅಂದರು. ಅವನ ಮಾತಿನ ಬೆಲೆ ನಾನು ಅರಿತುಕೊಂಡೆ. ತಬೇಲಿಯಿಂದ ಇನ್ನುಮೇಲೆ ತಪ್ಪಿಸಿಕೊಳ್ಳೋದಿಲ್ಲ ಅಂತ ಅವನ ಕೈಮೇಲೆ ಹೊಡೆದು ಭಾಷೆ ಕೊಟ್ಟೆ. ಕನ್ನಡಿಯೊಳಗಿನ ಗಂಟೆಗಿಂತ ಕೈಯೊಳಗಿನ ದಂಟು ಲೇಸು. ಈ ಜನ್ಮ ಎಲ್ಲಾ ಕುದುರೆ ಸೇವೇಲೇ ಸವೆಯಲಿ ಅಂತ ಸುಮ್ಮನಾದೆ.

ಆ ಸೇಠ್ ಒಳ್ಳೇ ಮಾರಾಯ; ಮುಸಲ್ಮಾನೀನೇ ಆಡುತ್ತಿದ್ದರೂ, ಕೊಂಚ ಕೊಂಚ ಕನ್ನಡಾನೂ ಕಲಿತಿದ್ದ. ಬಾ ಹೋಗು, ಹಾಕು ಸಾಕು, ಹುಲ್ಲು ಹುರುಳಿ ಅಂತ ಚೆನ್ನಾಗಿ ಹೇಳುವ. ನಾನೂನೂ ತುರುಕುಮಾತು ಆಡುವೆ ಅವನ ಹತ್ತಿರ ಇದ್ದಾಗ; ಆಡಿದರೆ ಖುಷಿಯಾಗೋದು ಅವನಿಗೆ. ಮಾಲೀಸ್ ಕರೊ, ಖಾನೇಕು ಜಾವ್, ಜಲ್ದಿ ಆವ್ ಅನ್ನುವೆ. ಹಿಗ್ಗಿ ಹೋಗುವ ಸೇಠ್. ಆ ಹಿಗ್ಗಿನಲ್ಲಿ ನಿನಗೆ ೩೨ ರೂಪಾಯಿ ಸಂಬಳ ಕೊಡುತ್ತೇನೆ ಅಂತ ಅವನಂದಾಗ ನಾನೂ ಗಾಳೀಲೇ ತೇಲಿದೆ.

ನನ್ನ ೩೨ ರೂಪಾಯಿ ಸಂಬಳಕ್ಕೆ ನನಗೇನು ಅಂಥ ಬೆವರಿಳಿಸೋ ಕೆಲಸ ಹಚ್ಚಿರಲಿಲ್ಲ, ಅವನು ಅವನ ಸಂಸಾರ ಅಪಾರ. ೧೦೦ ಜನ ಆಳು ೨೦೦ ಕುದುರೆ ೧೦೦ ಗಾಡಿ ಮಡಗಿದ್ದ, ಮೂರು ನಾಲ್ಕು ತಬೇಲೀಲಿ. ಬೊಂಬಾಯಿ ಷಹರಿನ ರಸ್ತೆಗೆಲ್ಲ ೩೦೦೦ ರೂಪಾಯಿ ಕೊಟ್ಟು ಓಡಾಡು ವುದಕ್ಕೆ ಲೈಸೆನ್ಸ್ ಪಡೆದಿದ್ದ. ಪ್ರತಿ ಒಬ್ಬ ಗಾಡಿ ಕೋಚ್‌ಮ್ಯಾನಿಗೂ ಸೂಟು, ಇಜಾರ, ಮೇಲಿಕ್ಕುವುದಕ್ಕೊಂದಂಗಿ, ಹಿತ್ತಾಳೇದು ಬಕಲು, ತಲೆಗೆ ಕೆಂಪು ಪೇಟ, ಗೊಂಡೆಹೂವು ನೇತಾಡ್ತದೆ ಅದರ ತುದೀಲಿ, ಕೊಡುವ. ಕೋಚ್‌ಬಾಗಲು ನಡುವಿಗೆ, ಇಂಥಾ ತಾವಿಂದ ಇಂಥ ತಾವಿಗೆ ಹೋಗೋ ಗಾಡಿ ಇದು, ಅಂತ ಬರೆದು ಅಂಟಿಸಿದ್ದ, ಬಣ್ಣದಲ್ಲಿ; ಗಾಡಿಯೊಳಗೆ ಅವನದು ಫೋಟೋ ಮೊಹರು ಬೇರೆ ನೇತಾಡೋದು ಜಬರ್ಾಗಿ....ಬಲು ಮಜವಾಗಿಟ್ಟಿದ್ದ ಏರ್ಪಾಟ್‌ನ; ಅಮೀದ್ ನೂರ್ಮಹಮ್ಮದ್ ಸೇಠ್ ಅಂತ ಅವನ ಪೂರ್ತಿ ಹೆಸರು. ಅವನ ತಮ್ಮ ಒಬ್ಬ ಇಬ್ರಾಹಿಂ ಹಬೀಬ್ ಸೇಠ್ ಅಂತ; ಅಳಿಯ ಬೇರೆ ಒಬ್ಬ ಅಬ್ದುಲ್ ಜಮಾಲ್ ಸೇಠ್ ಅಂತ;

ಆವ ಮಾತ್ರ ಕೊಂಚ ತಲೆ ತಿರುಗಿ ಪೋಲಿ ಅಲೆದು ಹಾಳಾಗಿದ್ದ. ಅವನ ತಬೇಲಿ ಶಿಸ್ತೋ ಶಿಸ್ತು. ಸುಗ್ರೀವನ ಸೋದರಮಾವ, ಅವನು. ಠಾಕ್ಕೊ ಠೀಕ್ ನಡೆದೇಬಿಡಬೇಕು. ದೊಡ್ಡದೊಂದು ಗಂಟೆ ನೇತಾಡಿಸಿರುವನು, ಮಧ್ಯರಾಷ್ಟ್ರದಲ್ಲಿ. ಅದನ್ನ ಬಾರಿಸುವುದು ನನ್ನ ಕೆಲಸ. ನಾಲಗೆಗೆ ಬಿಗಿದಿರುವ ಹಗ್ಗ ಜಗ್ಗಿಸಿ ಸಲಸಲಕ್ಕೂ ನಾಲ್ಕು ಬಾರಿ ಠಣ್ ಠಣ್ ಅನ್ನಿಸಬೇಕು, ಗೋಡೇಮೇಲಿನ ಗಡಿಯಾರದ ಮುಳ್ಳು ತಾಳೆ ನೋಡಿಕೊಂಡು.

ಬೆಳ್ಳಂಬೆಳಗು ನಾಲ್ಕಕ್ಕೆ ಹೊಡೆದೆ ಅಂದರೆ, ಕುದುರೆಗಳಿಗೆಲ್ಲ ಮಾಲೀಷ್ ಷುರು ; ಒಂದೊಂದರ ಮುಂದೂ ಏಳೇಳು ಕಂತೆ ಹುಲ್ಲು ಎಣಿಸಿ ಹಾಕಬೇಕು. ಐದೂವರೆಗೆ ಆ ಕೆಲಸ ಕಲಾಸ್. ಆಮೇಲೆ ಬಾಯಿಗೆ ಚೀಲ ಕಟ್ಟಿ ಗೋಧಿ ಕಡಲೆ ಬೇಯಿಸಿದ್ದು ತಿನ್ನಿಸಬೇಕು. ಆರಕ್ಕೆ ಎಲ್ಲರೂ ಗಾಡಿ ಕಟ್ಟಿಕೊಂಡು ಹೊರಟೇ ತೀರಬೇಕು. ಹಾ ಹೂ ಅಂತ ಜೋಲುಬಿದ್ದು, ನಿಲ್ಲಬಾರದು. ಹನ್ನೆರಡಕ್ಕೆ ಮತ್ತೆ ಗಂಟೆ. ಅಷ್ಟರೊಳಗೆ ಕೋಚ್‌ವ್ಯಾನುಗಳೆಲ್ಲ ಬಂದು ಮೂರು ಮೂರು ರೂಪಾಯಿ ನಮ್ಮದಲ್ಲ ಅಂತ ಎಣಿಸಬೇಕು. ಹಾಗೆ ತೆತ್ತರೇನೇ ಬೇರೆ ಕುದುರೆ ಕಟ್ಟಿ ಲಗಾಮು ಕೊಡುವುದು, ಅವರ ಕೈಗೆ. ಇವತ್ತಿನ ನಶೀಬು ಖರಾಬಾಯಿತು, ಸಂಜೆ ಸೇರಿಸಿಕೊಡುತ್ತೇನೆ, ಬೇರೆ ಕುದುರೆ ಕೊಡು, ಅಂತ ಕೈಕಾಲು ಕಟ್ಟುವರು, ಕೆಲವರು, ತೂಕಡಿಕೆ ಇಸಮುಗಳು. ನಾನೇ ಬದಲಿ ಕುದುರೆ ಕೊಡುವವನು. ಹೋಗೋ, ಸಾಧ್ಯವಿಲ್ಲ, ಅಂತ ನಾನು ಗದರಿಸುವೆ, ನನ್ನದೇ ತಬೇಲಿ ಎಂಬ ಠೀವೀಲಿ. ನಾಲ್ಕಾಣೆ ಹೆಚ್ಚಾಗಿ ತೆರುತ್ತೇವೆ, ನಿನ್ನ ಬಾಯಿಗೆ ಒಂದು ಪಾವಲಿ, ಅಂತ ಬೆಣ್ಣೆ ಸವರುವರು. ಅಕ್ಕಪಕ್ಕ ಯಾರೂ ಇಲ್ಲದ ದಿನ ಸರಿ ಅಂತ ದೊಡ್ಡ ಮನಸ್ಸು ತೋರಿಸುವೆ. ಹತ್ತು ಗಂಟೆ ರಾತ್ರೆ, ಕಡೇ ಬೆಲ್ಲು. ಎಲ್ಲ ಕುದುರೆಗಳನ್ನೂ ಹೆಸರು ಹಿಡಿದು ಬಂದು ಬಾರಿ ಸಾಲಾಗಿ ಎಣಿಸಿ ಅಜಮಾಯಿಷಿ ಮಾಡಿ, ಗೇಟ್ ಬಂದ್ ಮಾಡಿ,

ಸೇರ್‌ಜಿಗೆ ಹೇಳುವೆ. ನನ್ನ ಪಾಲಿಗೆ ಬಂದ ಚಿಲ್ಲರೆ ಎಣಿಸಿ ಸೊಂಟಕ್ಕೆ ಸೇರಿಸುವೆ.

ಕುದುರೆ ಹಿಂದಕ್ಕೆ ಬರುವಾಗ, ಲಾಳ ಚೆನ್ನಾಗಿದೆಯೇ ನೋಡ ಬೇಕು. ಸವೆದಿದ್ದರೆ, ಕಳೆದಿದ್ದರೆ, ತಬೇಲಿಯೊಳಗೆ ಇರುವ ಲಾಳದವರಿಗೆ ಹೇಳಿ ಸರಿಪಡಿಸಬೇಕು, ನಾನು. ಗೋಧಿ ಕಡಲೆ ಎಲ್ಲ ತುಂತುಂಬ ಬಕೀಟ್‌ಗಳಲ್ಲಿ ಹಾಕ್ತಿದಾರೆಯೆ, ಹದವಾಗಿ ಬೇಯಿಸಿದಾರೆಯೆ, ಎಲ್ಲ ನನ್ನ ಉಸ್ತುವಾರಿ. ಆ ಬಟ್ಲರುಗಳು ಬೇರೆ ಎರಡಾಣೆ ಮೂರಾಣೆ ಕೊಡುವರು, ನನ್ನ ಬಾಯಿ ಮುಚ್ಚಿಸುವುದಕ್ಕೆ....ತಬೇಲಿ ಕಸವನ್ನೆಲ್ಲ ಒಂದೆಡೆ ಗುಡ್ಡೆ ಮಾಡಿಸಿ ಪೇರಿಸಿರುತ್ತಾರೆ ; ಅದನ್ನೆತ್ತೋದಕ್ಕೆ ಎತ್ತಿನ ಗಾಡಿ ಬರುತ್ತದೆ ; ಸಮುದ್ರದೊಳಕ್ಕೆ ಮಗುಚುತ್ತಾರೆ, ಅಸಹ್ಯಾನೆಲ್ಲ. ಪಾಪ ! ಆ ಸಮುದ್ರ ಎಷ್ಟು ಕಸ ನುಂಗಿ ಬದುಕಬೇಕೊ !

ಯಾವ ಜನ್ಮದ ಋಣಾನುಬಂಧವೋ ನಾನರಿಯೆ, ರೆಪ್ಪೆಯಿಂದ ಮುಚ್ಚಿ ಕಣ್ಣುಗುಡ್ಡೆಗಳನ್ನ ಕಾಪಾಡುವ ಹಾಗೆ, ನನ್ನನ್ನ ಆ ಸೇರ್‌ಜಿ ಬಹಳ ಚೆನ್ನಾಗಿ ಕಾಪಾಡಿದ ನಾನೂ ಅವನ ನಂಬಿಕೆ ಕಳೆದು ಕೊಳ್ಳಲಿಲ್ಲ. ಸಾಚಾ ಇಸಮು ಅನ್ನಿಸಿ ಶಾಭಾಸ್‌ಗಿರಿ ಪಡೆದಿದ್ದೆ. ಚೆನ್ನಾಗಿ ದುಡಿಯುವೆ. ದುಡ್ಡು ಅಂದರೆ ದುಡಿದು ತರಬೇಕಾದ ವಸ್ತು. ಹಾಲು ಕುಡಿದ ಮಕ್ಕಳೇ ಬದುಕುವುದು ಕಷ್ಟ ; ಇನ್ನು, ಹೆಂಡ ಕುಡಿದರೆ ಉಳಿಯುತ್ತವೆಯೆ ಅವು ? ಬೆವರದೆ ಊಟಮಾಡಿದರೆ, ಮೈಗೆ ಅಂಟುತ್ತದೆಯೆ ? ಕಂಡವರ ಕಣ್ಣೀರು ಬೆರೆಸಿ ಅನ್ನ ತಿಂದರೆ, ಹೊಟ್ಟೆಯಲ್ಲಿ ಹುಣ್ಣು ಬರದೆ ಇರುತ್ತದೆಯೆ ?

ಅಂಥದ್ದರಲ್ಲೂ, ಒಂದು ಅನಾಹುತವಾಯಿತು : ಅಲ್ಲ, ಆಗುವುದ ರಲ್ಲಿತ್ತು. ಏನಾಯಿತು, ಅಂತೀರಾ ? ಬಟವಾಡೆಗೆ ಅಂತ ದೊಡ್ಡ ಸೇರ್‌ಜಿ ತಬೇಲಿ ಮಧ್ಯ ಬೆಂಚು ಹಾಕಿಸಿ ಕೂತ ; ಬೆಂಚಲ್ಲ....ಕಾಟ್ಲು

ಅಂತಾರೆ, ಅತ್ತ್ರಲಾಗೆಲ್ಲ. ಒಳ್ಳೆಯ ಕಬಂಧನ ಹಾಗೆ, ಅವನ ವೈಕಟ್ಟು. ಬೆಂಚಿನ ಮೇಲೆ ಆತ ಕೂತರೆ, ಭಾರ ತಡೀತದೆಯೆ? ಆಚೆ ಈಚೆ ಅರ್ಧಕ್ಕರ್ಧ ಇಳೀತಿರುತ್ತದೆ. ಅವನನ್ನ ತಬ್ಬಿ ಹಿಡಿದುಕೊಂಡರೆ, ಬೆನ್ನ ಹಿಂದೆ ನಮ್ಮ ಕೈಸೇರುವುದಿಲ್ಲ; ಅಷ್ಟಿದೆ, ಅವನ ಸುತ್ತಳತೆ. ಕೋಚ್‌ವ್ಯಾನುಗಳ ಸರದಿ ಮುಗಿಯಿತು; ಸೇಜುಗಳು, ಲಾಳದವರು, ಬಟ್ಲರುಗಳು, ಕಸ ಎತ್ತುವವರು, ಉಳಿದವರು, ಎಲ್ಲ ಮುಗಿಸಿ, ಬಂಗ್ಲಿ ಕಡೆ ಪಾದ ಬೆಳೆಸಿದ....ಆ ಕಾಟ್ಲು ಅಲ್ಲೇ ಬಿದ್ದಿತ್ತು, ರಾತ್ರೆ. ಅದನ್ನ ನೋಡುತ್ತಲೂ, ನನಗೊಂದು ತೀಟೆ ಹತ್ತಿತು. ನನ್ನಂತಹ ತಬ್ಬಲಿಗೆ, ಅದು ಹೊಳೆಯಬಾರದಾಗಿತ್ತು. ಆದರೂ, ಹಾಳು, ಆಸೆ ಅಂತ ಒಂದು ಹುಳ ಸೇರಿಕೊಂಡಿದೆಯಲ್ಲಾ, ಮೆದುಳನ್ನು ಕೊರೆಯುವುದಕ್ಕೆ....ಅದನ್ನ ಮೆಲ್ಲಗೆ ತಗಡಿನ ಮೇಲಕ್ಕೇರಿಸಿ, ಅವತ್ತು ರಾತ್ರೆ ಅದರಲ್ಲೇ ಮಲಗಿದ್ದೆ. ತಗಣೆಕಾಟ ಕಮ್ಮಿಯಾಯಿತು; ಸೊಗಸಾದ ಕನಸು ಬಿತ್ತು. ಎಲ್ಲ ಊರಿನದೇ ಕನಸು: ಅಲ್ಲಿಯ ಗದ್ದೆ ತೋಪು ಕೆರೆ ಕುಂಟೆ ಈಚಲ ಮರ.

ಬೆಳಗ್ಗೆ ಎದ್ದು, ಗಂಟೆ ಬಾರಿಸಿದೆ; ಅಲ್ಲಿಗೂ ಸಾಲಲಿಲ್ಲ ಕಾಟ್ಲಿ ಸುಖ. ಮತ್ತೆ ಆರರವರೆಗೆ ತಗಡುಹತ್ತಿ ಅದರಲ್ಲೇ ಮಲಗಿ, ಮೇಲು ಕೋಟಿ ದೇವರ ಮೇಲೆ ಪದ ಹೇಳುತ್ತ ಇದ್ದೆ. ಏಳಾಯಿತು. ಒಸಿ ಚಾ ಕುಡಿಯೋಣ ಅಂತ ಮಾಪಿಳ್ಳೇರ ಅಂಗಡೀ ಕಡೆ ಹೋದೆ. ಅವನ ಹಿರೇಮಗಳನ್ನೊಂದಿಷ್ಟು ಮಾತನಾಡಿಸಿದೆ.

ಎಂಟೂವರೆಗೆ, ಹಿಂದಕ್ಕೆ ಬಂದರೆ, ತಬೇಲಿ ತುಂಬ ಜನ, ಭಾರಿ ಪರಿಷೆ, ಎಂದೂ ಇಲ್ಲದ್ದು; ಕುದುರೆಗೇನಾದರೂ ಜಖಂ ಆಯಿತೆ ಅಂತ ನಾನೂ ಒಂದಂಚಿನಲ್ಲಿ ಅವಿತು, ಕತ್ತು ನೀಡಿದೆ. ಆ ಕಾಟ್ಲನ್ನು ಯಾರೋ ಕೆಳಕ್ಕಿಳಿಸಿದ್ದರು. ಅದರ ಮೇಲೆ, ದೊಡ್ಡ ಸೇರ್‌ರೇ ದರ್ಬಾರ್ ಮಾಡುತ್ತಿದ್ದರು. ನೆಲದ ಮೇಲೆ, ನಡುಮಧ್ಯೆ, ಗಾಡಿ ಚಕ್ರದ ಪಟ್ಟೆಯೊಂದನ್ನ, ರೌಂಡಾಗಿ ಮಡಗಿದ್ದರು. ಆ ಸುತ್ತಿನ ನಡುವೆ

ಎರಡಾಣೆ ನಾಣ್ಯವೊಂದನ್ನ ಇರಿಸಿದ್ದರು....ಒಬ್ಬೊಬ್ಬನನ್ನೂ ಹೆಸರು ಹಿಡಿದು ಕೂಗಿ, “ಈ ಪಟ್ಟೀ ಒಳಕ್ಕೆ ಬಂದು ನಿಂತು ನಿನ್ನ ದೇವರ ಹೆಸರು ಹೇಳಿ ಆ ಕಾಸನ್ನೆತ್ತಿ ಕಣ್ಣಿಗೊತ್ತಿಕೊ, ಸೇರ್‌ಜಿ, ರೂಪಾಯಿ ನಾನು ಮುಟ್ಟಲೇ ಇಲ್ಲ, ಮುಟ್ಟಿದ್ದರೆ, ಕಣ್ಣು ಇಂಗೇ ಹೋಗಲಿ, ಅಂತ ಹೇಳು” ಅಂತ ಹೆದರಿಸುತ್ತಿದ್ದರು, ತುರುಕ್‌ನಲ್ಲಿ.

ನನಗೇನೂ ಬೆಳಕಾಗಲಿಲ್ಲ. ಗೋಡೆ ಪಕ್ಕಕ್ಕೆ ಸೇಜೊಬ್ಬನನ್ನ ಎಳೆದೆ. ತಗ್ಗಿದ ದನಿಯಲ್ಲೇ ವಿಚಾರಮಾಡಿದೆ. “ನೋಡು, ಚೆಲುವಾ! ಎಂಥ ಮನೆಹಾಳು ಮಂದಿ ಇರುತ್ತಾರೆ, ಉಂಡ ಎಲೆಯಲ್ಲೇ ಹೇಸಿಗೆ ಮಾಡುವವರು. ಪದಾರ್ಥ ಒಂದು ಕಡೆಯಾದರೆ ಗುಮಾನಿ ನೂರೆಂಟು ಕಡೆ; ಕದ್ದವನೊಬ್ಬ ಗುದ್ದು ತಿಂದವನಿನ್ನೊಬ್ಬ; ನಿನ್ನೆ ಇಲ್ಲಿ ಬಟವಾಡೆ ನಡೆಯುತ್ತಿದ್ದಾಗ ಯಾವನೋ ಚಾಂಡಾಲ ಸಾವಿರ ರೂಪಾಯಿ ಗಂಟ್ನ ಅನಾಮತ್ ಹಾರಿಸಿಬಿಟ್ಟಿದಾನಂತೆ” ಅಂದ. ನನ್ನ ಎದೆ ಛಂಗ್ ಅಂತ ಹಾರಿತು. ತಲೆ ಗಿರ್‍ರಂತ ತಿರುಗಿತು.

ಅಂಥ ಕಜ್ಜಿ ಹಿಡಿದ ಕತ್ತೆ ಯಾರಪ್ಪ ನಮ್ಮ ತಬೇಲೀಲಿ, ಅಂತ ಮೂಗಿನ ಮೇಲೆ ಬೆರಳಿಟ್ಟೆ. ಬೆರಳು ತೋರಿಸಿದರೆ ಕೊರಳು ನುಂಗುವ ಹಂದಿಗಳಿದಾರಲ್ಲಾ, ಅಂತ ಅಂದೆ. ಉಂಡ ಮನೆಗೆ ಕೆಂಡ ಸುರಿಯೋ ಭಂಡ ಅಂತ ಅವನನ್ನ ಬೈದೆ.

“ನಿನ್ನೆ ರಾತ್ರೆ ಇಲ್ಲಿದ್ದವರ ಪೈಕಿ ಒಬ್ಬನೂ ಪರಾರಿ ಇಲ್ಲ, ಎಲ್ಲರೂ ಇಲ್ಲೇ ಇದಾರೆ; ಕದ್ದ ಮಾಲನ್ನ ಮುಡಿಲಲ್ಲಿ ಕಟ್ಟಿಕೊಂಡು ತಿರುಗುತ್ತಾನೆಯೋ ಅವನು? ಕೆಂಡ ಅಲ್ಲವೆ ಅದು? ಊಹುಂ. ನಮ್ಮವರು ಯಾರೂ ಮೂಸೇ ಇಲ್ಲ, ಆ ಸಾವಿರಾನ. ಸೇರ್‌ಜೀ ಅದನ್ನ ಬೇಂಕಲ್ಲೇ ಬಿಟ್ಟು ಬಂದನೋ, ಗಾಡೀಲೇ ಮರೆತನೋ, ದಾರೀಲೇ ಚೆಲ್ಲಿದನೋ, ಗಾಳೀಲೇ ತೂರಿದನೋ, ಅವನ ಅಳಿಯ ನುಂಗಿದನೋ, ಸೊಸೆ ಗಡಪ್ ಮಾಡಿಟ್ಕೊಂಡಳೋ, ಏನು ಕಥೆಯೋ, ಉರಿಯೋ ದೇವರೇ

ಬಲ್ಲ. ಸುಮ್ಮನೆ ಬಡಪಾಯಿಗಳ ಹೊಟ್ಟೆ ಮೇಲೆ ಬರೆ ಎಳೆದರೆ ದೇವರೊಪ್ಪುತ್ತಾನೆಯೇ? ಬಡವರೇ ಹಣ ಕದಿಯುವುದು, ತಮ್ಮ ಕೈ ಸದಾ ಶುದ್ಧ, ಅಂತ ಈ ಶ್ರೀಮಂತರು ತಿಳಿಯುವುದೇ ಅನ್ಯಾಯ. ನಡೀತಿರೋದು ಹಾಗಲ್ಲ. ಬಡವನಿಗೆ ಭಯ ಹೆಚ್ಚು; ನರಕ ಎಂಬ ನಂಬಿಕೆ ಜಾಸ್ತಿ; ಅವನು ಹೊಟ್ಟೆ ಬಟ್ಟೆ ಕಟ್ಟಬಲ್ಲ. ಶ್ರೀಮಂತಿಕೆಯಲ್ಲಿ ಡೋಲು ಬಡಿಯುವವರಿಗೆ ತೀರದ ಆಸೆ ಇರುತ್ತದೆ; ಎಷ್ಟು ತಿಂದರೂ ತೇಗು ಬರುವುದಿಲ್ಲ; ಅಲ್ಲದೆ ಇನ್ನೊಂದು: ತಮ್ಮ ಮೇಲೆ ಗುಮಾನಿ ಬರುವುದಿಲ್ಲ ಅಂತ ಜರೀಪೇಟದವರಿಗೆ ಖಾತ್ರಿ ಇದೆ; ಈ ಪೋಲೀಸಿನವರೂ ಅಷ್ಟೆ: ಮಾಲು ಹೋಯಿತು ಅಂತ ದೂರಿದರೆ, ಮಾಲಿಯನ್ನೇ ಸತಾಯಿಸುತ್ತಾರೆ, ಮಾಲೀಕನ ತಂಟೆಗೆ ಹೋಗೋದಿಲ್ಲ'' ಅಂತ ನಾನು ನನ್ನೊಳಗೇನೆ ಯೋಚನೆ ಮಾಡುತ್ತಿದ್ದೆ.

ನನ್ನ ಸರದಿ ಇನ್ನೂ ಬಂದಿರಲಿಲ್ಲ........ಅಷ್ಟರೊಳಗೆ ನನಗೊಂದು ನೆನಪಾಯಿತು ಪಳಚ್‌ನೆ. ರಾತ್ರಿ ಕಾಟ್ಲೆ ಮೇಲೆ ಮೈ ಒರಗಿಸಿದಾಗ, ಬೆನ್ನಿಗೇನೋ ಒತ್ತಿತು; ಕುದುರೆ ಉಜ್ಜುವ ಬ್ರಷ್ಷು ಇಲ್ಲೆಲ್ಲಿ ಬಂತಣ್ಣಾ, ಅಂತ ಗೊಣಗುತ್ತ, ನಾನು ಅದನ್ನ ಮೂಲೆಗೆ ಎಸೆದಿದ್ದೆ. ಆಗ ಢಂಗ್ ಅಂತ ಸದ್ದು ಬೇರೆ ಆಯಿತು; ತಗಡಿನ ಸದ್ದು ಎಂದು ಸುಮ್ಮನಾಗಿದ್ದೆ. ಅದು ತನಕ ಈ ವಿಷಯ ಜ್ಞಾಪ್ತಿಗೆ ಬರಲೇ ಇಲ್ಲ. ಗ್ರಾಚಾರದ ಗಂಟು ಅದೇ ಇರಬೇಕು, ಅಂತ ಪರಮಾತ್ಮ ಬೆಳಕು ತೋರಿಸಿದ. ಆಟ್ಟಕ್ಕೆ ಹಾರಿದೆ, ಒಂದೇ ನೆಗೆತದಲ್ಲಿ. ಅಲ್ಲೇ ಬಿದ್ದಿತ್ತು, ಲೋಟಿನ ಕಂತೆ. ಕೆಳಕ್ಕೆ ತಂದು ಶಿವಾ ಅಂತ, ಸೇಠ್‌ಜಿ ಕೈಯ್ಯಾಗಿರಿಸಿ, ಪಾದ ಮುಟ್ಟಿದೆ. ಬಿಚ್ಚಿ ನೋಡುತ್ತಾರೆ ಸಾವಿರ ರೂಪಾಯಿ, ಬಿಡಿ ಕಾಸು ಕಮ್ಮಿ ಇಲ್ಲ. ಶಾಭಾಸ್ ಅಂದರು ಧಣಿಗಳು, ನಾನು ಗಡಗಡ ನಡುಗುತ್ತ ನಡೆದ ಸಂಗತಿ ಹೇಳಿದೆ. ಇಂಕ್ರಾನೂ ಸಂದೇಹ ಬರಲಿಲ್ಲ ಸೇಠ್‌ಗೆ. ಬೆನ್ನ ಮೇಲೆ ಭಲಾ ಅಂತ ಕೈ ಇಟ್ಟರು; ಕಿಸೆಯಿಂದ ಎರಡು ರೂಪಾಯಿ ತೆಗೆದು, ಸುತ್ತ ಐವತ್ತು ಮಂದಿ ಕಣ್ಣು ಕಣ್ಣು

ಬಿಡುತ್ತ ನೋಡುತ್ತಲೇ ಇದ್ದಾರೆ...........ರಾಣೀದು ರೂಪಾಯಿ, ನನ್ನ ಕೈಯಾಗಿಟ್ಟರು, ಮುಷ್ಟಿ ಸಡಲಿಸಿ.

ಅವತ್ತಿಂದ ನಾನು ಅಂದರೆ ಅವರಿಗೆ ತುಂಬಾ ವಿಶ್ವಾಸ. ಚೆಲುವಾ ಚೆಲುವಾ, ಅಂತ ಕಿವಿ ತಂಪಾಗುವ ಹಾಗೆ ಕೂಗುವರು. ಕತ್ತೆ ಗಿತ್ತೆ ಎಲ್ಲ ಅವತ್ತಿಗೇ ಕುಲಾಸ್. ಹಾಯಾಗಿ ಅವರ ಕೂಳು ಮೆಲುಕು ಹಾಕುತ್ತ, ಲಾಯದ ಕುದುರೆಯ ಹಾಗೆ, ಕಟ್ಟಿಸಿಟ್ಟ ಕೆಲಸ ಮಾಡುತ್ತ, ನಾನೂ ನಿಂತುಬಿಟ್ಟೆ, ಅವರ ತಬೇಲೀಲಿ.

ನಾವು ಮಾಡುವ ಕುದುರೇ ಗಾಡಿ ಮೇಲೆ ಕೋಚ್‌ಮ್ಯಾನ್ ಪಕ್ಕದಲ್ಲಿ ಕೂತು, ನಾನು ಸುಮಾರು ಬೊಂಬಾಯಿ ಎಲ್ಲ ಸುತ್ತಿದೆ ಕದ್ದು. ಅಲ್ಲಿ ನಾನು ಕಂಡದ್ದನ್ನೆಲ್ಲ ಎರಡೇ ದಿನದಲ್ಲಿ ಹೇಳಿ ಮುಗಿಸುವುದಕ್ಕಾಗು ವುದಿಲ್ಲ. ಆ ಉಪ್ಪರಿಗೆ ಸಾಲು, ಜೂಜಿನ ಕಟ್ಟೆ, ದೀವಳಿಗೆ ಹಬ್ಬ, ಗಣೇಶನ ಗಲಾಟೆ, ಹೆಂಡದ ಮನೆ, ಚೌರದಂಗಡಿ, ಕೆಟ್ಟ ಹೆಂಗಸರ ಬೀದಿ....ಲಂಕಾಪಟ್ಟಣದಲ್ಲೂ ಅಂಥದ್ದು ಇದ್ದಿರಲಾರದು. ಹಾಳೂರು ಸ್ವಾಮಿ, ಬೊಂಬಾಯಿ. ಕೈ ಬಾಯಿ ಕಚ್ಚೆ ಅಲ್ಲಿ ಕಾಪಾಡೋದು ಬಲು ಕಷ್ಟ. ಎಂಥ ಸನ್ಯಾಸಿಯನ್ನೂ ಅವೆ ಸಂಸಾರಕ್ಕೆಳೆದುಬಿಡುತ್ತದೆ. ವಿಶ್ವಾಮಿತ್ರ ಮೇನಕಿ ಅಂತಾರಲ್ಲಾ, ಹರಿಕಥೆ ದಾಸರು, ಮೈಲಿಗಟ್ಟಲೇ ಅಂಥ ಮೇನಕಿಯರೇ ಅಲ್ಲಿ, ಕೆಲವು ಕಡೆ ಪ್ಯಾರಿ ಪ್ಯಾರಿ ಅಂತ ಹಾಡುತ್ತ, ಕೈಸನ್ನೆ ಮಾಡೋರು. ಆಮೇಲೆ ಟ್ರಾಂ ಅಂತ ಇದೆ ಬೊಂಬಾಯಿ ಯಲ್ಲಿ. ಪುಟ್ಟ ರೈಲು; ಒಂದೇ ಡಬ್ಬಿ; ನಡುರಸ್ತೆಲೇ ಹೋಗ್ತದೆ; ಇಂಜಿನ್ ಪಂಜಿನ್ ಏನೂ ಇಲ್ಲ ಅದಕ್ಕೆ, ಇದ್ದಿಲು ನೀರು ಹೊಗೆ ತಂಟೆ ಇಲ್ಲ. ನೆಲದ ಮೇಲೆ ಪಟ್ಟಿ ಹಾಸಿದಾನೆ, ಎಲಟ್ರಿ ಕಂಬಿಗೆ ಹೊಯ್‌ಗಳ ಹಾಕಿದಾನೆ, ಅಲ್ಲಿಂದ ತನಗೆ ಬೇಕಾದ ಪವರು ಎಳೆದು ಕೊಂಡು ರೊಯ್ ಅಂತ ಹೋಗುತ್ತೆ. ಒಂದಾಣೆ ಕೊಟ್ಟರೆ ಮೂರು ಬೆಟ್ಟಗಲದ ಟಿಕೀಟ್ ಕೊಡುತ್ತಾನೆ; ಅದು ತೀರುವ ತನಕ ಸಾಗಿಸು ತ್ತಾನೆ. ಆಯಿತು ಅಂದರೆ ಇಳಿ ಅಂತಾನೆ. ಅವನು ನಿಲ್ಲಿಸಿದ

ಜಾಗದಲ್ಲಿ ಇಳಿದೇ ಬಿಡಬೇಕು. ಆ! ಧುಮುಕುವುದರಲ್ಲೇ ನಮ್ಮ ಜಾಣತನ; ಎಂಥ ಪೈಲ್ವಾನನಾದರೂ, ಆಗ ಹುಷಾರಿ ತೆಗೆದುಕೊಳ್ಳಬೇಕು. ಧುಮುಕಿದ ಕಡೆ ನಿಂತೆವೋ ಬಿದ್ದೆವು ಅಂತಲೇ ಲೆಕ್ಕ. ಧುಮುಕಿದ ತಕ್ಷಣ ಹತ್ತು ಹೆಜ್ಜೆ ಓಡಬೇಕು ಅದರ ಕೂಡ, ಕೂತ ಕರ್ಮ ಸವೆಯಬೇಕಾದರೆ.

# ಹೆಣ್ಣು ಜೀವ

ಐದು ವರ್ಷ ಇದ್ದೆ ಅಂದೆನಲ್ಲಾ. ಆದರೆ, ಆದರ ಪೈಕಿ ಮೂರು ವರ್ಷ ನಾನು ಮನೆ ಮಠ ಊರು ಕೇರಿ ತಾಯಿ ಮಗು ತೌರು ಎಲ್ಲನ್ನೂ ಒತ್ತರಿಸಿ, ಬೂದಿ ಬಳಿದ ಬಾಬಾಜಿಯ ಹಾಗೆ ಅಲಕ್ ನಿರಂಜನನಾಗಿದ್ದು ಬಿಟ್ಟೆ. ಕಟ್ಟಿಕೊಂಡರೆ ಸಂಸಾರ; ಬಿಟ್ಟು ಕೂತರೆ ಅದರ ಸೆಳೆತವೇ ಸಡಿಲ. ಸಂಸಾರವನ್ನ ನಾವೇ, ಕೋತಿಮರಿ ತಾಯಿಯ ಹೊಟ್ಟೆಯನ್ನು ಬಿಗಿದುಕೊಳ್ಳುವ ಹಾಗೆ, ಬಿಗಿಯಬೇಕು. ನಾವು ಕೈ ಬಿಟ್ಟರೆ, ಅದರ ಪಾಡಿಗೆ ಅದು ಹೊರಟುಹೋಗುತ್ತದೆ. ಆದರೆ ಬಿಡುವುದು ಮಾತ್ರ ಕಷ್ಟ.

ಕನಸಿನಲ್ಲಿ ಮಾತ್ರ ಕಾಡುವುವು, ಮೈಸೂರು ಕಡೆಯ ನನ್ನ ಕಾಲುತೊಡಕುಗಳು. ನಾನು ಚೆನ್ನಾಗಿದ್ದೆ ಅಂತ ಅವಕ್ಕೆ ತಿಳಿದರೆ ಅದು ಕೊಡು, ಇದು ಕಳುಹಿಸು, ಅವಳಿಗೆ ಜ್ವರ, ಇವನಿಗೆ ಲಗ್ನ, ಅವನು ಸತ್ತ, ಇವನು ಬದುಕಿದ ಅಂತ ಅವರ ಸುದ್ದಿ ಸದಾ ಕಿವಿ ಚುಚ್ಚುತ್ತಲೇ ಇರುತ್ತದೆ; ಅವರೆಲ್ಲೋ ನಾನೆಲ್ಲೋ ಅಂತ ಎಣ್ಣೆ ಸೀಗೇಕಾಯಿ ಹಾಗೆ ಇರುವುದೇ ಮೇಲು—ಎನಿಸಿತು ನನಗೆ. ಅವರ ಗೋಳು ಕಟ್ಟಿಕೊಳ್ಳುವುದಕ್ಕೆ ನನಗೆ ಟೈಮೂ ಇರಲಿಲ್ಲ ಅನ್ನಿ. ಎದ್ದ ಗಳಿಗೆಯಿಂದ ಬಿದ್ದುಕೊಳ್ಳುವ ತನಕ ಗಂಟೆಯ ಮೇಲೇ ಕಣ್ಣು, ಕುದುರೆ ಮಾಲೀಸು, ಗೋಧಿ ಕುದಿತ, ಕಾಸಿನ ಎಣಿಕೆ, ತಗಣೆ ಷಿಕಾರಿ. ಇವೇ ಸದಾ.

ಒಂದು ಪಿಶಾಚಿ ಬೇರೆ ನನಗೆ ಗಂಟುಬಿದ್ದಿತ್ತು, ಬಿಸಿಮನೆ ಸಹವಾಸದಿಂದ. ಎತ್ತ ತಿರುಗುವುದಕ್ಕೂ ಅದು ಜಾಗ ಕೊಡುತ್ತಿರಲಿಲ್ಲ.

ಕಂಬ್ಳಿ ಮೋಷೀನ್‌ನಲ್ಲಿ ಹಲ್ಲು ಕಿರೀತಾ ನನ್ನ ಹಲ್ಲು ಕಿತ್ತಳಲ್ಲಾ, ಅವಳಿಗಿಂತ ಹೊಲಸು ಹೆಂಗಸು. ಸುಲ್ತಾನ್‌ಸಾಬ್ ಗಲ್ಲಿಯ ಒಂದು ಮನೆಯನ್ನ ಅದು ಬಾಡಿಗೆಗೆ ಗೊತ್ತುಮಾಡಿತ್ತು. ಗುಣ ಚೆನ್ನಿಲ್ಲ ದಿದ್ದರೂ, ರೂಪು ಸೊಗಸು. ನಮ್ಮ ಮೈಸೂರು ಸೀಮೆಯದೇ ಇಸಮು. ಕನ್ನಡದ ಹಾಡುಗಳನ್ನ ಚೆನ್ನಾಗಿ ಹೇಳುತ್ತಿತ್ತು. ಅದರ ಮನೆಗೆ ಆಗಾಗ ಹೋಗಿಬರುತ್ತಿದ್ದೆ, ನಿಮ್ಮ ಹತ್ರ ಮುಚ್ಚೇನು, ಮರೆಯೇನು ? ತೆಪ್ಪಗೆ ನಡೀತಾ ಇದ್ದವನ ಕಾಲಿಗೆ ದೇವರೇ ಟಾಂಗ್‌ಕೊಟ್ಟು ನನ್ನನ್ನ ಬೀಳಿಸಿದ.

ನಮ್ಮವರು ಬಹಳ ಮಂದಿ ಅಲ್ಲಿ ಹೆಂಡದಿಂದಲೇ ಹಾಳಾಗಿದ್ದರು· ಆದರೆ, ಎದೆ ಮೇಲೆ ಕೈ ಇಟ್ಟು, ಇಷ್ಟು ಮಾತ್ರ ಹೇಳಬಲ್ಲೆ : ಒಂದೆರಡು ಬಾರಿ ಹೋಗಿ ಪಡಲಾರದ ಪಾಡು ಅನುಭವಿಸಿದ ಮೇಲೆ, ಎಚ್ಚರಿಕೆ ತೆಗೆದುಕೊಂಡೆ. ಅದೊಂದು ಕೆಟ್ಟ ಚಟ ಮಾತ್ರ ನನ್ನನ್ನ ಗುಲಾಮ ಎನಿಸಿಕೊಳ್ಳಲಿಲ್ಲ.

ಊರಿಗೆ ನಾನು ಕಾಗದವನ್ನೇ ಬರೆಯಲಿಲ್ಲ. ಏಕೆಂದರೆ, ಒಂದು, ಬರೆದರೆ ಅಲ್ಲಿಗೆ ನಿಲ್ಲೋದಿಲ್ಲ; ಇನ್ನೊಂದು, ಬರೆಯೋಣ ಎನಿಸುತ್ತದೆ. ಹೀಗೆಯೇ, ಬೆಳೆಯುತ್ತದೆ ಹನುಮಂತನ ಬಾಲ. ತಾಯಿಯ ಸುದ್ದಿ ತಿಳಿಯದು; ಇವಳ ಸಮಾಚಾರ ಬೇಕಿರಲಿಲ್ಲ. ನನ್ನ ಗೋಳು ನನಗೆ ಅಂತ ಬಾಯಿ ಮುಚ್ಚಿಕೊಂಡು ಕೂತಿದ್ದೆ, ಬೊಂಬಾಯಲ್ಲಿ. ಬಂದಾಗ ಏನೂ ತರಲಿಲ್ಲ ; ಎಷ್ಟು ಕಾಗದ ಪೋಷ್ಟಿಗೆ ಹಾಕಿದರೂ, ಹೋಗುವಾಗ ಒಬ್ಬನೂ ಜೊತೆಗೆ ಬರುವುದಿಲ್ಲ. ಅಲ್ಲಿ ಅವನು ನೋಡುವ ಲೆಕ್ಕ ಪತ್ರನೇ ಬೇರೆ. ಇವೆಲ್ಲ ಏನು ? ಕಟ್ಟಿಕೊಂಡಷ್ಟೂ, ಕೊರಳು ಬಿಗಿಯುತ್ತವೆ ; ಕರುಳು ಬೇಯಿಸುತ್ತವೆ. ಸೇರುತ್ತೆ, ಒಡೆಯುತ್ತೆ ; ಕೇಳಿಕೊಂಡುಬಂದಷ್ಟು, ತಾಳಿಕೊಂಡಿದ್ದಷ್ಟು. ಬುತ್ತಿ ಖರ್ಚಾಗುವ ತನಕ ಪ್ರಯಾಣ. ಎಲ್ಲೆಲ್ಲಿಂದ ಎಷ್ಟೆಷ್ಟು ನೀರು ಕುಡಿಯಬೇಕೋ,

ಅಷ್ಟಷ್ಟು ಅಲ್ಲಲ್ಲಿ ಸೀರಡಿಕೆ ಕಾಟ. ಕೊನೆಗೆ, ಕೋಣನ ಸಹಿತ ಬಂದು, ಅವನು ಬಾಗಿಲು ತಟ್ಟಿದಾಗ, ಇನ್ನೂ ಕೊಂಚ ಕುಡೀತೇನೆ ತಾಳು ಅಂದರೆ, ಅವನು ಬಿಡ; ವಾರಂಟ್ ಜಾರಿ ಮಾಡೇ ಮಾಡುತ್ತಾನೆ. ಮನುಷ್ಯ ಅನ್ನೋನು ಅಂಥ ಗಾಂಧೀನೇ ಇರಬಹುದು, ಆದರೂ, ಕ್ರಿಮಿಕೀಟದ ಲೆಕ್ಕಾನೇ, ಜವರಾಯನ ಕಣ್ಣಿಗೆ. ಹರಿದು ಬರುವ ಹುಳವನ್ನ ತಮಾಷೆಗೋ ತಿಳಿಯದೆಯೋ ಮಕ್ಕಳು ಹಿಸುಕಿ ಸಾಯಿಸುವ ಹಾಗೆ, ಹಿಸುಕೇಬಿಡುತ್ತಾನೆ, ಕತ್ತನ್ನ.

ಯಾಕೆ ಹೇಳುತ್ತಿದೇನೆ ಅಂದರೆ, ಹಾಗೂ ಹೀಗೂ ಎಲ್ಲೋ ಒಂದು ಕಡೆ ಈ ಜೀವ ತೇದುಬಿಡೋಣ ಹುಟ್ಟಿದ ತಪ್ಪಿಗೆ, ಅಂತ, ಹಾಯವಾಗಿದ್ದೆ ನಾನು, ಮೂರು ವರ್ಷ.

ಆದರೆ, ಅದಕ್ಕೂ ಒಪ್ಪಲಿಲ್ಲ ಪರಮಾತ್ಮ. ಬಿಸಿಲುಕುದುರೆಯ ಮೇಲೆ ಕೂತು ಮಝು ಮಾಡುತ್ತಿದ್ದ ನನ್ನನ್ನ ಕೆಳಕ್ಕೆ ಕೆಡವಿದ.

ಅರಸೀಕೆರೆಯ ಹತ್ತಿರ ಕಲ್ನಾಯಕನಹಳ್ಳಿ ಅಂತ ಒಂದು ಊರು. ಅಲ್ಲಿಯವನು ಒಬ್ಬ ರೈಲಿನಲ್ಲಿ ಗ್ಯಾಂಗ್‌ಮನ್ನಾಗಿ ದಾಖಲಾಗಿದ್ದ, ಹೊಟ್ಟೆಪಾಡಿಗೋಸ್ಕರ. ಅವನಿಗೆ ಬಿಟ್ಟಿ ಪಾಸಿತ್ತು, ಓಡಾಡುವುದಕ್ಕೆ. ಇನ್ನೇನು, ಕಾಲು ನಿಲ್ಲುತ್ತದೆಯೆ? ಹೊರಟ.... ಕಾಶಿ, ರಾಮೇಶ್ವರ, ಅಂತ....ಗಂಗೆ ಯಮುನೆ ಅಂತ....ಯಾವನೋ ಒಬ್ಬ ಕಹಿ ಸೋರೇಕಾಯಿಯನ್ನ ಸಿಹಿಮಾಡೋಣ ಅಂತ ನೂರೆಂಟು ತೀರ್ಥದಲ್ಲಿ ಅದ್ದಿದನಂತಲ್ಲಾ, ಹಾಗೇನೇ, ಅವನೂ....ಅವನ ಊರಲ್ಲೇ ಅವನ ಮನೆಯಲ್ಲೇ ಅವನ ಹತ್ತಿರವೇ ಅವನ ಒಳಗೇನೇ ದೇವರಿರುವುದನ್ನ ಕಾಣ, ಕಮಂಗಿ. ಕೂಗಳತೆಯಲ್ಲಿ ದೇವರಿದಾನೆ.

ಬೊಂಬಾಯಲ್ಲೂ ನಿಂತ, ನಾಲ್ಕು ದಿನ. ನಮ್ಮ ತಬೇಲೀಲೇ ಠಿಕಾಣಿ. ನಮ್ಮ ಪೈಕಿ ಒಬ್ಬನ ಸೋದರಮಾವ ಅವನ ತಮ್ಮನಿಗೆ

ಹೆಣ್ಣು ಕೊಟ್ಟಿದ್ದನಂತೆ. ಆ ಬಳ್ಳಿಯನ್ನೇ ಹಿಡಿದು ನಮ್ಮನ್ನು ಪತ್ತೆ ಹಚ್ಚಿದ್ದ. ಅವನ ಕೂಡ ಹರಟುತ್ತ ಹರಟುತ್ತ ನಾನು ಬೇಹುಷಾರಾದೆ. ನಾನೊಬ್ಬ ಪೆದ್ದ. ಲಂಗೋಟಿ ಸ್ನೇಹಿತನಿಗಿಂತ ಹೆಚ್ಚಾಗಿ ಅವನೊಂದಿಗೆ ಲಲ್ಲೆ ಹೊಡೆದೆ; ಬೊಂಬಾಯಿ ಪೇಟೆಯನ್ನೆಲ್ಲ ಅವನಿಗೆ ಕೋಚ್ ಗಾಡಿ ಮೇಲೆ ಕೂರಿಸಿ ತೋರಿಸಿಕೊಟ್ಟೆ. ನನ್ನ ಪುರಾಣಾನೆಲ್ಲ ಅವನ ಕಿವಿಗೆ ಊದಿದೆ. ಅವನ ಹಳ್ಳಿಗೂ ನಮ್ಮೂರಿಗೂ ಐವತ್ತರವತ್ತು ಮೈಲಿ ಕಲ್ಲು. ಅಲ್ಲಿಗೆಲ್ಲಿ ಮುಟ್ಟಿಸುತ್ತಾನೆ ಇವನು ಸುದ್ದಿಯನ್ನ, ಅಂತ ನಾನು ಸಡಿಲಬಿಟ್ಟೆ ಬಾಯನ್ನ. ಅದನೆಲ್ಲ ಬುರುಡೆಗೆ ತುಂಬಿಕೊಂಡು ನಡೆದ ರೈಲಿನಲ್ಲಿ ಕಾಶಿಗೆ. ಅಲ್ಲಿ ನತ್ತರೂ ನತ್ತ ಕೈಲಾಸಕ್ಕೆ ಹತ್ತಿರದ ದಾರಿ ಅಂತ, ಅಥವ ಒಂದು ವೇಳೆ ನಶೀಬು ಚೆನ್ನಾಗಿದ್ದು ಹಿಂದಕ್ಕೆ ಬಂದರೂ, ಇತರೇ ಪುರಾಣ ಒತ್ತರಿಸಿ, ನನ್ನ ಪುರಾಣ ಬಿಚ್ಚುವುದಿಲ್ಲ, ಅಂತ, ನಾನು ಧೈರ್ಯವಾಗಿದ್ದೆ.

ಆದರೆ, ಬಿತ್ತು ಕೊಡಲಿ ಪೆಟ್ಟು, ಬುಡಕ್ಕೆ ಕಾಶಿ ಮುಗಿಸಿ, ಹಳ್ಳಿ ಸೇರುತ್ತಲೂ, ಹೀನ ಸುಳಿ ಬೋಳಿಸಿದರೆ ಹೋದೀತೆ, ಒದರೇಬಿಟ್ಟ ನನ್ನ ರಾಮಾಣ್ಯಾನ, ನಮ್ಮೂರು ತನಕ. ಅವನ ಕೈಗೆ ಹಗ್ಗ ಕೊಟ್ಟು, ನನ್ನ ಕೈ ನಾನೇ ಕಟ್ಟಿಸಿಕೊಂಡೆ. ಸರಿ! ನನ್ನ ಹೆಂಗಸು ಇಷ್ಟಿದ್ದ ಕಾಗದ ಬರೆಯಿಸಿದಳು. ನೂರೆಂಟು ತಾಪತ್ರಯಗಳು ಒಟ್ಟಿಗೆ ಬಂತು, ಟಪಾಲ್‌ನಲ್ಲಿ. ಇನ್‌ಫ್ಲುಯೆಂಜಾ ನಮ್ಮೂರಿಗೂ ಹೋಗಿತ್ತಂತೆ. ನಾಲ್ಕು ನಾಲ್ಕು ಒಬ್ಬಟ್ಟುಗಳನ್ನು ಮಾಡಿ ಮನೆ ಮನೆ ಹೊಸಲಾಚೆ ರಾತ್ರಿಹೊತ್ತು ಇರಿಸಿ ಬಾಗಿಲು ಹಾಕಿದರೂ, ಒಳಕ್ಕೆ ನುಗ್ಗೇ ನುಗ್ಗಿತಂತೆ. ನನ್ನ ತಾಯಿ....ಪಾಪ, ಕಣ್ಣೀರಲ್ಲೇ ಕೈತೊಳೆದು ಬಾಳಿದ ಹೆಂಗಸು...... ಪರಮಾತ್ಮನ ಪಾದ ಸೇರಿದಳಂತೆ....ನನ್ನ ಹೆಂಡತಿಯ ತವರು ಮನೆಯಲ್ಲೂ ಎರಡು ಮೂರು ಮಂಚ ನಾಲ್ಕೈದು ತೊಟ್ಟಿಲು ಖಾಲಿಯಾದುವಂತೆ. ಅವಳಿಗೆ ದಿಕ್ಕು ದೆಸೆ ಏನೂ ಇಲ್ಲವಂತೆ; ಕಣ್ಣು

ಮಂಜು ಹಿಡಿದಿದೆಯಂತೆ; ಬೊಂಬಾಯಿಗೋ ಪಾತಾಳಕ್ಕೋ ಎಲ್ಲಿಗೆ ಬೇಕಾದರೂ ಬಾ ಅಂದರೆ ಬಂದುಬಿಡುತ್ತಾಳಂತೆ. ಕುಡಿಯುವ ಅಂಬಲೀನ ಮಕ್ಕಳು ಮರಿ ಸಮೇತ ಇಬ್ಬರೂ ಕುಡಿಯೋಣ ಅಂತ ಬರೆಯಿಸಿದ್ದಳು. ಬೊಂಬಾಯಿಗೆ ಹೊರಟಾಗ ಬಸುರಾಗಿದ್ದದ್ದು ಗಂಡಾಗಿ ಹುಟ್ಟಿತಂತೆ; ರಾಮು ಅನ್ನೋದೇ ಹೆಸರಂತೆ; ನನ್ನ ಬಣ್ಣವೇ ಅಂತೆ; ಮೂಗು ಮಾತ್ರ ನನ್ನ ತಾಯಿಯದಂತೆ....ಅಯ್ಯೋ! ಅಯ್ಯೋ! ಮೂರು ಹಾಳೆ ಮಹಾಭಾರತ.

ಕೇಳುತ್ತ ಕೇಳುತ್ತ ನನಗೆ ಎದೆ ಬಿಗಿದುಕೊಂಡು ಬಂತು. ಓದೋ ಪುಣ್ಯಾತ್ಮಸಿಗೂನೂ ಕಣ್ಣಲ್ಲಿ ನೀರು ತೊಟ್ಟಿಕ್ಕಿತು. ನನ್ನನ್ನ ಕಾಣದೆ, ನನ್ನ ಸುದ್ದಿ ತಿಳಿಯದೆ, ಆ ತಾಯಿ ಮನ ಎಷ್ಟು ಹೊಡೆದುಕೊಂಡಿತೊ? ಅಂಥ ವಸ್ತು ಇನ್ನು ಸಿಕ್ಕುವುದಿಲ್ಲ. ಆಕೆ ಪರಮಾತ್ಮನೆದುರು ಹೋಗಿ ನಿಂತಾಗ, ನಾನು ಮಾಡಿದ ತಪ್ಪುಗಳಿಗಾಗಿ ನನ್ನನ್ನ ಕ್ಷಮಿಸು ಅಂತ ಆಕೆ ಕೇಳುವುದಕ್ಕೆ ಮೊದಲೇ, ದೇವರೇ ತನ್ನ ಪೀಠದಿಂದ ಇಳಿದು ಬಂದು, 'ತಾಯಿ, ನಿನ್ನನ್ನ ಪೂರಾ ದಣಿಸಿಬಿಟ್ಟೆ, ಕ್ಷಮಿಸು' ಅಂತ ಅವಳನ್ನೇ ಕೇಳುತ್ತಾನೆ, ಖಾತ್ರಿ, ನೋಡುತ್ತಿರಿ. ಚೆಲುವನ ದಾರಿ ಕಾಯುತ್ತ, ಅವಳ ಕಣ್ಣುಗುಡ್ಡೆ ಬಿದ್ದು ಹೋಗಿರಬೇಕು. ಅವಳಿ ಜವಳಿ ಹೆತ್ತದ್ದರ ಪೈಕಿ, ಒಂದು ಹಾಗಾಯಿತು, ಒಂದು ಹೀಗಾಗ ಬೇಕೆ ಅಂತ ಎಷ್ಟು ಹೊಟ್ಟೆ ಕಿವುಚಿಕೊಂಡಳೋ ಇಳಿ ವಯಸ್ಸಿನಲ್ಲಿ? ಕೊನೆಗಾಲಕ್ಕೆ ಗಂಜಿ ಇಕ್ಕಿದಳೋ ಏನೋ, ಇವಳು? ಇಲ್ಲಾ, ಅತ್ತೆ ಅಂತ ಹಿಂದಿನದನ್ನೆಲ್ಲ ಮೆಲುಕುಹಾಕಿ ಮೂತಿ ತಿರುಗಿಸಿ ತೆಪ್ಪಗಿದ್ದಳೋ? ಮೂರು ದಿನ ಒದ್ದಾಡಿದೆ, ನಾನು, ಬಿಸಿ ಮನೆಗೂ ಹೋಗಲಿಲ್ಲ, ಆ ತೆಂಗಿನ ಗಲ್ಲೀಗೂ ಹೋಗಲಿಲ್ಲ. ಬರೀ ಬೀಡಿ, ಚಾನಲ್ಲೇ ಇದ್ದು ಬಿಟ್ಟೆ.

ರಾಮುನದೂ ಬಲವಾದ ಪಾಶ, ನನಗೆ. ಇವಳೂ ಸದಾ ಕಣ್ಣಿನ ಮುಂದೆ ಕೈನೀಡುತ್ತಿರುವ ಚಿತ್ರ. ಸೋತ ಕೈ, ಪಾಪ. ನಮ್ಮಲ್ಲಿ

ಹೆಣ್ಣಿನ ಜೀವ ಅಂದರೆ, ಗೋಳು. ತಂದೆ ತಾಯಿ ಇಬ್ಬರೂ ನೀನು ನಮಗೆ ಹುಟ್ಟಿದವಳಲ್ಲಾ ಅಂತ ಬೈಯುತ್ತಿರುತ್ತಾರೆ. ಸಾಗಹಾಕೋ ಪಿತೂರಿಯಲ್ಲೇ ತೊಡಗುತ್ತಾರೆ. ಅಣ್ಣ ತಮ್ಮ ಇಬ್ಬರೂ ನೀನು ಈ ಮನೇನ ನುಣ್ಣಗೆ ಮಾಡುವವಳು, ದೋಚಿಕೊಂಡು ಹೋಗುವವಳು, ಅಂತ ಗುಮಾನಿ ಇಡುತ್ತಾರೆ. ಗಂಡ, ನೀನಲ್ಲದಿದ್ದರೆ ಇನ್ನೊಬ್ಬಳು, ಅಂತಾನೆ. ಅತ್ತೆ, ಅಯ್ಯೋ ಮಾರಿ, ನನ್ನ ಮಗನಿಂದ ನನ್ನನ್ನ ದೂರಮಾಡಿದೆಯಲ್ಲೇ, ಅಂತ ಹೊಡೆದುಕೊಳ್ಳುತ್ತಾಳೆ. ಮಕ್ಕಳು, ಹೋಗೇ, ನಿನಗೇನು ತಿಳಿಯುತ್ತೆ ಪ್ರಪಂಚ, ನೀನು ಹಳೇ ಕಾಲದವಳು, ನಿನ್ನದೆಲ್ಲ ಕಾಟಾಚಾರ, ಅಂತವೆ....ಪಾಪ, ಈ ಹಾಳು ಬೊಂಬಾಯಲ್ಲಿ ಅವಳಿಗೆಷ್ಟು ಅನ್ಯಾಯಮಾಡಿದೆ, ನಾನು? ಅವಳಿಗೆ ಆಡಬೇಕಾದ ಮಾತನ್ನೆಲ್ಲ ಬೀದಿ ನಾಯಿಯ ಕಿವಿಯಲ್ಲಿ ಊದಿದೆನಲ್ಲಾ....ಆದರೂ, ಪಾಪ, ಎಷ್ಟು ಒಕ್ಕಣೆಯಾಗಿ ಕಾಗದ ಬರೆಯಿಸಿದಾಳೆ: ನಿಮ್ಮ ಪಾದ ಸೇವೆ, ನಿಮಗೆ ಕೂಳು ಬೇಯಿಸಿ ಹಾಕುವುದೇ ನನ್ನ ಕೆಲಸ, ನಿಮ್ಮ ಹತ್ತಿರ ಇದ್ದು ಪುಣ್ಯ ಪಡೆಯಬೇಕು........

ಅವಳ ಮಾತೆಲ್ಲ ಎದೆಗೆ ಅಂಟಿತು. ಅವತ್ತೆಲ್ಲ, ಸಮುದ್ರದ ದಂಡೆಯಲ್ಲೇ ಕೂತಿದ್ದೆ. ಅಲೆ ಬಂದು ಬಡಿದು ಕರಗಿಸುವಷ್ಟು ಹತ್ತಿರದಲ್ಲೇ ಒಂದಾದ ಮೇಲೊಂದಾಗಿ ಮರಳು ಗುಡ್ಡೆಗಳನ್ನು ಪೇರಿಸುತ್ತ, ಕಾಲ ಕಳೆದೆ.

ನಾನೇನು ಹುಲಿಯೇ, ಸಿಂಹವೇ, ಕಲ್ಲುಬಂಡೆಯೇ, ಕಾರ್ಕೋಟಕನೆ?....ನನ್ನ ಮನ ಕರಗಿತು. ಐವತ್ತು ರೂಪಾಯಿ ಜೊತೆ ಮಾಡಿ ಅವಳ ಅಡ್ರೆಸ್ಸಿಗೆ ಕಳುಹಿಸಿಕೊಟ್ಟೆ, ಎಂಟಾಣೆ ತೆಗೆದುಕೊಂಡ ಅವನು ಅದನ್ನ ರವಾನಿಸುವುದಕ್ಕೆ. ಕಾಶಿಯಾತ್ರೆ ಮಾಡಿದ ಆ ಗ್ಯಾಂಗಿನವನು, ನನಗೆ ಮಾಡಿದ್ದು ಮೋಸ ಅಲ್ಲ, ಉಪಕಾರ, ಅರದುಕೊಂಡೆ. ಅವನು

ತಾನೆ ನನಗೆ ಸ್ಮೃತಿ ಕೊಟ್ಟವನು, ಮನೆಯದು, ಬೊಂಬಾಯಲ್ಲಿ, ಓಂಪ್ರಥಮವಾಗಿ ?

ಹೇಳುತ್ತ ಇದ್ದರೆ ನಗು ಬರುತ್ತದೆ, ನನಗೆ. ಬೆಂಗಳೂರಲ್ಲಿದ್ದಾಗ ಇವಳಿಗೆ ಗೆಜ್ಜೆ ಇತ್ತು, ಬೆಳ್ಳಿಯದು, ಕಾಲಿಗೆ. ಅದನ್ನ ಗಿರವಿ ಇಟ್ಟು ನಾನೇ ತಿಂದುಹಾಕಿದ್ದೆ. ಅವಳೂನೂ ನನಗೆ ಯಾಕೆ ಇವು, ನಾನೇನು ತಾಫೆ ಆಡಬೇಕೆ ಅಂದಿದ್ದಳು. ಅಂಥವಳಿಗೆ, ಹೊಟ್ಟೆಗಿಷ್ಟು ಗಂಜಿ ಮಾನ ಮುಚ್ಚುವುದಕ್ಕಿಷ್ಟು ಬಣ್ಣ ಸಾಕು ಅಂತ ಬರೆದಿದ್ದವಳಿಗೆ, ನಾನು, ತಬೇಲಿ ನೌಕರಿಯುವ, ಪೊಟ್ಟಣ ಕಟ್ಟಿ ಏನು ಕಳುಹಿಸಿದೆ, ಗೊತ್ತೆ ?.... ಬೆಳ್ಳಿ ಗೆಜ್ಜೆ, ಬೆಳ್ಳಿ ಡಾಬು ! ಒಟ್ಟು ಹದಿನಾಲ್ಕು ರೂಪಾಯಿ ಚಿಲ್ಲರೆ ಆಯಿತು. ಮಾಧವರಾಯರು ಅಂತ ಇದ್ದರು. ಅವರ ಮೊಹರು ಸಾಲ ಇಸ್ಕೊಂಡು, ಒತ್ತಿದೆ. ಒಂದು ಕುಪ್ಪಸದ ಕಣವನ್ನೂ ಇಟ್ಟಿದ್ದೆ. ಇವಳ ಹೆಬ್ಬೆಟ್ಟೊತ್ತಿಸಿ ರಸೀತಿ ಕಳುಹಿಸಿದ್ದರು, ನನಗೆ ವಾಪಸ್.

ನನ್ನ ಪತ್ತೆ ಸಿಕ್ಕಿದ್ದೇ ತಡ, ಕಾಗದದ ಮೇಲೆ ಕಾಗದ, ತಗಾದೆ ಹಿಂದೆ ತಗಾದೆ, ಷುರುವಾಗಿ ಹೋಯ್ತು. ನನಗಂತೂ ಕೋಪ, ಇಲ್ಲಿಯ ತನಕ ಬಂತು. ಎಲಾ, ಇವನೆ ! ಬಡಪಾಯಿ ಒಬ್ಬ ಸಿಕ್ಕ ಅಂತ, ಅವನನ್ನ ಕಿತ್ತು ತಿನ್ನೋದಕ್ಕೆ ತುದಿ ಮೊದಲೇ ಇಲ್ಲವೇ ? ಅನಾಮತ್ತಾಗಿ ಆಸಾಮಿಯನ್ನ ನುಣ್ಣಗೆ ಬೋಳಿಸೇ ಬಿಡೋದೆ ? ದೇವರಾಣೆಗೂ, ನಾನೇನೂ ಸುಮ್ಮನಿರಲಿಲ್ಲ. ನಾಲ್ಕು ಐದು ಕಳುಹಿಸುವೆ, ತಿಂಗಳಿಗೆ. ಕಾಡುವ ಭೂತಕ್ಕೆ ಬೇಡಿದ ಹರಕೆ ಪೂರೈಸಲೇ ಬೇಕಲ್ಲ.... ಒಂದೋ ಎರಡೋ ಕಾಗದಾನೂ ಬರೆಯಿಸುವೆ. ಒಂದಿಷ್ಟು ಸುಳ್ಳು ಪಳ್ಳು ಬೆರೆಸುವೆ : ನನಗೆ ಜ್ವರ, ಚಾಕರಿಗೆ ಹೋಗುತ್ತಾ ಇಲ್ಲ, ಹಣ ಖೋತಾ ಬಿದ್ದಿದೆ, ಮೈ ತುಂಬ ಸಾಲ ಆಗಿದೆ, ಅಂತ. ಇಲ್ಲದಿದ್ದರೆ, ಬಚಾವಾಗೋದು ಹೇಗೆ ? ಹೀರೋವರಿಗೇನು ಪ್ರಾಣಾನ್ನೇ ಹೀರಿ ಬಿಡುತ್ತಾರೆ. ನಮ್ಮ ಹುಷಾರಿ ಮೇಲೆ ನಾವಿರಬೇಕು. ಇವಳಿಲ್ಲಿ ರೈಲು

ಹತ್ತಿ ಬೊಂಬಾಯಿಗೆ ನುಗ್ಗುತ್ತಾಳೋ ಅನ್ನೋದೇ ನನ್ನ ಗಾಬರಿ. ಆದರೆ, ಹೆಣ್ಣುಮಗಳು, ಒಳ್ಳೆಯವಳು, ದುಡುಕೋ ಜಾತಿ ಅಲ್ಲ. ಇಂದಲ್ಲ ನಾಳೆ ಗಂಡ ಬಂದೇ ಬರುತ್ತಾನೆ, ಬಡತನದಿಂದ ಬಿಡಿಸಿಕೊಂಡು ಒಯ್ಯುತ್ತಾನೆ ಅಂತ, ಆ ಸೀತಾಮ್ಮನವರು ತೆಪ್ಪಗೆ ಕೂತಿದ್ದರಲ್ಲಾ, ರಾವಣನ ತೋಟದಲ್ಲಿ, ಹಾಗೆಯೇ ಇವಳೂ ಭಯಸ್ತಳಾಗಿ ಹಳ್ಳಿಯಲ್ಲೇ ದೇವರಿಗೆ ಕೈ ಮುಗಿಯುತ್ತಿದ್ದಳು.

# ಆಕಾಶಕ್ಕೆ ಹಾರಿದ್ದು

ಆಗೊಂದು ದಿನ, ನನಗೆ ಹುಚ್ಚು ಹಿಡಿಯಿತು. ಹುಂ. ಬುರುಡೆ ಯೊಳಗೆ ಊರಿನ ಗೀಳು ಗುಂ ಗುಂ ಅಂತಾನೇ ಇತ್ತು. ಬೇಜಾರು ಹತ್ತಿತ್ತು, ರಸ್ತೆ ದೀಪ ಮಹಡಿಮನೆ ಕೋಚು ಲದ್ದಿ ಸಮುದ್ರ—ಯಾವು ದನ್ನು ಕಂಡರೂ ವಾಕರಿಕೆ, ಕಣ್ಣುನೋವು. ಒಬ್ಬನಿಗೂ ಸುಳುವು ಕೊಡದೆ, ಬೊಂಬಾಯಿಗೆ ದೊಡ್ಡ ನಮಸ್ಕಾರ ಹಾಕಿ, ಎದ್ದೇ ಬಿಡೋಣ ಎನ್ನಿಸಿತು.

ಎಲ್ಲಿಗೆ ಹೋದರೂ, ಹೊಟ್ಟೆ ಸಂಗಾತಾನೇ ಬರುತ್ತದೆ. ರಟ್ಟೇಲಿ ಬಲ ಇರುವ ತನಕ ದುಡಿದೇ ತಿನ್ನಬೇಕು. ಆಮೇಲೇನು ? ಕಾಶಿ ಗೀಶಿ ಅಂಥ ಕಡೆ, ಮುದುಕರಿಗೆ ಮೋಟರಿಗೆ ಧರ್ಮಶಾಲೆ ಅಂತ ಕಟ್ಟಿಸಿದಾರಂತೆ ಪುಣ್ಯಾತ್ಮರು, ಕಡೆಗಾಲಕ್ಕೆ ಹಾಸಿಗೆ ಹಾಸಿ ಗಂಟಲಿಗೆ ನೀರು ಹುಯ್ಯುತ್ತಾರಂತೆ, ಸತ್ತಮೇಲೆ ಸಾಗಿಸಿ ಅದನ್ನೂ ಸಾಂಗವಾಗಿ ನೆರವೇರಿಸುತ್ತಾರಂತೆ. ಸಾಕು. ಯಾರಿಗೇನು ನಷ್ಟ ?.... ಈ ಚೆಲುವ ಹುಟ್ಟಲಿಲ್ಲ ಅಂತ ಯಾರು ಕೊರಗಿದರು ? ಕೋಟಿ ಕ್ರಿಮಿಗಳಲ್ಲಿ, ನಾನೂ ಒಬ್ಬ. ಇರುವೆ ಗೂಡು ಕೆದಕಿದ ಹಾಗೆ ಓಡಾಡುತ್ತವೆ ನನ್ನಂಥ ಲಕ್ಷ ಜನ ಬೊಂಬಾಯಿ ಬೀಚ್‌ನಲ್ಲಿ. ಅದು ಇದು ಅಡ್ಡ ಬರದೆ ಇದ್ದರೆ, ನಾನೂನೂ ಅವನೋ ಇವನೋ ಆಗುತ್ತಿದ್ದೆ. ಈಗ, ನಾನು ಹುಳವಾಗಿ ಬಂದು ಹುಳವಾಗಿ ಹುಯ್ಲು ಮಾಡುವ ಒಂದು ಜೀವ, ಲೆಕ್ಕಕ್ಕೆ; ಭೂಮಿಗೆ ಭಾರ, ಆಕಾಶಕ್ಕೆ ಬೇನೆ. ಇದು ಉಳಿಯಿತಲ್ಲಾ ಅಂತ ಯಾರು ನಕ್ಕರು ? ಅಳಿಯಿತಲ್ಲಾ ಅಂತ ಯಾರು ಅಳಬೇಕು ?

ನನ್ನ ಅಂಗಾಲಲ್ಲಿ ಚಕ್ರ ಇದೆಯೋ ಏನೊ? ಒಂದೇ ಕಡೆ ನಿಲಗೊಡಿಸಲಿಲ್ಲ, ಅದು. ಮತ್ತೆ ಎದ್ದು ತಿರುಗಾಡೋಣ ಎನ್ನಿಸಿತು. ಆದರೆ, ಕ್ಷಣ ಚಿತ್ತ, ಕ್ಷಣ ಪಿತ್ತ. ಎತ್ತ ಕಡೆ ಹೋಗೋದು ಅನ್ನೋದೇ ತಲೆ ತಿನ್ನುವ ಯೋಚನೆ....ಯಾರೋ ಅಂದರು, ಕಲ್ಕತ್ತಾ ಅಂತ ಒಂದಿದೆ, ಭಾರಿ ಊರು, ಅಂತ. ಅಲ್ಲಾದರೆ, ಇನ್ನೂ ನಮ್ಮ ಸೀಮೆಗೆ ಬಹಳ ದೂರ; ಕನ್ನಡದ ಮುಂದಿ ಅಂಜನ ಹಚ್ಚಿಕೊಂಡರೂ ಕಣ್ಣಿಗೆ ಬೀಳೋಲ್ಲ; ನನ್ನ ತುರುಕ್‌ನಲ್ಲೇ ಪೂರ್ಣ ನಿಭಾಯಿಸಿಕೊಳ್ಳಬಹುದು; ಅಲ್ಲೂ ಗಿರಣಿಗಳು ಇವೆ, ನೂರಾರು, ಸೆಣಬಿನವು, ಅನ್ನೋದೆಲ್ಲ ಗೊತ್ತಾಯಿತು. ಆ ಊರಿನ ಕನಸೇ ನನಗೆ, ಆರು ತಿಂಗಳು.

ಇದರ ಮೇಲಿನ್ನೊಂದು; ಗೂನಿನ ಮೇಲೆ ಕುರ. ಕೋಚ್ ವ್ಯಾನುಗಳಿಂದ ತಂಬಾಕಿಗೆ ನಾಷ್ಟಾಗೆ ಅಂತ ಪುಡಿ ಕಾಸು ಹೊಡೆದು ಅವರಿಗೆ ಕುದುರೆ ಕೊಡೋ ನನ್ನ ಚಟಾನ ಯಾರೋ ಚಾಡಿಕೋರರು, ತಮ್ಮ ಪಾಲಿಗೆ ಬಂದದ್ದರಲ್ಲಿ ತೃಪ್ತಿ ಇಲ್ಲದ ಅಜೀರ್ಣದವರು, ಮಲೆನಾಡಿನಲ್ಲಿ ಲಾಂಟನಾ ಇದ್ದ ಹಾಗೆ, ನಮ್ಮ ತಬೇಲೀಲೂ ಇದ್ದರು. ಅವರು ಸೇರ್‌ಜಿ ಕಿವಿಯನ್ನೂ ನುಲಿಚಿದರು. ನನ್ನ ದೋಸ್ತಿಗಳೇ ನನ್ನ ಬುಡಕ್ಕೆ ಬತ್ತಿ ಕೊಟ್ಟರು. ಹೊಸದರಲ್ಲಿ ಹೊಸೆಯುತ್ತಾರೆ. ಹಳಬ ಅಂದ್ರೆ ಅವನಲ್ಲಿ ಆಗಲೇ ಅರವತ್ತೆಂಟು ದೋಷ ಅರಸುತ್ತಾರೆ. ತೀರ ಹತ್ತಿರ ಹಿಡಿದು ನೋಡಿದರೆ, ಎಂಥ ಚಂದ್ರವದನದಲ್ಲೂ ಮೊಡವೆ ಮಚ್ಚೆ ಸುಕ್ಕು ಸುಳಿ ಇದ್ದೇ ಇರುತ್ತದೆ. ಆ ದೋಸ್ತಿಯುವರ ಪೈಕಿ ಒಬ್ಬನಿಗೆ, ನಾನು ಹೋಗುತ್ತಿದ್ದ ಹೊಸಲನ್ನೇ ದಾಟುವ ಚಟ. ಅವನಿಗೂ ಅವಳಿಗೂ ಅಂಟಿಕೊಂಡ ಸ್ನೇಹ, ನನಗೆ ಮಾರಿ ಬಡಿಯಿತು. ಇನ್ನು, ಅವನ ಸರಸ ಬೆಳೆದು, ಸಂಬಂಧವಾಗಿ ಬಲಿತರೆ, ಅವನದೋ ನನ್ನದೋ ಖೂಸಿ ಖಂಡಿತ ಅನ್ನುವಷ್ಟರಮಟ್ಟಿಗೆ ಬಿಗಡಾಯಿಸಿತು, ಪರಿಸ್ಥಿತಿ. ಯಾಕೆ ಸುಮ್ಮನೆ ನಮ್ಮನಮ್ಮಲ್ಲಿ, ಸುಂದೋಪಸುಂದರ ರಂಪ, ರಾದ್ಧಾಂತ? ತಿನ್ನೋ ನೀನೇ, ಎಂಜಲೆಲೇನ, ಅಂತ ನಾನೇ

ಕಾಶಿಗೋ ಕಲ್ಕತ್ತಾಗೋ ಗುಡಾರ ಎತ್ತುವುದಕ್ಕೆ ನಿಶ್ಚಯಿಸಿದೆ. ತಂಟೇನೇ ತೀರಿತು, ತಕರಾರೇ ಮುಗಿಯಿತು, ಅಂತ ತೀರ್ಮಾನ ಮಾಡಿದೆ.

ಕಲ್ಕತ್ತಾ ಅಂತ ಕನವರಿಸಿದಾಗ, ತಂಪಾಗುವುದು ವೈ. ಸಾಧ್ಯ ಬಿದ್ದರೆ, ಅಲ್ಲೇ ಬಾಳಿ ಬದುಕೋಣ, ಸಮಯ ಬಂದರೆ, ಅಲ್ಲಿಂದ ಕಾಶಿಗೂ ಜಾತ್ರೆ ಹೋಗೋಣ, ಅಂದುಕೊಂಡೆ. ಹೋದರೆ ಕಾಶಿ, ಇದ್ದರೆ ವಾಸಿ. ಕಲ್ಕತ್ತಾದಲ್ಲಿ ಭರ್ಜರಿ ಕಾಳಮ್ಮನ ಗುಡಿ ಇದೆಯಂತೆ, ಹಗಲು ರಾತ್ರಿ ಕುರಿ ಕಡೀತಾರಂತೆ; ಅಕ್ಕೀನೇ ಅಂತೆ ಅಲ್ಲಿ ಜನ ತಿನ್ನೋದು; ಮೀನು ಬಹಳ ಅಗ್ಗವಂತೆ, ಕಾಸಿಗೆಂಟು ಕೊಸರಿಗೆ ಹದಿನಾರಂತೆ, ಹೇಳಿದ್ದರು. ತುಂಗಾಪಾನವಂತೂ ಸಿಗಲಿಲ್ಲ. ಗಂಗೆ ಯಲ್ಲಾದರೂ ಮುಳುಗಿ ಕರ್ಮ ತೊಳೆದು ಕಿಲೀನಾಗಿರೋಣ, ಅಂತ ಯೋಚಿಸಿದೆ. ಮುಂದಿನ ಜನ್ಮದಲ್ಲಾದರೂ, ನಾನೊಬ್ಬ ಬಿನ್ನಿಯಾಗಿ ಹುಟ್ಟಿ ಸಾವಿರಾರು ಚೆಲುವಂದಿರಿಗೆ ಕ್ಲೂಳೊದಗಿಸಬಾರದೆ, ಎನಿಸಿತು.

ಕಡೆಗೆ, ಒಬ್ಬರಿಗೂ ಸುಳುವು ಕೊಡದೆ, ಇಕೊ, ಬಂದೆ, ಅಂತ, ಇಕ್ಟ್ಟೋರಿಯಾ ಟೇಷನ್ ತಾವಿಗೆ ಓಡಿದೆ. ಅಲ್ಲೊಬ್ಬರು ಬುದ್ಧಿವಂತರು ಸಿಕ್ಕರು, ನನಗೆ. ಪೂರ್ತ ಅಲ್ಲೀ ತನಕ ಟಿಕೀಟ್ ತೆಗೆಯುವುದು ಬೇಡ. ಆರು ರೂಪಾಯಿನದು ಒಂದು ಕೊಂಡುಕೋ, ಅದೆಲ್ಲಿಯ ತನಕ ನಡೆಯುತ್ತೋ ಅಲ್ಲಿಯವರೆಗೆ ಹೋಗು, ಅಲ್ಲಿಂದಾಚೆ ಇಳಿಯದೆ, ಗಾಡಿಯಲ್ಲೇ ಕೂತು, ಕೇಳಿದವರಿಗೆಲ್ಲ ಕನ್ನಡದಲ್ಲೇ ಡೋಂಗಿ ಹೊಡಿ.... ತುತ್ತತುದಿಗೆ ಬಂತು, ಕೆಳಕ್ಕಿಳಿಯದೆ ವಿಧಿ ಇಲ್ಲ, ಅಂದ್ರೆ, ಇಳಿ, ನಂತರ ಮುಂದಕ್ಕೆ, ಹೀಗೆಯೇ ಮಾಡು....ನಾಲ್ಕೈದು ರೂಪಾಯಿ ಉಳಿಸಿಕೊ, ಎಂದರು. ಪರವಾ ಇಲ್ಲ. ಇಂಥ ಬುದ್ಧಿವಂತರಿಂದಲೇ ನಮ್ಮ ದೇಶ ಉದ್ಧಾರ ಆಗಬೇಕು ಅಂತ ನಾನು ಮೆಚ್ಚಿದೆ. ಅವರೇ ಟಿಕೀಟ್ನೊ ತೆಗೆದುಕೊಟ್ಟರು, ಯಾವುದೋ ಊರಿಗೆ.

ಆದರೆ, ಲಲಾಟದಲ್ಲಿ ಇಲ್ಲದೆ ಇದ್ದರೆ, ಲಗಾಟ ಹಾಕಿದರೆ, ಸಿಕ್ಕು ತ್ತದೆಯೆ? ಟಿಕೀಟ್ ಹಿಡಿದುಕೊಂಡು, ಅಲ್ಲೇ ಒಂದು ಕಂಬಕ್ಕೊರಗಿ ನಿಂತೆ. ಮತ್ತೊಬ್ಬ ಮಾತಾಡಿಸಿದ, ಏನು ಎತ್ತ ಎಲ್ಲಿಗೆ, ಅಂತ. ಕಲ್ಕತ್ತಾ ವಿಷಯ ಕೇಳಿ, ಅವನು ಮುಖ ಚಿಕ್ಕದು ಮಾಡಿಕೊಂಡ. ಲೋ, ಮಂಕುದಿಣ್ಣೆ, ಅಂದ. ಅಲ್ಲೇನಿದೆಯೋ ಮಹಾ ಐಶ್ವರ್ಯ ಇಲ್ಲಿಗಿಂತ? ಇಂಥ ಸೇಠ್‌ಜಿ ಕೋಚ್‌ಗಾಡೀನೆ ಅಲ್ಲೀನೂ, ಸಣಬಿನ ಕಾರ್ಖಾನೆ ಅಂದ್ರೆ ದುರ್ನಾತ ಬಡೀತದೆ, ಇಲ್ಲಿಯಷ್ಟು ಕೂಲಿ ಅಲ್ಲಿಯವನೆಲ್ಲಿ ಕೊಟ್ಟಾನು? ಅಂಡ. ಮತ್ತೆ, ಪರಂಗಿ ಮಾರಾಜನಿದಾನಂತೆ ಅಲ್ಲಿ, ಅಂದೆ ನಾನು. ಅವನಲ್ಲಿಲ್ಲ ಈಗ, ಅವನಿರೋದು ಡಿಲ್ಲೀಲಿ, ಅವನೆಲ್ಲಿದ್ದರೆ ನಿನಗೇನು, ನೀನೇನು ಬಟ್ಲರ್ ಕೆಟ್ಟುಹೋದೆಯಾ, ಅಂದ. ಬಿಡೋ, ಲೋ, ಅಲ್ಲೇ ಸನಿಯದಲ್ಲೇ ಕಾಶಿ ಇದೆಯಂತೆ, ಅಂದೆ, ನಾನು. ಹಾಗಂತ ನಿನಗೆ ಹೇಳಿದವನನ್ನ ಕರೆದುಕೊಂಡು ಬಾ ಇಲ್ಲಿ, ಮಡಗುತ್ತೇನೆ ಅವನ ಕೆನ್ನೆಗೆ ನಾಲ್ಕು ನಾಲ್ಕು, ಆ ಗಮಾರನಿಗದೇ ತಕ್ಕ ಶಾಸ್ತಿ, ಅಂದ ಅವನು, ಮುಷ್ಟಿ ಬಿಗೀತಾ. ಅಂಗೈಯಲ್ಲಿರೋ ನೆಲ್ಲಿ ಕಾಯಿ ಬಿಸಾಕಿ, ಕೊಂಬೆಯಲ್ಲಿರೋದಕ್ಕೆ ಬಾಯಿ ಬಿಡುತ್ತೀಯ, ಜೋಕೆ, ಅಂದ. ನನ್ನ ಕೈಕಾಲೆಲ್ಲ ಬಿದ್ದುಹೋಯ್ತು.

ನಿನ್ನ ದಮ್ಮಯ್ಯ ಮಾರಾಯ, ಟಿಕೀಟ್ ಹಣ ವಾಪಸ್ಸು ಕೊಡಿಸು, ಅಂದೆ. ಅದೆಷ್ಟೋ ಆಣೆ ಮುರಿದುಕೊಂಡು, ಬಾಕಿ ಕೊಟ್ಟ, ಕಿಟಕಿ ತೂತಿನೊಳಗಿನವ. ಬಚಾವಾದೆ ಕಣೊ, ಕಲ್ಕತ್ತಾ ಸೀಮೇಲಿ ಅದೆಂಥದ್ದೋ ಖಾಯಿಲೆ......ನೆನೆಸಿಕೊಂಡರೆ ಭಯವಾಗುತ್ತೆ....ನಾಚಿಕೆ ಗೆಟ್ಟ ಖಾಯಿಲೆ ಅದು....ಅದು ನಿನಗೆ ಕಟ್ಟಿಟ್ಟದ್ದು, ಅಂದ, ಅವನು. ಬದುಕಿದೆಯಾ ಬಡಜೀವ ಅಂತ ಟೇಶನ್ ಆಚೆ ಬಂದು, ಸೂರ್ಯ ನಾರಾಯಣನಿಗೆ ಕೈಮುಗಿದೆ. ಕಲ್ಲುಬೆಂಚಿನ ಮೇಲೆ ಕೂತು ಸುಧಾರಿಸಿ ಕೊಂಡೆ. ಇಡೀ ಒಂದು ಬಾಟ್ಲ ಲೈಂಜೂಸು ಬಗ್ಗಿಸಿದೆ, ಹಸುರು ಬಣ್ಣದ್ದು.

ಎಲ್ಲಿಗೆ ಅಟ್ಟಿದರೂ ಕೊಟ್ಟಿಗೆಗೇ ನುಗ್ಗುತ್ತದಂತೆ, ದನ. ಆಕಾಶಕ್ಕೆ ಹಾರಿದರೆ ಅಂಗಾತ ಬೀಳುತ್ತೀ, ಅಂತ ನನ್ನ ತಾಯಿ ಹೇಳುತ್ತಿದ್ದಳು. ಹಾಗೆಯೇ, ಬೊಂಬಾಯಲ್ಲೇ ಬಿದ್ದೆ.

ಇನ್ನೆಲ್ಲಿ ಕೂಳು ಕಾಯಿಸುವುದು? ನನಗೆ ತಿಳಿಯದೆಯೇ, ನನ್ನ ಹೆಜ್ಜೆ ತಬೇಲಿ ರಸ್ತೆಯನ್ನೇ ಹಿಡಿಯಿತು ಆದರೆ, ಅದೇ ಉಂಡೇನು ಕದ ತೆಗಿ ಅಂತ, ಮತ್ತೆ ನಿನ್ನ ಕುದುರೇನ ನಾನು ಉಜ್ಜುವುದಿಲ್ಲ, ನಿನ್ನ ತಬೇಲಿಗೂ ಅಲ್ಲಿಯ ನಾತಕ್ಕೂ ಇಕೊ, ದೊಡ್ಡ ನಮಸ್ಕಾರ, ಅಂತ ಅದಕ್ಕೆ ದೂರದಿಂದಲೇ ಅಡ್ಡಬಿದ್ದೆ.

ಲಕ್ಷಾಂತರ ಜನ ಅನ್ನ ಗಿಟ್ಟಿಸಿಕೊಳ್ಳೋ ಬೊಂಬಾಯಲ್ಲಿ ಗೇಣುದ್ದದ ನನ್ನ ಹೊಟ್ಟೆಗೆ ಬರ ಬಡೀತದೆಯೇ, ಅದನ್ನ ತುಂಬೋದು ಆಗದ ಕೆಲಸವೆ, ಅಂತ ಉದ್ದಕ್ಕೂ ಹೋದೆ.

## ಬೆಂಕಿಯೊಂದಿಗೆ ಸರಸ

ಊರಾಚೆ ಅಂಚಿನಲ್ಲಿ ಗುಡ್ಡದ ಮಡಿಲಿನಲ್ಲಿ ಕುರುಡಲಾ ಅಂತ ಇದೆ, ಜಾಗ. ಅಲ್ಲೊಂದು ಭಾರಿ ಕಾರ್ಖಾನೆ ಜೋಲ್ಡು ನಿಲ್ಲಿಸಿತ್ತು. ಬೆಂಕಿಪೊಟ್ಟಣದ್ದು, ಕಡ್ಡಿಪೆಟ್ಟಿಗೆ ಅಂತಾರೆ ಅತ್ತಲಾಗೆ. ಕಡ್ಡಿ ಸೀಳಿ ಬೆಲ್ಟಿಗೆ ಚುಚ್ಚಿ ಮುಗುಚಿ ಮದ್ದುಗದ್ದಿ ಒಣಗಿಸಿ ಉದುರಿಸಿ ಪೆಟ್ಟಿಗೇಲಿ ಜೋಡಿಸಿ ಮಾರ್ಕಿನ ಚೀಟಿ ಅಂಟಿಸಿ ಇತ್ತಲಾಗೆಸೆಯುವ ಮೆಷೀನ್ ಮಡಗಿದ್ದಾನೆ, ಒಳಗೆ. ಮಾಯಾಸುರನ ಕೈ ಚಳಕಾನೇ ಇರಬೇಕು, ಆ ಮೆಷೀನು. ಕೆಂಪು ಔಷಧಿ ಸವರಿದ ಕಡ್ಡಿಗಳೇ ಆಗ ಚಾಲ್ತಿ.

ಸಕ್ಕರ್‌ಚಂದ್‌ಮಾಸ್ತರಂತ ಒಬ್ಬರು ಅಲ್ಲೂ ಕುಂತಿದ್ದರು, ಕಾಸು ಕೀಳುವುದಕ್ಕೆ. ಅವರ ಕೈಗೆ ಬೆಚ್ಚಗೆ ಮಾಡುವುದಕ್ಕೆ ಹತ್ತು ರೂಪಾಯಿನದು ಒಂದು ನೋಟು, ಮೂರೂಕಾಲು ರೂಪಾಯಿನಷ್ಟು ಹೂವು ಹಣ್ಣು ಬಾದಾಮಿ ಕಲ್ಲುಸಕ್ಕರೆ ಬೋಳಿಸಿತು. ಕಾಸಿದ್ದರೆ, ಕೈಲಾಸಾನ್ನೇ ಅಲ್ಲಾಡಿಸಬಹುದು. ರಾವಣನಿಗಿನ್ನೇನಿತ್ತು ಅಂತೀರಾ? ಅವನ ತೋಳಿನ ಬಲ, ಹಣದ ಥೈಲೀನೇ. ಹದಿನಾಲ್ಕು ಲೋಕಾನ್ನೂ ಲೂಟಿ ಹೊಡೆದು ಗುಡ್ಡೆ ಮಾಡಿದನಲ್ಲಾ, ಅದರ ಅಹಂಕಾರವೇ ಅವನದು. ಇಲ್ಲದಿದ್ದರೆ, ಸೂರ್ಯ ಚಂದ್ರ ನವಗ್ರಹ ಇವರಿಗೆಲ್ಲ ತಿಂಗಳು ತಿಂಗಳು ಸಂಬಳ ಕೊಟ್ಟು ಚಾಕರಿಗಿಟ್ಟುಕೊಳ್ಳುವುದಕ್ಕಾಗುತ್ತಿತ್ತೆ ಅವನ ಕೈಯಲ್ಲಿ?

ಬೆಂಕಿಪೆಟ್ಟಿಗೆ ಕಾರ್ಖಾನೆ ಮಾಲೀಕನ ಜುಟ್ಟು ಆ ಸಕ್ಕರ್‌ಚಂದ್ ಮುಷ್ಟೀಲೇ ಇತ್ತು. ಹಿಡಿದು ಜಗ್ಗಿಸಿದ, ಮೂವತ್ತೈದು ರೂಪಾಯಿಗೆ

ದಾಖಲಾದೆ. ಕೈಗೆ ಕೊಡುವುದು ಅಷ್ಟಾದರೆ, ಬಾಯಿಗೆ ಲಭ್ಯ ಅದಕ್ಕಿಂತ ಎರಡು ಕಡಮೆ. ಪ್ರತಿಯೊಬ್ಬನೂ ಲೆಕ್ಕಾಚಾರವಾಗಿ ಆ ತೋಳನ ಹೊಟ್ಟೆಗೆ ಕಮೀಷನ್ ತೆರಲೇಬೇಕಂತೆ.

ಕಡ್ಡಿ ಸೀಳುವ ತಾವು ನನ್ನನ್ನ ಹಾಕಿದರು. ದಿಮ್ಮಿಗಳನ್ನ ಸೈಜು ವಾರು ಗರಗಸದಿಂದ ನಾವು ಮೊದಲು ಕುಯ್ದು ಹಾಕಬೇಕು. ಅನಂತರ, ಅವುಗಳನ್ನ ಆ ಯಂತ್ರದ ದವಡೆಗೆ ಕೊಟ್ಟು, ಸಣ್ಣ ಸೀಳು ಮಾಡಿಸುವರು. ತೋಳೆಲ್ಲ ನೋವು, ಸಂಜೆಹೊತ್ತಿಗೆ, ಬೂರುಗದ ದಿಮ್ಮಿಯಾದರೂ. ನಮ್ಮ ಸೆಕ್ಷನ್ನಿನವರಿಗೆ ಮಾತ್ರ, ಅದರ ತೊಗಟೇನ ಬಿಟ್ಟೆ ಕೊಡುವರು, ಕಾಂಪೌಂಡಾಚೆ ಮಾರಿ ಪುಡಿಕಾಸು ಪಡೆದುಕೊಳ್ಳಿರೋ, ಅಂತ. ಬಿಟ್ಟೆ ಸಿಕ್ಕಿತು ಅಂದ್ರೆ ಬಾಯಲ್ಲಿ ನೀರು, ನಮಗೆಲ್ಲ. ಒಂದಾಣೆ, ಒಂದೂವರಾಣೆ ಬಂದಾಗ ತೋಳಿನ ನೋವು ಅಷ್ಟು ಬಾಧೆ ಕೊಡುತ್ತಿರಲಿಲ್ಲ. ಎಂಥವರಿಗೂ ಹಾಗೇನೇ, ಅನ್ನಿ. ಸಂಬಳಕ್ಕಿಂತ ಲಂಚಕ್ಕೇ ರುಚಿ ಜಾಸ್ತಿ.

ಅಲ್ಲಿಗೊಬ್ಬ ಜಪಾನೀನ ನೇಮಿಸಿಕೊಂಡಿದ್ದ, ಆ ಸಾಹುಕಾರ; ಐನಾತಿ ಕೆಲಸಗಾರ ; ಕೊಡೋ ಹಣಕ್ಕೆ ಡಬ್ಬಲ್ ದುಡಿಯುವನು; ಪಾದರಸ, ಮಾರಾಯ. ತರಹ ಎಲ್ಲ ನಮ್ಮ ಹಾಗೇನೇ—ಕೈಕಾಲು ಬೆನ್ನು ಬುರುಡೆ. ಆದರೆ, ಬಲು ಕುಳ್ಳ ಹೈದ. ಆಯುಷ್ಯವೆಲ್ಲ ಅರಶಿನ ಕಾವಾಲೆ ಬಡಿದ ಹಾಗಿನ ಬಣ್ಣ. ನೀವು ನೋಡಿರಬಹುದು, ಸರ್ಕಸ್ ನಲ್ಲಿ, ನಿಂತ ನಿಲುವಿನಲ್ಲೇ ಪಲ್ಟಿ ಹೊಡೀತಾರೆ. ಬಣ್ಣದ ಕಾಗದದಲ್ಲಿ ತೋರಣ ಬುಟ್ಟಿ ಮಾಡಿ ಮಾರುತ್ತಾರೆ; ಕಂಗ್ ಪಿಂಗ್ ಚುಂಗ್ ಚೆಂಗ್ ಅನ್ನುತ್ತಾ ಇರುತ್ತಾರೆ ಒಬ್ಬರಿಗೊಬ್ಬರಿಗೆ. ಅವರ ಊರಲ್ಲೇ ಎಲ್ಲರಿಗೂ ಮೋಟುಕಾಲಂತೆ, ಕಣ್ಣು ಸಣ್ಣ, ಆದರೆ ದೃಷ್ಟಿ ಚುರುಕು. ನಮ್ಮೊಂದಿಗೆಲ್ಲ ತುರುಕ್‌ನಲ್ಲೇ ಮಾತಾಡುವನು.

ಒಂದು ದಿನ, ನಾನು, ಅವನ ಕಣ್ಣಿಗೆ ಬಿದ್ದೆ, ಗರಗಸ ಹಿಡಿದು ಕೂತಿರುವಾಗ. ಉದ್ದವಾಗಿ ಮೋಪಾಗಿ ಕಟ್ಟುಮಸ್ತಾಗಿದ್ದೆ ನಾನು.

ಮೂತಿ ತುಂಬ ಮೀಸೆ ಬೇರೆ. ಜಪಾನಿಗಳಿಗೆ ಎಷ್ಟು ಬೋಳಿಸಿದರೂ, ಮೀಸೇನೇ ಕಮ್ಮಿ. ಬಲು ಆನಂದ ಆಗಿರಬೇಕು ಅವನಿಗೆ ನನ್ನ ಮೀಸೆ ನೋಡಿ.

ಹಿಂದುಗಡೆಯಿಂದ ಬೆಕ್ಕಿನಮರಿಯ ಹಾಗೆ ಬಂದು, ವ್ಯಾಂಗ್ ಅಂದ. ಹಾಗಂದರೇನು ಸುಡುಗಾಡೋ ಅವನ ಭಾಷೇಲಿ, ನನಗೇನು ಗೊತ್ತು? ಬಂದವನೇ ನನ್ನ ಭುಜದ ಮೇಲೆ ಕೈ ಇಕ್ಕಿದ. ಆವೋ ಭಾಯಿ ಆವೋ ಭಾಯಿ ಅಂತ ಪುಸಲಾಯಿಸಿ ಎಳೆದ. ಸಾವಿರ ರೂಪಾಯಿ ಸಂಬಳ ತಿನ್ನುವವನು ನನ್ನ ತೋಳಿನ ಮೇಲೆ ಹಸ್ತ ಇರಿಸಿದರೆ, ಏನೋ ವಿಪತ್ತು ಕಾದಿದೆ ಅಂತ ನಾನು ಹಿಂದೇಟು ಹಾಕಿದೆ. ಮಂಗನ ಪಾರುಪತ್ಯ ಹೊಂಗೆಮರದ ಮೇಲೆ ಅಂತ, ನನ್ನನ್ನ ಹಳ್ಳಕ್ಕೆ ತಳ್ಳೀಬಿಟ್ಟ, ನಗ್ನ ಗ್ತಾನೇ.

ಅವಾಗೆಲ್ಲ, ಕಡ್ಡಿಪೊಟ್ಟಣಕ್ಕೆ ಸವರುತ್ತಿದ್ದ ಔಷಧಿ ನಮೂನೇನೇ ಬೇರೆ. ಅದರ ಸಹವಾಸಾನೇ ಅಪಾಯವಂತೆ, ಹೇಳುವರು ಜನ. ತೊನ್ನು ಅನ್ನೋದು ಕಟ್ಟಿಟ್ಟದ್ದು, ಆ ಸೆಕ್ಷನ್‌ನವರಿಗೆ. ಆದರೆ, ನನಗದು ಇನ್ನೂ ಗೊತ್ತಿರಲಿಲ್ಲ. ಅಚ್ಚ ಕಾಂ ಅಚ್ಚ ಕಾಂ ಅಂತ ಕೊಂಯಿ ಗುಟುತ್ತಾ ಅವನು ನನ್ನನ್ನ ಆ ನರಕಕ್ಕೆ ನೂಕಿದ. ಗರಗಸವನ್ನ ಕಿತ್ತೀ ಬಿಟ್ಟ, ಕಾವಾಲೆಯವನು. ಮೆಟ್ಟದಲ್ಲದೆ ಹಾವು ಕಚ್ಚದು, ನೋಡೇ ಬಿಡುವ ಅದರ ಗುಟ್ಟ, ಅಂತ ನುಗ್ಗೀ ಬಿಟ್ಟೆ, ನಾನೂವೆ.

ಆದರೂ, ಭಯ ಕಾಡಿಸುವುದು. ಅತ್ತು ಕರೆದೆ, ಅವನ ಆಫೀಸ್ ಮುಂದೆ, ತಂಟೆ ತೆಗೆದೆ, ಮೊಂಡು ಕೂತೆ, ಬೆಂಡೆಕಾಯಿ ಗೂಡೆಗೂಡೆ ತೆತ್ತೆ; ಕಂಡಾಗೆಲ್ಲ ಕಾಲು ಹಿಡಿದೆ; ಭಂಡಾಟವಾಡಿದೆ.

ಮೂರು ತಿಂಗಳು ಆಗ ಬಾ ಈಗ ಬಾ ಹೋಗಿ ಬಾ ಅಂತ ಸಬೂಬಿನ ಮೇಲೇನೇ ಒದ್ದಾಡಿಸಿದ. ಕಡೆಗೆ, ಮತಾಪಿನ ಕಡ್ಡಿ ಎಣಿಸಿ

ಜೋಡಿಸುವ ಸೆಕ್ಷನಿಗೆ ವರ್ಗ ಮಾಡಿದ. ಅಲ್ಲೇನಾಯ್ತು ಒಂದು ದಿನ? ಜಪಾನಿ ನೋಡುತ್ತ ನಿಂತಿದ್ದವನು, ಫೋಡ್ ಡಾಲೋ ಅಂದ, ಪೆಟ್ಟಿಗೆ ಯೊಳಕ್ಕೆ. ಆಗಲೇ ತುಂಬಿದ್ದೆ ತುಟಿ ಮಟ್ಟ. ಅವನ ಮಾತು ಕೇಳಿ, ಇನ್ನೂ ಫೋಡ್ ಡಾಲಿದೆ. ಭುಗ್ ಅಂತ ಬೆಂಕಿ ಹೊತ್ತಿಕೊಂಡಿತು, ಕೊಳ್ಳಿ ದೆವ್ವಾ ಬಾಲ ಬೀಸಿದ ಹಾಗಾಯಿತು, ಬೆಂಕಿ ಡೌಲು. ಸತ್ತೆ ಅಂತ ಆ ಜಪಾನಿ ಮಗ್ಗುಲಿಗೆ ನೆಗೆದೆ. ಆವನ ಬೋಳು ಮುಖ ನಗುತ್ತಲೇ ಇತ್ತು. ಎರಡಾಣೆ ಇನಾಮು ಕೊಟ್ಟು, ಒಳ್ಳೆ ಮಾತಾಡಿ, ಚಾ ಪೀಯೋ, ಅಂದ.

ರಾತ್ರಿ ಮಲಗುವತನಕ ತನ್ನ ಎದೆ ಡವಡವ ಅಂತ ಬಡಿದು ಕೊಳ್ಳುತ್ತಾ ಇತ್ತು. ಆ ಯಮರಾಯನ ಕಾರ್ಖಾನೆಗೆ ಬೆಂಕಿ ಸಂಗಡ ಸರಸ ಆಡೋದಕ್ಕೆ ಯಾಕಪ್ಪ ದಾರಿ ತೋರಿಸಿದೆ, ಮುತ್ತೂರಾಯಾ ಅಂತ ತಲೆ ಚಚ್ಚಿಕೊಂಡೆ. ದಿಂಬು ಒದ್ದೆ ಆಯಿತು. ಎದ್ದು ತಲೆಗೆ ಕೈ ಊರೆ ಕೊಟ್ಟು, ಕೂತೇಬಿಟ್ಟೆ. ನಶೀಬು ನೆಟ್ಟಗಿದ್ದರೆ ಮಾತ್ರ ಆ ನರಕದೊಳಕ್ಕೆ ಕಾಲಿಕ್ಕಬೇಕು ಮತ್ತೆ ನಾಮನಕ್ಷತ್ರದ ಪ್ರಕಾರ ಶಾಸ್ತ್ರ ಹೇಳಿಸಬೇಕು, ಅಂಗೈ ಗೆರೆಗಳನ್ನೆಲ್ಲ ಓದಿಸಬೇಕು ಅಂತ ನಿಶ್ಚಯಿಸಿ, ಮತ್ತೆ ದಿಂಬಿಗೆ ತಲೆಕೊಟ್ಟೆ.

ಆದರೇನು? ಕಪಿಬುದ್ಧಿ. ಸೀತಮ್ಮನವರು ಕೂತಿದಾರೆ ಅನ್ನೋ ಜ್ಞಾನ ಇಲ್ಲದೆ, ಲಂಕೆಗೆ ಬೆಂಕಿ ಇಡಲಿಲ್ಲವೆ? ಮರವೆ ಜಾಸ್ತಿ. ಬೆಳ ಗಾಗುತ್ತಲೂ ಅದೇ ರೆಂಬೆಗೆ ಛಂಗ್ ಅಂತ ನೆಗೆದೆ. ಶಿಳ್ಳಿ ಊದಿದ. ನನ್ನನ್ನೆಬ್ಬಿಸಿ ನಡೆಸಿಕೊಂಡು ಹೋಗಿ ನನ್ನ ಸೆಕ್ಷನಿಗೆ ಸಾಗಿಸಿ ನನ್ನ ಸೀಟ್‌ನಲ್ಲಿ ಕೂರಿಸೇಬಿಟ್ಟೆ. ಒಲ್ಲೆ ಅಂತ ಒಳಗಿನ ಜೀವ ಗೊಣಗುತ್ತಲೇ ಇತ್ತು. ಅದರ ಬಾಯಿಗೆ ಬಟ್ಟೆ ತುರುಕಿ ಬಲವಂತ ಮಾಡಿ ಬಗ್ಗಿಸೇ ಬಿಟ್ಟೆ.

ಅಷ್ಟರಲ್ಲಿ, ಮಾರ್ನವಮಿ ದೀಪಾವಳಿ ಬಂತು. ಮತಾಪಿನ ಕಡ್ಡಿಗಳು ನಮ್ಮ ಸೆಕ್ಷನ್‌ನಲ್ಲಿ ಒಂಟೆ ಎತ್ತರದಷ್ಟಾಗಿ ಹೋದುವು. ಎಲಾ

ಇಷ್ಟು ಕಡ್ಡೀನ ವ್ಯಾಪಾರ ಮಾಡುವುದಕ್ಕೆ ತಯಾರು ಮಾಡುತ್ತಿದೇವಲ್ಲಾ, ಕೊಂಡವನ ಪಾಡೇನು, ಹೊತ್ತಿಸಿದರೆ ಉರಿಯುತ್ತದೆಯೆ, ಅಂತ ಪರೀಕ್ಷೆ ಮಾಡಬೇಡವೆ? ಒಬ್ಬನಿಗೂ ಅಷ್ಟು ಬುದ್ಧಿ ಓಡಲಿಲ್ಲ; ಜಪಾಸೀಗೂ ನಿಗ ತಪ್ಪಿತು; ಉಳಿದವರೆಲ್ಲ ನನ್ನಂಥ ಮಂಕುದಿಣ್ಣೆಗಳೇ. ಪುಸ್ತಕದಲ್ಲಿತ್ತಂತೆ ಮದ್ದಿನ ಕೂಟಿನ ಲೆಕ್ಕ, ಮಣ ಇದು ಕಾಲು ಮಣ ಅದು ಅರ್ಧ ಮಣ ಇನ್ನೊಂದು ಸೇರಿಸಿ ಅರೆ ಅಂತ....ಅರೆದರು; ಹೀಗೆ ಬಳಿ ಅಂತ, ಬಳಿದರು; ಒಣಗಿಸು ಅಂತ, ಒಣಗಿಸಿದರು; ಜೋಡಿಸು ಅಂತ, ಜೋಡಿಸಿದರು. ನನ್ನ ಎತ್ತರಕ್ಕಿಂತ ಹೆಚ್ಚು ಸೇರಿಸಿ ಗುಡ್ಡೆ ಮಾಡಿದರು.

ಹಚ್ಚಿದಾಗ ತಿಳೀತು, ಒಂದು ಕಡ್ಡಿಯೂ ನೆಟ್ಟಗಿಲ್ಲ ಅಂತ; ಮದ್ದಿಗೇನೋ ಸಾಲದು ಅಂತ; ಒಳದದ್ದು ತುಸು ಜಾಸ್ತಿ ಅಂತ. ಆಮೇಲೆ ಮುಖ ಮುಖ ನೋಡಿಕೊಂಡು ಫಲವೇನು? ಬರ್ ಬುಸ್.... ಬರ್ ಬುಸ್....ಮುಗಿಯಿತು, ಅದರ ಆಯುಸ್ಸು. ಹುಟ್ಟಿದ ಏಳು ದಿನದಲ್ಲೇ ಏಳ್ರಾಟ ಶನಿ ಬಡಿದಹಾಗೆ ತೆರೆದ ಕಣ್ಣು ಮುಚ್ಚೇಬಿಡುವುದು. ಅದನ್ನ ಯಾವ ಮುಟ್ಠಾಳ ಕೊಂಡುಕೊಂಡಾನು, ಮನೆ ಹಾಳುಮಾಡಿ ಕೊಳ್ಳೋದಕ್ಕೆ? ಮಾಲೀಕ ನಮ್ಮ ಸೆಕ್ಸನಿಗೆ ಬಂದು, ಬೆರಳು ಕಚ್ಚಿದ. ತಲೆಯ ಮೇಲೆ ಮಣ್ಣುಹುಯ್ದುಯಲ್ಲೋ ಅಂತ ಜಪಾಸೀನ ಬೈದ. ಕಿಸ್ಮಿಸ್ ಡಿಸ್ಮಿಸ್ ಅಂತ ಎಗರಿದ. ಅಯ್ಯೋ, ಪಾಪ! ಎನಿಸಿತು ನನಗೆ ಜಪಾಸಿ ನೋಡಿ.

ದಿನವೂ ಸಂಜೆ ಕೂಲಿಯವರೆಲ್ಲ ಹೊರಕ್ಕೆ ಹೊರಡುವಾಗ, ಸಾಹುಕಾರರ ಕಡೆ ಜವಾನರು ಒಂದು ನರಪಿಳ್ಳೆಯನ್ನೂ ಬಿಡದೆ, ಪ್ರತಿ ಇಸಮ್ಮನ್ನೂ ನಿಲ್ಲಿಸಿ ಎದೆ ಕೊಂಕುಳು ಸೊಂಟ ಸವರಿ ಹುಡುಕಿ ಕದ್ದು ಮಾಲಿದೆಯೋ ಅಂತ ಜಪ್ತಿಮಾಡುವರು. ಆದರೆ, ಅವತ್ತು ಮಾತ್ರ ಅದೇನು ಬಂತೋ ಬುದ್ಧಿ, ಪುಟ್‌ಪಾತ್ ಉದ್ದಕ್ಕೂ ಸಾಲಾಗಿ ಮಂಕ್ರಿ ಮಂಕ್ರಿಯನ್ನೇ ಇರಿಸಿದ್ದರು. ಅವಕ್ಕೆಲ್ಲ ಆ ಮತಾಪಿನ ಕಡ್ಡಿಗಳನ್ನ

ಗೋಪುರ ತುಂಬಿದ್ದರು. ಗೇಟು ಬಾಗಿಲಾಚೆಗೆ ಹೋಗುವಾಗ ಎಕ್ಕೊಳ್ರೋ ಎಷ್ಟು ಬೇಕೋ ಅಷ್ಟು ಅಂದರು.

ಬಿಟ್ಟೆ ಸಿಕ್ಕರೆ ನಮ್ಮ ಜನ ಬಕಾಸುರನ ಹಾಗೆ ಬಾಚಿಕೊಳ್ಳುತ್ತಾರೆ. ಕೋ ಅಂತಾನಲ್ಲಾ ಸಾಹುಕಾರ, ಇದರಲ್ಲೇನೋ ಐಬಿರಬೇಕು, ಅನ್ನೋ ಜ್ಞಾನ ಇರುವುದಿಲ್ಲ. ಒಬ್ಬರ ಮೇಲೊಬ್ಬರು ಬಿದ್ದು, ಗರುಡವಾಹನ ಮಾಡಿ ಕೊಂಡು, ಮಡಿಲಲ್ಲಿ ಕಟ್ಟಿಕೊಂಡರು. ನಾನು ತಾನು ಅಂತ ಜಗಳ ಹೂಡಿದರು. ಒಬ್ಬ ಏನು ಮಾಡಿದ, ಅತಿಯಾಸೆ ಗತಿ ಕೆಡಿಸಿತು ಅಂತ, ಷರಟಿನ ಜೇಬು ಹರಿಯುವತನಕ ತುರುಕಿದ. ಕಾಕಿ ಚಡ್ಡಿ ಎಡ ಬಲ ಎರಡನ್ನೂ ಭರ್ತಿಮಾಡಿದ. ಟೋಪಿ ಮಗುಚಿ ಅದಕ್ಕೂ ಹಾಕಿದ. ಆ ಗಳಿಗೇಲಿ ನೋಡಿ ಕಾದಿತ್ತು ಅವನಿಗೆ ಮೃತ್ಯು. ಜೇನುತುಪ್ಪ ನೆಕ್ಕುತ್ತಾ ಇದ್ದ ಕಪ್ಪೆಯ ಮೇಲೆ ಹೆಡೆ ಎರಗಿತು. ಚಡ್ಡಿ ಜೇಬಲ್ಲಿ ಕೆಂಪುತುದಿ ಕಡ್ಡಿಯ ಪೊಟ್ಟಣ ಐದಾರು ಇದ್ದದ್ದು ಅವನು ಕಾಣ. ಒತ್ತರಿಸಿ ಒತ್ತರಿಸಿ ತುಂಬಿದನೋ ಇಲ್ಲವೋ, ಒಂದಕ್ಕೊಂದು ಉಜ್ಜಿ ಗಬಕ್‌ನೆ ಹೊತ್ತಿಕೊಂಡಿತು ಬೆಂಕಿ.

ಅಯ್ಯೋ ಅಂತ ಅರಚಿಕೊಂಡು ಅವನು ಮುಂಕ್ರಿ ಸಾಲಿನ ಮೇಲೆ ಬಿದ್ದ. ಅವೂ ಬೆಂಕಿ ಕಾರಿದುವು. ಬೆಂಕಿಯ ಮುಂದೆ ನರ ಮನುಷ್ಯನೆ? ರಾವಣಾಸುರನ ಕೋಟೆಯನ್ನೇ ಮಣಕ್‌ನೆ ನುಂಗಿ ನೊಣೆಯಲಿಲ್ಲವೆ ಅದು? ಹುಳ ಒದ್ದಾಡುವ ಹಾಗೆ ಲಿಬಿಲಿಬಿ ಅಂತ ಕೈಕಾಲು ಬಡಿಯುತ್ತ, ಬೂದಿಯಾದ ಅವನು; ಇನ್ನೂ ಆರೇಳು ಜನ ಆಸ್ಪತ್ರೆ ಪಾಲಾದರು; ಅವರಲ್ಲಿ ಅರ್ಧಮುಕ್ಕಾಲು ಜನಗಳನ್ನು ಡಾಕ್ಟರುಗಳು ಪೂರೈಸಿದರು.

ಅವತ್ತು ಅನ್ನಿಸಿತು ನನಗೆ, ಹೆಣ್ಣು ಚಂದ, ಕಣ್ಣು ಕುರುಡು, ಆ ಕಾರ್ಖಾನೆ ಅಂತ. ಛೆ! ತಬೇಲಿ ಎಷ್ಟು ಆರಾಮವಾಗಿತ್ತು! ಬಾಣಲಿಯಿಂದ ಬೆಂಕಿಗೆ ಹಾರಿದ ಹಾಗಾಯಿತು ನನ್ನ ಗತಿ; ಸಕ್ಕರೆ ಮೇಲೆ ಕೂತಿದ್ದ ನೊಣ ಸಿಂಬಳದಲ್ಲಿ ಬಿತ್ತು, ಅಂದ ಹಾಗಾಯಿತು ನನ್ನ ಪಾಡು.

ಬಂದಾಗಿನ ಹಿಗ್ಗೇನು? ಅವನು ಬೆಂದಾಗಿನ ತಗ್ಗೇನು! ಸರ್ಪನ ಕೂಡ ಸರಸ; ಸಾವಿನ ಕೂಡ ಸಲ್ಲಾಪ. ಬಾಯಿಲೆ ಬಿದ್ದು ಹಾಸಿಗೆ ಹಾಸಿ ಕಂಬಳಿಹೊದ್ದು ಕೈಕಾಲು ನೀಡಿ ಸೂಜಿ ತೆಗೆದುಕೊಂಡು ಮುಲಾಮು ಹಚ್ಚಿಸಿ ಬಿಸಿನೀರು ಕುಡಿದು ನೆಂಟರಿಷ್ಟರನ್ನೆಲ್ಲ ಸುತ್ತ ಸೇರಿಸಿಕೊಂಡು, ಶಿವಾ ಅಂತ ಸ್ವಾಮಿಪಾದ ಸೇರೋದು ಬಿಟ್ಟು.... ನನ್ನ ಹಣೇಲಿ ಏನು ಬರೆದಿದೆಯೋ, ಓದಿ ಹೇಳೋವರು ಯಾರು? ನೀರಲ್ಲಿ ಮುಳುಗಿಸುತ್ತಾನೋ, ಬೆಂಕಿಯಲ್ಲಿ ಹುರಿಯುತ್ತಾನೋ, ಗಾಡಿ ಚಕ್ರಕ್ಕೆ ಸಿಕ್ಕಿಸುತ್ತಾನೋ, ಹಗ್ಗವೋ ವಿಷವೋ ದೊಣ್ಣೆಯೋ ಕಂಡವರಾರು? ಮೂಗು ಇದ್ದ ಮೇಲೆ ನೆಗಡಿ ತಪ್ಪಿದ್ದಲ್ಲ; ಉಸಿರಿದ್ದ ಮೇಲೆ ಸಾವಂತೂ ಗ್ಯಾರಂಟಿ.

ಆದರೂ, ನಾವಾಗಿ ಏಕೆ ದೇವರಿಗೆ ಈ ದಾರೀಲೇ ಬರುತ್ತೇನೆ ನಿನ್ನ ಹತ್ತಿರಕ್ಕೆ ಅಂತ ಒತ್ತಾಯ ಮಾಡಬೇಕು? ಕತ್ತಲೆ ಅಂತ ಗೊತ್ತಿದ್ದೂ ಕಾಡಿನಲ್ಲಿ ಕಣ್ಣುಮುಚ್ಚಿಕೊಂಡೇ ನಡೆಯುವುದೇಕೆ? ಹಾವು ಅಂತ ಗೊತ್ತಿದ್ದರೂ ಹಾಸಿಗೆಯಾಗಿ ಉಪಯೋಗಿಸುವವರುಂಟೆ? ಹೀಗೆ ಎಣಿಕೆ ಹಾಕುತ್ತ, ತಿಂಗಳ ಸಂಬಳ ಕೈಗೆ ಬರುತ್ತಲೂ, ಕಿತ್ತೆ ಅಲ್ಲಿಂದ ಕಂಬಿಯನ್ನ .... ಬುಗುರಿಯ ಹಾಗೆ ಸುತ್ತಿದ್ದು ಸಾಕು, ದಾರ ಕಳೆದುಕೊಂಡ ಗಾಳಿಪಟ ಎಷ್ಟು ದಿನ ಹಾರೀತು, ಊರಕಡೆ ಗಮನಕೊಡೋಣ, ಗ್ರಾಸ್ಥನಾಗಿ ಹೆಂಡತಿ ಮಕ್ಕಳಿಂದ ಶುಶ್ರೂಷೆ ಮಾಡಿಸಿಕೊಂಡಿರೋಣ, ಅನ್ನೋ ಯೋಚನೆ ತಲೆಯನ್ನ ತಿಂದಿತು.

## ಪುನರಾಯನ್

ಕೊನೆಗೆ ಊರೇ ಗೆದ್ದಿತು. ಇವಳ ಮೇಲಿನ ಪಾಶ ಆ ಹೀಚಿನ ಮೇಲಿನ ಮಮತೆ ಇವೇ ಅತಿಯಾಯ್ತು. ಇದ್ನೋಡಿ ತಮಾಷೆ! ಊರಿಗೆ ಹಿಂತಿರುಗುವುದು ಅಂತ ತಲೆಯೊಳಗೆ ಗೀಳು ಹೊಳೆಯುತ್ತಲೂ ಅಷ್ಟು ಸೊಗಸಾಗಿ ಮಿರುಗುತ್ತಿದ್ದ ಬೊಂಬಾಯಿ ಪಟ್ಟಣ ಕೆಟ್ಟ ಹೆಂಗಸಿನಹಾಗೆ ಅಸಹ್ಯವಾಯಿತು ನನಗೆ. ಚಂದ ಗಿಂದ ಎಲ್ಲವೂ ಒಳಗಿನ ಮನಸ್ಸಿನಲ್ಲೇ ಇರೋದು; ಹೊರಗಿನ ವಸ್ತುವಿನಲ್ಲಿಲ್ಲ. ಒಲ್ಲದ ಗಂಡಸಿಗೆ ಬೆಣ್ಣೆಯಲ್ಲೂ ಕಲ್ಲು; ಒಲಿದ ಗೌಡಸಿಗೆ ಹಳ್ಳಿಯೇ ಡಿಲ್ಲಿ. ಆ ಬೊಂಬಾಯಿ ಗಲಾಟೆ, ಬೀದಿ ಭರಾಟೆ, ರಾತ್ರಿ ಹಗಲು ಜಗಳ; ಆ ಇರಾನಿ ಅಂಗಡಿ ಚಾ, ಅಲ್ಲಿಯ ಜಗನ್ಮೋಹಿನಿ ಜಾಲ, ಅಲ್ಲೀ ಪೋಲೀಸಿನವರ ಪೀಡೆ ಎಲ್ಲವೂ ನನಗೆ ಬೇಡ ಎನಿಸಿತು; ಸಾಕು ಸಾಕಾಯಿತು ನಮ್ಮ ತಿರುಮಲರಾಯನಪುರ, ಅಲ್ಲಿಯ ಕುಂಟೆ, ಕೆರೆ, ತೋಪು, ಮಾರೀಗುಡಿ, ಅರಳೀಕಟ್ಟೆ, ನಮ್ಮ ಮನೇ ಅಂಗಳ ಇವೆಲ್ಲ ಅಮರಾವತಿ, ಅಳಕಾಪುರೀಲೂ ಇಲ್ಲ ಎನಿಸಿತು. ನಾಡಿಗೆ ಬಂದ ಆನೆ ಕಾಡನ್ನೇ ನೆನೆವಂತೆ, ಅದರ ಹಸುರನ್ನೇ ಕನಸು ಕಾಣುವಂತೆ, ನನಗೂ ಹಳ್ಳಿಯ ಮೇಲೆಯೇ ನಿಗ ಮೊದಲಿಂದ ಅನ್ನೋದು ಆಗ ತಿಳಿಯಿತು.

ಜಂಬಕ್ಕೆ ಭುಜ ತಟ್ಟಿಕೊಳ್ಳುವುದಿಲ್ಲ, ನಾನು. ಸೊಕ್ಕಿದ್ದು ಉಕ್ಕುತ್ತೆ, ಉಕ್ಕಿದ್ದು ಒಲೆಗೆ ಹಾರುತ್ತೆ, ಅನ್ನೋದು ನನಗೆ ಗೊತ್ತು. ಬೊಂಬಾಯಲ್ಲಿ, ನೀವು ನಂಬುತ್ತೀರೋ ಇಲ್ಲವೋ, ನಾನ್ನೂರು ರೂಪಾಯಿ ತನಕ ಜೊತೆ ಮಾಡಿದ್ದೆ. ಚಂದ್ರಕೇತು ಅಂತ ಒಬ್ಬ ಇದ್ದ, ಮರ್ಯಾದಸ್ಥ,

ಮನೆ ಮಠ ಮಾಡಿಕೊಂಡು, ನನ್ನೊಂದಿಗೆ ವಾಡಿಕೆಯಾಗಿ. ಮೂಗಿನ ಕೆಳಗಿಂದ, ಗಲ್ಲದ ತನಕ ಹೊಳ್ಳೆಗಳ ಮಾರ್ಗವಾಗಿ, ಹಳ್ಳ ಬಿದ್ದಿರುವುದು, ಕಮಾನಿನ ಹಾಗೆ ಅವನ ಮೂತಿ ಮೇಲೆ, ಅತ್ತು ಅತ್ತು ಕಣ್ಣೀರು ಹರಿದು ಕೊರಕಲು ಬಿಟ್ಟ ಹಾಗೆ. ನೋಡುತ್ತಲೇ ಇದ್ದರೆ ನಗು ಬರುವುದು, ಎಂಥವರಿಗೂ, ಹೆತ್ತ ತಾಯಿಗೂ. ತಬೇಲಿ ಪಕ್ಕದಲ್ಲೇ ಅವನ ಗಿರವಿ ಅಂಗಡಿ. ಚೂರು ಪಾರು ಕೈಯಲ್ಲಿದ್ದ ಕಾಸನ್ನೆಲ್ಲ ನಾನೆಲ್ಲಿ ಜೋಪಾನವಾಗಿಡಲಿ ? ನನ್ನ ಹತ್ತಿರ ತಿಜೋರಿ ಇದೆಯೆ ? ಇದ್ದರೂ, ಅದರೊಳಗೆ ಹಣ ಇದೆ ಅಂತ ಗೊತ್ತಾದರೆ, ದೋಸ್ತಿಗಳು ದೋಚದೆ ಬಿಟ್ಟಾರೆಯೆ ? ಇದ್ದದ್ದನ್ನೆಲ್ಲ ಆಗಾಗ ಅವನ ಮಡಿಲಿಗೆ ಹಾಕಿ, ಹುಷಾರಣ್ಣ, ಬಡವನ ಬೆವರು, ಸಮಯ ಸಂದರ್ಭ ಬಂದಾಗ ಹಿಂದಕ್ಕೆ ಕೊಡು, ಬಡ್ಡಿ ದುಡಿದರೆ ನೀನೇ ತಿಂದುಕೊ, ಹೊಟ್ಟೆ ಮೇಲೆ ಬಡಿದರೆ ನಿನ್ನ ಮಕ್ಕಳು ಮರೀನ ದೇವರು ಸುಮ್ಮನೆ ಬಿಟ್ಟಾನೆಯೆ, ಅಂತ ಹೇಳಿದ್ದೆ.

ಹೋಗಿ ಕೇಳುತ್ತಲೂ, ಅವನೂ, ಪಾಪ, ಗುರುತು ಹಾಕಿದ್ದ ಚೀಟಿ ತೋರಿಸಿದ. ಕಾಸೂ ಬಿಡದೆ ಎಣಿಸಿ, ಕೋ, ಮಾರಾಯಾ, ಊರಿಗೆ ಹೋಗಿ ಸುಖವಾಗಿರು, ಕೈಹಿಡಿದವಳೇ ಕಡೇ ತನಕ ಒದಗುವುದು, ಅಂತ ಅವನ ಲೆಕ್ಕದಂತೆ ತೀರಿಸಿದ. ಅಷ್ಟಕ್ಕೂ ಬಿಟ್ಟನೆ ? ಒಂದು ಪೆಟ್ಟಿಗೆ ತರಿಸಿ, ಅದರೊಳಗೆ ದೋಸೆ ಲಾಡು ಜಿಲೇಬಿ ಎಲ್ಲ ಮಸ್ತಾಗಿ ತುಂಬಿ, ಮುಚ್ಚಳ ಮಾಡಿಸಿ, ಬೀಗ ತಗುಲಿಸಿ, ದಾರಿಯಲ್ಲಿ ಮೈ ಎಲ್ಲ ಕಣ್ಣಾಗಿರು, ತೆರೆದಿರುವಾಗಲೇ ಎವೆ ಕತ್ತರಿಸುವ ಜನ ಇರುತ್ತಾರೆ ಉದ್ದಕ್ಕೂ, ಗ್ರಾಸ್ತರ ಹಾಗೆ ವೇಷ ಹಾಕಿರುತ್ತಾರೆ, ಇಂಗ್ಲೀಸೂ ಮಾತ ನಾಡುತ್ತಾರೆ, ನೀನೂ ತಿನ್ನು ನಿನ್ನ ಮಕ್ಕಳಿಗೂ ಕೊಡು, ತಲಪಿದ್ದಕ್ಕೆ ಟಪಾಲ್ ಹಾಕು, ನಿನ್ನ ಮಗನಿಗೆ ನಾಲ್ಕು ತಂಗಿಯರು ಹುಟ್ಟಲಿ, ಬೇಜಾರಾದರೆ ಮತ್ತ ಬಂದುಬಿಡು ಸಮೇತವಾಗಿ, ಕಾರ್ಡು ಗೀಚಿದರೆ ನಾನು ರೈಲು ತಾವು ಬಂದಿರುತ್ತೇನೆ, ಎಂದೆಲ್ಲ ಉಪಚಾರ ಹೇಳಿದ.

ಕೈಕೊಕ್ಕರಿ ಬಾಯಿಸಕ್ಕರೆ, ಅಂತಾರೆ. ಆದರೆ, ಚಂದ್ರಕೇತುವಿಗೆ ಎರಡೂ ಸಕ್ಕರೆ. ತಂಪುಹೊತ್ತಿನಲ್ಲಿ, ಹೊಂಗೆನೆರಳಿನಲ್ಲಿ ನಿಂತು, ನೆನೆಯುಬೇಕು, ಅವನನ್ನ. ಅಂಥವನಿರುವುದರಿಂದಲೇ ಆ ಬೊಂಬಾಯಿ ಬಂಗಲಿಗಳನ್ನ ಸಮುದ್ರರಾಜ ಅಗಿದು ನುಂಗದೆ ಬಿಟ್ಟಿರೋದು; ಅಪ್ಪಳಿಸಿ ಬಂದು ಪರ್ವತದ ಹಾಗೆ ನಾಲ್ಕು ಅಲೆಗಳಿದ್ದರೆ, ತೀರಿತು ಅದರ ಬಾಳು, ಬಿಂಕ.

ಆಮೇಲೆ, ನಾನು ಒಬ್ಬ ಸ್ನೇಹಿತನನ್ನೂ ಜೊತೆ ಮಾಡಿಕೊಂಡು, ಐವತ್ತುರೂಪಾಯಿನ ಅರಿವೆ ತೆಗೆದೆ. ಉಲ್ಲನ್ ಶಾಲು ಐದಾರು, ನಾಲ್ಕು ನಾಲ್ಕೂವರೆಗೆ ಸಂತೋಷವಾಗಿ ಕೊಡುವರು, ಆಗ. ಸೌಖ್ಯದ ಕಾಲ ಅದು. ನಾಲ್ಕು ಮೂಲೆ ಚೌಕದ ಟುವ್ವಾಲು ತೆಗೆದುಕೊಂಡೆ, ಐದಾರು. ಆಮೇಲೆ ಅವನ್ನೆಲ್ಲ ಒಂದು ಎರಡು ಲಾಭಕ್ಕೆ ಮಾರಿದೆ, ಊರಲ್ಲಿ....ಬೊಂಬಾಯಿಂದ ನಮ್ಮ ಚೆಲುವ ತಂದ, ಅಗ್ಗವಾಗಿ ಕೊಟ್ಟ, ಅಂತ ಜಂಬ ಕೊಚ್ಚಿಕೊಂಡುವು, ಪೆದ್ದುಗಳು........

ಆಮೇಲೊಂದು ವಾಸ್ಕೋಟು ತೆಗೆದೆ. ಅದರೊಳಗೂನೂ ಎರಡು ಕಿಸೆ ಇದ್ದುವು. ಒಂದೊಂದರಲ್ಲೂ ಅಷ್ಟಷ್ಟು ರೂಪಾಯಿ ತುರುಕಿದೆ. ಒಂದೇ ತಾವು ಗಂಟು ಮಡಗಿದರೆ, ಲಪಟಾಯಿಸುವವರಿಗೆ ಸರಾಗ ಅಂತ, ಆಚೆ ಕೊಂಚ ಈಚೆ ಕೊಂಚ ಸೊಂಟದಲ್ಲಿ ಉಳಿದದ್ದು, ಹೀಗೆ ವ್ಯವಸ್ಥೆಮಾಡಿದೆ. ಆಗಿನ ಕಾಲದಲ್ಲಿ, ಕಾಗದದ ನೋಟು ಇವತ್ತಿನ ಹಾಗೆ ಹಾರಾಡುತ್ತ ಇರಲಿಲ್ಲ. ಹತ್ತುರೂಪಾಯಿನದು, ಮೂರೇ ಮೂರು ಬಲು ತ್ರಾಸಪಟ್ಟು ಸಂಪಾದಿಸಿದೆ, ತೂಕ ಕಡಮೆಯಾಗಲಿ ಅಂತ. ಉಳಿದವೆಲ್ಲ ಬೆಳ್ಳಿಯದೆ, ಖಾಸಾಬೆಳ್ಳಿ, ಅರ್ಧ ಪೂರ್ತಿ ಬುರುಡೆ ರಾಣಿಯದು, ಜಡೆ ಸುತ್ತಿ ಕಿರೀಟ ಮಡಗಿರೋದು, ಅರ್ಧ ಅವಳ ಮಗ ಬಟ್ಟ ತಲೆ ಕತ್ತು ಸೊಟ್ಟಗೆ ಕುಯ್ಯಿರೋದು.

ವಾಸ್ಕೋಟಿನ ಮೇಲೆ ಒಂದು ಕೋಟ್ ಬೇರೆ, ತೋಳಿರುವುದು. ಆ ಕೋಟಿಗೂ ಒಂದು ಕವಾಲು ಮಾಡಿಸಿದ್ದೆ, ದರ್ಜಿಗೆ ಹೇಳಿ. ಏಕ, ಕೊರಳಿಂದ ಸೊಂಟದವರೆಗೂ, ಉದ್ದಕ್ಕೂ ಸಾಲಾಗಿ ಬೆಟ್ಟಗಲ ಬೆಟ್ಟಗಲ ಗುಂಡಿ ಕಾಜ ಹಾಕಿಸಿದ್ದೆ. ಅದನ್ನೆಲ್ಲ ಒಂದೊಂದಾಗಿ ಬಿಚ್ಚಿ ಒಳಗಿನ ವಾಸ್ಕೋಟಿಗೆ ಕೈಹಾಕುವುದರೊಳಗೆ, ಎಂಥ ಕಳ್ಳನೂ ಸುಸ್ತು ಬೀಳುತ್ತಾನೆ, ದಿಟ.

ಜೊತೆಗೊಂದು ಟ್ರಂಕು, ವಜನ್ನಾದ ಬೀಗ. ಅದಕ್ಕೊಂದು ರೂಪಾಯಿ ಕೂಲಿ ಕೇಳಿದ ರೈಲಿನವ. ಇನ್ನು ಅವನೊಂದಿಗೇಕೆ ಚೌಕಾಶಿ ಅಂತ ಅದನ್ನೂ ತೆತ್ತೆ. ನನಗೊಂದು ಟಿಕೀಟು, ಬೆಂಗಳೂರು ತನಕ, ಹುಷಾರಾಗಿ ಹಿಡಿ, ಅಂತ ಆವಯ್ಯ ಅದನ್ನೂ ಕೊಟ್ಟ.

ಇಷ್ಟೂ ಸಿದ್ಧ ಮಾಡಿಕೊಂಡೆ, ಊರಿಗೆ ಹೊರಡೋದಕ್ಕೆ. ಇನ್ನೇನು ? ಹೋಗಿಬರಲೆ, ಅಂತ ಗುರುತಿನವರಿಗೆಲ್ಲ ಹೇಳಬೇಕು, ಅಷ್ಟೆ. ಆದರೆ, ಯಾರನ್ನ ಬಿಡುವುದು, ಯಾರನ್ನ ನೋಡುವುದು, ನೋಡಿದರೆ ಹೊಟ್ಟೆ ಉರಿ, ನೋಡದಿದ್ದರೆ ನಿಷ್ಠೂರ. ಬಲು ಬುದ್ಧಿವಂತಿಕೆಯಿಂದ ನಿಭಾಯಿಸಿದೆ, ಡ್ಯೂಟೀನ. ಕೆಲವರ ಮನೇ ಕಡೆ ಸುಳಿಯಲೇ ಇಲ್ಲ. ಆ ಹೆಂಗಸಿನ ಗಲ್ಲಿಗೆ ದೂರದಿಂದಲೇ ನಮಸ್ಕಾರ ಹಾಕಿದೆ. ಎಲ್ಲಿಯ ಗ್ರಹಚಾರ? ಪಿಶಾಚಿ ಮೆಟ್ಟಿಕೊಂಡ ಹಾಗೆ, ಬಂದೆ ಅಂತ ಬೆನ್ನು ಹತ್ತಿದರೆ, ನನ್ನ ಮುಖ ಇಷ್ಟಗಲ ಆಗಿ ಬಿಡುವುದಿಲ್ಲವೆ? ತಬೇಲಿ ಸೇಠ್‌ಜಿ ಎಲ್ಲಿ ಸಿಕ್ಕಿ ಬಿಡುತ್ತಾನೋ, ಪ್ರಯಾಣಕ್ಕೆ ಅಡ್ಡ ಬಂದು ಅಪಶಕುನ ನುಡಿದು ಇರು ಅಂತ ಎಲ್ಲಿ ಟಾಂಗ್ ಕೊಡುತ್ತಾನೋ ಎಂಬೋದೇ ಭಯ ನನಗೆ. ಆದ್ದರಿಂದ, ನನ್ನ ಹಳೇತಗಡಿಗೆ, ರಸ್ತೆತುದಿಯಿಂದಲೇ ಕೈಮುಗಿದೆ.

ದೊಡ್ಡ ದೊಡ್ಡ ಊರು ಅಂದರೆ, ಲಕ್ಷ ಜನರ ನಡುವೆ, ನಾವು ಯಾರೂ ಅರಿಯದ ಒಂಟಿ. ಬೀದೀ ತುಂಬ ಜನವೇನೋ ಓಡಾಡುತ್ತಿದ್ದರು, ಗಡಬಡ. ಆದರೆ, ಒಬ್ಬನಿಗಾದರೂ, ಇವನೊಬ್ಬ ನಮ್ಮೂರು

ಹೇಸಿ ಪರಾರಿಯಾಗ್ತಿದಾನಲ್ಲಾ ಎಂಬ ಬುದ್ಧಿ ಇಲ್ಲ. ಅವರವರ ಪಾಡು ಅವರವರಿಗೆ. ಇಂಥ ಷಹರಿನಲ್ಲಿ ಇದೇ ಗೋಳು; ಹೊಸ ಮುಖ ಬಂದರೆ ಆಶ್ಚರ್ಯವಿಲ್ಲ, ಹಳೇ ಮುಖ ನಷ್ಟವಾದರೆ ಸಂಕಟ ಇಲ್ಲ. ಬಿಡೋ, ಅವರು ನೋಡಿದರೇನು, ಬಿಟ್ಟರೇನು, ಮಾತಾಡಿಸಿದರೇನು, ಆಡವಿದ್ದರೇನು, ಅಂತ ನಾನು ಬಿರ್ರನೆ ಗಾಡಿ ಬಿಟ್ಟೆ.

ರೈಲಲ್ಲೂ ಜಾಗ ಸಿಕ್ಕಿತು. ಬೊಂಬಾಯಿಗೂ ಕೈಜೋಡಿಸಿದೆ.

# ಮನೆ ರಿಪೇರಿ

ಪೂನಾ ಬೆಳಗಾವಿ ಹುಬ್ಬಳ್ಳಿ ಬೀರೂರು ಅರಸೀಕೆರೆ ದಾಟಿ ಕೋಟು ವಾಸ್ಕೋಟು ಟ್ರಂಕು ಸಹಿತ ಬೆಂಗಳೂರು ಸೇರಿದೆ. ನನ್ನ ಕಂಬೈಮೆಷೀನು ಇನ್ನೂ ಹೊಗೆಯಾಡ್ತಾನೇ ಇತ್ತು. ಬಂದೆಯಾ ಚೆಲುವಾ, ಬಾ, ಅಂತ ಶಿಳ್ಳಿ ಹೊಡೆಯಿತು. ಕಾಲುಗಳೆರಡೂ ಅಲ್ಲಿಗೇ ಓಡೋಣ ಅಂತ ಕೆರೆಯುತ್ತಿದ್ದುವು; ತಡೆದೆ. ಗಾಡಿ ಬದಲಾಯಿಸಿ, ಮದ್ದೂರಲ್ಲಿಳಿದು, ಊರಿಗೆ ನಡೆದೆ.

ಊರಲ್ಲೂ ಕಾಣಿಸಿಕೊಂಡೆ. ದಾರಿಯಲ್ಲೇ ಒಂದು ಸಂಗತಿ ಗಟ್ಟಿ ಮಾಡಿಕೊಂಡಿದ್ದೆ. ಹಜಾರದಲ್ಲಿ ಕೂತು ಕಾಲು ನೀಡುತ್ತಲೂ, ರಾಮನನ್ನ ಎತ್ತಿ ಮುದ್ದಾಡಿಸುತ್ತಲೂ, ಪೆಂಗನ ಹಾಗೆ, ಹತ್ತಿರ ಇರೋ ದುಡ್ಡು ದುಗ್ಗಾಣೀನ ಯಾರಿಗೂ ಬಯಲು ಮಾಡಬಾರದು, ಅಂತ. ಆದರೂ, ಯಜಮಾನರೆಲ್ಲ ನನ್ನ ಸುತ್ತ ಸೇರಿ, ನಾನು ಎಷ್ಟು ಕುಬೇರತನ ಗಳಿಸಿದೇನೆ ಅಂತ ತಿಳಿಯುವುದಕ್ಕೆ ಸುಮಾರು ಕ್ರಾಸ್ ಹಾಕಿದರು. ನಾನು ತುಟಿ ತೆರೆಯಲಿಲ್ಲ. ಲೋ, ನೀನು ಎಲ್ಲೋ ಜಾತಿ ಜೀವನ ಕಟ್ಟು ನಿಟ್ಟು ಬಿಟ್ಟು ಯಾವುದೋ ಸೀಮೆ ಅನ್ನ ತಿಂದು ಮೈ ಮೈಲಿಗೆ ಮಾಡಿ ಕೊಂಡಿದೀಯಾ; ಊರು ದೇವರಿಗೆ ಹರಕೆ ಹೊತ್ತು ವರ್ಷಗಳಾಗಿ ಹೋದುವು; ನೀನು ಸತ್ತೇ ಇರಬೇಕು ಅಂತ ನಾವು ಕೆಟ್ಟದ್ದು ನುಡಿದ ಕಳಂಕ ಬೇರೆ; ಆದ್ದರಿಂದ ಪ್ರಾಯಶ್ಚಿತ್ತ ಮಾಡಬೇಕು, ತಪ್ಪು ಕಾಣಿಕೆ ಒಪ್ಪಿಸಬೇಕು, ದೇವರಿಗೆ, ಅಂದರು. ಆ ಬಾಬ್ತಿಗೆ ಒಂದಿಷ್ಟು ಹಣ ಚೆಲ್ಲಲೇ ಬೇಕಾಯಿತು, ನಿರ್ವಾಹವಿರಲಿಲ್ಲ.

ಮನೆ, ಮಗ, ಇವಳು! ಯಾಕೆ ಬಂದೆನೋ, ಅಂತ ಅನ್ನಿಸಿಬಿಟ್ಟಿತ್ತು, ಒಂದು ವಾರ ಕಳೆಯುವುದರೊಳಗೆ. ಭೂಂ ಭೂಂ ಅಂತ ಮೋಟಾರಿನಲ್ಲಿ ತಿರುಗುತ್ತಿದಾರಲ್ಲಾ ವಜ್ರದ ಬೆಂಡೋಲೆಗಳ ಗಂಡಂದಿರು, ಅವರಿಗೇನು ಗೊತ್ತಾಗುತ್ತೆ ನಮ್ಮ ತಾಪತ್ರಯ? ಭೂಂ ಅಂತ ಹೋಗೋದು, ಭರ್ ಅಂತ ಬರೋದು, ದೊಡ್ಡ ರಸ್ತೆ ಮೂಲಕ, ದೊಡ್ಡ ಗೇಟ್ ದಾಟಿ. ಮಹಾಭಾರತದಲ್ಲಿ ಒಂದು ಕಡೆ ಹದಿನಾಲ್ಕು ಲಕ್ಷೋಣಿ ಇನ್ನೊಂದು ಕಡೆ ಹನ್ನೊಂದು ಲಕ್ಷೋಣಿ ಸತ್ತರಲ್ಲಾ, ಯಾರು ಅವರು, ನನ್ನಂಥವರು ತಾನೆ? ಯಾರ ಲಾಭಕ್ಕೆ ಸತ್ತರು ಅವರು? ಅವರ ಹೆಸರೇನು, ಕುಲವೇನು, ಊರು ಯಾವುದು, ಅವರ ಹೆಂಡಿರು ಮಕ್ಕಳ ಪಾಡೇನಾಯಿತು? ಅವರಿಗೇನು ಪಾಲು ಬೇಕಾಗಿತ್ತೆ, ಸಿಂಹಾಸನದ್ದು? ನೆಲಕ್ಕಲ್ಲ, ಛಲಕ್ಕೆ ಹೊಡೆದಾಡಿದನಂತೆ ದುರ್ಯೋಧನ! ಬಲವಿಲ್ಲದಿದ್ದರೂ ನೆಲೆಗೆ ನಿಂತರಂತೆ ಪಾಂಡವರು! ಸೈನ್ಯ ಕರೆಯಿಸಿದರು, ಬಿಲ್ಲು ಬಾಣ ಭರ್ಜಿ ಮುಸಲ ಹಿಡಿಸಿದರು, ಶಂಖ ಊದಿದರು, ಸಾಯಿರೋ ಅಂದರು. ಇದು ಯಾವ ನ್ಯಾಯ? ಕೋರ್ಟಿಗೆ ಹೋಗಿ, ಜಡ್ಜಿ ಮುಂದೆ ದಾವ ಹಾಕಿ, ಸಾಕ್ಷಿ ಹೇಳಿಸಿ, ಜಜ್ಮೆಂಟ್ ಪಡೆದು, ಜಾರಿ ಮಾಡಿದ್ದರೆ, ಅಷ್ಟು ಜನ ರೈತರ ಸಂಸಾರ ಕಣ್ಣೀರಲ್ಲಿ ತೇಲುತ್ತಿತ್ತೆ? ಬುದ್ಧಿ ಇಲ್ಲ, ದೊಡ್ಡವರಿಗೆ, ತಿಂದು ಕೊಬ್ಬಿದ ಮದ.

ಯಾಕೆ ಹೇಳುವುದಕ್ಕೆ ಬಂದೆ ಅಂದರೆ, ನನ್ನ ಹೆಂಡತಿ ನನ್ನ ಮನೆ ನನ್ನ ಮಗ ಅವರ ಸ್ಥಿತಿ ಅಷ್ಟು ಹೀನಾಮಾನವಾಗಿತ್ತು. ಅವಳಿಗೆ ಊರಿನವರು ಕೊಟ್ಟ ಕಿರುಕುಳ ಕೇಳಿ ನಾನು ಕೆಂಡ ಕಾರುತ್ತಾ ಕೂತೆ. ಬಡವರು ಬಡಿದುಕೊಂಡರೂ ಅವರ ದನಿ ಧಣಿಗಳ ಕಿವಿ ಮುಟ್ಟುವುದೇ ಇಲ್ಲವಲ್ಲಾ ಅಂತ ರೇಗಿದೆ. ಮೊಲದ ಕಣ್ಣೀರು ಬೇಟೆಗಾರನಿಗೆ ಮುದ್ದೆ?

ನನ್ನ ಹೆಂಡತಿ ಮಗ ಗೋಳಾಟ ನೋಡಿ ನಾನು ಕಂಗಾಲಾದೆ. ಎಷ್ಟು ಹಣ ಇದ್ದರೂ, ಸುಧಾರಿಸುವುದು ಕಷ್ಟ ಎನಿಸಿತು. ತಳ ಇಲ್ಲದ ಬಾವಿಗೆ ನೀರು ಹುಯ್ದು ಹಾಗೇನೆ. ಅವಳೇನು, ಧೀರೆ, ಸುಮ್ಮನಿರಲಿಲ್ಲ,

ಕೈ ಮಡಚಿ. ಕೆರೆ ಅಂಚಿನ ಜಮೀನು ಗೇಣಗಲ ಗುತ್ತಿಗೆ ತೆಗೆದು ಅದನ್ನ ಉಂಡು ಬದುಕಿದ್ದಳು. ನಾನೇನೂ ತಂದಿಲ್ಲ ಕಣೆ, ಅಂದಾಗ, ಮಗುವಿನಂಥ ಮನಸ್ಸು ಹೆಂಗಸಿನದು, ಸರಿ ಬಿಡಿ ಅದರಿಂದೇನು, ನೀವು ಬದುಕಿ ಬಂದದ್ದೇ ನನ್ನ ತಾಳೀ ಪುಣ್ಯ, ಅಂತ ಹಿಗ್ಗೇಬಿಟ್ಟಳು. ಚೊಚ್ಚಲು ಬಸುರಿಯ ಹಾಗೆ ಚೆಲ್ಲಾಟ ಆಡುತ್ತ ಡಾಬು ಗೆಜ್ಜೆ ಎಲ್ಲವನ್ನೂ ತೊಟ್ಟು ನಗ್ನಗ್ತಾನೇ ನಲಿದಳು.

ಆಮೇಲೆ ನನ್ನ ತುಟಿ ತೆಗೆಯಿತು. ಹೋಗೇ ಹುಚ್ಚಿ! ಏನೂ ಇಲ್ಲದೆ, ಬರೀ ಕೈಲಿ ಬರುತ್ತೇನೆಯೆ, ಬೊಂಬಾಯಿಂದ, ನಾನೇನು ಅಂಥ ನಾಲಾಯಖ್ ಮನುಷ್ಯನೇ, ಅಂತ ಅವಳ ಕೈ ಮೇಲೆ ಆ ಎರಡು ಹತ್ತು ರೂಪಾಯಿ ನೋಟು ಇಟ್ಟೆ. ಅವಳಿಗೇನು ಗೊತ್ತು, ಮಂಗನ ಕೈ ಮಾಣಿಕ್ಯ ಅಂತಾರಲ್ಲಾ, ಬೊಂಬಾಯಿ ವರಿಸೆ ಅದು, ಕಾಗದದ ಚೂರು ಎಂದಿಗಾದರೂ ದುಡ್ಡಾದೀತಾ, ಅಂತ ಅವಳು ಅವೆರಡನ್ನೂ ಸುರುಳಿ ಸುತ್ತಿ ರಾಮುನ ಕೈಗೆ ಆಟ ಆಡು ಅಂತ ಕೊಟ್ಟಳು. ರಾತ್ರಿ ಎಲ್ಲ ಹುಡುಕಿದೆ, ದೀಪ ಹಿಡಿದು. ಕೊನೆಗೆ ದನದ ಕೊಟ್ಟಿಗೇಲಿ ಸಿಕ್ಕಿತು, ಹಣ. "ಪೆದ್ದಿ! ಹೀಗೂ ಉಂಟೆ?" ಅಂತ ಬೆಳಗಾಗುವವರೆಗೂ ನಗಿಸಿದೆ ಅವಳನ್ನ.

ನನ್ನ ಹಟ್ಟಿ ಕೇಳುತ್ತೀರಾ? ಈಗಲೋ ಆಗಲೋ ತಲೇ ಮೇಲೆ ಮಗುಚಿ ಕೈಕೊಟ್ಟುಬಿಡುವ ಪರಿಸ್ಥಿತಿಯಲ್ಲಿತ್ತು, ಕಂಬಗಳೆಲ್ಲ ವಾಲಿ, ಗೋಡೆ ಎಲ್ಲ ಬಗ್ಗಿ, ಬಾಗಿಲೆಲ್ಲ ಗೆದ್ದಲು ತಿಂದು, ನೆಲವೆಲ್ಲ ಗುಳಿಬಿದ್ದು.... ಒಳಕ್ಕೆ ಕಾಲಿಡುವುದಕ್ಕೆ ಅಸಹ್ಯ, ಒರಗಿಕೊಳ್ಳುವುದಕ್ಕೆ ಭಯ. ಅವ್ವ ಅಪ್ಪ ಬಾಳಿ ಬದುಕಿದ ಗುಡಿಸಲು ಅಂತ ಅದನ್ನ ಸರಿಪಡಿಸಿದೆ. ರಿಪೇರಿಗೆ ಅಂತ ಮುನ್ನೂರು ನಾನೂರು ಗಳ ತೆಗೆದೆ. ಮನೆ ಇಲ್ಲದವನಿಗೆ ಮಾನವಿಲ್ಲ, ಅಂತ ಗಾದೆಯೇ ಇದೆ. ಗಂಟು ಕರಗುತ್ತಲ್ಲಾ ಅಂತ ನಾನು ಸುಮ್ಮನಿದ್ದರೆ, ಮುಂದಿನ ಗತಿಯೇನು? ಮನೆ ಮನೆ ಮುದ್ದೆ, ಮಾರಿ ಗುಡಿಯಲ್ಲಿ ನಿದ್ದೆ, ಅಷ್ಟೆ! ಕೊಂಚ ತೊಲೆ ಮೇಲೇನೂ ಹಾಕಿದೆ, ಬಂಡವಾಳಾನ. ನಾಲ್ಕು ಮೂಟೆ ಸಿಮೆಂಟೂ ತರಿಸಿದೆ. ಕಾಸು ಸಾಲದು ಅಂತ ನಟನೆ

ಮಾಡಿ, ಹತ್ತು ಹನ್ನೆರಡು ಸಾಮಾನು ಎತ್ತಿದೆ, ನಾವು ಇಕ್ಕಿ, ಊರಲ್ಲಿ ಗೌಡರುಗಳಿಂದ; ಹಲಗೆ ಪಲಗೆ ಕೊಟ್ಟರು. ಕುಪ್ಪಿ ಸಿದ್ದ ಅಂತ ಒಬ್ಬ ಇದ್ದ, ಕುಡುಕ ಬಡಗಿ, ನಮ್ಮೂರ ಹತ್ತಿರ. ಅಂಕಣಕ್ಕೆ ಮೂರು ರೂಪಾಯಿ ಮಾತನಾಡಿ ಅವನನ್ನ ಪುಸಲಾಯಿಸಿ ಎಳೆದುಕೊಂಡು ಬಂದೆ; ಊಟಾನೂ ಹಾಕ್ತೇನೆ, ಅಂದೆ; ಖುಷಿಯಾಗಿ ಕೆಲಸ ಮಾಡಲಿ, ಅವನ ಹೊಟ್ಟೆ ಉರಿದರೆ ನನ್ನ ಮನೆ ಉಳಿಯುತ್ತದೆಯೆ, ಅಂತ.

ನಾನಿಕ್ಕಿದ್ದ ಬೊಂಬಾಯಿ ರೇಷ್ಮೆ ವಸ್ತ್ರದ ಮೇಲೆ ಅವನಿಗೆ ಕಣ್ಣು. ಹೂನಪ್ಪ, ಅದ್ನೂ ಕೊಡುತ್ತೇನೆ ಇನಾಮು ಅಂತ ಆಡಿದೆ. ನಾಲ್ಕು ಮೂಲೇಲೂ ಕಲಃಫತ್ತಿನ ಮಾವಿನ ಕಾಯಿ ನಡುವೆ ಅದರದೇ ತಾವರೆ ಹೂವು. ಅದನ್ನ ಹೊದೆಯಬೇಕು ಅಂತ ಅವನ ಮನಸ್ಸಿನಲ್ಲಿ ದುರಾಸೆ ಮೂಡಿದ ಮೇಲೆ, ಆ ಕರುಬಿನ ಮುಂದೆ ಅದು ಉಳಿಯುತ್ತದೆಯೆ? ಅದನ್ನ ಹೊದ್ದು ನಾನು ಬಾಳೇನಾ?

ಕುಪ್ಪಿ ಸಿದ್ದ ಬಲು ಬಾಯಿಬಡಕ. ಚೆಲುವೇಗೌಡರು ನನಗೆ ವಸ್ತ್ರ ಕೊಡುತ್ತಾರೆ, ಅಕೊ, ಅವರ ಹೆಗಲ ಮೇಲಿದೆಯಲ್ಲಾ, ಅದೇ ನನ್ನ ವಸ್ತ್ರ, ಅಂತ ಬೆಟ್ಟುತೋರಿಸಿ ಭುಜತಟ್ಟಿಸಿಕೊಳ್ಳುವನು, ಪಡಖಾನೇಲಿ, ಸಂತೇಲಿ, ಗುಡಿ ಮುಂದೆ. ಅದನ್ನೂ ಸಹಿಸಲಿಲ್ಲ ನಮ್ಮವರು. ಕಂಡವರ ಕಷ್ಟಸುಖ ನಮಗೆ ಯಾಕೆ? ಅವನ ವಸ್ತ್ರ ಇವನ ಆಸೆ, ಅವನು ಇಕ್ಕಿದ ಇವನಿಗೆ ದಕ್ಕಿತು, ಕೊಟ್ಟದ್ದು ಅವನಿಗೆ ಬೆಚ್ಚಗಿಟ್ಟದ್ದು ಇವನಿಗೆ ಅಂತ ಇಲ್ಲ. ಹಳ್ಳಿ ಅಂದ್ರೆ, ಇದೇ ಗೋಳು. ಹೂಸಿದರೂ ಹೂಲಿ ಎಬ್ಬಿಸುತ್ತಾರೆ. ಮಾವನಿಗೆ ನೆಗಡಿ ಬಂದರೂ, ಎಲ್ಲರ ಮೂಗೂ ಸೋರುತ್ತೆ. ಎಲ್ಲಕ್ಕೂ ಎಲ್ಲರೂ ಏರಿಕೊಂಡು ಬರ್ತಾರೆ. 'ಲೋ, ಚೆಲುವಾ, ನೀನೇನೋ ಕೊಡು ತ್ತೀಯಾ, ದೊಡ್ಡ ಕಡೆ ಗೆಯ್ದು ಬಂದಿದ್ದೀಯಾ. ಆದರೆ ಹೀಗೆ ಕಸಬುದಾರರನ್ನ ಹೆಚ್ಚಿಸಿಬಿಟ್ಟರೆ, ಹಲಾಲ್‌ಕೋರರಿಗೆಲ್ಲ ಹಾರ ಹಾಕಿದರೆ, ನಾಳೆ ಅವರು ಎರಡನೆಯವರ ಮಾತು ಕೇಳುತ್ತಾರೆಯೇ?' ಅಂದರು. ಅಲ್ಲಾ, ಮಾತು ಆಡಿದ ಮೇಲೆ, ಒಂದೋ ಎರಡೋ ಮನುಷ್ಯನಿಗೆ ನಾಲಗೆ? ನನ್ನದಲ್ಲ ಅಂತ

ಅವತ್ತೇ ಅದನ್ನ ಅವನಿಗೆ ಕೊಟ್ಟೇಬಿಟ್ಟೆ. ಅವನೂ, ಪಾಪ, ನಮ್ಮೂರ ಗೌಡರ ಕಣ್ಣಿಗೆ ಬೀಳದ ಹಾಗೆ, ಕದ್ದೇ ಹೊದ್ದ.

ಹಟ್ಟಿ ಅಚ್ಚುಕಟ್ಟಾಯಿತು. ಇನ್ನು ಬೇಕಾದ್ದೇನು ? ಒಂದಿಷ್ಟು ಹೊಲ ಗದ್ದೆ. ಬಿತ್ತಿ ಬೆಳೆಯುವವನಿಗೆ ಬಿಸಿ ಅನ್ನ, ಅಂತ ಗಾದೆಯೇ ಇದೆ. ಆದರೆ, ಬೇಸಾಯ ಕೂಡ ಬರೀ ಮೋಸ ಆಗಿಹೋಯ್ತು. ಕೂಲಿಯವರೆಲ್ಲ ಮೈಗಳ್ಳರು, ಎತ್ತುಗಳೆಲ್ಲ ಸೋಮಾರಿಗಳು, ಗೊಬ್ಬರ ನಿಸ್ಸಾರ, ಬೀಜ ಜಳ್ಳು, ಮಳೆ ಬರೀ ತುಂತುರು, ಕಿತ್ತು ತಿನ್ನುವವರೇ ಜಾಸ್ತಿ. ಕಣಜ ಕಾಣುವುದು ರೂಪಾಯಿಗೆ ಹತ್ತಾಣೆ. ತಿರುಕರು ಬಹಳ, ಕಂದಾಯಕ್ಕಿಂತ ಮಸಿ ಕಾಣಿಕೆ ಭಾರ, ಚೀಲವೆಲ್ಲ ತೂತು; ಕಚೇರಿ ತುಂಬ ಎಡಗೈ, ಅಂಗಡಿ ಅಳತೆ ದೊಡ್ಡದು, ಅವನು ಕೊಡುವ ಕಾಸು ಸವಕಲು, ಸುಳ್ಳು ಪತ್ರ, ಸುಳ್ಳು ಲೆಕ್ಕ. ಇಷ್ಟನ್ನೆಲ್ಲ ತಪ್ಪಾಯಿಸಿ ನಾವು ರೈತರು ಅಂಗಡಿ ಪೇಟೆ ತಿರುಗಿ ನಮ್ಮ ಸಂಸಾರಕ್ಕೆ ಬೇಕಾದ ಸಾಮಾನುಗಳು ತರೋಣ ಅಂದ್ರೆ, ಅಲ್ಲೂ ಡಬ್ಬಲ್ ಮೋಸ. ಮೊಳ ಕಮ್ಮಿ ಬಟ್ಟೆ, ಬಣ್ಣ ಕಡಮೆ ಸೀರೆ, ಮುರಿದು ಹೋಗುವ ಕುಳ ನೇಗಿಲಿಗೆ, ಕಸತುಂಬಿದ ಕಾಪಿ ಪುಡಿ, ನೊರೆ ಇಲ್ಲದ ಸಾಬೂನು, ವಾಸನೆ ಇಲ್ಲದ ಊದುಕಡ್ಡಿ, ಕರಗಿ ನೀರಾಗುವ ಕರ್ಪೂರ, ಹಿತ್ತಾಳೆ ಚಿನ್ನ, ಜರ್ಮನ್ ಬೆಳ್ಳಿ, ರೂಪಾಯಿಗೆ ಪಾವಲಿ ಬಡ್ಡಿ. ಇಷ್ಟೆಲ್ಲ ಗೋಳಿದ್ದರೂ, ನೇಗಿಲು ಹಿಡಿಯದೆ ವಿಧಿ ಇಲ್ಲ, ಇಂಗ್ಲೀಷ್ ಕಲಿಯದ ಮಂದಿಗೆ. ಸುಮ್ಮನೆ ಜಗಲಿ ಮೇಲೆ ಕೆರೆದುಕೊಂಡು ಕೂಡೋದು ಹೇಗೆ ? ಹಳ್ಳಿಯವ ರೈತ ಗಮಾರ ಅಂತ ಅವನನ್ನೇ ಸುಲಿದು ತಿನ್ನೋ ಮಂದಿ ಎಂಟು ದೆಸೇಲೂ ಇದ್ದರೂ, ನಮ್ಮ ಕಸುಬು ನಾವು ತೊರೆಯುವುದಕ್ಕಾಗುತ್ತದೆಯೆ ?

ನಮ್ಮೂರಲ್ಲಿ ಚೆನ್ನಪಟ್ಟಣದ ಅಯ್ಯನವರೊಬ್ಬರದು ಜಮಿಾನಿತ್ತು' ಗೆಜ್ಜಲು ಭೂಮಿ. ಅದನ್ನ ಮಾರುವುದರಲ್ಲಿದ್ದರು. ಕನ್ನಂಬಾಡಿ ಕಟ್ಟೆಯ ನೀರು ಅಲ್ಲಿಯತನಕ ಕಾಲಾನುಕಾಲಕ್ಕೆ ಬರುತ್ತೆ, ಆಗ ಎಕ್ರೆಗೆ ಐನೂರು ಆರುನೂರಿಗೆ ಮೋಸವಿಲ್ಲ, ಈಗ ಎಕ್ರೆಗೆ ಐವತ್ತು ಬಾಳುತ್ತೆ, ಎಂದು

ಜನ ಆಡಿಕೊಳ್ಳುತ್ತ ಇದ್ದರು. ಹಳೇ ಮೊರಕ್ಕೆ ಸಗಣಿಯೇ ಆಧಾರ, ಅಂತ ನಾನು ಚನ್ನಪಟ್ಟಣಕ್ಕೆ ಹೋಗಿ ಅವರನ್ನ ವಿಚಾರಿಸಿದೆ. ಮಗ ಇದಾನೆ, ಇವಳು ಬೇರೆ ಮತ್ತೆ ಬಸುರಿ, ಜಮೀನಾದರೆ ಲುಕ್ಸಾನಿಲ್ಲ, ಹಣ ಅಂದರೆ ಬೆಳಗಿನ ಜಾವದ ಮಂಜು, ಕರಗಿ ಹೋಗುತ್ತದೆ ಖರ್ಚಿನ ರಭಸದಲ್ಲಿ, ಅಂತ ನಾನೂ ಬಾಯಿ ಬಿಟ್ಟೆ. ಹತ್ತಿರ ಹೋದಾಗ, ತಿಳಿಯಿತು, ಅಯ್ಯನವರು ಆಷಾಢಭೂತಿ ಅಂತ. ಬಲು ತಂತ್ರಿ, ಆತ. ಜಮೀನೇನೋ ನಿನಗೆ ಕೊಡುತ್ತೇನೆ, ಕಾಗದ ಪತ್ರ ಏನೂ ಬೇಡ ನಮ್ಮನಮ್ಮಲ್ಲಿ, ಉಳಿದ ಹಣಕ್ಕೆ ಸಾಲ ತಕೊ ನನ್ನಿಂದಲೇ, ಬಡ್ಡಿ ಮಾತ್ರ ರೂಪಾಯಿಗೆ ಒಂದಾಣೆ ತಿಂಗಳಿಗೆ, ಬೆಳೆದದ್ದರಲ್ಲಿ ನನಗೂ ವಸಿ ಪಾಲು ಕೊಡು, ಲೊಟ್ಟೆ ಲೊಸಕು ಅಂತ ನೂರೆಂಟು ಹೇಳಿದರು. ಹೋಗ್ರಿ ಹೋಗ್ರೀ, ಅಂತ ತಿರುಗಿಸಿದೆ ಬೆನ್ನನ್ನ. ರೊಕ್ಕವೇ ಇರಲಿ, ಭೂಮಿ ತಂಟೇನೇ ಬೇಡ, ಅಂತ ಅವಳ ಕೈಗೆ ಇನ್ನೂರು ಇಟ್ಟೆ, ಕುಡಿಕೇಲಿ ಹೂತಿಡು ಅಂತ; ಕೂತೇ ತಿನ್ನೋಣ, ಅಂದೆ. ರೇಷ್ಮೆ ಗೂಡು ಮಾಡುತ್ತಾ ಕಾಲ ತಳ್ಳಿದೆವು.

# ಚಕ್ರದ ಗೆರೆ

ಯಾಕೋ ಊರು ಬೇಜಾರಾಯಿತು. ಸಿಂಬಳದಲ್ಲಿ ಬಿದ್ದ ನೊಣದ ಹಾಗೆ ಒದ್ದಾಡಿದೆ. ಬೆಳಗಾದರೆ ಬರೀ ಚಾಡಿ ಚರ್ಚೆ ಇವನ ಮೇಲೆ ಅವ ಅವನ ಮೇಲೆ ಇವ ನ್ಯಾಯ ಪಂಚಾಯ್ತಿ, ನನಗೊಂದೂ ಹಿಡಿಸಲಿಲ್ಲ. ಗೇಣಿ ಹೊಡುವುದು ಗೋಣಿ ಕೊಡಹುವುದು, ಎಷ್ಟು ವರ್ಷ ರುಚಿಸೀತು ? ಬೆಂಗಳೂರು ಬೊಂಬಾಯಿ ಗಾಳಿಯೇ ನನ್ನ ಎದೆಗೆ ಉಸಿರು ಅನ್ನಿಸಿತು. ಜಗದೀಶ್ವರನ ದಯೆ ಇದ್ದರೆ ಜಗವೆಲ್ಲ ನನ್ನದು. ಗೋಥೆ ಉಂಟು ಮೈದಾನ ಉಂಟು, ನನಗೇನು ಹಂಗು, ಕೊಕ್ಕರೆಗೆ ಒಂದೇ ಕೆರೆಯೆ, ಅಂತ ಪಳಾನ್ ಹಾಕುತ್ತಾನೇ ಇದ್ದೆ. ಠಣ್ ಅಂತ ಗಂಟೆ ಬಾರಿಸಬೇಕು, ಎದ್ದು ನಡೀತಿರಬೇಕು, ಕೆಲಸಕ್ಕೆ ಸುಣ್ಣ ಬಣ್ಣ ಬಳಿದ ಬಿಲ್ಡಿಂಗೇ ಆಗಬೇಕು ನೌಕರಿ ಮಾಡೋಕೆ, ಅದು ನನಗೆ ರೂಢಿ. ಅದು ಬಿಟ್ಟು, ಕುಯ್ಯೋ ಪಿಯ್ಯೋ ಅಂತ ಹೈಕಳು, ಹರುಕಲು ಸೀರೆ ಮುರುಕಲು ಬಳೆ ಅಂತ ಪೀಡಿಸೋ ಹೆಂಗಸು....ಥೂ ! ಸೋನೆ ಮಳೆ, ದಿನ ಬೆಳಗಾದರೆ.

ಆ ಬದುಕು ನನಗೆ ಹಿಡಿಸಲಿಲ್ಲ. ಸೈರನೆಲ್ಲಿ ಕೂಗ್ತದೆ, ರೈತರನ್ನೆಬ್ಬಿಸಿ ಆರು ಕಟ್ಟಿ ನೇಗಿಲು ಹಿಡಿಯುವುದಕ್ಕೆ ? ಹೊಲದ ತಾವು ಯಾವ ಬುಳ್ಳಪ್ಪ ಇದಾನೆ ಕ್ಯೂ ನಿಲ್ಲಿಸಿ ಕಾಫಿ ಕೊಡೋಕೆ....ಶನಿವಾರ ಸಂಜೆ ಆಯ್ತು ಅಂದರೆ, ಯಾವ ಜಮೀನ್ದಾರ ಕೊಡ್ತಾನೆ ಕವರಿನಲ್ಲಿಟ್ಟು ಕೂಲೀನ....ಅದೀಗ ಮರ್‍ಳು....ಹಳ್ಳೀಲಿ ಒಂದು ಕಪ್ಪು ಸೊಗಸಾದ ಚಾ ಸಿಗೋದಿಲ್ಲ. ನಮಗೆ ಒಂದು ಬಯಸ್ಕೋಪ್ ತೋರಿಸಬೇಕಾದರೆ, ಅಮಿಲ್ದಾರಿ ಲೈಸನ್ಸ್ ತೆಗೆದು ಅವನು ಗುಡಾರ ಹೂಡಿ ಇಂಜಿನ್ ನುಡಗಿ ಊರಿನ ಗೂಂಡಾ ಗಳಿಗೆಲ್ಲ ಬಿಟ್ಟಿ ಪಾಸು ಹಂಚಿ ಹರಕಲು ಚಿತ್ರ ಕಮ್ಮಿ ಬಾಡಿಗೆಗೆ ಹಿಡಿದು ಮಾರುದ್ದಕ್ಕೆ ಮಾರುದ್ದಕ್ಕೆ ಕತ್ತರಿಸಿ ಹಿಡಿಯಬೇಕು ದೀಪದ ಮುಂದೆ.

ಹೇಗಿದ್ದರೂ ನನ್ನ ಕಾಲಲ್ಲಿ ಚಕ್ರದ ಗೆರೆ. ಹೇಳದೆ ಕೇಳದೆ, ನನ್ನ ಬುದ್ಧಿಯಿಂದ ನಾನೇ ಹೊರಟೆ, ಮತ್ತೆ, ಬೆಂಗಳೂರಿಗೆ. ಹಳೇ ಗಿರಾಕಿಗಳು ಒಬ್ಬಿಬ್ಬರು ಸಿಕ್ಕರು, ಗೂಡ್ಸ್ ಷೆಡ್ಡಿನ ಸಮೀಪ. ಅವರೇನೋ ಬೈದರು ಅನ್ನಿ—ನಿನ್ನ ತಲೆ ಕೆಟ್ಟಿದೆ, ಹಳ್ಳಿಯಲ್ಲಿರೋ ಸುಖಾನ ಇಲ್ಲೆಲ್ಲಿ ಬಯಸಿ ಬಂದೆಯೋ, ಅಂತ. ಅವರ ಸಹವಾಸ ಬಿಟ್ಟೆ, ನಾನು. ರೈಲು ಸ್ಟೇಷನ್ ಠಾವು ಒಬ್ಬ ಆರಪದವನು ಸಿಕ್ಕ, ಕಂಬ್ಳಿ ಮೆಷೀನ್ ಕದೀವು.

ಏನೋ ಚೆಲುವಾ, ಬೊಂಬಾಯಿಗೆ ಮಣ್ಣು ಹಾಕಿದೆ; ಇನ್ನು ಯಾವೂರು ಹಾಳು ಮಾಡುತ್ತಿಯಾ? ಮದ್ರಾಸೋ?....ಅಂದ.

ಯಾಕಾಗಬಾರದು? ಪಾಪೀನ ಬದುಕಿಸಿದವರಿಲ್ಲ, ಪುಣ್ಯವಂತ ನನ್ನ ಕೆಡಿಸಿದವರಿಲ್ಲ ನನ್ನ ಪುಣ್ಯ ನನ್ನನ್ನೆಲ್ಲಿಗೆ ಹೋದರೂ ಕಾಯುತ್ತೆ. ಮದ್ರಾಸು ನಿಜ್ಜವಾಗುಂಡೆ ಪಟ್ಟಣವಿರಬಹುದು, ಆದರೆ, ಅಲ್ಲಿ ಎಚ್ಚರಿದ್ದವ ಜಾಣ. ಹೋಗೇ ನೋಡೋಣ ಅದರ ಮರ್ಝಾನೂವೇ, ಅಂತ, ಟಿಕೀಟ್ ತೆಗೆದು ಕೂತೇಬಿಟ್ಟೆ, ಗಾಡೀಲಿ. ಬವರಿಂಗ್‌ಪೇಟೆ ತನಕ ಕಿಟಕಿಯಾಚೆ ನೋಡಲೇ ಇಲ್ಲ, ಎಲ್ಲಿ ಈ ಕನ್ನಡ ಸೀಮೆ, ನನ್ನನ್ನ, ಇಳಿಯೋ ಎಲ್ಲಿಗೆ ಹೊರಟೆ ನನ್ನನ್ನು ಬಿಟ್ಟು, ಅಂತ ಮನಹಿಡಿದು ಇಳಿಸೇಬಿಡುತ್ತದೋ ಎಂಬ ಭಯ ನನಗೆ.

ಮದ್ರಾಸ್ ಸ್ಟೇಷನ್ ಅಂಥ ಭಯಂಕರ ಏನೂ ಅಲ್ಲ. ನಾನು ಸೇರಿದ್ದೇ ಕತ್ತಲೆ ಹೊತ್ತು, ಕಳ್ಳನ ಹಾಗೆ. ಅಲ್ಲೇ ಗೋಡೆಗೆ ಒರಗಿ ಬೆಳಕು ಹರಿಸಿದೆ. ಬೆಳಗಾಗುತ್ತಲೂ, ಹೊಟ್ಟೆಗೊಂದಿಷ್ಟು ದೋಸೆ ಕಾಫಿ ಕೊಟ್ಟು, ನೌಕರಿ ಹುಡುಕುವುದಕ್ಕೆ ಹೊರಟೆ. ಆ ಊರೇನು, ಹೆಸರು ದೊಡ್ಡದು, ಜನ ಬುದ್ಧಿವಂತರು. ಆದರೆ, ವಿಶೇಷ ವ್ಯಾಪಾರ ಇಲ್ಲ, ಕಾರ್ಖಾನೆಗಳೂ ಕಮ್ಮಿ. ಬಕ್ಕಿಂಗಾಂ ಮಿಲ್ಲೊಂದೇ ಇರೋದು, ಅವನದೇ ಒಂದು ಕಾಲುವೆ ಬೇರೆ ಇದೆ. ಆ ಮಿಲ್ಲಿನವನು ನಾನು ಹೋದಾಗ, ಕೂಲಿಯವರನ್ನೆಲ್ಲ ಹೊರಕ್ಕೆ ಅಟ್ಟಿ ಬಾಗಿಲು ಹಾಕಿ ಪೋಲೀಸ್‌ನವರನ್ನು

ತುಪಾಕಿ ಕೊಟ್ಟು ಪಹರೆ ನಿಲ್ಲಿಸಿದ್ದ. ಮದ್ರಾಸ್ ಅನ್ನೋದು ಬೊಂಬಾಯಿ ನಷ್ಟು ಹುಚ್ಚು ಊರಲ್ಲ; ಬಂಗ್ಲಿಗಳೆಲ್ಲ ಬಿಡಿ ಬಿಡಿ; ಹಿತ್ತಲು ತೋಪು ತೋಟ, ತೇವ ಜಾಸ್ತಿ. ಬೀಚೂನೂ ಭಾರಿ.

ಒಂದು ವಾರ ಅಲೆದ ಮೇಲೆ, ಆರ್ಬರ್ ಹತ್ತಿರ ಕಬ್ಬಿಣದ ಅಂಗಡಿ ಸಿಕ್ಕಿತು ಒಂದು; ಅಲ್ಲಿ ಒಬ್ಬರು ಎಡ್ರೈಟರು ಮುಂಡ್ಯದ ಕಡೆ ಆಯ್ಯಂಗಾರರು. ಅವರು ನನ್ನನ್ನ ನನ್ನ ಹೆಸರು ನೋಡಿ ಮೇಲುಕೋಟೆ ಚೆಲುವ ನಾರಾಯಣಸ್ವಾಮಿಯ ಒಕ್ಕಲು ಅಂತ ತಿಳಿದು, ಬಾರೋ, ಸೇರಿಕೊಳ್ಳೋ, ಅಂದರು. ಗಿರಾಕಿಗೆ ಸಾಮಾನು ತೂಗಿ ಕೊಡೋದು, ಅಷ್ಟೆ, ಅಂದರು. ಇಪ್ಪತ್ತ ನಾಲ್ಕು ರೂಪಾಯಿ ಸಂಬಳ ಬರೆದುಕೊಂಡರು. ನನ್ನ ಯೋಗ್ಯತೆಗೆ ಅದು ಕಮ್ಮಿ ಏನೂ ಅಲ್ಲ.

ತ್ರಾಸಿನಲ್ಲಿಡೋದು, ಸ್ಟೋನು ಹಂಡ್ರಡೇಟು ಅಂತ ತೂಕ ಮಾಡೋದು, ಇಳಿಸೋದು, ಇದು ನೌಕರಿ. ಅಯ್ಯೋ! ಈ ಮೈ ಎಷ್ಟು ಬಗ್ಗಿದೆಯೋ, ಎಷ್ಟು ಬೆವತಿದೆಯೋ, ತ್ರಾಸ ತಿನ್ನೋದಕ್ಕೇ ಜನ್ಮ ಎತ್ತಿರೋದು, ಹೋದ ಜನ್ಮದಲ್ಲಿ ನಾನೊಬ್ಬ ಪೋಲೀಸಪ್ಪನಾಗಿದ್ದೆನೋ ಏನೋ, ಅಂತ ಸುಮ್ಮನಾದೆ. ಹತ್ತಾರು ಜನ ಇದ್ದರು ಆ ಕಂಪನೀಲಿ; ಬರೀ ಲೇಖನಿ ಹಿಡಿದು ಗರಗರ ಅಂತ ಗುಜರಾಯಿಸುವವರೇ ಆರು ಮಂದಿ. ಒಂದು ಕೋಣೆ ತುಂಬ ಸರಳು, ಒಂದರ ತುಂಬ ತಗಡು, ಹೀಗೆಯೇ ಭರ್ತಿ ಮಾಡಿದ್ದ, ಮಾರಾಯ.

ಒಂದು ಒಂದೂವರೆ ತಿಂಗಳು ನೆಮ್ಮದಿಯಾಗಿದ್ದೆ, ಮದರಾಸಿನಲ್ಲಿ. ವಾಸಕ್ಕೆ, ಊಟಕ್ಕೆ, ಒಬ್ಬ ಮುದುಕಿ ಮನೇಲಿ ಆಶ್ರಯ ಪಡೆದಿದ್ದೆ, ಅಲ್ಲೇ ಹತ್ರ. ಹತ್ರ ಎಂದರೆ, ಎಷ್ಟು ಮೈಲಿ, ಗೊತ್ತು ತಾನೆ? ಹದಿಮೂರು ರೂಪಾಯಿ ಮಾತಾಡಿದ್ದೆ, ಅಷ್ಟೆ. ಗಂಜಿ ಬಸಿದ ಮೇಲೆ, ಅದೇ ಒಲೇಲಿ ನೀರು ಕಾಯಿಸಿ, ಹಲ್ಲು ತೀಡಿಕೊ, ಮುಖ ತೊಳೆದುಕೊ, ಬೇಕಿದ್ದರೆ ಸ್ನಾನಾನೂ ಮಾಡು, ಅನ್ನುವಳು. ಮಡಿ ಬಟ್ಟೆಯಲ್ಲಿ ತೈರ್‌ಶಾತಂ

ಸಾಂಬಾರ್‌ಶಾತಂ ಅಂದರೆ ಮೊಸರನ್ನ ಹುಳಿಯನ್ನ ಎರಡನ್ನೂ ಕಟ್ಟಿ ಕೊಡುವಳು, ಕೆಲಸದ ತಾವು ತಿಂದುಕೊ, ಅನ್ನುವಳು. ಅಷ್ಟರವುಟ್ಟಿಗೆ, ಕಾಸು ತೆತ್ತರೂ, ಯಾರು ಮಾಡುತ್ತಾರೆ, ನನ್ನಂಥವನಿಗೆ? ಅವಳಿಗೊಬ್ಬ ಮಗ ಇದ್ದನಂತೆ, ಬದುಕಿದ್ದರೆ ನನ್ನಷ್ಟು ವಯಸ್ಸಾಗ್ತಿತ್ತಂತೆ ಅವನಿಗೆ, ಹೇಳುವಳು ಮುದುಕಿ.

ಆದರೆ, ಮದರಾಸ್ ನನಗೆ ಒಗ್ಗಲಿಲ್ಲ. ಸಂಜೆಯಾಗುತ್ತಲೂ, ನೆಲದ ಮೇಲೆ ಕತ್ತಲೆ ಇಳಿಯುತ್ತದಲ್ಲಾ, ಹಾಗೆಯೇ, ಗಾಳಿ ತೂರಿದಂತೆ, ತಂಪು ಹಿಡಿಯುವ ಹಾಗೆ, ನನ್ನೊಳಗೂ ಒಂದು ರೋಗ ನುಗ್ಗಿತು, ನಿಧಾನವಾಗಿ. ಮೊದಮೊದಲು, ನಿಮಗೆಲ್ಲ ಬರುವ ಹಾಗೆ, ಸರ್ವಸಾಧಾರಣದ ನೆಗಡಿ. ಗೂಸ ಗೂಸ ಅನ್ನುವುದು, ಮೂಗು; ವಿಪರೀತ ಶೀನು. ಮುಖವೆಲ್ಲ ಕೆಂಚಗಾಗುವುದು. ಕಣ್ಣು ಉರಿ. ಆಮೇಲಾಮೇಲೆ, ಸಾಯಂಕಾಲ ದಿನವೂ ಒಸಿ ಮೈ ಕಾವು. ಆಲಸ್ಯ, ಸುಸ್ತು, ಒರಗೋಣ ಅನ್ನೋ ಆಸೆ; ಹೊರಳೋಣ ಅನ್ನೋ ಮನಸ್ಸು. ಮೂರಕ್ಕೆ ನಾಲ್ಕಕ್ಕೆ, ಚಾಪೆ ಹಾಸೇಬಿಡುವೆ. ಬಿಸಿನೀರಿನ ಜೊತೆಗೆ ಬಾಯಿಗಿಷ್ಟು ಏಲಕ್ಕಿ ಲವಂಗ ಒಣ ಶುಂಠಿ ಹಾಕುವೆ. ಮೂಗು ಗಂಟಲು ಶುದ್ಧವಾಯಿತು ಅಂದರೆ, ತಿರುಗ ಚಾಕರಿಗೆ ಸಿದ್ಧ.

ಬರುಬರುತ್ತ, ಎದೆನೋವು, ಬೆನ್ನು ಚಳುಕು, ಭಾರ ಹೊರುವಾಗ ಕೈ ಕಾಲು ಸೋತೇ ಹೋಗುವುವು. ಒಂದು ದಿನ ಕಮ್ಮಿ ಆದರೆ, ಮಾರನೆಯ ದಿನ ಹೆಚ್ಚಾಗುವುದು. ಒಂದು ತರಹ ಬರಡು ಕೆಮ್ಮಲು, ಖಾಲಿ ಸೇರು ಪಾತ್ರೆ ಬಾಯಿಗೆ ಬಡಿದ ಹಾಗೆ, ಕೆಮ್ಮುವಾಗ ಎದೆಯೊಳಗೆ ಸೂಜಿ ಚುಚ್ಚಿದ ಹಾಗೆ ನೋವು; ಬುರುಡೆಯೊಳಗೆ, ತಾರಾಮಂಡಲ ಹಾರಿಸಿದ ಹಾಗೆ, ನಕ್ಷತ್ರ.

ಹೋಗುತ್ತ ಬರುತ್ತ, ಬೀದಿಯ ಮಗ್ಗುಲಲ್ಲಿದ್ದ ಪಕ್ಷಿ ಶಾಸ್ತ್ರದವರು, ಸಾಮುದ್ರಿಕದವರು, ಗಡ್ಡದವರು, ಓಲೆಗರಿಯವರು, ಕಪ್ಪೆ ಚಿಪ್ಪಿನವರು,

ಎಲ್ಲರನ್ನೂ ಕೇಳಿದೆ, ನನ್ನ ಹಣೆಯಲ್ಲಿ ಏನು ಬರೆದಿದೆ, ಅಂಗೈಯಲ್ಲಿ ಏನು ಗೀಚಿದೆ, ಹೇಳಿರಪ್ಪ, ಅಂತ. ಅವರೇನೇನೋ ಅಂದರು, ಶನಿ ಮನೆ ಬದಲಾಯಿಸಿದ್ದಾನೆ ಅಂದರು; ಸೋದರಳಿಯ ಮಾಟ ಮಾಡಿಸಿದಾನೆ, ಅಂದರು ; ಹನುಮಂತರಾಯ ಸಿಟ್ಟಾಗಿದಾನೆ, ಅಂದರು ; ಆದರೆ, ಗಾಣಿಗಿತ್ತಿ ಅಯ್ಯೋ ಅಂದರೆ ನೆತ್ತಿ ತಣ್ಣಗಾಗುತ್ತದೆಯೆ ? ಕಡೆಗೆ ಒಂದು ದಿನ ನಾನು ನಮ್ಮ ಅಯ್ಯಂಗಾರರ ಹತ್ತಿರ ಹೋಗಿ, ಹೀಗೆ ಹೀಗೆ ಆಗುತ್ತಾ ಇದೆ, ಸ್ವಾಮಿ, ಅಂದೆ. ಬೆಳಗಾಗುತ್ತಲೇ ಏಳುವುದೇ ಪ್ರಯಾಸ; ಎದ್ದರೆ, ಚಾಕರಿಗೆ ಹೋಗು ಅಂತ ಕಾಲು ಹೊಸಲಾಚೆ ಹೋಗುವುದು, ಮಲಗುವುದಕ್ಕೆ ಅಂತ ಸೊಂಟ ಹಿಂದಕ್ಕೆ ಬಗ್ಗೋದು, ಅಂದೆ ; ಸಂಜೆ ಆಯಿತು ಅಂದ್ರೆ, ತಲೆ ಸಿಡಿತ ಗಂಟಲು ಕೆರೆತ, ಎದೆ ಬಡಿತ, ಜ್ವರ, ಅಂದೆ.

ಅವರು ನಕ್ಕರು. ಊರಿಗೆ ಕಳುಹಿಸುವ ಮನಿಆರ್ಡರ್‌ನಲ್ಲಿ ಖೋತ ಮಾಡಿ, ಚೆನ್ನಾಗಿ ತಿನ್ನೋ ಅಂದರು. ಅವರ ಬಿಂಕ ಅವರಿಗೆ. ಆರು ತಿಂಗಳು ನೂಕಿದೆ, ತ್ರಾಸಿನಲ್ಲಿ. ಕಡೆಗೆ ಬಗ್ಗಿದರೆ ಕಣ್ಣುಗುಡ್ಡೆ ಬಿದ್ದು ಹೋಗುತ್ತದೋ ಎಂಬ ಭಯವಾಯಿತು. ವಾಂತಿ ಮಾಡಿದರೆ, ಕೆಮ್ಮಿ ಉಗುಳಿದರೆ, ಕೆಂಪಗೆ ರಕ್ತಬರುವುದು. ತಿಂದದ್ದು ಜೀರ್ಣ ಆಗುತ್ತಿರಲಿಲ್ಲ. ಅಯ್ಯಂಗಾರರಿಗೂ ಗಾಬರಿ ಹತ್ತಿತು. ನಿನಗೆ ಹೆಂಡಿರು ಮಕ್ಕಳಿದಾರೇನೋ ಅಂದರು. ಹೂಂ, ಸ್ವಾಮಿ, ಅಂದೆ. ಪಾಪ, ಪಾಪ, ಅಂದರು, ಅವರನ್ನ ನೆನೆದು.

ಅದೇ ಬೀದಿಯಲ್ಲಿದ್ದ ಒಬ್ಬರು ಡಾಕ್ಟರಿಗೆ, ಮದ್ರಾಸಿಯವರು ಅವರು, ಅವರಿಗೆ ಒಂದು ಚೀಟಿ ಬರೆದುಕೊಟ್ಟರು. ಆ ಚೀಟಿಯಲ್ಲಿ ಏನಿತ್ತೋ ಏನೋ, ಅದನ್ನ ನೋಡುತ್ತಲೂ ಆ ಡಾಕ್ಟರು, "ಬಿಚ್ಚೋ" ಅಂದರು ಬನೀನನ್ನ. ಎದೆ, ಬೆನ್ನು, ಗಂಟಲು, ಹೊಟ್ಟೆ, ನಾಲಗೆ, ಕಿರುನಾಲಗೆ, ರೆಪ್ಪೆ, ಗುಡ್ಡೆ, ಉಗುಳು, ಎಂಜಲು ಒಂದು ಎರಡು ಎಲ್ಲವನ್ನೂ ಪರೀಕ್ಷೆ ಮಾಡಿದರು ; ಒಂದೊಂದು ಮುಗಿಯುತ್ತಲೂ ಮುಖ ಉದ್ದ ಮಾಡಿಕೊಂಡು ಏನೋ ಬರೆದುಕೊಳ್ಳುವರು. ತಗ್ಗಿದ ದನಿಯಲ್ಲೇ 'ಗೌಡಾ' ಅಂದರು.

ಮುದ್ರೆಯವರ ಕನ್ನಡದಲ್ಲಿ. ನಿಮಗೆ ಕ್ಷಯಬಂದಿದೆ; ನಿಮಗೆ ನಾನೊಂದು ಪತ್ರ ಕೊಡುತ್ತೇನೆ, ಕ್ಷಯಾಸ್ಪತ್ರೆಯಲ್ಲಿ ಆರು ತಿಂಗಳು ಸುಖವಾಗಿದ್ದು, ಸುಧಾರಿಸಿಕೊಂಡು ಈಚೆಗೆ ಬನ್ನಿ, ಅಂತ ಹರಸಿದರು.

ಆ ಡಾಕ್ಟರು ನನ್ನನ್ನ ಆಳವಾಗಿ ವಿಚಾರಿಸಿದರು. ಎಲ್ಲೆಲ್ಲಿ ಏನೇನು ಚಾಕರಿಯಲ್ಲಿದ್ದೆ ಅಂತ. ಕಂಬ್ಳಿ ಮೆಷೀನ್ ಅಂದಾಗ ಅವರು ಹುಂ ಅಂದರು; ತಬೇಲಿ ಅಂದಾಗ, ಲದ್ದಿನಾತ ಮೂಗಿಗೆ ಬಡಿದಹಾಗೆ ಅದನ್ನೆಳೆದರು; ಬೆಂಕಿಪೊಟ್ಟಣ ಅಂದಾಗ ಅವರೂ ಬೆಂಕಿ ಆದರು, ಕಬ್ಬಿಣದ ಕಂಪನಿ ಅಂದಾಗ ಮೂತಿ ಇನ್ನೂ ಉದ್ದವಾಯಿತು. "ನಿಮ್ಮಂಥ ಹಳ್ಳಿ ಜನಕ್ಕೆ ಈ ಖಾಯಿಲೆ ಬರುವುದು ಅಪರೂಪ; ಹಾಲು, ಮೊಸರು, ಬಿಸಿಲು, ಗಾಳಿ ಇವೇ ಇದಕ್ಕೆ ಮದ್ದು; ಅದು ಬಿಟ್ಟು ನೀವು ದೊಡ್ಡ ದೊಡ್ಡ ಪಟ್ಟಣ ಸೇರಿ ಉಸಿರಿನ ಜೊತೆಗೆ ಅರಳೆನಾರು, ಉಚ್ಚೆನೀರು, ಗಂಧಕದ ಹೊಗೆ, ಕಬ್ಬಿಣದ ಪುಡಿ, ಇವನ್ನೆಲ್ಲ ಒಳಕ್ಕೆಳೆದುಕೊಳ್ಳುತ್ತೀರಿ, ಅವೆಲ್ಲ ಸೇರಿ ಒಳಗಿರುವ ತಿದಿಯೆಲ್ಲ ಮುಚ್ಚಿಹೋಗಿ ಕೆಮ್ಮಲು, ಎದೆನೋವು ಬಲವಾಗಿ ಕ್ಷಯಬರುತ್ತೆ. ಆಸ್ಪತ್ರೆಯಿಂದ ಹೊರಬರುತ್ತಲೂ ನೀವು ತೆಪ್ಪಗೆ ನಿಮ್ಮ ಹಳ್ಳಿಗೇ ಹೋಗಿ" ಅಂದರು, ಡಾಕ್ಟರು.

ಹಾಕಿದ್ನಲ್ಲ ಮಾರಾಯ ಎದೆಮೇಲೆ ಕಲ್ಲು ಅಂತ ಅಲ್ಲೇ ಕೂತೆ. ದೇವರು ಕೂರಿಸಿದ ಕಡೆ ಕೂರದೇನೆ ನನ್ನ ದಾರಿ ನಾನು ಹಿಡೀತೇನೆ ಅಂತ ತುಂಟತನಮಾಡಿ ದುಡುಕಿದರೆ, ಹೀಗೆಯೇ ಅವನು ಬಡಿಯೋದು, ಅಂದುಕೊಂಡೆ.

ಆಸ್ಪತ್ರೆಗೆ ಫೋನ್‌ಮಾಡಿ ಅವರು ಒಂದು ಮೋಟಾರ್ ತರಿಸಿದರು. ಅದರೊಳಕ್ಕೆ ಹೋಗಿ ಮಲಗಿದೆ. ಸ್ಟೇಷನಿಗೆ ಹಿಡಿದುಕೊಂಡು ಹೋಗ್ತಾರೆ, ತಪ್ಪುಮಾಡಿದವನನ್ನ, ಪೋಲೀಸಿನವರು; ಆಸ್ಪತ್ರೆಗೆ ಹಿಡಿದುಕೊಂಡು ಹೋಗ್ತಾರೆ, ತಪ್ಪಿ ನಡೆದವನನ್ನ ಡಾಕ್ಟರುಗಳು.

ಹೋಗಿ ಬಾ ಮಾವಾ, ಅಂತ ಕಣ್ಣೊರಸಿಕೊಳ್ಳುವವರು ಒಬ್ಬರೂ ಇರಲಿಲ್ಲ ಅವತ್ತು, ಆ ಕೊಂಪೆಯಲ್ಲಿ. ಕಟುಕರ ಮನೆಗೆ ಕೋಣನನ್ನ ಸಾಗಿಸುವ ಹಾಗೆ ನನ್ನನ್ನ ರವಾನಿಸಿದರು ಆಸ್ಪತ್ರೆಗೆ.

ರಸ್ತೆ ದಾಟಿ ಕಾಂಪೌಂಡ್ ಹಾದು, ಕಾವಲುಗಾರನನ್ನ ತಟಾಯಿಸಿ, ಬಹುದೂರ ಹೋದಮೇಲೆ, ಆಸ್ಪತ್ರೆ ಮುಂಬಾಗಿಲು ಸಿಕ್ಕಿತು. ಭಾರಿ ಗೋರಿಯ ಹಾಗಿತ್ತು, ಆ ಕರೀಕಲ್ ಕಟ್ಟಡ. ಮೂಗರ ಸ್ಕೂಲಿನ ಹಾಗೆ ಪಿಸಪಿಸ ಗುಸ, ರಬ್ಬರ್ ಟೈರ್ ನೂಕುಗಾಡಿ, ಎಲ್ಲರ ತುಟಿಗೂ ಅಡ್ಡ ಬೆರಳು! ಬಿಳಿಯ ಚಿಟ್ಟೆಗಳು ಹೂವಿಂದ ಹೂವಿಗೆ ಹಾಯುವ ಹಾಗೆ ಬೆಡ್ಡಿಂದ ಬೆಡ್ಡಿಗೆ ನರಸುಗಳು ತೇಲುತ್ತ ಇದ್ದರು.

ನನ್ನ ಊರು ಕೇರಿ ಅಳತೆ ತೂಕ ಎಲ್ಲ ಗುರುತುಹಾಕಿ, ನನ್ನನ್ನೂ ಒಂದು ಕುರ್ಚಿ ಗಾಡೀಲಿ ಕೂರಿಸಿ ತಳ್ಳಿದರು, ಆ ಗೋರಿಯೊಳಕ್ಕೆ. ಉದ್ದಕ್ಕೂ ಗೊಳ್ ಗೊಳ್ ಅಂತ ಕೆಮ್ಮಲಿನ ಸದ್ದು, ಹೊಳೆಯಾಚೆ ನಾಯಿಗಳು ಒಟ್ಟಾಗಿ ಬೊಗಳುವ ಹಾಗೆ. ಆಸ್ಪತ್ರೆ ಬಟ್ಟೆ ತೊಡಿಸುವ ಮೊದಲು, ಮೈಗೆಲ್ಲ ಬಿಸಿನೀರು ಹುಯ್ದು ಉಜ್ಜಿ ಕೆಂಚಗೆ ಮಾಡಿದರು. ಆಮೇಲೆ .... ಅಂದೇ ನಾನು ಮಂಚದ ಮೇಲೆ ದಪ್ಪನೆ ಹಾಸಿಗೆಯಲ್ಲಿ ಡಿಪ್ಟಿ ಕಮಿಷನರ ಹಾಗೆ ಕಾಲುನೀಡಿಕೊಂಡು ಮಲಗಿದ್ದು .... ಒತ್ತಿದ ಕಡೆ ಹಳ್ಳ ಬೀಳೋದು ಮಂಚ; ಹಳ್ಳಬಿದ್ದರೆ ಮತ್ತೆ ಉಬ್ಬುವುದು ಆ ಮಂಚದ ಸ್ಪ್ರಿಂಗು.

ಆ ಆಸ್ಪತ್ರೆಯಲ್ಲಿ ನಾನೊಬ್ಬನೇ ಇದ್ದಿದ್ದರೆ ಚೆನ್ನಾಗಿರುವುದು. ಆದರೆ ಎಣಿಸಿದೆ ನಾನು, ನನ್ನ ಕೋಣೆಯಲ್ಲೇ ಹದಿನಾರು ಮಂಚ, ನನ್ನ ಸಾಲಿ ಗೆಂಟು, ಎದುರು ಸಾಲಿಗೆಂಟು. ಆ ಪೈಕಿ ಹೆಣದ ಮುಖಗಳೇ ಹೆಚ್ಚು. ಗೆಲುವಾಗಿದ್ದವನು ಒಬ್ಬನನ್ನೂ ಕಾಣೆ. ಉಗುಳುವುದಕ್ಕೆ ಅಂತ ಕಾಗದದ ದೊನ್ನೆ ಕೊಟ್ಟಿರುವರು; ಅದನ್ನ ಬಾಯಿಗೆ ಹಿಡಿದು ಅದರೊಳಕ್ಕೆ ಎಂಜಲು ತುಂಬುವುದಕ್ಕೂ ತ್ರಾಣವಿಲ್ಲದೆ ಅತ್ತಲಾಗಿತ್ತಲಾಗೆ ಚೆಲ್ಲುವವರೇ ಜಾಸ್ತಿ.

ನಾನು ಸೇರಿಕೊಂಡ ಮೂರನೆಯ ದಿನವೇ ನನ್ನ ವಾರ್ಡಿಂದ ಒಬ್ಬನನ್ನ ಹೊತ್ತುಕೊಂಡು ಹೋದರು, ಯಮಕಿಂಕರರು. ಪಾಪ, ಅವನಿನ್ನೂ ಮೂವತ್ತು ಮುಟ್ಟಿರಲಿಲ್ಲವಂತೆ. ಸಾವುಕಾರನ ಮಗ. ಇಬ್ಬರು ಹೆಂಡಿರು; ತಾಳೀದ್ದೊಂದು, ಕೂಲೀದ್ದೊಂದು, ಒಂದು ಕೌಸಲ್ಯೆ, ಒಂದು ಕೈಕೆ. ನನ್ನ ಎದೆ ಝುಗ್ ಎಂದಿತು. ಆದರೇನು ? ಅದೇ ಮಂಚಕ್ಕೆ ಎರಡೇ ಗಳಿಗೆಯಲ್ಲಿ ಇನ್ನೊಬ್ಬನನ್ನು ತಂದು ಮಲಗಿಸೇಬಿಟ್ಟರು, ಕಲ್ಮನದವರು.

ಡಾಕ್ಟರು, ನರಸು, ಆಳುಗಳು, ಬಾಯ್ಗಳು ಇವರು ಮಂಚದ ಸಾಲಿನ ನಡುವೆ ಓಡಾಡುತ್ತಿದ್ದರು, ಸರಿ. ಆದರೆ, ಅವರ ಕಣ್ಣಿಗೂ ಬೀಳದೆ ಯಮರಾಯ ಅಲ್ಲಿ ರೌಂಡ್ ಹೊಡೀತಾನೇ ಇದ್ದ. 'ಪರವಾಗಿಲ್ಲ, ಕಣೋ! ನಿನಗೀಗ ಕೊಂಚ ವಾಸಿ. ನಾಲ್ಕೈದು ವಾರಗಳಲ್ಲಿ ನಿನ್ನನ್ನು ಮನೆಗೆ ಕಳುಹಿಸಿಕೊಡುತ್ತೇವೆ' ಅಂತ ಡಾಕ್ಟರು ರೋಗಿಗೆ ಹೇಳುವಾಗ ಯಮರಾಯ ಅವರ ಪಕ್ಕದಲ್ಲೇ ನಿಂತು ಕಿಲಕಿಲ ನಕ್ಕಹಾಗೆ ನನಗೆ ಕೇಳಿಸುವುದು. 'ಹೌದು, ಹೌದು, ನನ್ನ ಮನೆಗೆ, ಅವನ ಮನೆಗೆ ಅಲ್ಲ' ಅಂತ ಯಮ ನಕ್ಕಿರಬೇಕು.

ಆಸ್ಪತ್ರೆಯಲ್ಲಿ ನನಗೆ ನಿದ್ದೆಯೇ ಬರಲಿಲ್ಲ. ಅಲ್ಲಿ ಕೊಡುತ್ತಿದ್ದ ಬ್ರೆಡ್ಡು ಗಟ್ಟಿಯಾಗಿ ಕಲ್ಲಿನಂತಿತ್ತು; ಹಾಲು ಬರಿಯ ನೀರು, ಸಕ್ಕರೆ ಕಮ್ಮಿ, ಕೋಳಿ ಮೊಟ್ಟೆ ವಾರಕ್ಕೊಂದೋ ಎರಡೋ; ಮಲಗಿದ್ದವರನ್ನು ನೋಡುವುದಕ್ಕೆ ನಂಟರಿಷ್ಟರು ದಿನವೂ ಸಂಜೆ ಬರುವಾಗಂತೂ ನನ್ನ ಮಂಚದ ಬಳಿ ಬಿಕೋ ಅಂತ ಬಟ್ಟಬಯಲಾಗಿರುತ್ತೆ. 'ಚೆಲುವಾ, ಹೇಗಿದೆಯೋ, ಕೆಮ್ಮಲು ವಾಸಿಯೆ, ಕೋ ಕಿತ್ತಲೆಹಣ್ಣು' ಅಂತ ನನ್ನನ್ನ ಮಾತಾಡಿಸುವವರು ಒಬ್ಬರನ್ನೂ ಕಾಣೆ. ಬೇರೆ ಮಂಚದವರ ಹತ್ತಿರ ಅವರ ನಂಟರಿಷ್ಟರು ಎರಡು ಮೂರು ರೂಪಾಯಿನಷ್ಟು ಚಿಲ್ಲರೆ ಕೊಟ್ಟು ಹೋಗುವರು. ಅವರು ಅದನ್ನ ಜೋಪಾನವಾಗಿ ಇರಿಸಿಕೊಂಡು, ವೈ ಉಜ್ಜುವ ಬಾಯ್‌ಗೆ ಎರಡಾಣೆ, ಬ್ರೆಡ್ಡು ತರುವವಳಿಗೆ ನಾಲ್ಕಾಣೆ, ಮೊಟ್ಟೆ ಒಡೆದು ಕೊಡುವವಳಿಗೆ ಪಾವಲಿ, ಔಷಧಿ ಚುಚ್ಚುವವಳಿಗೆ ಎಂಟಾಣೆ, ಇನಾಮು ಬಿಸಾಕುವರು.

ಹೀಗೆ ಸಲಸಲಕ್ಕೂ ಕೀಲೆಣ್ಣೆ ಹುಯ್ದರೇನೇ ಶುಶ್ರೂಷೆ ಚಕ್ರ ಸಲೀಸಾಗಿ ತಿರುಗೋದು, ಆ ಆಸ್ಪತ್ರೇಲಿ.

ಅವರ ಮಧ್ಯೆ, ನಾನೊಬ್ಬ ಪಾಪಿ, ಪರದೇಶಿ, ಬೇವಾರ್ಸಿ, ನನ್ನನ್ನು ಅವರೆಲ್ಲರೂ ಬೈಯುವರು, ತಮಿಳಿನಲ್ಲಿ. ತಮಿಳು ನನಗೆ ಅರ್ಥವಾಗುವುದಿಲ್ಲ ಅಂತ ಗೊತ್ತಾದಾಗ, ಹಲವರು ತುರುಕ್‌ನಲ್ಲೇ ಷುರು ಮಾಡಿದರು; ನನ್ನಿಂದ ಚಿಲ್ರೆ ಕೀಳಬೇಕು ಅನ್ನೋ ಹಠ ಅವರದು. ಮಂಚದಿಂದ ಕೆಳಕ್ಕಿಳಿಯಬೇಕಾದರೆ, ನನ್ನ ಕೈ ಹಿಡಿಯುವರು ಒಬ್ಬರೂ ಇಲ್ಲ. ಸುಡು ನೀರೇ ಕೊಡುವರು, ನನಗೆ. ಬ್ರೆಡ್ಡು ಚೂರು ನನ್ನ ತಟ್ಟೆಗೆ ಬರುವಾಗ, ಕಾಸಿನಷ್ಟಗಲವಾಯಿತು. ಚುಚ್ಚುವಾಗ, ಆಳವಾಗಿ ಏರಿಸೇಬಿಡುವರು. ಸೂಜಿ ತೊಳೆಯುತ್ತಲೇ ಇರಲಿಲ್ಲ. ಓ! ಬಡವರು ಬರಬೇಕಾದ ಜಾಗ ಅಲ್ಲ ಇದು, ಮುಂದೆ ನನಗೆ ಆಗಬೇಕಾದ ನರಕ ನನಗೆ ಇಲ್ಲೇ ಆಗ್ತಾ ಇದೆ. ಡಾಕ್ಟರು ನರಸು ಎಲ್ಲರೂ ನನ್ನನ್ನು ಆದಷ್ಟು ಬೇಗ ತೀರಿಸಿ ನನ್ನ ಹಾಸಿಗೆ ಬರಿದು ಮಾಡಿ, ಮತ್ತೊಬ್ಬ, ಕಾಸು ಚೆಲ್ಲುವ ಕ್ಷಯದವನನ್ನ, ಇಲ್ಲಿ ಭರ್ತಿ ಮಾಡಬೇಕು ಅಂತ ಪಿತೂರಿ ಹೂಡುತ್ತಿದ್ದಾರೆ, ಅಂತ ನಾನು ಊಹೆ ಮಾಡಿದೆ.

ಆದನ್ನೆಲ್ಲ ಯೋಚನೆ ಮಾಡಿದಾಗ, ನನಗೆ ಹೆದರಿಕೆ ಹತ್ತಿತು. ಅಲ್ಲಿದ್ದವರೆಲ್ಲ ನನ್ನ ಶತ್ರುಗಳು, ನನ್ನ ಪ್ರಾಣ ತೆಗೆಯುವುದಕ್ಕೆ ಪಳಾನ್ ಹಾಕುವ ಖೂನಿಗಾರರು ಎಂದು ತೋರಿತು. ನನ್ನ ಮುದುಕಿಯೇ ನನ್ನ ಭಾಗ್ಯಲಕ್ಷ್ಮಿ, ಅವಳು ತನ್ನ ಕೈಯಿಂದ ಕಿವುಚಿ ಕೊಡುವ ಅಮೃತದ ರುಚಿ ಮುಂದೆ, ಈ ಸಿಂಗಾರಿಗಳು ತಂದು ಮಡಗುವ ತಿಂಡಿ, ವಿಷ ಅನ್ನಿಸಿತು. ಕೋಟಿ ವಿದ್ಯವೂ ಕೂಳಿಗೋಸ್ಕರವೇ ಅಂತಾರೆ; ಆ ಕೂಳೇ ನನಗೆ ಸೇರದು. ಇನ್ನು ಅಲ್ಲಿದ್ದೇನು ಫಲ? ಆ ಹಾಳು ಆಸ್ಪತ್ರೆಯಿಂದ ಹೇಗಾದರೂ ತಪ್ಪಿಸಿಕೊಂಡು, ಓಡಿ ಬಂದುಬಿಡಬೇಕು, ಅಂತ ನಿಶ್ಚಯ ಮಾಡಿಕೊಂಡೆ. ಆಸ್ಪತ್ರೆಗಳಲ್ಲಿರುವ ಜನ ರೋಗ ಹಿಡಿದು ಮಲಗಿರುವವರನ್ನ ಚೆನ್ನಾಗಿ ಪ್ರೀತಿಯಿಂದ ನೋಡಿಕೊಳ್ಳದೇ ಇರುವುದೇ ಒಳ್ಳೆಯದು,

ಅನ್ನಿಸುತ್ತದೆ ನನಗೆ! ನೀವು ಒಪ್ಪದೆ ಇರಬಹುದು ನನ್ನ ಪಾಯಿಂಟ್‌ನ. ಆದರೆ, ಇಲ್ಲಿ ಕೇಳಿ, ನನ್ನ ಮಾತ್ನ.... ಚೆಲುವಾ ಚೆನ್ನಾಗಿದೀಯಾ, ಹಸಿವಾಗ್ತದೆಯೆ, ಮೆಲ್ಲಗೆ ಏಳು, ನನ್ನ ಕೈಹಿಡಿದುಕೊ, ಬಿಸಿನೀರು ಬೇಕೆ, ಹಣ್ಣು ಸುಲಿದು ಕೊಡಲೆ, ಹಾಸಿಗೆ ಸರಿಪಡಿಸಲೆ, ಅಂತ ಆ ಹೆಣ್ಣು ನರಸುಗಳು ನನ್ನೊಂದಿಗೆ ಲಲ್ಲೆ ಆಡುತ್ತ, ದೇವಲೋಕದ ರಂಭೆಯರ ಹಾಗೆ ನನ್ನ ಮಂಚದ ಸುತ್ತ ಹಾಡುತ್ತ ಸಿಗಿಸಿಗಿ ಕುಣೀತಿದ್ದರೆ, ಅಲ್ಲೇ ಇದ್ದು ಕಣ್ಣುಬಿಡೋಣ, ಕೆಮ್ಮುವುದು ನಿಂತರೆ ಆಚೆಗೆ ಕಳುಹಿಸಿ ಬಿಡುತ್ತಾರಲ್ಲಾ ಕೆಮ್ಮುತ್ತಾನೇ ಇರೋಣ, ಜ್ವರ ನಿಂತರೆ ಬರ್ತಫ್ರ್ ಮಾಡುತ್ತಾರಲ್ಲಾ ಜ್ವರಾನೂ ಉಳಿಸಿಕೊಂಡು ಬಿದ್ದುಕೊಂಡೇ ಇರೋಣ, ಅಂತ ಅನ್ನಿಸುತ್ತದೆ. ಒಳಗಿನ ಜೀವ ಒದ್ದಾಡುತ್ತಿರುತ್ತದೆ, ದೇವರೇ, ನನ್ನ ಖಾಯಿಲೆ ವಾಸಿ ಆಗದೆ ಇರಲಿ, ನನ್ನನ್ನ ಇಲ್ಲೇ ಇವರ ನಡುವೆ ಮಲಗಿಸಿರು, ಈ ಆಹಾರ ಈ ವಿಹಾರ ಸಿಕ್ಕುತ್ತಲೇ ಇರಲಿ ನನಗೆ, ಸಾಯೋತನಕ, ಅಂತ ಪ್ರಾರ್ಥನೆ ಮಾಡುತ್ತಾನೇ ಇರುತ್ತದೆ ಹಾಗೆಯೇ, ಆಗಿಯೂ ಆಗ್ತದೆ.

ಆದರೆ, ಹಿಂಸೆ ಕಿರುಕುಳ ಛಳಿ ಹಸಿವು ಬೈಗುಳು ಕಿಡಿಕಿಡಿ ನಮಗೆ ಆಗ್ತಾನೇ ಇದ್ದರೆ, ಅದೇ ರಂಭೆ ತಾಟಕಿ ಆಗ್ತಾಳೆ. ಯಾವ ಹೊತ್ತಪ್ಪ ಇಲ್ಲಿಂದ ಹೋದೇನು, ಈ ಜ್ವರ ಇರುವುದರಿಂದ ತಾನೆ ಇಲ್ಲಿ ಈ ವಿಚಿತ್ರ ಹಿಂಸೆ, ಇದನ್ನ ಆದಷ್ಟು ಬೇಗ ಒದ್ದೋಡಿಸಿ ಈ ರಾಕ್ಷಸಿಯರ ಅಶೋಕ ವನದಿಂದ ಪಾರಾಗೋಣ, ಅಂತ ಲಿಬಿ ಲಿಬಿ ಒದ್ದಾಡ್ತದೆ, ಜೀವ. ಆ ತವಕಕ್ಕೆ, ಜ್ವರಾನೂ ವಾಸಿಯಾಗ್ತದೆ. ಆ ಬಯಕೇನ ದೇವರೂ ಈಡೇರಿಸುತ್ತಾನೆ. ದೇವರೇನು, ನಾವು ಕೇಳಿದ್ದನ್ನ ಕೊಡುತ್ತಾನೆ. ಹೆಂಡತಿ ಕೊಡು ಅಂದ್ರೆ, ಬಿಗೀತಾನೆ ಕೊರಳಿಗೆ. ಮಕ್ಕಳನ್ನ ಕೊಡು ಅಂದ್ರೆ, ನಂದಗೋಕುಲ ಮಾಡುತ್ತಾನೆ ಮನೆಯನ್ನ. ಹಣ ಕೊಡು ಅಂದ್ರೆ, ಸುರೀತಾನೆ ತಲೆ ಮೇಲೆ. ಸುಖ ಕೊಡು ಅಂದ್ರೆ, ಕಾರಲ್ಲೇ ಕೂರಿಸಿ ಕಾಲು ಮುರೀತಾನೆ. ಕೇಳೋದಕ್ಕೆ ಬರದು, ನಮಗೆ, ಅಷ್ಟೆ.

ಮನಸ್ಸಿನಂತೆ ಮಹದೇವ. ಕೇಳೋನಿಗೆ ಹೇಳೋನು ಅಡಿಯಾಳು, ಅಂತ ಗಾದೆಯೇ ಇದೆ.

ಕೂಳು ಕುತ್ತ, ನೀರು ಪತ್ತ, ಎರಡೂ ಬಿಟ್ಟರೆ ಸತ್ತ, ಅಂತ ನರಳುತ್ತಾ ಇದ್ದ ನನ್ನನ್ನ, ನಾನೇ ಎಬ್ಬಿಸಿ ಕೂರಿಸಿದೆ. ಕೆಮ್ಮಲು ಸಿಲ್ಲದೆ ಇದ್ದರೆ, ಆ ಜೈಲಿಂದ ಬಿಡುಗಡೆ ಇಲ್ಲ ಅಂತ ತಿಳಿಯುತ್ತಲೂ, ಕಾಲ ಭೈರವಾ, ಅಂತ ಕೆಮ್ಮುವುದು ನಿಲ್ಲಿಸಿದೆ. ಸಾಯಂಕಾಲಕ್ಕೆ ಜ್ವರ ಬಂದರೆ, ಸಾಯುವ ತನಕ ಅಲ್ಲೇ ಅಂತ ಗೊತ್ತಾದ ಮೇಲಂತೂ, ಬೆಳಗಿನಿಂದಲೇ ಪ್ರಾರಂಭಮಾಡುವೆ, ಜಪ, ಜೀವಕ್ಕೆ: "ಲೋ! ಹುಷಾರಿ, ಅವರು ಬಂದು ಕೊಂಕುಳಲ್ಲಿ ಪಾದರಸದ ಕಡ್ಡಿ ಇಡುವಾಗ, ನಿಂತಲ್ಲೇ ಹಿಡಿದಿಡು. ನಿನ್ನ ಆಯುಷ್ಯಾನಾ ನೀನೇ ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಇಲ್ಲಿ ನಿನ್ನನ್ನ ಉಳಿಸುವವರೊಬ್ಬರೂ ಇಲ್ಲ. ನಿನಗೆ ನೀನೇ ಆಧಾರ. ನೀನು ಮೆಟ್ಟದಲ್ಲದೆ ನಿನ್ನ ಹಾವು ಕಚ್ಚದು. ಇನ್ನೂ ನೀನು ಇಲ್ಲಿಂದ ಊರಿಗೆ ಹೋಗಿ, ರಾಗಿ ಬೆಳೆದು ಒಡ್ಡಬೇಕು, ಕಬ್ಬು ಬೆಳೆಸಿ ಸೀ ಉಣಿಸಬೇಕು, ಗೂಡುಮಾಡಿ ಜನಕ್ಕೆ ರೇಷ್ಮೆ ಉಡಿಸಬೇಕು, ನಿನ್ನನ್ನ ದೇವರು ಪರ ಊರಲ್ಲಿ ಪರದಾಡುತ್ತ ಪ್ರಾಣ ಬಿಡೋದಕ್ಕೆ ಹುಟ್ಟಿಸಲಿಲ್ಲ. ಹಣ್ಣಿಲ್ಲದ ಮರಕ್ಕೆ ಕಣ್ಣಿಲ್ಲದ ಗಿಣಿ ಬಂದ ಹಾಗೆ, ಮದ್ರಾಸಿಗೇಕೆ ಬಂದೆ, ನೀನು? ಜ್ವರಾನ ಕೊಡವಿ ಬಿಸಾಕಿ, ಕೆಮ್ಮಲನ್ನು ನುಂಗಿ ನಾಶಮಾಡಿ, ನಡಿ ನೀನು, ನಿನ್ನ ಮುತ್ತಾರಾಯಪ್ಪನ ಗುಡಿ ಮುಂದಲ ಮಂಟಪಕ್ಕೆ" ಅಂತ ಮಾತಿನಲ್ಲೇ ನನಗೆ ನಾನೇ ಛಡಿ ಏಟು ಕೊಟ್ಟುಕೊಂಡೆ. ನೆನೆದ ಕೆಲಸಕ್ಕೆ, ಮನವೇ ಸಹಾಯ.

ಹೀಗೆ ಮಾಡು ಅಂತ ಆ ದೇವರೇ ನನಗೆ ಬುದ್ಧಿ ಕೊಟ್ಟಿರಬೇಕು, ನೋಡಿ.... ನಾಲ್ಕೇ ವಾರ, ಒಂದೇ ತಿಂಗಳು, ಆ ಮುದ್ರೆ ಡಾಕ್ಟರ ಚೀಟೀನ್ನೂ ಹರಿದು ಹಾಕಿಸಿತು, ನನ್ನನ್ನೂ ಎಬ್ಬಿಸಿತು, ಆಸ್ಪತ್ರೆಯಿಂದ ಆಚೇನೂ ಕಳುಹಿಸಿತು— ಮಣ್ಣಿನ ಪೆಕ್ಕಾದರೇನು, ಇಲಿ ಹಿಡಿದರೆ ಸೈ— ಗೋರಿಯೊಳಗಿಂದ ಕೈಕಾಲು ಗಟ್ಟಿಯಾಗಿಸಿ ಜೀವಾನ್ನೂ ಭದ್ರವಾಗಿಸಿ

ನನ್ನನ್ನ ಪಾರುಮಾಡಿಸಿತು. ನಾನು ದೇವರು ಇಬ್ಬರೂ ಸೇರಿ ನನ್ನನ್ನ ಉಳಿಸಿದೆವು. ಡಾಕ್ಟರು ಸೋತೇಹೋದರು. ಕುತ್ತಿಗೆ ಕುಯ್ಯೋ ಊರಲ್ಲಿ ಸುಲಿದುಕೊಂಡು ಕಳುಹಿಸಿದ್ದೇ ಭಾಗ್ಯ, ಅಂತ ಈಚೆ ಬಂದೆ.

ಯಾಕೆ ಹೇಳೋಕೆ ಬಂದೆ ಅಂದರೆ, ಜಂಬಕ್ಕಲ್ಲ, ನಮ್ಮ ಒಳಗೆ ಎಂಥ ಮ್ಯಾಜಿಕ್ ಶಕ್ತಿ ಮಡಗಿದಾನೆ ಪರಮಾತ್ಮ, ಅಂತ ನೋಡಿ, ಅನ್ನೋದಕ್ಕೆ. ನನಗಂತೂ ಇವತ್ತಿಗೂ ಖಾತ್ರಿ. ಅವರು ಕುಡಿಸಿದ ಔಷಧಿ, ಕೊಟ್ಟ ಗಾಳಿ, ತುರುಕಿದ ಸೂಜಿ, ಹಾಕಿದ ಬಿಸಿಲು, ಒಂದೂ ನನಗೆ ನನ್ನ ಗಟ್ಟಿ ಮನದಷ್ಟು ಗುಣಮಾಡಲಿಲ್ಲ, ಅಂತ. ನಾವೇ ಸಾಯ್ತೇವೆ ಅಂತ ಕಾಲು ಚಾಚಿದರೆ, ಹೊರಕ್ಕೆ ಬರೋಲ್ಲ ಅಂತ ಹಟ ಹಿಡಿದರೆ, ಅವರು ತಾನೆ ಏನು ಮಾಡಿಯಾರು? ತಾವು ಬಾಳಲಾರದೆ, ವಿಧಿಯನ್ನು ಬೈದರೇನು ಬಂತು?

ಅಯ್ಯಂಗಾರರಿಗೆ ಕಾಣಿಸಿಕೊಂಡೆ. ಅವರು "ಲೋ ನಿನಗೆ ಬಡಿದಿದ್ದ ರೋಗ ಕ್ಷಯ ಇರಲಾರದು, ಇದ್ದಿದ್ದರೆ ನೀನು ಈಚೆ ಬರುತ್ತಿರಲಿಲ್ಲ. ನಿನಗೆ ಈ ಊರು ಒಗ್ಗುವುದಿಲ್ಲ, ಇಲ್ಲಿ ಊಟದಲ್ಲಿ ಸಾರ ಕಮ್ಮಿ, ಅಕ್ಕಿ ತಿಂದು ಹಕ್ಕಿಯ ಹಾಗಾಗುತ್ತಿದೀರಾ ನಿಮ್ಮ ಜನದವರು, ನಿಮಗೆ ರಾಗಿಯೇ ರೂಢಿ, ಮುದ್ದೆ ಬೀಳಬೇಕು ನೀನು ಚೇತರಿಸಿಕೊಳ್ಳಬೇಕು, ಇಲ್ಲಿ ಬಿಸಿಲು ಜೋರು, ಗಾಳಿ ತುಂಬ ಉಪ್ಪು, ಹೋಗು ಊರಿಗೆ" ಅಂದರು. ಇಷ್ಟಗಲದ ಚೀಟಿಯಲ್ಲಿ ಇಂಗ್ಲೀಷು ಬರೆದು, ದೊಡ್ಡಾಫೀಸಿಗೆ ಕಳುಹಿಸಿದರು. ಪರಂಗಿಯವನು, ಆ ಕಂಪನಿಗೆ ಅವನೇ ಮೇನೇಜರ್, ಅದನ್ನೋದಿ ಅರ್ಥಮಾಡಿಕೊಂಡು, ಅವನು ನನ್ನ ಕೈಲಿ ಮೂವತ್ತೈದು ರೂಪಾಯಿಟ್ಟು, ನನಗೆ ಕೈ ಎತ್ತಿ ಸಲಾಮು ಮಾಡಿದ, ಧೊರೆ. ಹೀಗೂ ಉಂಟೆ, ಅಂತ ನಾನು ಬೆಚ್ಚಿದೆ. "ಹೋಗಿಬರುತ್ತೇನೆ, ನನ್ನೊಡೆಯಾ" ಅಂದೆ, ಅವನಿಗೆ; ನಕ್ಕ. ಅವನಿಗೆ ಕನ್ನಡ ಅರ್ಥವಾಗುವುದಿಲ್ಲ, ಗೊತ್ತು ನನಗೆ. ಆದರೂ ಭಗವಂತ ಒಬ್ಬ ಇಲ್ಲವೆ? ಅವನನ್ನ ಮೆಚ್ಚಿಸಬೇಡವೆ? ತಿಂದ ಅನ್ನವನ್ನ ಅಲ್ಲಗಳೆಯುತ್ತಾನಲ್ಲಾ, ಅಂತ ದೇವರು ಬೇಜಾರು

ಪಟ್ಟುಕೊಂಡರೆ ನನ್ನನ್ನ ಬಿಟ್ಟಾನೆಯೆ? ಅಯ್ಯಂಗಾರರ ಮನೆಗೆ ಹೋಗಿ, ಅವರ ಮಕ್ಕಳ ಕೈಗೆ ನಾಲ್ಕು ಕಿತ್ತಲೆಹಣ್ಣಿಟ್ಟೆ. ಮುದುಕಿ, ಪಾಪ, ನನ್ನನ್ನ ಕಳುಹಿಸಿಕೊಡೋದಕ್ಕೆ ತುಂಬ ಒದ್ದಾಡಿದಳು. ಕೊಂಚ ದಿನ ಇದ್ದು ಸುಧಾರಿಸಿಕೊ, ಅಂದಳು. ನನ್ನ ಆಸ್ಪತ್ರೆಗೆ ಸಾಗಿಸಿದ್ದೊಂದೂ ಅವಳಿಗೆ ಗೊತ್ತೇ ಇರಲಿಲ್ಲವಂತೆ. ಎಲ್ಲಿ ಹೋದೆನೋ, ಕೆರೆಗೆ ಬಿದ್ದೆನೋ, ಸಮುದ್ರ ದಲ್ಲಿ ಈಜುವುದಕ್ಕೆ ಹೋಗಿ ಮುಳುಗಿದೆನೋ, ಊರಿಗೇ ಹೋದೆನೋ, ಏನೂ ತಿಳಿಯದೆ ತತ್ತರಿಸುತ್ತಿದ್ದಾಗ — ನಾನು ಕಾಣಿಸಿಕೊಂಡೆ, ಹಿಗ್ಗಿದಳು; ಹೊರಟೆ, ಕಣ್ಣೀರಿಟ್ಟಳು. ಕಣ್ಣುಮುಚ್ಚಿ ತೆರೆಯುವುದರೊಳಗೆ ಎರಡೂ ನಡೆದುಹೋಯಿತು: ಸಂತೋಷ ಸಂಕಟ, ಬಿಸಿಲು ಮಳೆ.

ಆದಷ್ಟು ಬೇಗ ಊರಿಗೆ ಹೋದರೆ ಕಳೆದುಳಿದ ಖಾಯಿಲೆ ಸಂಪೂರ್ಣ ವಾಸಿಯಾಗುತ್ತೆ ಅಂತ ನೆಟ್ಟಗೆ ಸ್ಟೇಷನ್ ಕಡೆ ನಡೆದೆ. ಊರಿಗೆ ಅಂತ ಬಿಡಿಕಾಸು ಮಾಲು ತೆಗೆಯಲಿಲ್ಲ. ಹೋಗುತ್ತಾ ಇದೀನಿ, ದಾರಿಯಲ್ಲಿ ಒಂದು ಚಿನ್ನದ ಉಂಗುರ ಬಿದ್ದಿತ್ತು. ಅತ್ತ ಇತ್ತ ಒಂದು ಇಸಮೂ ಇಲ್ಲ. ಗಬಕ್‌ನೆತ್ತಿಕೊಂಡು ತೂರಿಸಿದೆ, ಕಿರುಬೆರಳಿಗೆ. ಎರಡು ಹರಳು ಬೇರೆ ಅಂಟಿಸಿದ್ದ. ಮಂಕು ಮಂಕಿನ ಚಿನ್ನ, ಅಪರಂಜಿ ಏನಲ್ಲ. ನನ್ನಂಥ ನತದೃಷ್ಟನಿಗೆ ಇನ್ನೆಂಥದ್ದು ಸಿಗಬೇಕು? ಅಲ್ಲಿಂದಾಚೆ ಎರಡನೇ ಬೀದಿಯಲ್ಲಿ ಒಂದು ಮಾರ್ವಾಡಿ ಅಂಗಡಿಗೆ ನುಗ್ಗಿದೆ. ಮಗುವಿಗೆ ಸಖತ್‌ಖಾಯಿಲೆ, ಹಣ ಬೇಕಿತ್ತು ಅಂದೆ. ಚೀಟಿಗೆ ಹೆಬ್ಬೆಟ್ಟೊತ್ತಿಸಿದ; ಹತ್ತು ರೂಪಾಯಿ ಅಂದ; ನಾನಿಪ್ಪತ್ತು ಕೇಳಿದೆ. ಎದ್ದೆದ್ದು ಹೊರಟೆ, ಅರ್ಧದಲ್ಲೇ ಮತ್ತೆ ಕೂತೆ. ಹನ್ನೊಂದು ಅಂದ, ನಾನು ಹದಿನೆಂಟ ಕ್ಕಿಳಿದೆ. ಹೆಂಡತಿ ಬೈತಾಳೆ, ಅಂದೆ. ಯಜಮಾನ ಉಗಿಯುತ್ತಾನೆ, ಅಂದ ಅವನು. ಹನ್ನೊಂದೂವರೆ ಅಂದ. ನಾನು ಹದಿನೈದಕ್ಕೆ ಕಮ್ಮಿ ಇಲ್ಲ ಅಂದೆ. ಚಿನ್ನವನ್ನ ತೆಗಳಿದ ಅವನು. ಹರಳನ್ನ ಹೊಗಳಿದೆ ನಾನು. ಹನ್ನೆರಡಕ್ಕೆ ಸೆಟ್ಲಾಯಿತು. ದಕ್ಕಿದ್ದೇ ಲಾಭ ಅಂದೆ, ಹೊರಟೆ ಅಲ್ಲಿಂದ .... ಕನ್ನಡ ಜನಕ್ಕೆ ಕನ್ನಡ ಸೀಮೆಯೇ ಚಂದ

ಇಪ್ಪತ್ತು ಅಂತ ನಾನು ಮೊದಲನೆಯ ಕೋಟಿ ಏರಿಸಿದ್ದೇ ತಪ್ಪು; ಮೂವತ್ತು ಅಂತ ಪಟ್ಟು ಹಿಡಿದಿದ್ದರೆ, ಇಪ್ಪತ್ತಾದರೂ ಗಿಟ್ಟುತ್ತಿತ್ತು; ಮಾರ್ವಾಡಿ ಎಂಟು ರೂಪಾಯಿ ಟೋಪಿ ಹಾಕಿದ,—ಅಂತ ನಾಚಿಕೊಂಡೆ. ಮದ್ರಾಸೇ ಬೇಡ, ಅನ್ನಿಸಿತು ನನಗೆ. ಆ ಮುದುಕಿಗೆ ಆನೇಕಾಲಿನ ರೋಗ ಬೇರೆ ಇತ್ತು. ಅದನ್ನ ಕಂಡಾಗಲೆಲ್ಲ ನನಗೆ ದಿಗಿಲು; ನನ್ನ ಕಾಲಸ್ಥಿತಿ ಹೇಗಿರುತ್ತೋ? ಆ ಊರಿಂದ ಅದನ್ನ ಲಗತ್ತಿಸಿಕೊಂಡು, ಹೇಗಪ್ಪ ಓಡಾಡುವುದು ಅಂತ ಹೆದರಿದೆ.

# ಹೊಟ್ಟೆಯಲ್ಲಿ ಗೆಡ್ಡೆ

ರೈಲು ಹೊರಟಿತು; ಮನೆಯ ಕಡೆ ತಿರುಗಿಸಿದ ಟಾಂಗಾ ಹಾಗೆ, ಬೇಗಬೇಗ ಓಡಿತು. ಕಾಟ್‌ಪಾಡಿ ತನಕ ತಿರುಪತಿಗೆ ಜಾತ್ರೆ ಹೋಗುವವರ ತಿಕ್ಕಾಟ; ಅಲ್ಲಿಂದಾಚೆ ಜಾತ್ರೆ ಮುಗಿಸಿ ಬರುವವರದು. ಕಾಟ್‌ಪಾಡಿ ತನಕ ತುರುಬು, ಅಲ್ಲಿಂದಾಚೆ, ಬೋಳು. ಗೋವಿಂದಾ ಗೋವಿಂದಾ ಅಂತ ಮೊಳಗುತ್ತಲೇ ಇತ್ತು ಡಬ್ಬಿ. ಅದನ್ನು ಕೇಳಿದಾಗಲೆಲ್ಲ, ನನ್ನ ಗಂಟಲೂ ಕೆರೆಯುವುದು; ಇಳಿದು, ಏಳು ಬೆಟ್ಟಾನ್ನೂ ಹತ್ತೇಬಿಡೋಣ, ಎನಿಸುವುದು. ಆದರೆ, ಆಸ್ಪತ್ರೆಯಿಂದ ಬಂದು ಇನ್ನು ಐದು ದಿನ ಆಗಿಲ್ಲ ಅಂತ ಮಂಡಿ ಸವರುತ್ತ ಕೂತೇ ಇದ್ದೆ.

ತಲೆ ತಲಾಂತರದಿಂದ ತಿಮ್ಮಪ್ಪನೇ ನಮ್ಮ ಮನೆಗೆ ತಾಯಿಬೇರು, ಕಂಬ. ಅದನ್ನು ಹಿಡಿದು ಸುತ್ತಿದ್ದರಿಂದಲೇ ಹಿರಿಯರು ನೆಲಕ್ಕೆ ಬೀಳದೆ ಇದ್ದದ್ದು. ಆದರೆ. ನಾನೆಂಥ ದುರಹಂಕಾರಿ! ನನ್ನ ಹರೆಯದ ಮುಸ್ತಿಯಲ್ಲಿ, ನನ್ನ ಕಾಲೇ ಕಂಬ ಅಂತ ನನ್ನ ದಾರೀನ ನಾನೇ ಹಿಡಿದೆನಲ್ಲಾ, ಹಾಳು ಬಾವಿಯಲ್ಲಿ ಬೆಂಗಳೂರಲ್ಲೂ ಬಿದ್ದೆ, ಬೊಂಬಾಯಲ್ಲೂ ಬಿದ್ದೆ. ಅದನ್ನೇನು ಅವ ಕಾಣನೆ? ಅವನೇನು ಕಣ್ಣಿಲ್ಲದ ಕಪೋತಿಯೆ? ಕಾಸು ಸುರಿದರೆ, ಕೊಡೋ ಶಿಕ್ಷೆ ಕಮ್ಮಿ ಮಾಡುತ್ತಾನೆಯೆ, ಆ ಮ್ಯಾಜಿಸ್ಟ್ರೇಟು? ಆ ಶಿಕ್ಷೆಯನ್ನ ಎಲ್ಲಿದ್ದರೂ ಅನುಭವಿಸಲೇಬೇಕು.

ಅದೂ ಅಲ್ಲದೆ, ಇದ್ದಲ್ಲೇ ಇರೋ ದೇವರ್ನ ಬೆಟ್ಟ ಹತ್ತಿ, ಅಲ್ಲೇ ನೋಡುತ್ತೇನೆ ಅಂದರೆ, ಅದು ಮುಟ್ಠಾಳತನ. ತಿಮ್ಮಪ್ಪ ಬೆಂಗಳೂರಲ್ಲಿಲ್ಲವೆ? ಬೊಂಬಾಯಲ್ಲಿಲ್ಲವೆ? ಅವನು ಜಪ್ಪಯ್ಯ ಅಂತ ವೆಂಕಟಗಿರಿಯ ಮೇಲೆ ನಿಂತೇ ಇದ್ದರೆ, ತಳದಲ್ಲಿರುವವರ ಗತಿ ಏನು? ಆ ನಮ್ಮಪ್ಪನಿಗೆ ಸಾವಿರ

ನಾಮ; ಮುತ್ತೂರ್ರಾಯಪ್ಪಾ ಅಂತ ಕರೆದರೂ, ಆ! ಬಂದೆ, ಅಂತಾನೆ; ಇಂಗ್ಲೀಷೂ ಬರುತ್ತೆ, ಅವನಿಗೆ; ತುರುಕ್‌ನಲ್ಲಿ ಕೂಗಿದರೂ, ಆ ಅಂತಾನೆ ಶಿವ. ಅವನಿಗೆ ಯಾವ ಭಾಷೆ ಹೊಸದು? ಯಾವ ಸೀಮೆ ದೂರ? ಯಾವ ಮನುಷ್ಯ ಹೊರಗು? ಯಾರ ಗೋಳಿಗೆ ಕಿವುಡು? ಎಲ್ಲರ ಹೃದಯಾನ್ನೂ ಬಲ್ಲ, ಅವನು; ಎಲ್ಲರ ಒಳಗೂ ಇರೋ ಎಂಜಿನೇ ಅವನು. ಅವನ ಗುಡಿಗೆ ಹೋಗುವಾಗ, ಬೋಳಿಸಬೇಕಾದದ್ದು ನಮ್ಮ ಬುರುಡೆಗಳನ್ನಲ್ಲ, ನಮ್ಮ ದುರಾಸೆ, ದುರ್ನಡತೆ, ದುರ್ಬೋಧೆ, ದುಶ್ಚಾಳಿ, ಇವುಗಳನ್ನ.

ಹೀಗೆ, ಮೀನ ಮೇಷ ಎಣಿಸುತ್ತ, ಇಳಿಯೋಣವೇ ಬೇಡವೇ ಅಂತ ತೂಕ ಮಾಡುತ್ತಿದ್ದಾಗಲೇ, ಕಾಟ್‌ಪಾಡಿ ದಾಟಿಬಿಟ್ಟಿತ್ತು. ರೈಲಿನವನೇ ತೀರ್ಮಾನ ಮಾಡಿಬಿಟ್ಟ, ಜಾತ್ರೆ ಬೇಡ ಸದ್ಯಕ್ಕೆ ಅಂತ.

ಊರಿಗೆ ಬರುತ್ತಲೂ, ಇವಳು ಹೆಣ್ಣು ಹೆತ್ತು ಮಲಗಿದ್ದಳು. ಹೊಟ್ಟೆ ಕಟ್ಟಿ ತೊಟ್ಟಿಲು ಕಟ್ಟು ಅಂತ ಗಾದೆಯೇ ಇದೆಯಲ್ಲ! ಮಗಳು ಹುಟ್ಟಿದ ಗಳಿಗೆ ಪುಣ್ಯ ನಾನು ಮತ್ತೆ ಮನೆಗೆ ಬಂದದ್ದು, ಖಾಯಿಲೆಯಿಂದೆದ್ದದ್ದು, ಅಂತ ಅವಳು ಹಿಗ್ಗಿದಳು. ನನ್ನ ಮನಸ್ಸು ಕೂಸಿಗೆ ಕರಗಿತು. ರಾಮನೂ ಸುಟಿಯಾಗಿ ಓಡಾಡುವುದಕ್ಕೆ ಪ್ರಾರಂಭಿಸಿದ್ದ. ಎರಡು ಮಕ್ಕಳ ತಂದೆ, ಮರ್ಯಾದಸ್ಥನಾಗಿ ಬಾಳಬೇಡವೆ? ಥೂ, ದುರಾಸೆಗೆ ಬೆಂಕಿಹಾಕ, ಆರಂಬ ಮಾಡಿ ಅನ್ನ ತಿನ್ನೋದೇ ಮೇಲು, ಗೂಡು ಸಾಕಿ ದನಕರ ಕಟ್ಟಿಕೊಂಡಿ ರೋಣ, ಗೇಣುಹೊಟ್ಟೆಗೆ ಎಷ್ಟು ಬೇಕು ಮಹಾ, ಅಂತ ವೇದಾಂತ ಹೂಡಿದೆ. ಅವಳೂ ದನಿಗೂಡಿಸಿದಳು. ಹೆಂಡತಿ ಪ್ರಾಣ ಹಿಂಡುತಿ, ಅಂತ ಯಾರೋ ಒಬ್ಬರು ಹೇಳಿದರಂತೆ; ಅದು ತಪ್ಪು. ಅವಳೊಬ್ಬಳು ಹತ್ತಿರ ಇದ್ದರೆ, ಮಿಕ್ಕ ಮಾರಿಗಳೆಲ್ಲ ಸೂರ್ಪನಖಿಗಳು, ಮೂಗು ಕುಯ್ಯಿಸಿ ಕೊಳ್ಳೋ ಮೋಹಿನಿಯರು. ಅವಳು ನಮ್ಮ ದಂಡೆಯಲ್ಲಿ ಇದ್ದರೆ, ಗಂಡಸಿಗೆ ಬೇರೆ ಪಹರೆ ಬೇಕಾಗೇ ಇಲ್ಲ.

ಅಂತೂ ಇಂತೂ ಹಾಗೂ ಹೀಗೂ ಲಕ್ಷ್ಮಿಗೂ ಒಂದು ವರ್ಷ ತುಂಬಿತು ; ರಾಮುನೂ ಏಳು ವರ್ಷದ ಹುಡುಗ ಅನ್ನಿಸಿಕೊಂಡ. ಎಮ್ಮೆ ಕಾಯು ವುದು, ಸೀಬೇಕಾಯಿ ಕೀಳುವುದು, ಹುಲ್ಲು ತರುವುದು, ರಾಗಿ ಬೀಸುವುದು, ಇವನ್ನೂ ಕಲಿತ. ಅಂಬಲಿ ಕುಡಿದರೂ ಇಂಬಾಗೆ ಕುಡೀತಾ, ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಮುಡಿಯುತ್ತ, ಕೂಳಿಗೆ ಬಡತನವಾದರೆ ಕುಲಕ್ಕೆ ಬಡತನವೆ ಅಂತ, ಮರ್ಯಾದೆ ಕಳೆದುಕೊಳ್ಳದೆ ಬಾಳಿದೆವು. ಎದೆನೋವು, ಕೆಮ್ಮಲು ಎಲ್ಲ ಎಂದೋ ಕನಸು ಕಂಡ ಹಾಗಾದುವು, ಸೊಪ್ಪಿನ ಪಥ್ಯದಲ್ಲಿ, ನಮ್ಮೂರು ಜೋಯಿಸರದು. ನನ್ನ ಜಗುಲೀಲಿ ದಿನವೂ ಒಂದು ತಂಡ ಸೇರುತ್ತಿತ್ತು ; ಚೆಲುವಾ, ಕೊಂಚ ಸಿನ್ನ ಅತ್ತಕಡೆ ಭಾಷೆ, ಅಟ್ರೆಪಟ್ರೆ ಮಾತಾಡು ; ಚೆಲುವಾ, ಬೊಂಬಾಯಿ ಸಮುದ್ರ ಜೋರೋ ಮದ್ರಾಸ್ ಸಮುದ್ರ ಜೋರೋ — ಅಂತ ಹೀಗೆಲ್ಲ ಕೇಳಿ ನನ್ನ ಬಾಯಿ ಬ್ರೇಕ್ ಬಿಚ್ಚುವರು. ಖುಷಿ ಮೇಲಿದ್ದರೆ, ನಾನೂ ಸಂತೋಷವಾಗಿ ಹೇಳುವೆ. ಹಸಿವು ಕೋಪ ಯಾವುದಾದರೂ ಇದ್ದರೆ, ಅವರು ಬರುವುದನ್ನ ನೋಡುತ್ತಲೂ ಉರಿಉಕ್ಕಿ ಒಳಕ್ಕೆ ಹೋಗಿ ಅಗಳಿ ಹಾಕುವೆ. ತೀರಕ್ಕೆ ಬಂದಮೇಲೆ, ತೆರೆಯ ಸುದ್ದಿ ಏಕೆ ?

ನಮ್ಮೂರಿನ ಹತ್ತಿರ, ದೊಡ್ಡ ರಸ್ತೆ ಪಕ್ಕ, ಹಾರ‍್ನಹಳ್ಳಿ ಅಂತ ಇದೆ. ಅಲ್ಲೊಂದು ಹೋಟಲು. ದೋಸೆಯೇ ಮುಖ್ಯ ; ಅದಕ್ಕೇ ಹೆಸರುವಾಸಿ. ಅವನ ಕಾವಲೀ ಸುತ್ತ, ಚೊಂಯ್ ಚೊಂಯ್ ಅನ್ನೋ ಸದ್ದು ಎಣಿಸುತ್ತ, ನಾಲಗೆ ನೀರು ನುಂಗುತ್ತ, ಚಟ್ನಿ ನೆಕ್ಕುತ್ತ, ಸದಾ ಕೂತಿರುತ್ತಾರೆ, ಆರೇಳು ಮಂದಿ. ಒಂದು ದಿವಸ, ನಾನೂ ಕೂತಿದ್ದೆ. ಮುನಿಸಾಮಪ್ಪ ಅನ್ನೋವರು ಜರೀಪೇಟ ಸುತ್ತಿಕೊಂಡು, ಹಂಪೇ ತೇರು ಬಂದಹಾಗೆ ಅಲ್ಲಿಗೆ ಬಂದರು. ಬಂದವರೇ ದೋಸೆಗೆ ಬಾಯಿಹಾಕಲಿಲ್ಲ, ಮಾತು ತೆಗೆದರು. ಮಲೆನಾಡಿನಲ್ಲೊಂದು ಕಡೆ, ಲಕ್ಕವಳ್ಳಿ ಹತ್ತಿರ, ಕಾಲುವೆ ಕಂಟ್ರಾಕ್ಟ್ ಹಿಡಿದಿದೇನೆ, ಬರ್ತೀರೇನ್ರೋ, ಕೈತುಂಬ ಕೂಲಿ ಕೊಡುತ್ತೇನೆ, ಬೇಕಾದ್ದು ಸುಖಪಡುವಿರಂತೆ, ದಗ ಇಲ್ಲ ಮೋಸ ಇಲ್ಲ, ಕಜ್ಜಾಯಕ್ಕೆ ತಕ್ಕ

ಕಾಸು, ಸುಮ್ಮನೆ ಇಲ್ಲಿ ಕೂತು ಈ ಹೋಟಲು ಮಣೆಗಳನ್ನ ಯಾಕೆ ತೆಯ್ದು ಸವೆಸುತ್ತೀರಿ, ಅಂದರು. ಅಲ್ಲೆಲ್ಲ ಮೂರು ತಿಂಗಳಿದ್ದರೆ ಗಂಟೇನೋ ಸಂಪಾದನೆ ಆಗುತ್ತೆ, ಹೊಟ್ಟೇಲಿ, ಜ್ವರದ ಗಂಟು, ಅಂತ ಹೋಟೆಲ್ ನಾಗಪ್ಪ, ನಕ್ಕ. ಮುನಿಸಾಮಪ್ಪನಿಗೆ ರೇಗಿತು. ಮುಚ್ಕೋ, ಮಹಾ, ನೀನೇ ಜಗವೆಲ್ಲ ಸುತ್ತಿರುವವನ ಹಾಗೆ ಹರಟುತ್ತೀಯಾ, ಅಂತ ಕೂಗಿ ಗದರಿಸಿದರು. ಅಲ್ಲೆಲ್ಲ ಮನುಷ್ಯರೇ ಇಲ್ಲವೆ, ಅದಕ್ಕೇನು ಔಷಧೀನೇ ಇಲ್ಲವೇ, ಅಲ್ಲಿ ನೀರನ್ನ ಕಾಯಿಸಿ ಕುಡಿಯಬೇಕು, ಹಲಸಿನಹಣ್ಣು ತಿನ್ನ ಬಾರದು, ಮಲಗುವಾಗ ಮೂತಿ ಮೇಲೆ ಕಲ್ಲೆಣ್ಣೆ ಚಿಮುಕಿಸಬೇಕು, ವಾರ ಕ್ಕೊಂದು ಕುನೀನುಮಾತ್ರೆ ನುಂಗಬೇಕು, ಇಷ್ಟು ಮಾಡಿದರೆ, ಯಾವ ರೋಗ ಬರುತ್ತೆ, ನೋಡೋಣ....ಬಂದರೆ, ನನ್ನ ಕೇಳು,....ಅಂವರು. ನನಗೆ ಒಳತೋಟಿ ಷುರು ಆಯಿತು.

ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದು, ಎರಡೂ ಜಾರಿ ಬಾಯಲ್ಲಿ ಬಿದ್ದ ಹಾಗಾಯಿತು, ನನಗೆ, ಅವರ ಕರೆ. ಬೇಸಾಯ ಅಂದರೆ, ಒಂದಲ್ಲ ಮಗಳಿಗೆ ಮೈ ಎಲ್ಲ ಬೇನೆ. ಹಳ್ಳಿ ರುಚಿನಬೇಕಾದರೆ, ಅದನ್ನ ಬಿಡಲೇಬಾರದು; ಕಚ್ಚಿಕೊಂಡು ಬಿದ್ದಿರಲೇಬೇಕು; ಒಂದು ಸಲ ತೊರೆದ ಅಂದರೆ, ಆದರ ಹಂಗೇ ಹರಿದುಹೋಗುತ್ತದೆ. ಮತ್ತೆ, ಅಂಟಿಸಿದರೆ ಅಂಟೀತೆ? ಸಾಲದ್ದಾ ದರೂ, ಒಂಗು ಸಲ ಶಲ್ಯ ಹೊದ್ದಮೇಲೆ, ಅವನು ಕಂಬಳಿ ಹೊದ್ದಾನೆ; ಮುನಿಸಾಮಪ್ಪನ ಕೂಡ ಹೊರಟೇಬಿಡೋಣ, ದೇಶಾಂತ್ರ, ಅಂತ ನಿಶ್ಚಯಿ ಸಿದೆ. ನನ್ನ ಹೆಂಡಿರು ಮಕ್ಕಳಿಗೂ ಅನುಕೂಲವೆ, ನಾನು ಲಕ್ಕವಳ್ಳಿಗೆ ಹೋಗೋದು. ಸದಾ ಜಗುಲಿಯ ಮೇಲೆ ಒರಗಿ ಬೊಗಳುವ ನಾಯಿ ನಾನು; ಅಡುಗೇನ ಮೂರು ಹೊತ್ತೂ ಟೀಕಿಸುತ್ತಾ ಇರುತ್ತೇನೆ. ನನ್ನ ಕಾಟ ತಪ್ಪಿದರೆ, ಅವರಿಗೆ ಎಷ್ಟೋ ಶಾಂತಿ. ಅದೂ ಅಲ್ಲದೆ, ಗೌಡರ ಸಾಲ ತೀರಿಸುವುದಕ್ಕೆ ರೊಕ್ಕ ಬೇಕಾಗಿತ್ತು; ಮಗನಿಗೆ ಮಗಳಿಗೆ ಒಡವೆ ವಸ್ತ್ರ ಬೇಕು, ಮದುವೆ ನಡೆಯಬೇಕು. ನಾನು ಹೊರಟರೆ, ದಂಡಿಸುವುದಿಲ್ಲ, ದಾಂಧಲೆ ಮಾಡೋರಿಲ್ಲ, ಇವರಿಗೂ ಸುಖ....ಅಷ್ಟರಲ್ಲಿ, ಮುನಿಸಾಮಪ್ಪ,

'ನಿನಗೇನೋ ಅಂಜಿಕೆ? ಬೊಂಬಾಯಿ ತಳ ಕಂಡವನು ನೀನು!' ಅಂದರು. ಲಕ್ಕವಳ್ಳಿ ಬಾವಿ ನೀರನ್ನೇ ಕುಡಿಯೋಣ ಕೊಂಚ ದಿನ, ಅಂತ ನಿಶ್ಚಯ ಮಾಡೇಬಿಟ್ಟೆ. ಅಲ್ಲಿಯ ತನಕ, ಅಡ್ಡಗೋಡೆ ಮೇಲಿನ ದೀಪ; ಅಲ್ಲಿಂದಾಚೆಗೆ, ಅಲ್ಲಾಡದ ಭೂಪ.

ಇನ್ನೂ ಹದಿನೈದಿಪ್ಪತ್ತು ಜನ ಬೇಕಲ್ಲೋ ಗಟ್ಟಿಮುಟ್ಟಾದವರು, ಎಂದರು ಮುನಿಸಾಮಪ್ಪನವರು ಅದ್ನೆಲ್ಲ ನನ್ನ ಮುಂದೆ ಆಡಬೇಡಿ, ನಾನುಂಟು ನನ್ನ ಗಟ್ಟಿ ಮನ ಉಂಟು ಎಂದೆ, ನಾನು. ನನ್ನ ಕೈಲಿ ಟಿಕೀಟಿನ ಹಣಕೊಟ್ಟು, ಇಂಥ ರೈಲಿಗೆ ಇಂಥ ಟೈಮಿಗೆ ಬಾ, ಬೆಂಗಳೂರು ಟೇಶನ್‌ಗೆ; ಅತ್ತಲಾಗಿತ್ತಲಾಗೆ ಸುಳಿಯಬೇಡ, ಕಬ್ಬಿಣದ ಕಂಬಕ್ಕೆ ಒರಗಿ ನಿಂತಿರು, ನಾನು ಬಂದು ಪತ್ತೆಹಚ್ಚುತ್ತೇನೆ, ಅಂದರು. ಹಾಗೆಯೇ ನಡಿಯಿತು. ಇನ್ನೂ ಹದಿನೈದು ಇಸಮುಗಳನ್ನ ಹಿಡಿದು ಒಂದು ಡಬ್ಬಿಯೊಳಕ್ಕೆ ದಬ್ಬಿದ್ದರು; ಅವರ ಸಂಗಾತ ನನ್ನನ್ನೂ ಕೂರಿಸಿ, ಬಾಗಿಲಿಗೆ ಬೀಗ ಹಾಕಿಸಿಬಿಟ್ಟರು, ಮುನಿಸಾಮಪ್ಪನವರು, ಚೊಟ್ಟೆಯವನಿಗೆ ಹೇಳಿ. ತರೀಕೆರೆ ತಲಪುತ್ತಲೂ ಕತ್ತಲೆ. ಕತ್ತಲಲ್ಲೇ ಆಚೆಗಿಳಿಸಿ, ಅಲ್ಲಿಂದ ಮುಂದಕ್ಕೆ ಎತ್ತಿನ ಗಾಡಿಯಲ್ಲೇ ಸಾಗಿಸಿದರು, ಕೆಲಸದ ತಾವಿನ ತನಕ. ಶಿಸ್ತು ಬಹಳ ಮುನಿಸಾಮಪ್ಪನಿಗೆ.

ಆ ಊರಿನ ಜನರಿಗೆ ನಮ್ಮನ್ನ ಕಂಡರೆ ಆಶ್ಚರ್ಯ. ಯಾಕಪ್ಪ, ಇಲ್ಲಿಗೆ ಬಂದಿರಿ, ಹೊಟ್ಟೆ ಕಡೀತಿತ್ತೆ, ನಮ್ಮ ಮಕ್ಕಳು ಮರಿ ನಂಟರಿಷ್ಟರನ್ನೆಲ್ಲ ನಾವೇ ಕಣ್ಣಾರ ಮೈದಾನದ ಕಡೆಗೆ ರವಾನಿಸುತ್ತಿದೇವೆ ಹಾಳು ಖಾಯಿಲೆ ದೆಸೆಯಿಂದ, ನಿಮಗೇನು, ಹಡೆದ ಅವ್ವ ಅಪ್ಪ ಅಣ್ಣ ತಮ್ಮ ಹೆಂಡಿರು ಮಕ್ಕಳು ಇಲ್ಲವೆ, ಎಂದು ಕೇಳಿದರು. ನನ್ನ ಸಂಗಡ ಬಂದವರ ಪೈಕಿ ಅಂಜುಬುರುಕರೇ ಬಹು ಮಂದಿ. ಅವರೆಲ್ಲ ಸಮಯ ಕಾದು ತಿಂಗಳ ಬೆಳಕಿನಲ್ಲಿ ಮರದ ಹಿಂದೆ ಬಿದ್ದು ಬಿದ್ದು ತಲೆ ತಪ್ಪಿಸಿಕೊಂಡು ಅಡ್ವಾನ್ಸ್ ಸಮೇತ ನಾಪತ್ತೆ ಆದರು. 'ಕಂಚಿ'ಗೆ ಹೋದರೂ ಮಂಚಕ್ಕೆ ನಾಲ್ಕೇ ಕಾಲು, ಎಲ್ಲಿಗೆ ಹೋದರೂ ನುಂಗೋ ಮಾರಿ ಬೆನ್ನ

ಹಿಂದೆ ಇದ್ದೇ ಇರುತ್ತಾರೆ, ಅಂಜಿದವನಿಗೆ ಏಳು ದೆವ್ವ, ಮುನಿಸಾಮಪ್ಪ ಕೊಡೋ ಕೂಲಿ ಊರಲ್ಲಿ ಹುಟ್ಟುವುದಿಲ್ಲ, ಮನಿಯಾರ್ಡರ್‌ನಲ್ಲೇ ಅವಳೂ ಹೈಕಳೂ ಹಾಯಾಗಿರಬಹುದು, ಕಡೇತನಕ ಕೂತು ನೋಡೇ ಬಿಡುವ, ಹೊಟ್ಟೇಲಿ ಹುಟ್ಟೋ ಗೆಡ್ಡೇನ, ಅಂತ ನಾನು ನಿಂತೇಬಿಟ್ಟೆ. "ಭಲಾ, ಚೆಲುವಾ! ನಿನ್ನಂಥ ಗಂಡು ನಾಲ್ಕು ಜನ ಸಿಕ್ಕರೆ, ಕಾಶಿಯಿಂದ ರಾಮೇಶ್ವರ ತನಕ ಕಾಲುವೆ ತೋಡಿಬಿಡುತ್ತೇನೆ ನಾನು ಸಲೀಸಾಗಿ" ಅಂದರು, ಮುನಿಸಾಮಪ್ಪನವರು ನನ್ನ ಭುಜ ತಟುತ್ತ.

ಅಲ್ಲಿ, ಒಂದು ಜೊತೆ ಎತ್ತಿನ ಉಸ್ತುವಾರಿ ನನ್ನದಾಗಿತ್ತು. ಬೆಳಕು ಹರಿಯುತ್ತಲೂ, ಗಾಡಿ ಕಟ್ಟಿಕೊಂಡು, ತೋಡುವ ತಾವಿಗೆ ಹೋಗಿ, ಒಡ್ಡರಿಗೆಲ್ಲ ಪಿಕಾಸಿ ಗುದ್ದಲಿ ಹಾರೆ ಕುಕ್ಕೆ ಬಾಣಲಿ ಹಂಚಬೇಕು; ಸಂಜೆ ಮತ್ತೆ ಲೆಕ್ಕಾಚಾರವಾಗಿ, ಒಂದೂ ಲುಕ್ಸಾನಾಗದೆ ವಾಪಸ್ ತಂದು ಷೆಡ್ಡಲ್ಲಿ ಇಡುವುದು, ಇದು ನನ್ನ ಕೆಲಸ. ಹಾಳು ಜನ, ಉಪಾಯವಾಗಿ ಬಚ್ಚಿರಿಸಿ, ಲೆಕ್ಕ ತಪ್ಪಿಸಿ, ಹೆಂಡದಂಗಡಿಯಲ್ಲಿ ಅಡವಿಟ್ಟುಬಿಡ್ತಾರೆ, ಹೊಸದನ್ನೆಲ್ಲ. ಅವನು ಕೊಡುವ ಹಳೇದು ಪಳೇದು ಮುರುಕಲು ಮೋಟು ಅವನ್ನೆಲ್ಲ ನನಗೆ ಕೊಟ್ಟು ಲೆಕ್ಕ ಒಪ್ಪಿಸಿ, ಉಂಡಮನೆಗೆ ಎರಡು ಬಗೆಯುವುವು. ಅವರೆಲ್ಲ ಅರವದವರು, ತೆಲುಗರು. ಅವೆಲ್ಲ ಸೇರಿಕೊಂಡು ನನ್ನನ್ನ ಬಳಸಿಕೊಂಡು ಆಳಿಗೊಂದು ಹೇರಿದರೆ, ನನ್ನ ಗತಿ ಏನು? ಮೂರ್ಖರನ್ನ ಮೊಳ ಬಿಟ್ಟು ಮಾತಾಡಿಸುವುದೇ ಕ್ಷೇಮ. ಅಂತೂ, ಉಪಾಯವಾಗಿ ನಯದ ಮಾತಿನಲ್ಲೇ, ಚಾಣಕ್ಯನ ತಂತ್ರ ಹೂಡಿ, ಮುನಿಸಾಮಪ್ಪನವರ ಕಾಸಿಗೆ ಮೋಸವಾಗದೆ, ಕೆಲಸ ಸಾಗಿಸಿದೆ ಅನ್ನಿ.

ಶನಿವಾರ ಶನಿವಾರ ಮುನಿಸಾಮಪ್ಪನವರು, ಹಿರೇ ಮಗನನ್ನೂ ಜೊತೆಗಿಟ್ಟುಕೊಂಡು, ಅಲ್ಲಿಗೆ ಬಂದು, ಮೊದಲು ನನ್ನ ಹೆಸರನ್ನೇ ಕೂಗಿ ಏಳೂವರೆ ರೂಪಾಯಿ ಕೊಡುವರು. ನಂತರ ಮಿಕ್ಕೋರಿಗೆಲ್ಲ ಬಟವಾಡೆ.

ಅವರಿಗೆಲ್ಲ ಹೆಸರಿಲ್ಲ, ಬರೇ ನಂಬರು ಅಂಟಿಸಿರುವರು, ಪುಸ್ತಕದಲ್ಲಿ. ಒಂದೆರಡು ದಿನ, ಅಪ್ಪ ಮಗ ಅಲ್ಲಿ ನಿಂತರೂ ಆಯಿತು.

ಮುನಿಸಾಮಪ್ಪನವರ ಮೈಯೆಲ್ಲ ಚಿನ್ನ, ಕಿವಿ ಮಾತ್ರ ಹಿತ್ತಾಳೆ; ಅವರ ಬದುಕು ಅಪಾರ; ಅವರ ಮಾತು ಬಲು ಕಠಿನ, ಮೂಗಿನ ತುದೀಲೇ ಕೋಪ, ಹೊಡೆಯೋದು ಬಡಿಯೋದು ಜಾಸ್ತಿ. ನಾನು ಅವರಿಗೆ ಹೇಳುವೆ, ಬೇಡಿ ಸ್ವಾಮಿ, ಖಾರ ತಿನ್ನುವುದು ಕಡಮೆ ಮಾಡಿ, ನೀವೇನೋ ಬಾರಿಸುತ್ತೀರಾ, ಅವ್ರೋ ಕಮ್ಮಿ ಜನ, ಕುಡುಕು ಮಂದಿ, ಯಾವನಾದರೂ ಬುದ್ಧಿ ಕೆಟ್ಟು ತಿರುಗಿಸಿ ಬಾರಿಸಿದ ಅಂದರೆ ಪೇಪರಲ್ಲಿ ಬಂದುಬಿಡುತ್ತದೆ, ಮುಸುಕು ತೆಗೆದು ಮಾನ ಕಳೆಯುತ್ತಾರೆ ಪೇಪರಿನವರು, ಸಗಣಿ ಮಾರುವವನ ಸಂಗಡ ಗುದ್ಯಾಡಬೇಡಿ, ಅಂದೆ. ಆದರೆ, ನನ್ನ ಮಾತು ಗೋರ್ಕಲ್ಲಿನ ಮೇಲೆ ಮಳೆ ಬಿದ್ದ ಹಾಗೇನೇ ಆಯಿತು.

ಇಷ್ಟಿದ್ದರೂ, ಇನಮು ಕೆಲಸದಲ್ಲಿ ಬಲು ಹುಷಾರಿ. ತಣ್ಣೀರನ್ನೂ ಆರಿದು ನುಂಗೋ ಅಭ್ಯಾಸ. ಹೊಳೆ ಇನ್ನೂ ಗಾವುದ ದೂರ ಇರುವಾಗಲೇ ಕೆರ ಕಳಚಿ ಕೈಯಾಗೆ ಹಿಡಿದರು ಅಂತಾರಲ್ಲಾ, ಆ ರೀತಿ. ತನ್ನ ಬ್ಯಾಗಿನಲ್ಲಿ ಬತ್ತೇರಿ ದೀಪ ಮಡಗಿರುವರು; ಆದರೆ ಅದೆಲ್ಲಾದರೂ ಉಡುಗಿಹೋಗಿ ಕಣ್ಣುಮುಚ್ಚಿದರೆ ಗತಿ ಏನು ಅಂತ, ಇರಲಿ ಅಂಥ ಸಮಯಕ್ಕೆ ಅಂತ ಮೋಂಬತ್ತಿ ಬೆಂಕಿಪೊಟ್ಟಣ ಎರಡನ್ನೂ ಇರಿಸಿರುವರು. ಅವರ ಹತ್ತಿರ ಏಗೋದು ಬಲು ಕಷ್ಟ. ಎಲ್ಲರ ಮೇಲೂ ಗುಮಾನಿ. ಎಲ್ಲರೂ ದಗಾಕೋರರೇ ಅವರ ಕಣ್ಣಿಗೆ. ಎದೆ ಬಿಚ್ಚಿ ತೋರಿಸಿದರೂ, ಬೆನ್ನ ಹಿಂದೆ ಪರೀಕ್ಷೆ ಮಾಡುವರು.

ಕಲಿತ ವಿದ್ಯೆಯನ್ನೆಲ್ಲ ಖರ್ಚುಮಾಡಿದರು, ನನ್ನ ತಲೆಗೆ ತರುವುದಕ್ಕೆ. ಮುಖ ನೋಡಿದರೆ, ಮನಸ್ಸು ತಿಳಿಯುವುದಿಲ್ಲವೆ? ಪತ್ತೆ ಮಾಡಿದರು, ನಾನು ಗ್ರಾಸ್ತ ಅಂತ. ಆಮೇಲೆ ನನ್ನ ದೋಸ್ತಿಯೋ ಆದರು. ನನ್ನ ಹೆಗಲ ಮೇಲೆ ಕೈ ಇಕ್ಕಿ, ಗಾಡಿಯಿಂದ ಇಳಿಯುವರು. ನಾನು ಎಣಿಸಿದ ಪಿಕಾಸಿಗಳನ್ನ ಮತ್ತೆ ತಾವು ಎಣಿಸುವುದನ್ನ ತೊರೆದರು. ಅವರ ಗೃಹ

ಕೃತ್ಯಾನೆಲ್ಲ ನನ್ನೆದುರಿಗೆ ಬಡಿಸುವರು. ನನ್ನ ಮಗ ಶುದ್ಧ ಶುಂಠಕಾಯಿ, ನನ್ನ ಮಾವ ಶುದ್ಧ ಶೋಂಭೇರಿ, ನನ್ನ ತಮ್ಮ ಶುದ್ಧ ತೀಟಿಯುವ, ನನ್ನ ಮನೆಯಲ್ಲಿ ಗಳಿಸುವವನೊಬ್ಬನಾದರೆ ಬಳಸುವವರು ಬಹುಮಂದಿ. ಅಂತೆಲ್ಲ ಹೇಳುವರು.

ಆಗ ಗಾಂಧಿಯುವರಿಗೂ ಗವುರ್ನ್ಮೆಂಟಿಗೂ ಹೊಡೆದಾಟ ಬಿದ್ದು, ಒಬ್ಬರಿಗೊಬ್ಬರು ಓಟು ಎಣಿಸುವ ಕಾಲ. ಮುನಿಸಾಮಪ್ಪ ಹೇಳೋರು, ಅಡಿಕೆ ಎಲೆ ಹಾಕಿಕೊಳ್ಳುತ್ತ, ಷೆಡ್ಡಲ್ಲಿ,—ಕೇಳೋ ಚೆಲುವಾ, ನಾನೂ ನಿಂತಿದ್ದೀನಿ, ನನಗೇನಾದರೂ ಸೀಟ್ ಸಿಕ್ಕಿದರೆ, ನಿನಗೆ ಹತ್ತಿಕ್ರೆ ದರ್ಖಾಸ್ತ್ ಕೊಡಿಸುತ್ತೇನೆ ಬಡ್ಡೀಮಕ್ಕಳ ಹತ್ತಿರದಿಂದ, ಐನೂರು ನಾಲಾನೂ, ಮೀಸೆ ಮೇಲೆ ಕೈ ಆಡಿಸುತ್ತ ಕೂತು ಬಿಡು, ಅಂತ. ಅದೆಂಥ ಸೀಟು, ಭೋಜರಾಜನ ಸಿಂಹಾಸನ, ಬಂದ ಬಂದವರಿಗೆಲ್ಲ ಹತ್ತಿಕ್ರೆ ಜಮೀನು ಇಕ್ಕೋ ಪುಣ್ಯ ದೊರೆಯುತ್ತದೆಯೊ, ಅಲ್ಲಿ ಕೂತವರಿಗೆ?—ಅಂತ ನಾನು ಮೂಗಿನ ಮೇಲೆ ಬೆರಳಿಟ್ಟೆ. ಅಪಾರ ಖರ್ಚು ಬಿತ್ತು ಅವರಿಗೆ, ಊರಿನವರ ಕೈ ಎಲ್ಲ ಬೆಚ್ಚಗೆ ಮಾಡುವುದಕ್ಕೆ; ಅವರದೇ ಹತ್ತಿಕ್ರೆ ಗದ್ದೆ ಕಳೆದು ಕೊಂಡರು ಮಾರಾಯರು; ಸೀಟು ಮಾತ್ರ ಸಿಗಲೇ ಇಲ್ಲ. ಮುಂಡೇ ಮದುವೆಯಲ್ಲಿ ಉಂಡವರೇ ಜಾಣರು ಅಂತ, ಅವರ ಕಾಸು ತಿಂದವರೂ ಕೂಡ ಎದೇ ಕಿಚ್ಚಿನಲ್ಲಿ ಮುಖಕ್ಕೆ ಮಸಿ ಹಚ್ಚಿ, ಯಾವುದೋ ನಾಯಿ ಕೂರಿಸಿ ಕಾಮಧೇನು ಅಂದುಬಿಟ್ಟರು. ಕುಂಟ ಕಾಶಿ ಬಯಸಿದ ಹಾಗಾಯಿತು, ಅವರು ಸೀಟಿಗಾನೆ ಪಟ್ಟಿದ್ದು. ಶನಿರಾಯ ಹೆಗಲೇರಿದರೆ ಹೊನ್ನು ಸಹ ಮಣ್ಣು.

ಸದ್ಯ, ಮುನಿಸಾಮಪ್ಪನ ಹತ್ತಿರ ನನಗೆ ಆ ಜಮೀನಿನ ರುಣ ಹುಟ್ಟಿಕೊಳ್ಳಲಿಲ್ಲ; ಅನ್ನದ ರುಣ ಮಾತ್ರ ಇತ್ತು.... ಅದೂ ತೀರಿತು. ಮೂರರ ಜ್ವರ ನನಗೂ ಮೆಟ್ಟಿಕೊಂಡಿತು. ಒಂಟಿ ಮೆಟ್ಟಲಿಲ್ಲ; ಹಿಂದಿನ ಕೆಮ್ಮಲನ್ನೂ ಕೆರಳಿಸಿಕೊಂಡು ಬೆನ್ನು ಹತ್ತಿತು. ಕುನೀನು ನುಂಗಿದರೂ

ಜಗ್ಗಲಿಲ್ಲ; ತಾಯಿತಿ ಬಿಗಿದರೂ ಸಡಿಲವಾಗಲಿಲ್ಲ; ಕೋಳಿ ಕಡಿದರೂ ಓಡಲಿಲ್ಲ. ಕೋಳಿಯೊಂದನ್ನ ಹಿಡಿದು ಅದರ ಪ್ರಾಣ ಕಿತ್ತರೆ, ನನ್ನ ಪ್ರಾಣ ಉಳಿಯುತ್ತೆ, ಅಂತ ಹೇಳಿದ್ದು ಮಾಡಿಸಿದ್ದು ಎಲ್ಲ ಮುಸಿಸಾಮುಪ್ಪನವರೇ. ಒಂದು ದಿನ, ಅವರಿಗೇ ಗಾಬರಿ ಆಯಿತು. ಏನೋ ಚೆಲುವಾ, ಹಿಂಗಾಗಿ ಹೋಯ್ತಲ್ಲೋ, ಬಾ ಇಲ್ಲಿ, ಅಂತ ಹತ್ತಿರಕ್ಕೆ ಕರೆದರು. ಕಣ್ಣಿನ ರೆಪ್ಪೆ ಮೇಲಕ್ಕೆತ್ತಿ ಮಡಚಿ ಒಳಕ್ಕೆ ನೋಡಿದರು. ಹಳದಿ ಸವರಿದ ಹಾಗಿತ್ತು. ನಾಲಗೆ ನೀಡೋ ಅಂದರು. ದಪ್ಪಗೆ ಪೊರೆ ಕಟ್ಟಿಕೊಂಡು, ಕೆಂಚಗೆ ಚುಕ್ಕಿ, ಬೇರೆ ಉದ್ದಕ್ಕೂ ........ ಸಾಕು, ಒಳಕ್ಕೆಳೆದುಕೊ, ಅಂದರು. ಎದೆ ಮುಟ್ಟಿದರು, ಡವ ಡವ ಅಂತ ಹೊಡೆದುಕೊಳ್ಳುತ್ತಿತ್ತು. ಹೊಟ್ಟೆ ಅದುಮಿದರು ಎಡಗಡೆ, ನುಂಗಿದ ಚೊಂಬು ಅಲ್ಲೇ ಕೂತಿದ್ದ ಹಾಗೆ, ಇಸ್ಪ್ಲೀನ್ ಇತ್ತು. ಇಷ್ಟೆಲ್ಲ ಅಜಮಾಯಿಸಿ ಮಾಡಿ, ನನ್ನ ಸ್ಥಿತಿ ಗತಿ ಚೆನ್ನಾಗಿ ಅರಿತವರು, "ಕೋಳಿ ಕೊಡು ಕೆರೆ ಏರಿ ಮಾರಮ್ಮನಿಗೆ" ಅಂದರು. ಮೂರು ಶುಕ್ರವಾರ ಮೂರು, ಅದೂ ಆಯಿತು.

ಅಷ್ಟು ಹೊತ್ತಿಗೆ, ಹದಿನೈದಾಣೆ ಕೆಲಸವೂ ಪೂರೈಸಿತ್ತು. "ಲೋ! ನೀನು ಬೆಂಗಳೂರಿಗೆ ನಡಿ! ಅತ್ಲಾಗೆ ಐನಾತಿ ಔಷಧಿ ಕೊಡುತ್ತಾರೆ. ಇಲ್ಲೇನಿದೆ, ಮಣ್ಣು? ಆ ಹವಾ ಕುಡಿದರೇನೇ ಸಾಕು. ಪಾಪ, ನನ್ನಿಂದ ನಿನ್ನ ಪಾಡು ಹೀಗಾಯಿತಲ್ಲೋ, ಅಂತ ಮುಸಿನಾಮುಪ್ಪ ತುಂಬ ಪೇಚಿಗೆ ಸಿಕ್ಕಿಕೊಂಡರು.

ಬೆಂಗಳೂರಿಗೆ ನಡಿ ಅಂದರಲ್ಲಾ, ಬರೀ ಬಾಯಿ ಮಾತು; ನಡಿಯುಗೊಡಿಸಲಿಲ್ಲ, ಮಾರಾಯ. ಎತ್ತಿನ ಗಾಡೀಲೆ ಹೋಗು, ಅಂದ ಎತ್ತುಗಳ ಬಾಲ ತಿರುಚಿ, ಹೇ, ಹೇ, ಅಂತ ತರೀಕೆರೆ ತಲಪಿದೆ. ಗಾಡಿಯಲ್ಲಿ ಗಾರೆ ಅರೆಯುವ ಮೆಷಿನ್‌ದು ಒಂದು ಚಕ್ರ ಬಿದ್ದಿತ್ತು. ಅದನ್ನ ನೋಡುತ್ತಲೂ, ಪೋಲೀಸಿನವರ ಕಣ್ಣು ಅಗಲವಾಯಿತು; ಕಿವಿ ನೆಟ್ಟಗಾಯಿತು. ನನ್ನ

ಸುಖ ದುಃಖಾನ ಸುಂಕದವರು ಕೇಳುತ್ತಾರೆಯೆ? ಎತ್ತಿಗೆ ಮೇವಿಲ್ಲದೆ ಇದ್ದರೆ ಅವರಿಗೇನು? ಅದನ್ನ ಅಲ್ಲೇ ಕೆಡವಿ, ನೀವೇ ಬಂದು ಬಿಡಿಸಿ ಅಂತ ಮುನಿಸಾಮಪ್ಪನವರಿಗೆ ಕಾಗದ ಬರೆಯಿಸಿ, ನಾನು ಮುಂದಕ್ಕೆ ಗಾಡಿ ಬಿಟ್ಟೆ. ಬೆಂಗಳೂರು ಸೆರಗು ಸಿಕ್ಕಬೇಕಾದರೆ ಹನ್ನೆರಡು ದಿನ ಆಯಿತು. ದಾರಿ ಉದ್ದಕ್ಕೂ ನನಗೆ ಬರುತ್ತಿದ್ದ ಪದ ಲಾವಣಿ ದೇವರ ಸ್ತೋತ್ರ ಎಲ್ಲಾನ್ನೂ ನೂರಾರು ಬಾರಿ ಉರು ಹೊಡೆದು ಮತ್ತೆ ಮತ್ತೆ ಬೊಗಳಿದೆ. ಎತ್ತುಗಳಿಗಂತೂ ಚೆನ್ನಾಗಿ ಪೂಜೆ ಆಯಿತು. ಒಂದೊಂದರದೂ ತಾತ ಅಜ್ಜಿ ಮಗ ಮೊಮ್ಮಗ ಎಲ್ಲಾನ್ನೂ ಹಿಡಿದು ಬೈದೆ, ಬಾಯಿ ತುಂಬ. ಎಡಚನಿಗೇ ಜಾಸ್ತಿ ಬೈಗುಳು. ಗಂಟೆಗೊಂದು ಕೋಲು ಕೀಳುವೆ, ದಾರಿ ಮಗ್ಗುಲಿನ ಬೇಲಿ, ಸಾಲುಮರದ ಕೊಂಬೆಗಳಿಂದ.

ಬೆಂಗಳೂರು ತೋಟದಪ್ಪನ ಛತ್ರದಲ್ಲಿ ನಾನು, ನಿನ್ನ ದಾರಿ ಕಾಯುತ್ತ, ಕೂತಿರುತ್ತೇನೆ, ಅಂತ ಮುನಿಸಾಮಪ್ಪನವರು ಹೇಳಿದ್ದರು. ಅದರಂತೆ, ಗ್ಯಾರಂಟಿ, ಆಸಾಮಿ; ಅದರ ಮುಂದಿನ ಮರದ ಕೆಳಗೆ; ನಾನಲ್ಲಿಗೆ ತಲಪುತ್ತಲೂ ನಾನು ಹೇಳಿದ ಅವರಿಗೆ, ಕೈಜೋಡಿಸಿಕೊಂಡು: "ನಿಮ್ಮ ಹಳ್ಳಿಗೆ ಈಗಲೇ ಹೋಗು ಅಂತ ಒತ್ತಾಯ ಮಾಡಬೇಡಿ, ದೇವರು! ಬೆಂಗಳೂರು ಪೇಟೆ ಒಂದು ಕಣ್ಣು ನೋಡಿಕೊಂಡು ನಾಳೆ ಸಂಜೆ ಹೊರಡುತ್ತೇನೆ. ಎತ್ತುಗಳಿಗೂ ಕಾಲು ಕೊಂಚ ಆರಲಿ. ನನ್ನ ಹಳೇ ಗಿರಾಕಿಗಳನ್ನ ಕೊಂಚ ಮಾತಾಡಿಸಿ ಬರುತ್ತೇನೆ. ತಿಂಗಳು ತಿಂಗಳಿಗೆ ಈ ಷಹರಿನ ಚಹರೇನೇ ಬದಲಾಗುತ್ತದಂತಲ್ಲಾ .... ಧರ್ಮರಾಯನ ಗುಡಿಗೆ ಹೊಸ ಗೋಪುರ ಕಟ್ಟಿದಾರಂತಲ್ಲಾ .... ಧರ್ಮಾಂಬುಧಿ ಕೆರೆಯಲ್ಲಿ ನೀರನ್ನೇ ಬತ್ತಿಸಿದಾರಂತಲ್ಲಾ .... ಕುಸ್ತಿಯವರೆಲ್ಲ ಸೇರಿ ಒಂದು ಕೂಟ ಮಾಡಿ ಕೊಂಡಿದಾರಂತೆ. ಕೆಂಪೇಗೌಡನದೊಂದು ಪ್ರತಿಮೆ ಮಾಡಿಸಿದಾರಂತೆ. ಮಾರ್ಕೆಟ್ ಮುಂದುಗಡೆ ಕೆಂಪು ದೀಪ ಉರಿಸುತ್ತಾರಂತೆ. ಪುಟ್ಟಣ್ಣಶೆಟ್ಟಿ ಕಟ್ಟಡದ ಮುಂದೆ ಬಣ್ಣದ ನೀರಿನ ಬಗ್ಗೆ ಎಬ್ಬಿಸಿದಾರಂತೆ. ಲಾಲ್‌ಬಾಗ್‌ನಲ್ಲಿ ಕರ್ಪೂರದ ಮರ, ರುದ್ರಾಕ್ಷಿ ಮರ, ಬಿಳಿ ಕಾಗೆ ಎಲ್ಲಾನ್ನೂ ತಂದು

ಮಡಗಿದಾರಂತೆ" ಅಂದೆ. ಮುನಿಸಾಮುಪ್ಪನವರು ಒಂದಕ್ಕೂ ಹೂಂ ಅನ್ನಲಿಲ್ಲ. ನಡಿ, ನೀನು! ಹಿಡಿ ನೀನು, ಕೆಂಗೇರಿ ದಾರಿ, ಅಂದರು.

ಕೆಂಗೇರೀಲಿ ಒಂದು ಕೆರೆ ಕಾಮಗಾರಿ ಇತ್ತು; ಅದರ ಕಂಟ್ರಾಕ್ಟು ತನಗೇ ಕಟ್ಟಿಬಿಟ್ಟಿದ್ದು ಅಂತ ಮುನಿಸಾಮುಪ್ಪನವರು ಅಲ್ಲೇ ಒಂದು ಗುಡಿಸಲನ್ನ, ಒಂದೂಕಾಲು ರೂಪಾಯಿ ಬಾಡಿಗ್ಗೆ ಮಾತಾಡಿದ್ದರು. ಅಲ್ಲಿ ಡಜನ್ ಹಾರೆ, ದಜನ್ ಗುದ್ದಲಿ, ಡಜನ್ ಪಿಕಾಸಿ, ಟಾಟಾ ಕಂಪನೀದು, ದಾಸ್ತಾನು ಮಾಡಿದ್ದರು. ಅಲ್ಲೇ ಇರು, ನೀನು ಹೋಗಿ, ಎತ್ತುಗಳಿಗೆ ರಾತೀಪು ಖರ್ಚು ತಿಂಗಳಿಗೆ ಎಂಟು ರೂಪಾಯಿ ಕೊಡುತ್ತೇನೆ, ನಿನ್ನದು ಆಮೇಲೆ ಮಾತಾಡೋಣ ಅಂತ ಚೀಟಿ ಸಹಿತ ನನ್ನನ್ನ ರವಾನಿಸೇಬಿಟ್ಟರು, ಬುದ್ಧಿವಂತರು.

ಹಾಗಂದವರು, ಅತ್ತಲಾಗೆ ಮುಖ ತೋರಿಸಲೇ ಇಲ್ಲ, ಮತ್ತೆ. ನಾನೇನು ಹುಟ್ಟಿಸಿದ ದೇವರು ಹುಲ್ಲಾದರೂ ಮೇಯಿಸುತ್ತಾನಲ್ಲಾ ಅಂತ ಅದ್ನೇ ಮೆದ್ದು ಬದುಕಲೆ? ಹೊಟ್ಟೆಗೆ ಹಸಿವಾದರೆ, ಕೆಟ್ಟ ದಾರಿಗೆಳೆಯುತ್ತೆ, ಮನಸ್ಸು; ಹಸಿವಿನ ಬಾಧೆ ಅರಿಯದವರು ಸುಲಭವಾಗಿ ಉಪದೇಶ ಮಾಡಿ ಬಿಡಬಹುದು, ಹುಸಿ ನುಡಿಯಬೇಡ, ಕಳಬೇಡ, ಅಂತ. ಬಡತನ ಹೆಚ್ಚಿತು ಅಂದರೆ, ದೊಂಗಲು, ದರೋಡೆ, ಪ್ರಾರಂಭ. ಮನುಷ್ಯ ಇದಾನಲ್ಲಾ, ಅವನು ಒಂದು ಮೃಗ, ಹಂದಿ ಹುಲಿ ಕೋಣ, ಇವುಗಳ ಹಾಗೆ. ಮೃಗಾನೇ ನಮ್ಮ ಅಡಿಪಾಯ, ಬೇರು. ಅದಕ್ಕೆ ಹೊನ್ನು ಹೆಣ್ಣು ಮಣ್ಣು ಹಾಕಿ ಅದನ್ನು ತಣಿಸಿದರೆ, ಸಂಪತ್ತು ಸುಖ ಸತ್ಯ ದಮೆ ದಾನ ಧರ್ಮ ನೀತಿ ನ್ಯಾಯ ಎಂಬ ಹೂವು ಹಣ್ಣು ಸಿಗುವುದು. ಅದು ಒಣಗಿತೆಂದರೆ, ಮೋಸ ದ್ವೇಷ ಹೊಡೆದಾಟ, ಕಳ್ಳತನ ಲೂಟಿ ದರೋಡೆ. ಅಂತೂ, ಮುನಿಸಾಮುಪ್ಪನವರ ದೆಸೆಯಿಂದ ನಾನು ಮೋಸಕ್ಕೆಳಿಯಬೇಕಾಯಿತು. ಆಳು ಮಾಡಿದ ಕೆಲಸ ಹಾಳು, ಅಂತಾರೆ; ಆದರೆ, ಆಳವಾಗಿ ಯೋಚನೆ ಮಾಡಿದರೆ,

ಗೊತ್ತಾಗುತ್ತದೆ, ಅವನ್ನ ಸರಿಯಾದ ರೀತಿಯಲ್ಲಿ ಆಳಿದರೆ, ಕೆಲಸ ಏಕೆ ಹಾಳು? ಅಂತ.

ಎತ್ತು ಗಾಡಿ ಇರಿಸಿಕೊಂಡು, ದೊರೆಯು ಹಾಗೆ ಬಾಡಿಗೆ ಗುಡಿಸಲಲ್ಲಿ, ಹೊಸಬ ಯಾವನೋ ಎಲೆ ಅಡಿಕೆ ಜಗಿಯುತ್ತಿದಾನಲ್ಲಾ ನಮ್ಮೂರಲ್ಲಿ, ಅಂತ ಹುಡುಗರು ಪಡಗರು ಇಣಿಕಿ ನೋಡುವರು. ನಾನೂನೂ ಅವರಿಗೆ ಬೊಂಬಾಯಿ ಮದ್ರಾಸ್ ಕಥೆಗಳನ್ನೆಲ್ಲ ಹೇಳುವೆ, ಉಪ್ಪು ಖಾರ ಬೆರಸಿ. ಸುದ್ದಿ ದೊಡ್ಡವರ ಕಿವಿ ಮುಟ್ಟುತ್ತಲೂ, ಅವರು ಒಬ್ಬೊಬ್ಬರಾಗಿ ಬಂದು, ಒಪ್ಪತ್ತು ನಿನ್ನ ಗಾಡಿ ಕೊಡು, ಕಲ್ಲು ಹೇರಬೇಕು, ಇಟ್ಟಿಗೆ ಸಾಗಿಸ ಬೇಕು, ಮಣ್ಣು ತುಂಬಬೇಕು; ಎತ್ತು ಕೊಟ್ಟರು, ಆರು ಹೊಡೆಯ ಬೇಕು, ಅಂತ ಕೇಳುವರು. ಎಂಟಾಣೆ ಹತ್ತಾಣೆ ಆಸೆ ತೋರಿಸುವರು; ಬಿಸಿ ತುಪ್ಪ; ಕಡೆಗೆ ನುಂಗೇಬಿಟ್ಟೆ.

ವಜನ್ ಹೇರಿ ಹೇರಿ ಗಾಡಿ ತಳ ಎಲ್ಲ ತೂತು ಬಿತ್ತು. ಮುನಿ ಸಾಮಪ್ಪನವರು ವಕ್ರಿಸಿದರೆ ಎಂಥ ಸಬೂಬು ಹೇಳುವುದು ಅವರಿಗೆ, ಅಂತ ದಿಗಿಲು ಹತ್ತುವುದು ನನಗೆ. ಆದರೂ, ಹೊಟ್ಟೆ ತಾಳ, ಬಿಟ್ಟಿ ಕಾಸು, ತಡೆಯಲಿಕ್ಕಾಗಲಿಲ್ಲ. ದೇವರು ನನ್ನ ಮೇಲೆ ಕೋಪ ಮಾಡಿರಲಾರ. ಆರಕ್ಕೇರಬಾರದು, ಮೂರಕ್ಕಿಳಿಯಬಾರದು, ಅನ್ನೋದೇ ಅವನ ತತ್ವ. ಆರರ ಮೇಲೂ ಏರುತ್ತೇನೆ, ಅಂತ ಸಾಹುಕಾರರುಗಳು ಏಣಿ ಮಡಗಿದರೆ, ದೇವರು ಕೆಳಕ್ಕೆ ಬೀಳಿಸುತ್ತಾನೆ. ಮೂರಕ್ಕಿಂತ ಕೆಳಗಿರುವ ನನ್ನಂಥವರು, ಅಲ್ಲಿಯ ತನಕ ಏರಿಸಪ್ಪ ಹೇಗಾದರೂ ಅಂತ ಹೆಜ್ಜೆ ಎತ್ತಿದರೆ, ದೇವರೇ ನಮ್ಮ ಕೈಹಿಡಿಯುತ್ತಾನೆ, ಖಂಡಿತ.

ಬೆಳದಿಂಗಳಲ್ಲಿ ಸಿಡಿಲು ಬಡಿದಹಾಗೆ, ಒಂದು ದಿನ ಮೇಲ್ ಗಾಡೀಲಿ ಇಳಿದೇಬಿಟ್ಟರು, ಕಂಟ್ರಾಕ್ಟರು ಮುನಿಸಾಮಪ್ಪನವರು; ತಲೆ ಮೇಲೆ ಎರಗೇಬಿಟ್ಟರು. ಅಜ್ಜನಿಗೆ ಮೊಮ್ಮಗ ಆಕಳಿಕೆ ಕಲಿಸಬೇಕೆ?

ನಡೀತಿದ್ದ ಸಂಗತಿ ಅರಿತುಕೊಂಡರು. ಎತ್ತು ಗಾಡಿ ನೋಡಿ, ಎದೆಯ ಮೇಲೆ ಕೈ ಇರಿಸಿಕೊಂಡರು. ತಪ್ಪು ತಮ್ಮದೇ ಅನ್ನೋದೂ ತಿಳಿಯಿತೋ ಏನೋ? ಚೆಲುವಾ, ಇದೇ ಊರಲ್ಲೇ ಇವನ್ನ ಮಾರಿಬಿಡೋ, ಬಂದ ಬೆಲೆಗೆ, ಮುಂದಿನ ಸಂತೆ ಹೊತ್ತಿಗೆ, ಅಂದರು. ನೂರೈವತ್ತು ಬೆಲೆ ಹೊಂದಿತು. ಅದರಲ್ಲಿ ನೂರಿಪ್ಪತ್ತು ಅವರ ಮಡಿಲಿನೊಳಗಿಟ್ಟು, ಮೂವತ್ತು ನಾನೇ ತಿಂದೆ. ಹೊಟ್ಟೆ ಗೆಡ್ಡೆ ಕರಗಿಸಿದ ಖರ್ಚಿಗಾಗಿ, ಕೆಂಗೇರಿ ಡಾಕ್ಟರೊಬ್ಬರಿಗೆ ಇಪ್ಪತ್ತು ತೆತ್ತೆ. ಹದಿನೈದಾಣೆ ವಾಸಿ ಆಯಿತು. ಇನ್ನೊಂದಾಣೆ ಇದ್ದರೆ ಇರಲಿ ಅಂತ ಸುಮ್ಮನಾದೆ.

ಇನ್ನೇನು? ಬುಡ ಕಡಿದ ಮೇಲೆ ಮರ ಹೇಗೆ ಬಾಳೀತು? ಕಟ್ಟಿದೆ ಬುತ್ತಿ ಊರಿಗೆ.

# ಸುಣ್ಣ - ಬೆಣ್ಣೆ

ಬಹುತೇಕ, ಒಂದು ಒಂದೂವರೆ ವರ್ಷ ಇದ್ದೆ ಅಂತ ಕಾಣುತ್ತೆ, ನೆನಪಿಲ್ಲ. ಹಳ್ಳಿಯಲ್ಲಿ ಆಗ ನನ್ನನ್ನ ಹಿಡಿದು ನಿಲ್ಲಿಸಿದ್ದು ರಾಮು, ಲಕ್ಷ್ಮಿ ಇವರ ಮೇಲಿನ ಮೋಹ. ಸಣ್ಣದನ್ನ ತೊಡೇಮೇಲೆ ಇರಿಸಿಕೊಳ್ಳುವಾಗಿನ ಸುಖ, ದೊಡ್ಡೋನನ್ನ ತಲೆಮೇಲೆ ಕೂರಿಸಿಕೊಳ್ಳುವಾಗಿನ ತಂಪು; ಬೆಳೆಯುವ ಕೂಸು, ಬೆಳೆಯುವ ಪೈರು ಎರಡನ್ನೂ ನೋಡುತ್ತಾ ಕೂತಿರುವುದು, ಬಲು ಆನಂದ ಸ್ವಾಮಿ. ಕಿರಿ ಮಗ ಕಿವಿ ಕಿತ್ತರೂ ಪ್ರೀತಿ. ತಿಂಗಳ ಮಾವ ಅಂತ ಆದರ ಹತ್ತಿರ ಮಾತಾಡುತ್ತವೆ; ಬೆಕ್ಕಿನ ಬಾಲ ಹಿಡಿದೆಳೆಯುತ್ತವೆ; ಎಲ್ಲೆಂದರಲ್ಲಿಂದ ಬಿದ್ದು ಮಂಡಿ ಮೂಗು ತುರಿಸಿಕೊಳ್ಳುತ್ತವೆ; ಯಾವಾಗೆಂದರಾವಾಗ ಅಳುತ್ತವೆ, ನಗುತ್ತವೆ.

ಲಕ್ಷ್ಮೀನ ಮಡಿಲಲ್ಲಿ ಮಲಗಿಸಿ, ರಾಮುನನ್ನೆದುರಿಗೆ ಕೂಡಿಸಿಕೊಂಡು ನಾನು ದಿನವೂ ಕತೆ ಹೇಳುವೆ, ಅವಕ್ಕೆ. ಶ್ರೀನಿವಾಸದೇವರು ಬೆಟ್ಟ ಹತ್ತಿದ್ದು, ಚೆಲುವನಾರಾಯಣ ಡಿಲ್ಲಿಗೆ ಹೋದದ್ದು, ಹರಿಶ್ಚಂದ್ರ ಸುಡುಗಾಡು ಸಿದ್ಧನಾದದ್ದು, ನರಸಿಮ್ಮ ದೇವರು ಕಂಬದೊಳಗೆ ಕೂತಿದ್ದು, ಮುತ್ತೂರಾಯಸ್ವಾಮಿ ಮಾದೇಶ್ವರನ ಬೆಟ್ಟಕ್ಕೆ ಹೋದದ್ದು, ಸೀತಾಮ್ಮನವರು ಹುಲ್ಲುಕಡ್ಡೀನ ಮಾತನಾಡಿಸಿದ್ದು, ಭೀಮ ಹೆಂಡತಿ ತುರುಬಿಗೆ ಕರುಳು ಮುಡಿಸಿದ್ದು, ಕೃಷ್ಣ ಮೊಸರಿನ ಮಡಕೆ ಒಡೆದದ್ದು, ಅರ್ಜುನನ ಕುದುರೆ ಗಾಡಿ ಹೊಡೆದದ್ದು,—ಎಲ್ಲಾನ್ನೂ ಹೇಳುವೆ, ಅವು ಬಾಯಗಲಿಸಿಕೊಂಡು ಆ ಅಂತ ಬಿಚ್ಚಿಕೊಂಡೇ ನಿದ್ದೆಹೋಗುವುವು.

ಎಷ್ಟು ಕತೆ ಹೇಳಿದರೂ ಸಾಲದು. ಅವಕ್ಕೆ ತುಂಟ ಮಾತು ಬಹಳ. ಅದೇನು ಇದೇಕೆ ಅಂತ ಪೀಡಿಸುತ್ತಲೇ ಇರುತ್ತವೆ ನನ್ನನ್ನ. ನಿನಗೆ ಮಾತ್ರ

ಮೀಸೆ ಏಕೆ? ನಾನೂ ಏಕೆ ಮರ ಹತ್ತಬಾರದು? ಕೋಳಿಗೇಕೆ ಮೊಲೆ ಇಲ್ಲ? ಎಮ್ಮೆ ಏಕೆ ಹಸುವಿನ ಹಾಗೆ ಕೂಗುವುದಿಲ್ಲ? ಕತ್ತೆ ಗಂಟಲು ಯಾಕೆ ಅಷ್ಟು ದಪ್ಪ? ಬೆಂಕಿ ಏಕೆ ಸುಡುತ್ತೆ? ನೀರು ಯಾಕೆ ಒದ್ದೆ? ಎಲೆ ಏಕೆ ಉದುರುತ್ತೆ? ಸೂರ್ಯ ಏಕೆ ಮುಳುಗುತ್ತಾನೆ? ಎಲ್ಲಿ ಮುಳುಗುತ್ತಾನೆ? ರಾತ್ರಿ ಎಲ್ಲಿಗೆ ಹೋಗಿರುತ್ತಾನೆ.... ವಿಪರೀತ ಫಜೀತಿ. ಎಷ್ಟು ಸಮಜಾಯಿಷಿ ಕೊಟ್ಟರೂ ಇಲ್ಲ. ಆದರೂ ನಿಮ್ಮೆದುರಿಗೆ ಇಷ್ಟು ಮಾತ್ರ ಹೇಳಬಲ್ಲೆ, ಇಬ್ಬರನ್ನೂ ನಾನು ತಹಲ್‌ವರೆಗೂ ಒಂದು ಏಟು ಕೈ ಎತ್ತಿ ಹೊಡೆದಿಲ್ಲ, ನಮ್ಮ ತೋಳಿಗೆ ಬಲ ಇದೆ ಅಂತ. ಅದರ ಮದದಿಂದ ನಾವು ಆ ಅರಿಯದ ಪ್ರಾಣಿಗಳನ್ನು ಹಿಂಸಿಸುವುದೆ? ಚಚ್ಚಿ ಚಚ್ಚಿ ನನ್ನಂಥವರು ಮಕ್ಕಳನ್ನ ಮೊಂಡು ಬೀಳಿಸುತ್ತಾರೆ; ನನಗದು ಒಪ್ಪದು. ಬೆನ್ನಮೇಲೆ ನಾಲ್ಕು ಬಾರಿಸಿದರೆ ಅವೇನು ಮಾಡುತ್ತವೆ, ಎಲ್ಲಿಗೆ ಹೋಗುತ್ತವೆ, ಅಪ್ಪಾ ಅಂತ ನಮ್ಮ ಕಾಲನ್ನೇ ಕಟ್ಟಿಕೊಳ್ಳುತ್ತವೆ. ನಮ್ಮ ಕೂಡ ಇರುವ ಹಾಗಿಲ್ಲ, ನಮ್ಮನ್ನೂ ಬಿಡುವ ಹಾಗಿಲ್ಲ. ಹಡೆದ ತಪ್ಪಿಗೆ ತೆಪ್ಪಗೆ ಕೂಡುವುದೇ ಧರ್ಮ.

ನನ್ನ ಹೆಂಡತಿಯನ್ನೂ ನಾನು ಹೊಡೆದಿಲ್ಲ ಅಷ್ಟಕ್ಕೆ ಬಂದರೆ ಬೈಯುವೆ; ಮುಖ ಮೂತಿ ನೋಡದೆ ಚೆನ್ನಾಗಿ ಬೈಯುವೆ. ಬೈಗುಳು ಅಂದರೇನು? ಗಾಳಿ; ಈಚೆ ಕಿವಿಯಿಂದ ಆಚೆ ಕಿವಿಯಾಚೆ ತೂರಿಕೊಂಡು ಹೋಗುವ ಗಾಳಿ. ಹೆಣ್ಣು ಕಣ್ಣೀರಿಟ್ಟರೆ ಆ ಮನೇಲಿ ಯಾರೂ ತಣ್ಣಗೆ ಬಾಳುವುದಿಲ್ಲ ಅಂತ ಹಿರಿಯರು ಹೇಳುತ್ತಾರೆ; ಆದ್ದರಿಂದ ಅವಳು ಅತ್ತಳು ಅಂದರೆ ಸರಿ, ಬೈಯುವುದನ್ನೂ ನಿಲ್ಲಿಸಿಬಿಡುತ್ತಿದ್ದೆ. ಹೆಣ್ಣು ಹೆಂಗಸರದೇ ಸಂಸಾರದಲ್ಲಿ ದುಡಿತ ಪಾಪ; ರೇಷ್ಮೆ ಗೂಡಿನ ಕೆಲಸದಲ್ಲಂತೂ ಮುಕ್ಕಾಲು ಮೂರು ಪೀಸೆ ದುಡಿತ ಎಲ್ಲ ಹೆಣ್ಣನದೇ.

ಹೀಗೆ ಯೋಚನೆ ಮಾಡುತ್ತ ಮಾಡುತ್ತ, ಅವಳ ಸಂಪಾದನೆಯನ್ನ ಕಸಿದುಕೊಂಡು ಮೀಸ ತಿರುಚುವುದು ಅಪಮಾನ ಅನ್ನಿಸಿತು ನನಗೆ.

ಮಂಡ್ಯದಲ್ಲಿ ಆಗತಾನೆ ಹೆಣ್ಣಾಸ್ಪತ್ರೆ ಕಟ್ಟಿಸುತ್ತಿದ್ದರು. ಅಲ್ಲಿಂದ ಯಾವನೋ ಸುದ್ದಿ ತಂದ, ಸುಣ್ಣ ಸುಡುವವರು ಬೇಕು ಅಂತ. ಸುಣ್ಣದ ಕೆಲಸ ಮಾಡುತ್ತಿದ್ದರೆ ಹೊಟ್ಟೆಗೆಡ್ಡೆ ಆ ಕಾವಿಗೆ ತಾನಾಗಿಯೇ ಕರಗುತ್ತದೆ ಅಂತ ನಮ್ಮೂರಲ್ಲಿ ನಂಬಿಕೆ. ಗೇಣುಹೊಟ್ಟೆ, ಗೇಣುಬಟ್ಟೆ ಇವಕ್ಕೆ ಏನಾದರೇನಂತೆ? ಮಾನವಾದ ಒಂದು ಕೆಲಸ, ಮೋಸವಿಲ್ಲದ ಕಸಬು, ಯಾವುದಾದರೂ ನೆಟ್ಟಗೆ ಅಂತ ಮಂಡ್ಯಕ್ಕೆ ಹೋದೆವು, ಎಲ್ಲರೂ. ಹೂಂ, ಎಲ್ಲರೂ. ರಾಮುನಿಗೆ ಎಂಟು ವರ್ಷ; ಅವನಿಗೂ ಕೊಡುವರು ಒಂದೂಕಾಲಾಣೆ. ಬೇಡ, ಬೇಡ ಅಂತ ಅವನು ಓಡಿ ಬಂದುಬಿಡುವನು. ಏಕೆಂದರೆ, ಕಂಡ ಕಂಡವರ ಹತ್ತಿರದಿಂದೆಲ್ಲ ಕಾಸು ಇಸುಕೊಳ್ಳಬಾರದು, ಕಂದಾರೆಯುವರು ಎತ್ತಿಕೊಂಡು ಚೀಲಕ್ಕೆ ತುಂಬಿ ಮಾರಿಬಿಡುತ್ತಾರೆ ಅಂತ ನಾವು ಹೆದರಿಸಿದ್ದೆವು. ನಾನು ಸುಣ್ಣ ಸುಡುವೆ; ಇವಳು ಇಟ್ಟಿಗೆ ಹೊರುವಳು.

ಹೊರಲಿ, ಅಂತ ನಾನೂ ಸುಮ್ಮನಿದ್ದೆ. ಮನ ಒಂದಾದರೂ ದೇಹ ಎರಡು, ಗಂಡ ಹೆಂಡಿರಿಗೆ. ಅವಳಿಗಾಗುವಷ್ಟು ಅವಳೂ ದುಡಿಯಲಿ; ದನದ ಹಾಗೆ ಕೊಟ್ಟಿಗೇಲಿ ಏಕೆ ಕಟ್ಟಬೇಕು, ಹೆಂಡತಿಯನ್ನ? ಭಾರಿ ಭಾರಿ ಇಸಮುಗಳು ತಮ್ಮ ಹೆಂಡಿರನ್ನ, ದೇವಲೋಕದಿಂದ ಇಳಿದ ಇಂದ್ರಾಣಿ ಅಂತ ತಿಳಿದುಕೊಂಡು, ತಲೆ ಉಬ್ಬಿಸಿ, ಅಟ್ಟದ ಮೇಲಕ್ಕೇರಿಸಿ, ಮಂದಾಸನದಲ್ಲಿ ಕೂರಿಸಿ, ಸೀರೆ ಕುಪ್ಪಸ ಒಡವೆ ನಾಣ್ಯ ತೆತ್ತು, ಪೂಜೆ ಮಾಡುತ್ತಾರೆ. ಪಾದ ನೆಲಕ್ಕೆ ಸೋಕಬಾರದು, ಕೈ ಕೆಸರಾಗಬಾರದು, ಮೈಗೆ ಬಿಸಿಲು ಬೀಳಬಾರದು, ಮೂಗಿನ ತುದಿ ಬೆವರಬಾರದು, ಕಣ್ಣು ಯಾರ ಮೇಲೂ ಬೀಳಬಾರದು, ಕ್ಷಯಾಸ್ಪತ್ರೆ ರೋಗಿಗಳ ಹಾಗೆ, ಕಾರಿಂದ ಇಳಿಯುವಾಗಲೂ ಕೈಕೊಟ್ಟು ಇಳಿಸುತ್ತಾರೆ; ಮುಂದೊಬ್ಬ ಹೋಗಿ ಬಾಗಿಲು ನೂಕುತ್ತಾನೆ, ಚಪ್ಪಲಿ ಇರಿಸಿಕೊಡುತ್ತಾನೆ, ಹಿಂದೊಬ್ಬ ಹೋಗಿ ಕೊಡೆ ಮುಡಿಸುತ್ತಾನೆ; ದಿನವೂ ಬೆಳಗ್ಗೆ ಆಸ್ಪತ್ರೆಗೆ, ಸಂಜೆ ಜವಾಹಿರಿ ಅಂಗಡಿಗೆ, ಕರೆದುಕೊಂಡು ಹೋಗುತ್ತಾರೆ. ಇದೊಂದು ತರಹ. ಇನ್ನು ಕೆಲವರಿದ್ದಾರೆ, ಹೆಂಡತಿ ಅಂದರೆ ಕುರುಡು ಕತ್ತೆಗಿಂತ ಕಡಮೆ, ಹೊಡೆಯುವುದು,

ಬಡಿಯುವುದು, ಅರ್ಧ ಹೊಟ್ಟೆಗೆ ಹಾಕುವುದು, ದುಡಿಸಿ ದುಡಿಸಿ ಸಾಯಿಸೇ ಬಿಡುತ್ತಾರೆ. ಇವೆರಡೂ ತಪ್ಪು. ಹೆಣ್ಣು ಅನ್ನೋದು, ದೇವರೂ ಅಲ್ಲ, ದೆವ್ವಾನೂ ಅಲ್ಲ. ಅದೂ ನಮ್ಮ ಹಾಗೆ, ಉಪ್ಪು ಖಾರ ತಿಂಬುವ, ಪ್ರೀತಿ ಪ್ರೇಮ ವಿಶ್ವಾಸ ಕನಿಕರ ಇರುವ, ಒಂದು ಪ್ರಾಣಿ. ಸಮ ಸಮ, ಹೆಚ್ಚಿಲ್ಲ, ಕಡಿಮೇನೂ ಇಲ್ಲ. ಸಮ ಸಮ ತಿನ್ನಲಿ, ಸಮ ಸಮ ಮನೆಗೆ ತರುತ್ತಿದೇನೆ, ಏರಿಗೆ ನೀರಿನ ಆಸರೆ, ನೀರಿಗೆ ಏರಿ ಆಸರೆ ಎಂಬ ಸಮಾಧಾನ ಅದಕ್ಕೂ ಇರಲಿ ಅಂತ, ನಾನೂ, ಇಟ್ಟಿಗೆ ಹೊತ್ತರೆ ಹೊರಲಿ ಅಂತ, ಸುಮ್ಮನಾದೆ. ತಿರುಕರಿಗೆ ಹಾಕಿದ ಹಾಗೆ ಅದರ ಗಂಗಾಳಕ್ಕೆ ಗಂಜಿ ಹುಯ್ದರೆ, ಅದರ ಗೌರವಕ್ಕೆ ಹಾನಿ. ನಾವಾದರೆ, ಅಂಥ ಗಂಜಿಯನ್ನ ಎಷ್ಟು ದಿನ ಕುಡಿದೇವು ?

ಆ ಸುಣ್ಣ ಸುಡುವ ಕೆಲಸವನ್ನು ಹೆಚ್ಚು ದಿನ ಪೂರೈಸಲಿಕ್ಕಾಗಲಿಲ್ಲ. ಮೈಯೆಲ್ಲ ಬೊಬ್ಬೆ, ಉರಿ. ಕಸಬಿಗೆ ನಾನು ಹೊಸಬ. ಬೆಳಿಗೆ ಇಳಿದರೆ ಇಳಿಯಿತು, ಇಲ್ಲದಿದ್ದರೆ ಇಲ್ಲ. ಆಮಶಂಕೆ ಬೇರೆ ತಗುಲಿಕೊಂಡಿತು. ತಂಪಗೆ ಮೊಸರು, ಗಸಗಸೆ ಪಾಯಸ, ಎಲ್ಲ ಬೀಳಬೇಕಂತೆ ಸುಣ್ಣದ ಕೆಲಸದವರಿಗೆ. ನನಗೆಲ್ಲಿ ತಿಳಿಯಬೇಕು, ಅವೆಲ್ಲ. ನನ್ನ ಅಮಲಿನಲ್ಲಿ ನಾನಿದ್ದುಬಿಟ್ಟೆ.

ಮಂಡ್ಯ ರೆಯಿಲು ಸ್ಟೇಷನ್ ತಾವು ಆಸ್ಪತ್ರೆ ವರಾಂಡಾದಲ್ಲಿ ತುದಿ ಬೆಂಚಿನಲ್ಲಿ ಕುಕ್ಕರಿಸಿದ್ದೆ. ತಲೆ ತುಂಬ ಯೋಚನೆ; ಹೊಟ್ಟೆ ತುಂಬ ನೋವು. ಏನು ಬಂತಪ್ಪ, ಗೋಳು, ಹಾಸಿಗೆ ಎಂದುಕೊಂಡದ್ದೆಲ್ಲ ಹಾವಾಗಿ ಹರಿಯೋಣವೆ ? ಬೊಂಬಾಯಿಗೆ ಹೋದೆ, ಕಲ್ಲಿದ್ದಲು ಕುದುರೆ ಲದ್ದಿ ಕಡಿಪೆಟ್ಟಿಗೆ; ಮದ್ರಾಸಿಗೆ ಹೋದೆ, ಕಬ್ಬಿಣದ ಸರಳು ಆನೆಕಾಲಿನ ಮುದುಕಿ ಆಸ್ಪತ್ರೆ ಕಾಟ; ಇಲ್ಲಿ ಬಂದೆ, ಕೊತ ಕೊತ ಸುಣ್ಣ, ಬೆಣ್ಣೆಗೆ ಸೊನ್ನೆ. ಊಂ, ಹಿಂದಕ್ಕೆ ತಪ್ಪು, ಮುಂದಕ್ಕೆ ಬುದ್ಧಿ. ಅಷ್ಟೇ ಪ್ರಯೋಜನ, ನನ್ನ ಸುತ್ತಾಟದಿಂದ, ಅಂದೆ. ಆದರೆ, ಸಾಯುವ ತನಕ

ಸಾವು ಮಾಡುತ್ತಾ ಇದ್ದರೆ, ಇನಾಮು ಸಿಗುವುದು ಯಾವ ಜನ್ಮದಲ್ಲಿ ?

ಅಲ್ಲೇ ಬಂದಿದ್ದರು, ಹೋಟಲು ಹಯಗ್ರೀವಾಚಾರ್ರು, ಮಗು ಕಿವಿ ಸೋರುತ್ತಿತ್ತಂತೆ, ಅದನ್ನ ತೋರಿಸುವುದಕ್ಕೆ. ಏನೋ ಗೌಡಾ, ನಾನೊಂದು ಗದ್ದೆ ತೆಗೆದಿದೀನಿ, ಮೋಡಿಹಳ್ಳಿ ಹತ್ತಿರ, ಮಾಡುತ್ತೀಯಾ, ಅಂದರು. ಇದೀಗ ದೇವರು ಪ್ರತ್ಯಕ್ಷವಾದ, ಅಂದುಕೊಂಡೆ. ತಿಪ್ಪೆ ಮೇಲೆ ಕೂತವನಿಗೆ ಉಪ್ಪರಿಗೆ ಕನಸುಕಂಡಹಾಗಾಯಿತು.

ಅವರ ಬಿಡಾರಕ್ಕೆ ಒಂದು ಸೀಮೆ ಹೆಂಚಿನ ಮನೆ, ನನ್ನ ವಾಸಕ್ಕೆ ಒಂದು ಹುಲ್ಲುಜೋಪಡಿ ಇತ್ತು, ಅಲ್ಲಿ. ಹೆಂಡತಿ ಮಕ್ಕಳನ್ನ ಊರು ಕಡೆಗೆ ರವಾನಿಸಿದೆ. ನನಗೇನು, ಒಲೆ ಹೊತ್ತಿಸಿದ ಕಡೆ ನೆಲೆ. ಗದ್ದೆ ಹತ್ತಿರವೇ ಇದ್ದೆ. ಹೊಸದರಲ್ಲಿ ಹುಡುಗ ಹಗಲೆಲ್ಲ ಓದಿದ ಅಂದ ಹಾಗೆ, ನಾನು ಆರಂಬ ಪ್ರಾರಂಭಮಾಡಿದೆ. ಆದರೆ ನನ್ನ ಹಸ್ತ ಗುಣವನ್ನ ಆ ಅಯ್ಯನವರ ಜಾತಕ ಮೀರಿಸಿಬಿಟ್ಟಿತು. ಅದೆಂಥ ಅನ್ಯಾಯದ ಹಣ ಅಂತೀರಾ, ಹೋಟ್ಲಿನವರದು ?

ಹೋಟ್ಲು ಇರಬೇಕು, ನಿಜ, ಊರಿಗೊಂದೋ ಎರಡೋ, ಆದರ ಯೋಗ್ಯತೆಗೆ ತಕ್ಕಂತೆ. ಕಿಲೀನಾಗಿ ಕೈತುಂಬ ನಾವು ದಿನವೂ ತಿನ್ನುವ ಹಿಟ್ಟು ಬಕ್ರಿ ಅನ್ನ ಸಾರು, ಜೊತೆಗೆ ಒಂದೋ ಎರಡೋ ಹೆಚ್ಚುಕಟ್ಟಳೆ, ಕೊಡಬೇಕು ಅವನು, ಮೋಸಮಾಡದೆ. ಹಾಗೊಬ್ಬ ಮಾವ ಇಲ್ಲದಿದ್ದರೆ ಪರಸ್ಥಳದವರು ಪೇಚಾಡುತ್ತಾರೆ; ನಂಟರಿಷ್ಟರಗೆ ತಲೆ ಶೂಲೆ. ಆದರೆ, ಗೇಣಿಗೆ ಒಂದು ಮೊಳಕ್ಕೆ ಮೂರು ಅಂತ ಹೋಟ್ಲುಗಳಾದರೆ,. ಇವನು ಅಳತೆ ಇಳಿಸುತ್ತಾನೆ, ಅವನು ತೂಕ ಕಡಿಮೆ ಮಾಡುತ್ತಾನೆ, ಇವನು ಬಣ್ಣ ಕಟ್ಟುತ್ತಾನೆ, ಅವನು ಹೆಣ್ಣಾಳಿಡುತ್ತಾನೆ, ಇವನು ಗ್ರಾಮಫೋನ್ ತಿರುಗಿಸುತ್ತಾನೆ, ಅವನು ರೇಡಿಯೋ ಹಚ್ಚುತ್ತಾನೆ, ಜನಗಳಿಗೆ ಕ್ಷೌರ, ಅವರಿಗೂ

ಲುಕ್ಸಾನು. ತಿನ್ನೋನ ಹೊಟ್ಟೇಲಿ ಹುಣ್ಣು, ಕೊಡೋನ ಜೋಬಲ್ಲಿ ತೂತು, ಇಲ್ಲ, ಅಪಾರ ಮೋಸಕ್ಕೀಡಾದರೆ, ಅವನು ಕೊಂಡುಕೊಳ್ಳುವ ಗದ್ದೆಯಲ್ಲಿ ಹುಲ್ಲು ಕೂಡ ಬೆಳೆಯುವುದಿಲ್ಲ.

ನಾನೇನೋ ಒಗ್ಗಿ ಉತ್ತೆ, ಬಿಡಿ ಬಿಡಿ ನಟ್ಟೆ, ನೀರು ಕಟ್ಟಿದೆ, ದೇವರಿಗೆ ಅಡ್ಡ ಬಿದ್ದೆ. ಆದರೆ ನನ್ನ ಕೆಲಸ ಎಲ್ಲ ಶಾವಿಗೆ ಪಾಯಸ ಮಾಡಿ ನಾಯಿಬಾಲದಲ್ಲಿ ತೊಳಸಿದ ಹಾಗಾಯಿತು. ಸಾವಿರ ಚಿತ್ತಾರ ಒಂದು ಮಸಿ ನುಂಗಿತು ಅಂದಹಾಗೆ, ಯಾವುದೋ ಹುಳ ಹೊಡೆಯಿತು, ಬೆಳೆಗೆ. ಒಂದು ಎತ್ತು ಬೇರೆ ಕೈಲಾಸದ ದಾರಿ ಹಿಡಿಯಿತು. ಅದನ್ನೆಲ್ಲ ಆವಯ್ಯ ನನ್ನ ತಲೆ ಮೇಲೆ ಹಾಕಿದ. ನಾನೇನು ಹುಳಕ್ಕೆ ಹೇಳಿ ಕಳುಹಿಸಿದೆನೆ? ಹೂಡೋದು ಬಿತ್ತೋದು ನಮ್ಮಿಚ್ಛೆ; ಆಗೋದು ಹೋಗೋದು ದೇವರಿಚ್ಛೆ. ಇಷ್ಟು ತಿಳಿಯಲಿಲ್ಲ, ಆತನಿಗೆ. ಎತ್ತಿನ ಆಯುಸ್ಸು ಆಖೈರಾದರೆ, ನಾನು ನಿಲ್ಲು ಅಂದರೆ ಅದು ನಿಲ್ಲುತ್ತದೆಯೆ? ನನಗೆ ತುಂಬ ರೇಗಿತು. ಆದರೂ ಊದೋ ಶಂಖ ಊದೇ ಬಿಡೋಣ, ಆಗೋ ಪೂಜೆ ಆಗೇ ಹೋಗಲಿ, ಅಂತ ಹಿಡಿದ ಕೆಲಸ ಪೂರೈಸಿ, ಅರೇಳಾಣೆ ಫಸಲು ಗಿಟ್ಟಿಸಿದೆ. ಆದಷ್ಟಾಯಿತು, ಮಾದಪ್ಪನ ಜಾತ್ರೆ. ಹೊಟ್ಟೆಯೊಳಗಿನ ಸಿಟ್ಟು ರಟ್ಟೆಗೆ ತಾಕದೆ, ಸತ್ಯವಾಗಿಯೇ ದುಡಿದೆ.

ನನ್ನಂಥ ನಂಬಿಕಸ್ಥ ನ್ಯಾಯವಾಗಿ ದುಡಿಯುವವನು ಸಿಕ್ಕಾಗಲೂ ಹೋಟ್ಲೆಯ್ಯನ ಅದೃಷ್ಟ ಹೀಗಾಯಿತಲ್ಲಾ, ಇನ್ನು ಕಚ್ಚಾ ಇಸಮುಗಳು ಸೇರಿಕೊಂಡುಬಿಟ್ಟರೆ ಗತಿ ಏನು ಅಂದುಕೊಂಡೆ. ಆದರೂ, ನನ್ನದೇ ತಪ್ಪು ಅಂತ ಸಾಧಿಸಿದ ಮೇಲೆ ಆ ಅಯ್ಯ ನನ್ನನ್ನ ಬಹಳ ದಿವಸ ಉಳಿಸಾರ, ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ, ಅಂತ ಒಂದು ದಿನ ರಾತ್ರೆ ಮಲಗಿ ಸಿದ್ಧ ಮಾಡಿದೆ. ಅವತ್ತೇ ಆಗಬೇಕೆ, ಆಗಬಾರದ್ದು?

ಬೆಂಕಿ; ಮನೆಗೆ ಬೆಂಕಿ. ಪಟ ಪಟ ಅಂತ ಸೀಮೆ ಹೆಂಚುಗಳೆಲ್ಲ ಸಿಡಿದುವು. ಅನ್ಯಾಯದ ಹಣವೆಲ್ಲ ಆಹುತಿ. ಹೋ ಅಂತ ಕೂಗಿ

ಕೊಂಡೆ ನಾನು. ಆದರೆ ಹರದಾರಿ ಸುತ್ತ ನರಪ್ರಾಣಿ ಕೂಡ ಇಲ್ಲ. ಯಾರು ಬರುತ್ತಾರೆ ಓಡಿ? ಹಗ್ಗ ಹುಡುಕಿ ಕೊಡ ಹಿಡಿದು ಬಾವಿಯಿಂದ ನೀರು ಸೇದುವುದರೊಳಗೆ, ಬೂದಿ. ಜಾತ್ರೆ ಕಳೆದ ಮೇಲೆ ಸೇರಿತು ಪರಿಷೆ; ದೂರದಿಂದ ಉರಿ ಎದ್ದದ್ದು ಕಂಡ ಹಳ್ಳಿಯವರೆಲ್ಲ ಓಡೋಡಿ ಬಂದರು.

ಆವಯ್ಯನದೇ ಮಿಷ್ಟೇಕು. ಸಂಜೆ ಬಂದಿದ್ದವನು ಕಾಫಿ ಕಾಯಿಸಿ ಕುಡಿದು ಮುಗಿಸಿದ ಮೇಲೆ ಒಲೆಯಲ್ಲಿ ಬೆಂಕಿ ಆರಿಸಿ, ಕಟ್ಟಿಗೇನ ಈಚೆಗೆ ಬಿಸಾಕಬೇಡವೆ? ಇಲ್ಲ. ಉರಿಯುವ ಬೆಂಕಿಗೆ ಉರಿಯಲಿ ಅಂತ ತಂಟೆ ಮಾಡದೆ ಹಾಗೆಯೇ ಬಿಟ್ಟು ಹೋದ. ಒಲೆ ಮಗ್ಗುಲಲ್ಲೇ ಕುರುಳು ಕಟ್ಟಿಗೆ ರಾಶಿ.

ಹೋಗು ಅನ್ನಲಾರದೆ ಹೊಗೆ ಇಟ್ಟ, ನನಗೆ, ದೇವರು. ಆವಯ್ಯ ನಿಗೆ ಮೊದಲೇ ಹುಚ್ಚು ನನ್ನ ಕಂಡರೆ; ಬೆಂಕಿ ಹೊತ್ತಿಕೊಂಡಿದ್ದು, ಅವನೆದುರು ಧೂಪ ಹಿಡಿದಹಾಗಾಯಿತು. ಬಯಲಾಟದಲ್ಲಿ ಮಯೂರ ಧ್ವಜ ಕುಣಿದಾಡುವ ಹಾಗೆ ಕುಣಿದ ಕೋಪದಲ್ಲಿ ನನ್ನೆದುರು. ಯಾರು ನ್ಯಾಯ ಹೇಳಿದರೂ ಬಿಡ. ಕೊನೆಗೆ ನಾನೇ ಸಮಾಧಾನ ಹೇಳಿದೆ, ಹೊರಟೇ ಬಿಡ್ತೇನೆ ಇಲ್ಲಿಂದ, ಯಾಕ್ರಿ ಸುಮ್ಮನೆ ಬೊಗಳುತ್ತೀರಾ, ಅಂತ.

ಅಲ್ಲಿಂದ ನಾನು ರಾಮನಾಥಪುರಕ್ಕೆ ಹೋದೆ. ಕಾವೇರಿ ಹೊಳೆ ಮೇಲೆ ಹಾದು ಹೋಗುವುದಕ್ಕೆ ಸೇತುವೆ ಕಟ್ಟುತ್ತಿದ್ದರು. ಕಪನೀಪತಯ್ಯ ನವರು ಇಂಜಿನೀರು ಅಲ್ಲಿ. ತುಂಬ ಒಳ್ಳೆಯವರು, ಕಲ್ಲು ಹೊರುವ ಕೆಲಸ ಕೊಡುತ್ತಾರೆ, ಹೊಟ್ಟೆ ಮೇಲೆ ಬಡಿಯುವುದಿಲ್ಲ, ಅಂದರು. ನನಗೇನು? ಆಕಾಶವೇ ಹೊದಿಕೆ, ನೆಲವೇ ಮಂದಲಗೆ. ಹಿಟ್ಟು ಸಿಕ್ಕುವ ತಾವೇ ಹುಟ್ಟೂರು. ಒಳ್ಳೆ ಸಂಕ್ರಾಂತಿ ಹಬ್ಬದ ದಿನ, ಚಳಿ ಚಳಿ ಗಾಳಿ, ಬೆಳ್ಳಂ ಬೆಳಗೆ ಕೋಳಿ ಕೂಗುತ್ತಲೂ ಸೇರಿದೆ ಜಾಗಕ್ಕೆ. ಆದರೆ, ನಾನು ಕಾವೇರಿಗೆ ಹೋದದ್ದು, ಪಾಪಿ ಸಮುದ್ರಕ್ಕೆ ಹೋದ ಹಾಗೆ ಆಯಿತು. ಊರೆಲ್ಲ

ಷೆಡ್ಡಿನಲ್ಲಿತ್ತು. ಇಲಿಕಾಟ, ಪ್ಲೇಗುಮಾರಿ. ಜನ ಸಾಯ್ತಾನೇ ಇದ್ದರು. ಕೆಲಸ ನಡೀತಾನೇ ಇತ್ತು. ಯಮರಾಯನನ್ನ ಮೂದಲಿಸುತ್ತ ಸೂಜಿ ಚುಚ್ಚಿಸಿಕೊಂಡು ಇದ್ದೇ ಬಿಡೋಣವೆ, ಇಲಿಗೆ ಹೆದರಿಕೊಂಡು ಓಡಿ ಹೋಗೋಣವೆ, ಅಂತ ನಾನು ಇಕ್ಕುಳದಲ್ಲಿ ಸಿಕ್ಕಿಕೊಂಡೆ.

ಆಮೇಲೆ ಇತ್ಯರ್ಥಮಾಡೋಣ ಅಂತ ಹೊಳೆಗೆ ಹೋಗಿ ಸ್ನಾನ ಮಾಡಿದೆ. ಬಿಸಿಲಿಗೆ ಇನ್ನೂ ಕಾವು ಹತ್ತಿರಲಿಲ್ಲ; ಇಳಿಯ ಮುಳುಗೋಣ ಅಂದರೆ, ಚಳಿ. ಭಾರಿ ಭಾರಿ ಮೀನು ಬೇರೆ, ಮೈಗೆಲ್ಲ ಚಿನ್ನದ ಚುಕ್ಕಿ ನೀಲೀ ಮೆರುಗು, ತಿಮಿಂಗಲ ಅಂತ ರಾಮಾಯಣದಲ್ಲಿ ಬರುತ್ತದಲ್ಲಾ, ಅಂಥವು .... ಅಲ್ಲೇ ಬೋರ್ಡು ನಟ್ಟಿದಾರೆ, ಅವಕ್ಕೆ ಗಾಳ ಹಾಕಬಾರದು, ಕಲ್ಲು ಹೊಡೆದರೆ ಜೈಲು, ಅಂತ. ಕೈಕಾಲು ತೊಳೆದುಕೊಳ್ಳುವುದೇ ತಾಪತ್ರಯ ಆಗಿಹೋಯ್ತು.

ದೇವಸ್ಥಾನಕ್ಕೆ ಹೋದೆ. ಅತ್ತಲಾಗೂ ಅರ್ಧ ಮನಸ್ಸು, ಇತ್ತಲಾಗೂ ಅರ್ಧ, ಅಡ್ಡಗೋಡೆ ಮೇಲೆ ಅಡ್ಡಾಡುತ್ತಿದ್ದ ಮನಸ್ಸನ್ನ ಎತ್ತಲಾಗೆ ವಾಲಿಸುವುದು ಅಂತ, ದೇವರನ್ನೇ ಕೇಳೋಣ ಅಂತ, ಕೈಯಲ್ಲೊಂದು ಬಿಲ್ಪತ್ರೆ ಹಿಡಿದು, ಗಂಟೆ ಬಡಿದು, ನೆಲಕ್ಕೆ ಹಾಕಿದೆ. ಅಂಗಾತ ಬಿದ್ದರೆ, ಇದ್ದೇ ಬಿಡು ಅನ್ನೋದು ಶಿವನ ಆಜ್ಞೆ, ಮಗುಚಿ ಬಿದ್ದರೆ ಹೊರಟು ಹೋಗು ಮತ್ತೆ ಬಾ ಅನ್ನೋದು ಅವನ ಅಪ್ಪಣೆ, ಅಂತ ಎದೇನ ಗಟ್ಟಿಮಾಡಿದ್ದೆ.

ಮಗುಚಿಬಿತ್ತು, ಪತ್ರೆ. ಸಂಜೆ ಹೊತ್ತಿಗೆ ಚುಂಚನಕಟ್ಟೆ ಸೇರಿದೆ. ಅಲ್ಲೊಂದು ನಾಟಕದ ಕಂಪನಿ ಅಂದರೆ, ಆ ಕಂಪನಿ ಕಥೆಯೇ ಒಂದು ನಾಟಕ. ಪರದೆಯೆಲ್ಲ ಚಿಂದಿ; ಪ್ರೇತಗಳ ಹಾಗಿನ ಪಾರ್ಟ್‌ದಾರರು. ಒಂದೇ ಒಂದು ಹಾರ್ಮೋನಿಯಂ, ಬುಸ್ ಬುಸ್ ಅಂತ ಸದ್ದುಮಾಡುವುದು, ಒತ್ತಿದರೆ ಎಷ್ಟು ಕೂಡಿಸಿದರೂ ದನಿ ಕೊಡೊಲ್ಲದು. ಬರೇ ಗಂಡು ಗಂಡಸರೇ ರಾಣಿ ಪಾರ್ಟಿಗೆ, ಸಖಿ ಪಾರ್ಟಿಗೆ. ಜಾತ್ರೆಗೆ ಬಂದವರು

ಸಾಲ ತೀರಿಸಲಾರದೆ, ಅಷ್ಟೇ ಇನ್ನೂ ಕ್ಯಾಂಪು ಹಾಕಿಕೊಂಡು ಗೋಳಾಡು ತ್ತಿದ್ದರು. ರಾತ್ರಿ ಎಲ್ಲ ರಾಗ ಎಳೆದರೆ ಮೂವತ್ತು ನಲವತ್ತು ರೂಪಾಯಿ ವಸೂಲಾಗುವುದು. ಹನುಮಂತದೇವರು ಹಗ್ಗ ತಿನ್ನುವ ಕಡೆ ಅರ್ಚಕ ಶಾವಿಗೆ ಬಯಸಿದ ಅಂತ, ನಾನೂ ಅಲ್ಲಿ ಸೇರಿಕೊಂಡೆ. ಮೇಲೆ ಬಿದ್ದ ಫರಕಿಗೆ ಹಾಗದ ಕಾಸು. ಊಟಾನೂ ಹಾಕಿ, ದಿನಕ್ಕೆಂಟಾಣೆ ಅಂದರು. ನಾಟಕ ಬಿಟ್ಟೆ.

ನನ್ನ ಕೆಲಸ ಏನು ಅಂತೀರಾ? ಥೇಟರ ಸುತ್ತ ಹುಲ್ಲು ಕೆತ್ತುವುದು, ಕುರ್ಚಿ ಒರಸುವುದು, ಬೆಂಚು ಜೋಡಿಸುವುದು, ಕಾಫಿ ತಂದು ಕೊಡುವುದು, ಬೀಡಿ ತರುವುದು, ಬಟ್ಟೆ ಒಗೆಯುವುದು, ಸಮಯ ಬಿದ್ದರೆ ಪರದೆ ಎಳೆಯುವುದು. ತುರುಬು ತೂಗಾಡಿಸುತ್ತ ಮೀಸೆ ಬೋಳಿಸಿ ಸೆರಗು ಕಚ್ಚಿ ನೆಲವನ್ನ ಹೆಬ್ಬೆಟ್ಟಿಂದ ಕೆರೆಯುವುದಕ್ಕೆ ಕಲಿತಿದ್ದರೆ, ನನಗೂ ಹೆಣ್ಣು ವೇಷ ಹಾಕಿರುವರು, ಅವರು. ಅಷ್ಟು ಪಾಪರಾಗಿದ್ದರು, ಅವರು; ಆಗಲೇ ಬದುಕಿದರೆ ಬಡೇ ಸಾಬರು, ಕೆಟ್ಟರೆ ಫಕೀರ್ ಸಾಬರು ಅಂತ ಅವರು ಯಾತಕ್ಕೂ ಜಗ್ಗಲಿಲ್ಲ. ನಾನು ಸೇರಿದ ಹತ್ತೇ ದಿನಕ್ಕೆ, ಅವರು ಸಾಲಕ್ಕೆ ಜಾಮೀನು ಕೊಟ್ಟು, ಅಲ್ಲಿಂದ ಗುಡಾರ ಎತ್ತಿದರು ಮೈಸೂರಿಗೆ. ಅವರ ಬಾಲ ಹಿಡಿದು ನಾನೂ ಅತ್ತಲಾಗೆ ಹೊರಟೆ.

# ಶೀಲ್ಕ್ ! ಶೀಲ್ಕ್

ಮೈಸೂರು, ಬೊಂಬಾಯಿ ಬೆಂಗಳೂರಿನಷ್ಟು ರಾಕ್ಷಸ ಊರಲ್ಲ; ಅವು ಮುಂಡೆ; ಅದು ಮೊಣಕಾಲು. ಆದರೆ, ನನ್ನಂಥವನಿಗೆ ಎಲ್ಲ ಊರೂ ಒಂದೆ. ಎಲ್ಲಿದ್ದರೇನು ಬಡವರು? ನಮ್ಮ ಹಣೆಬರಹ ಎಲ್ಲೂ ಅಳಿಸಿ ಹೋಗುವುದಿಲ್ಲ. ತುಟಿ ತುಪ್ಪ ಕಾಣದು, ನಾಲಗೆ ಬೆಲ್ಲ ಕಾಣದು, ಸೊಂಟ ರೇಷ್ಮೆ ಕಾಣದು, ಮಳೆಯಲ್ಲಿ ನನೆದದ್ದು ಬಿಸಿಲಲ್ಲೇ ಒಣಗಬೇಕು, ಬೊಂಬಾಯಿಯಾದರೂ ಅಷ್ಟೆ, ಮೈಸೂರಾದರೂ ಅಷ್ಟೆ. ನನ್ನಂಥವನಿಗೆ ಸಿಕ್ಕುವುದು ಮೋಟು ಗಲ್ಲಿ, ಮೊಟಕು ಮನೆ, ಕತ್ತಲೆ ಕೋಣೆ, ತಗಣೆ ಚಾಪೆ, ಸಪ್ಪೆ ಗಂಜಿ, ಕರೀ ಕಾಫಿ, ನಾಯಿ ಬಿಸ್ಕತ್ತು. ನಾಯಿ ಸಮುದ್ರಕ್ಕೆ ಹೋದರೂ ಅದಕ್ಕೆ ನೆಕ್ಕು ನೀರೇ.

ನನ್ನ ನಾಟಕದ ಕಂಪನಿ ಮೈಸೂರಲ್ಲಿ ಉಳಿದೀತೆ? ವರದಾಚಾರ್ರ ಪಾರ್ಟು ನೋಡಿದ ಮಂದಿ, ಚಿಕ್ಕರಾಮರಾಯರ ಹಾಡು ಕೇಳಿದ ಮಂದಿ, ನಮ್ಮವರ ಪೀಪಿ ಸಹಿಸುತ್ತಾರೆಯೆ? ಅಲ್ಲಿ ಅವರ ನಾಲ ಸಾವಿರಕ್ಕೇರಿತು; ರಾತ್ರೋ ರಾತ್ರಿ, ನನಗೂ ಹೇಳದೆ ಅವರು ಒಬ್ಬೊಬ್ಬರು ಒಂದೊಂದು ದಾರಿ ಹಿಡಿದರು. ಈ ಬಯಸ್ಕೋಪಿನವರು ನಾಲ್ಕಾಣೆ ಎರಡಾಣೆಗೆ ರಾಮ ಸೀತೆ ತೋರಿಸುವಾಗ ನಾಟಕ ನೋಡುತ್ತ ನಿದ್ದೆ ಕೆಡುವುದಕ್ಕೆ ಯಾರು ಬರುತ್ತಾರೆ, ಪಾಸಿನವರಲ್ಲದೆ?

ಅಂತೂ, ನಾನು ದಿಕ್ಕಿಲ್ಲದ ತಬ್ಬಲಿಯಾದೆ, ಮತ್ತೆ. ಹುಂ, ನೋಡೇ ಬಿಡುವ, ದೇವರೇನೇನು ಮಾಡುತ್ತಾನೋ ಅಂತ, ತಲೆ ಮೇಲೆ ಆಕಾಶ ಗಂಗೆ ಬಿದ್ದರೂ ತಲೆ ಎತ್ತಿಕೊಂಡು ನಿಂತೇ ಇದ್ದನಲ್ಲಾ ಶಿವ, ಹಾಗೆಯೇ ನಾನೂ ಎದೆಗೆಡದೆ ನಿಂತೆ ಮೈಸೂರಲ್ಲಿ. ಒರಳೊಳಗೆ ತಲೆಕೊಟ್ಟು, ಒನಕೆ ಪೆಟ್ಟು ಒಲ್ಲೆ ಅಂದರೆ ಆಗ್ತದೆಯೆ?

ನಡು ಊರಿನಲ್ಲಿ ಕೈಬಿಟ್ಟು ಕಂಪನಿಯವರು ದೌಡಾಯಿಸಿದರು.... ಅವರು ಹೊರಟ ಆರು ತಿಂಗಳ ಮೇಲೂ ನಾನು ಅಲ್ಲಿ ಇಲ್ಲಿ ತಿರುಗಾಡುವಾಗ ಗ್ಯಾಸ್ ಲೈಟಿನವರು, ಚೌರದಂಗಡಿಯವರು, ಬೀಡಿ ಅಂಗಡಿಯವರು ಎಲ್ಲರೂ ನನಗೆ ಮುತ್ತಿಕೊಳ್ಳುವರು, "ಚೆಲುವೇಗೌಡರೆ! ನಿಮ್ಮ ಕಂಪನಿಯವರ ಅಡ್ರೆಸ್ ಗೊತ್ತೇನೂ? ಈಗ ಎಲ್ಲಿ ಕ್ಯಾಂಪ್ ಹಾಕಿದಾರೆ? ಹಾಸನದ ದನದ ಜಾತ್ರೆಗೆ ಹೋಗಿಲ್ಲವೆ ಅವರು ?", ಅಂತ. ಗೊತ್ತಿದ್ದರೆ, ನಾನು ಸುಮ್ಮನಿರುತ್ತಿದ್ದೆನೆ? ನನಗೂ ಬಾಕಿ, ಎರಡು ತಿಂಗಳ ಕೂಲಿ, ಎನ್ನುವೆ.

ಮೈಸೂರು 'ಇಟ್ಟಿಗೆಗೂಡಿ' ನಲ್ಲಿ ಒಬ್ಬ ಸಾಬಿ ಸಿಕ್ಕಿದ, ನನಗೆ. ಸಾಚಾ ಆಸಾಮಿ. ಹಿಂದಕ್ಕೆ ಅವನು ಮಂಡ್ಯದ ಹತ್ತಿರ ಒಕ್ಕಲುತನಕ್ಕೆ ಸೇರಿಕೊಂಡಿದ್ದು, ಆ ತಪ್ಪಿಗಾಗಿ ಮೈಸೂರು ಆಸ್ಪತ್ರೆ ಸೇರಿದ್ದ, ಗೆಡ್ಡೆ ಬೆಳೆಸಿಕೊಂಡು. ಆಗ, ಅಲ್ಲಿ ನನಗೆ ಗುರುತು ಪರಿಚಯ. ಮಂಡ್ಯದಲ್ಲೂ ಆಸ್ಪತ್ರೆಯಲ್ಲಿ ನನಗೆ ಸಿಕ್ಕುತ್ತಿದ್ದ, ಆರಕ್ಕೆ, ಮೂರಕ್ಕೆ. ಅವನ ಮೂಲಕ, ನಾನೊಂದು ನೌಕರಿ ಹಿಡಿದೆ, ದಿನಕ್ಕೆಂಟಾಣೆ, ಯಥಾ ಪ್ರಕಾರ, ನನ್ನ ಚೊಂಬು ಹಿಡಿಸುವಷ್ಟು. ಒಪ್ಪೊತ್ತೂಟ ಸಾಹುಕಾರನ ಖರ್ಚು. ನಾಷ್ಟಾನೂ ಕೊಡುವನು, ಭಾನುವಾರ ಬಿಟ್ಟು, ಉಳಿದ ದಿನ. ಭಾನುವಾರ ಊಟಾನೂ ಇಲ್ಲ, ಕೂಲೀನೂ ಇಲ್ಲ, ಕೆಲಸಾನೂ ಇಲ್ಲ. ಎಲ್ಲಕ್ಕೂ ಉಪವಾಸ.

ಆ ಬೆಂಕಿಪೊಟ್ಟಣದ ಕಾರ್ಖಾನೆಯಲ್ಲಿದ್ದನಲ್ಲಾ, ಜಪಾನಿ, ಅವನ ಪಕ್ಕದ ಊರಂತೆ, ನನ್ನ ಸಾಹುಕಾರನದು, ಚೀನೀ ಅಂತಾರೆ, ಅವನನ್ನ. ಇಬ್ಬರದೂ ಒಂದೇ ತರಹ ಕಾಮಾಲೆ; ಆದರೆ, ಇವನು ಕೊಂಚ ಧಡೂತಿ; ತೋಳಿನ್ನೂ ಅಗಲ; ಕಣ್ಣು, ಮೂತಿ, ಎಲ್ಲ ಥೇಟ್ ಅವನದೇ. ಒಂದೇ ಕಾಳಿನ ಎರಡು ಬೇಳೆ. ಮೊದ ಮೊದಲು, ಅವನೇ ಅಂತ ಇದ್ದೆ, ಇವನನ್ನ. ನಮಗೆ ಗೊತ್ತಾಗುವುದಿಲ್ಲ, ವ್ಯತ್ಯಾಸ. ಬೇಸ್ತು ಬೀಳುತ್ತೇವೆ.

ನಾವು, ರೈತರು, ಕುರಿಗೂ ಕುರಿಗೂ ಗುರ್ತು ಹಿಡಿಯುತ್ತೇವೆ, ಎಮ್ಮೆಗೂ ಎಮ್ಮೆಗೂ ವ್ಯತ್ಯಾಸ ಪತ್ತೆ ಹಚ್ಚುತ್ತೇವೆ. ಅವುಗಳ ಜೀವಾಳ ಜಾತಿ ಜಾಡು ಸುಳಿ ತರಹೇವಾರಿ ಇರುತ್ತವೆ ಅಂತ ನಮಗೆ ಗೊತ್ತು. ಆದರೆ, ಬಿಳಿ ಜನ ಹಳದಿ ಜನ ಇವರ ತಾರತಮ್ಯ ನಿಮ್ಮಂಥ ಕಲಿತ ಮಂದಿಗೂ ಕಷ್ಟ. ಧ್ವನಿಯಿಂದ ಗೊತ್ತು ಹಚ್ಚಬಹುದೋ, ಏನೋ?

ಅವನಿಗೂ ನಮ್ಮನ್ನ ಕಂಡರೆ, ಎಲಾ! ಈ ಕರೀ ಮಂದಿ ಒಬ್ಬನ ಅಚ್ಚು ಇನ್ನೊಬ್ಬ, ಇವರಿವರ ಪೈಕಿ ಇವನೇ ಇವ ಅವನೇ ಅವ ಅಂತ ಹೇಗೆ ಪತ್ತೆ ಹಚ್ಚುತ್ತಾರೆ ಅಂತ ಬೆರಗು ಬಡಿಯುಬಹುದು.

ಅವನು ಒಂದು ಹೋಟ್ಲು ಮಹಡಿ ಮೇಲೆ ಕೋಣೆ ಹಿಡಿದಿದ್ದ. ಶಿಲ್ಕಿನ್ ಬಟ್ಟೆ, ಜಾಕೀಟ್ ಬಟ್ಟೆ ಮಾರೋದೇ ಅವನ ಕಸಬು. ಕನ್ನಡದಲ್ಲಿ ಕೂಗುವುದಕ್ಕೆ ಅವನ ನಾಲಗೆ ಬಗ್ಗದು; ದನಿಯೂ ಕೀಚಲು. ಜಾಕೀಟ್ ಬಟ್ಟೆ ಅಂತ ಕೂಗೋದೊಂದೇ. ಅವನ ಹತ್ತಿರ ಅದು ಇರಲೇ ಇಲ್ಲ. ಷರ್ಟಿನದು ಕೋಟಿನದು, ಒರಟು, ನೈಸು, ಹಳದಿ ಮಿಶ್ರ ಬಿಳಿಯದು ಎಲ್ಲ, ಎರಡೇ ಎರಡು ನಮೂನೆ ಇತ್ತು, ಅವನ ಗಂಟಿನಲ್ಲಿ.

ಆ ಮೂಟೆಯನ್ನ ನನ್ನ ತಲೆಯ ಮೇಲೆ ಹೇರಿಕೊಂಡು, ಅವನ ಹಿಂದೆ, ನೆರಳಿನ ಹಾಗೆ, ಬಸವನ ಹಿಂದೆ ಬಾಲ ಅಂತ, ನಾನು ಬೀದಿ ಬೀದಿ ತಿರುಗಬೇಕು, ಸಂದು ಗೊಂದು. ಅವನು ನಿಂತರೆ ನಾನೂ ನಿಲ್ಲಬೇಕು, ಕೂತರೆ ಕೂರಬೇಕು, "ಶಿಲ್ಕಿನ್ ಬಟ್ಟೆ, ಜಾಕೀಟ್ ಬಟ್ಟೆ" ಅಂತ ಹತ್ತು ಹೆಜ್ಜೆಗೊಂದು ಕೂಗಬೇಕು. ನಡುನಡುವೆ, ಅವನೂ 'ಶೀಲ್ಕ್! ಶೀಲ್ಕ್!' ಅಂತ ಕಿರಲುವನು. ತಲೆಯ ಮೇಲಿಂದ ಇಳಿಸುವುದು, ಬಿಚ್ಚೋದು, ಹರವೋದು, ಜೋಡಿಸುವುದು, ಕಟ್ಟುವುದು, ಎತ್ತಿ ಮಡಗುವುದು, ಎಲ್ಲ ಅವನದೇ ಜವಾಬ್ದಾರಿ.

ಬೆಟ್ಟ ಹೋತ್ತೀಯಾ ಅಂದ್ರೆ, ಹೂಂ, ಎತ್ತಿ ಇರಿಸು ತಲೆಯ ಮೇಲೆ, ಅಂದನಲ್ಲಾ ಒಬ್ಬ, ಹಾಗೆಯೇ ನಾನು, ಅವನು ಹೇರಿಸಿದ ಗಂಟನ್ನ, ಗೊಣಗದೆ ಕೆಡಹದೆ, ಮೂಕ ಪ್ರಾಣಿಯ ಹಾಗೆ, ಹೊತ್ತೇ ತೀರಬೇಕು.

ಅವನೂನೂ ಕಡ್ಡಿ ಪೈಲ್ವಾನೇನೂ ಅಲ್ಲ; ಕಟ್ಟುಮಸ್ತಾದ ಗೂಳಿ; ಒಂದೊಂದು ರಟ್ಟೇನೂ ನನ್ನ ತೊಡೆ ಗಾತ್ರ. ಇಷ್ಟಕ್ಕೂ ಅವನು ತಿನ್ನೋದು ಬರೇ ಅಕ್ಕಿ, ಸಿಕ್ಕಿದಾಗ ಮೀನು, ಮೊಟ್ಟೆ. ಹಾಲಿಲ್ಲ, ಮೊಸರಿಲ್ಲ, ಸೊಪ್ಪಿಲ್ಲ, ತುಪ್ಪವಿಲ್ಲ.

ಈ ಭಾಗ್ಯಕ್ಕೆ, ಅವನು ಸೂರ್ಯ ಮೂಡುತ್ತಾನಲ್ಲಾ, ಅದರ ಆಚೆಯಿಂದ, ಸಮುದ್ರ ದಾಟಿ ಬಂದಿದಾನೆ, ಮರಿ ಹನುಮಂತ, ನಮ್ಮ ಮೈಸೂರು ಎಲ್ಲಿದೆ ಅಂತ ಹುಡುಕಿಕೊಂಡು. ಋಣಾನುಬಂಧ, ಸ್ವಾಮಿ! ಹಣೆಯಲ್ಲಿ ಬರೆದದ್ದು, ಒರೆಸಿದರೆ ಹೋಗುತ್ತದೆಯೆ ?

ಆ ಚೀನೀಯುವನ ವ್ಯಾಪಾರದ ಗುಟ್ಟು ಬಲು ತಮಾಷೆ. ಅವನು ಹೊರಡುವುದು ಮಟಮಟ ಮಧ್ಯಾಹ್ನದಲ್ಲಿ, ಮನೆ ಗಂಡಸರೆಲ್ಲ ಆಫೀಸಿಗೆ ಹೋಗಿ, ಕುರ್ಚಿ ಬೆನ್ನಿಗೆ ಕೋಟು ತಗುಲಿಸಿ, ಜೋಂಪು ಹಿಡಿದು, ಮೇಜಿನ ಮೇಲೆ ಕಾಲು ನೀಡುವ ಹೊತ್ತು. ಮನೇಲಿ ಅಮ್ಮಾವರು ಮಾತ್ರ ಇರುತ್ತಾರೆ. ತಿಜೋರಿ ಕೀಲಿ ಕೈ ಅವರ ಹತ್ತಿರ ತಾನೆ! ಹುಡುಗರು ಹುಡುಗಿಯರು ಇಸ್ಕೂಲುಗಳಲ್ಲಿ. ಹೆಂಗಸರು ಎಲೆ ಅಡಿಕೆ ಮೆದ್ದು ಉಸ್ಸಪ್ಪ ಅಂತ ಆಗತಾನೆ ನೆಲಕ್ಕೊರಗಿರುತ್ತಾರೆ. ಆಗ, ಅವನು ಶೀಲ್ಕ್ ಶೀಲ್ಕ್ ಅಂತ ಕೂಗುತ್ತಾನೆ, ಬಾಗಿಲಲ್ಲಿ; ನನ್ನ ಕೈಯಿಂದಲೂ ಕೂಗಿಸುತ್ತಾನೆ. ಕೊಂಡುಕೊಳ್ಳದೆ ಇದ್ದರೂ ಚಿಂತೆಯಿಲ್ಲ, ನೋಡಿ ನಾಕು, ಅಗ್ಗದ ಮಾಲು, ನೈಸಾದ ಬಟ್ಟೆ, ಹತ್ತು ವರ್ಷ ಗ್ಯಾರಂಟಿ, ಅಂತ ಒದರುತ್ತಾನೆ, ಗಂಟಳಿಸಿ ಹರಡೇ ಬಿಡುತ್ತಾನೆ, ಎದುರಿಗೆ. ಬೋಣಿ ಮಾಡಿ, ನಾನು ನಾಳೆ ಊರಿಗೆ ಹೋಗಬೇಕು, ಇಂಥ ಬಟ್ಟೆ ಇನ್ನು ದೊರೆಯುವುದಿಲ್ಲ,

ಬಂದಷ್ಟು ಬರಲಿ ಅಂತ ಅರ್ಧಕ್ಕಿಂತ ಕಡಮೆ ಬೆಲೆಗೆ ಮಾರುತ್ತಿದೇನೆ, ಅಂತ ಒಂದೇ ಸಮ ಒದರುತ್ತಾನೆ.

ನಾನು ಮಾತ್ರ ಏನೂ ಮಾತಾಡಕೂಡದಂತೆ, ಅವರೆದುರು. ಗುಡಿಯೊಳಗೆ ದೇವರು ಒಂದು ಕೈ ಸೊಂಟವಲ್ಲಿ, ಇನ್ನೊಂದು ಇಳಿಮುಖ, ಪೂಜಾರಿ ನೀರು ಹುಯ್ಯಲಿ, ಹೂವು ಸುರಿಯಲಿ, ಜಿರಲೆ ಹತ್ತಲಿ ಗಂಧ ಬಳಿಯಲಿ, ಅವನು ಸುಳ್ಳು ಹೇಳಲಿ ಕಳ್ಳತನ ಮಾಡಲಿ, ಕರ್ಪೂರ ಹಚ್ಚಿ ಮೂತಿಗೆ ಹಿಡಿಯಲಿ, ಊದುಕಡ್ಡಿ ಹಚ್ಚಿ ಮೂಗಿಗೆ ಸೋಕಿಸಲಿ, ಕಮಕ್ ಕಿಮಕ್ ಎನ್ನದೆ ನಿಂತಿರೋದಿಲ್ಲವೆ, ಹಾಗೆಯೇ ನಿಂತಿರಬೇಕಂತೆ ನಾನೂನು. ಹೂಂ ಅಂತ ನಾನೂ ನಿಂತಿರುವೆ. ಅವನೂ ನನ್ನಂತೆಯೇ ಬದುಕುವುದಕ್ಕೆ ಬಂದವನು.

ಅದೂ ಅಲ್ಲದೆ, ಸುಳ್ಳು ಸಟೆ ಇಲ್ಲದೆ ಇದ್ದರೆ, ವ್ಯಾಪಾರ ಹೇಗೆ ನಡೆಯುತ್ತದೆ? ಒಂದೊಂದು ಕಸಬಿಗೆ ಒಂದೊಂದು ಧರ್ಮ. ಹೊಲಸನ್ನ ಹೊಗಳಬೇಕು, ಎಂಟಾಣೆ ಪದಾರ್ಥಕ್ಕೆ ಮೂರು ರೂಪಾಯಿ ಬೆಲೆ ಏರಿಸಿ, ಎರಡೂ ಕಾಲಿಗೆ ಇಳಿಸಬೇಕು, ನಾಟಕ ಆಡಬೇಕು, ಹೊಟ್ಟೆ ತುಂಬಿಸಬೇಕು. ಬೆಲೆ ಇಳಿಯುತ್ತಿದ್ದರೂ, ಏರುತ್ತದೆ ಅಂತ ಹೆದರಿಸಬೇಕು. ಬೋಳಿಸುವುದು ಗಿರಾಕಿ ತಲೆಯನ್ನ, ಆದರೂ ಗಿರಾಕಿಗೋಸ್ಕರ ತಮ್ಮ ತಲೆ ಬೋಳಾಗುತ್ತಿದೆ ಅಂತ ಗೋಳಾಡಬೇಕು.

ಒಂದು ದಿವಸ ಏನಾಗಿದೆ? ಆಗ, ಮೈಸೂರಲ್ಲಿ ನವರಾತ್ರಿ ಹಬ್ಬಕ್ಕೆ ಮುಂಚಿನ ಅಡಾ ಉಡಿ. ರಸ್ತೆಗಳಿಗೆಲ್ಲ ಮುಖಚೌರ ಮಾಡಿ, ಪಾರ್ಕ್‌ಗಳಿಗೆಲ್ಲ ಕ್ರಾಪ್ ಮೆಷೀನ್ ಹೊಡೆದು, ಬಿಳೀ ಮರಳು ಪೌಡರ್ ಹಚ್ಚಿ, ದೀಪದ ಕಂಬಗಳಿಗೆಲ್ಲ ಅಲೂಮಿನಿ ಬಣ್ಣ ಬಳಿದು, ಪಾರ್ಕಿನ ಗಿಡ ಗೆಂಟೇನೆಲ್ಲ ಗಿಡಗ ನವಿಲು ರೂಪಕ್ಕೆ ತಿರುಗಿಸೋ ಮೆಷೀನ್ ಕೊಡೆದು, ಬಾವುಟದ ತೋರಣ ಕಟ್ಟುವ ಕಂಬಗಳಿಗೂ ಬಾವುಟ ಸುತ್ತಿ, ಎಲೆಟ್ರಿ ದೀಪದ ಚಪ್ಪರವನ್ನ ದೊಡ್ಡಪೇಟೆ ಉದ್ದಕ್ಕೂ ಏರಿಸಿ, ಊರನ್ನೆಲ್ಲ ಶಿಂಗಾರ ಭಂಗಾರ

ಮಾಡೋ ಗಲಾಟೆ. ನಂಟರು ಇಷ್ಟರು ಪ್ರತಿ ರೈಲಿಗೂ ಇಳಿದು, ಪ್ರತಿ ಮನೆಗೂ ನುಗ್ಗೋ ಸಂಭ್ರಮ. ಬೀದಿ ತುಂಬ ಗುಳಿ ತೋಡುವವರು, ತಾಮ್ರದ ತಂತಿ ಎಳೆಯುವವರು, ಸಾನಿಟರಿಯವರು, ಗುಡಿಸುವವರು, ಸೈಕಲ್ ಮೇಸ್ತ್ರಿಗಳು, ಸಾಮಾನು ಲಾರಿಗಳು, ಮೋಟಾರ್ನಲ್ಲಿ ತಿರುಗಿ ಉಸ್ತುವಾರಿ ನೋಡೋ ಸಾಹೇಬರುಗಳು.

ಸಾಲದ್ದಕ್ಕೆ ಆನೆಗಳು ಬೇರೆ. ಗುಂಪು ದೊಂಬಿ ಸಂದಣಿ ನೋಡಿದಾಗ ಹೆದರದೆ ಮೆರವಣಿಗೆಯಲ್ಲಿ ಗಂಭೀರವಾಗಿ ನಡೆಯೋ ಅಭ್ಯಾಸ ಬರಲಿ ಅವಕ್ಕೆ, ಅಂತ, ಪಳಗಿಸಬೇಕಲ್ಲ. ಕಾರ್ ಭೂಂ ಅಂತದೆ; ಬಾಣ ಬಿರುಸು ಭಾರ್ ಭುಸ್ ಅಂತವೆ. ಅವೊಂದಕ್ಕೂ ಕಿವಿ ಕೊಡದೆ, ಬನ್ನಿ ಮಂಟಪದ ಕಡೆ ಹೋಗಬೇಕಲ್ಲ, ಆನೆಗಳು. ಅದಕ್ಕಾಗಿ, ನವರಾತ್ರಿ ಇನ್ನೇನು ಬಂತು ಅಂದಾಗ, ಮಾವುತರು ಅವುಗಳನ್ನ ಮೈಸೂರು ಬೀದಿಗಿಳಿಸುತ್ತಾರೆ. ಆನೆ ಬಂತು ಅಂದರೆ ಸರಿ, ಮನೆ ಹುಡುಗರೆಲ್ಲ ಹೋ ಅಂತ ಕೂಗುತ್ತ, ಹಿಂದೇನೇ ಓಡುವುವು.

ನಾನೂ ಚೀಸೀನೂ ಒಂದು ದಿವಸ ಜಗನ್ಮೋಹನ್ ಬಂಗ್ಲಿ ಎಡ ಮಗ್ಗುಲಾಗಿನ ಬೀದೀಲಿ ಶೀಲ್ಕ್ ಅಂತ ಹೋಗ್ತಾ ಇದೀವಿ; ಆನೆ ಸಾಲು. ಹೆಣ್ಣುಮಗು, ಒಂದು, ಆನೆ ಆನೆ, ಅಂತ ಕಣ್ಣರಳಿಸಿಕೊಂಡು .... ಎಷ್ಟು ಮುದ್ದಾಗಿತ್ತು ಅಂತೀರಾ, ಕೈತೊಳೆದು ಮುಟ್ಟಬೇಕು ಅಂತಾರೆ, ಸಾಲದು, ಮನತೊಳೆದು ನೆನೆಯಬೇಕು .... ಚೋಟುದ್ದದ ಜಡೆ ಗುಲಾಬಿನ ಹೂವಿನ ದಂಡೆ, ಹಸುರು ಲಂಗ ಹಳದಿ ಚುಕ್ಕಿ, ತುಂಬಿದ ಕೆನ್ನೆ, ದೃಷ್ಟಿ ಬೊಟ್ಟು, ಗಾಜಿನ ಬಳೆ, ಚಿನ್ನದ ಸರ, ಹವಳದ ತುಟಿ....ಓಡಿಬಂತು ಬೀದಿಗೆ. ಅದೇ ಗಳಿಗೇಲಿ, ಅತ್ತಲಾಗಿಂದ ಒಂದು ಮೋಟಾರ್ ಸೈಕಲ್ಲು ಕಟಪಟ ಕಟಪಟ ಗುಟುರು ಹಾಕಿಕೊಂಡು ಇತ್ತಕಡೆ ನುಗ್ಗಿತು. ಅದರ ಮೇಲೊಬ್ಬ ಕಿರುಬ. ಹಾಳು, ಮೋಟಾರ್ ಸೈಕಲ್ಲು ಯಾಕೆ ಅಷ್ಟು ಸಿಡೀತದೆ? ಆನೆಗಳು ಒಂದು ಮಗ್ಗುಲು ಇವನೊಂದು ಮಗ್ಗುಲು. ಕಟಪಟ ಅನ್ನೋ ಸದ್ದಿ ಗೇನೂ ಅವಾಂತರ ಆಗಲಿಲ್ಲ.

ಆದರೆ, ಹಾಳು ಆ ಎಣ್ಣೆಯಲ್ಲೇನಾದರೂ ನೀರು ಸೇರಿತ್ತೋ, ಚಕ್ರದೊಳಗಿನ ಗಾಳಿಗೆ ಏನಾದರೂ ಕಾವು ಏರಿತ್ತೋ, ಬ್ರೇಕ್ ಏನಾದರೂ ಗಬಕ್ ಅಂತ ಕಚ್ಚಿಕೊಂಡಿತೋ, ಮೇಲೆ ಕೂತಿದ್ದವನೇನಾದರೂ ಅಪ್ಪಿ ತಪ್ಪಿ ಅಪಾಯದ ಗುಂಡಿ ಅದುಮಿದನೋ, ಕಂಡವರಾರು ?

ಸಿಡಿಲು ಸೀಳಿದ ಹಾಗಿನ ಸದ್ದು! ಎಮ್ಡನ್ ಬಾಂಬ್ ಎರಡು ಹೋಳಾದ ಹಾಗೆ! ನೂರೆಂಟುಕದನೆ ಸದ್ದು ಒಟ್ಟಿಗೆ ಬೆರೆಸಿದ ಹಾಗೆ! ಆನೆಗಳೆಲ್ಲಿ ಕೇಳಿವೆ, ಅಂಥ ಗುಂಡ್ನ ? ಆರು ಆನೆಗಳೂ ಸರಕ್ಕನೆ ಹಿಂದು ಮುಂದಾಗಿ ನಿಂತು ಸೊಂಡಲೆತ್ತಿ ಗೀಳಿಟ್ಟು ಅಂಕುಶಕ್ಕೆ ಬಗ್ಗದೆ ತಂಟೆ ಮಾಡಿದುವು. ಅತ್ತ ಇತ್ತ ಬೀದಿಗೆ ಅಡ್ಡವಾಗಿ ಆಗಲೇ ಬಂದಿದ್ದ ಮೋಟಾರಿನವರಿಗೆಲ್ಲ ಗಾಬರಿ, ಸೈಕಲ್ಲಿನವರಿಗೆಲ್ಲ ಪ್ರಾಣದ ಮೇಲೆ ಸಿಗ. ಆ ಕಿರುಬಸಿಗಂತೂ, ಆಯ ತಪ್ಪಿತು. ಎಡಕ್ಕೆ ತಿರುಗಿಸುವುದಕ್ಕೆ ಏನೋ ಮಾಡಿದ, ಬಲಕ್ಕೆ ಜಾರಿದ. ಆಲ್ಲೊಬ್ಬ ಈ ತಮಾಷೇನೆಲ್ಲ ನೋಡುತ್ತ ತಲೆ ಮೇಲೆ ಮೂಟೆ ಹೊತ್ತು ನಿಂತಿದ್ದ. ಅವನು ಅದನ್ನೂ ಕೆಡವಿ ಕೊಂಡು ಬಿದ್ದ.

ಆ ಹೆಣ್ಣು ಮಗು ಮೂಟೆ ಕೆಳಗೆ ಸಿಕ್ಕಿಕೊಂಡಿತು. ಭಗವಂತ ಅದನ್ನು ಬಾಚಿಕೊಂಡೇ ಬಿಟ್ಟ. ಅಷ್ಟರೊಳಗೆ ಗದ್ದಲಾನೂ ಅಡಗಿತು, ಉಸಿರೂ ನಿಂತಿತು, ಹುಡುಗೀದು.

ಸರಿ, ಇನ್ನೇನು ? ಎಷ್ಟು ಹೊಡೆದುಕೊಂಡರೆ ತಾನೆ, ಹಾರಿದ ಜೀವ ಮತ್ತೆ ಗೂಡಿನೊಳಕ್ಕೆ ಸೇರಿಕೊಳ್ಳುತ್ತದೆಯೆ ? ಇಷ್ಟು ವರ್ಷ ಇಷ್ಟು ತಿಂಗಳು ಇಷ್ಟು ದಿನ ಗಂಟೆ ನಿಮಿಷ ನಿನಗೆ ಈ ದೇಹ ಎಂಬೋ ಜೈಲಲ್ಲಿ ಸಜ, ಕಠಿಣಸಜ, ಅಂತ ತೀರ್ಪಿತ್ತು ಆರ್ಡರ್ ಮಾಡಿರುತ್ತಾನೆ ಭಗವಂತ, ಸೆಕ್ಸನ್ ಗಿಕ್ಸನ್ ನೋಡಿ. ಅವನ ಆರ್ಡರ್ ಮೇಲೆ ಅಪೀಲು ಯಾರಲ್ಲಿಗೆ ? ಸಜದ ಟೈಂ ಮುಗೀತು ಅಂದರೆ, ಬಾಗಿಲು ತೆಗೆಯಿಸಿ

ಹೊರಕ್ಕೆ ದೂಡುತ್ತಾರೆ. ಮತ್ತೆ ಅಲ್ಲೇ ಇರುತ್ತೇನೆ ಅಂದರೂನೂ ದೇಹ ಒಪ್ಪುವುದಿಲ್ಲ.

ನೂರು ಜನ ನೂರೆಂಟು ನಮೂನೆ ಸಮಾಧಾನ ಹೇಳಿದರು. ಆ ಊರಲ್ಲಿ ಹೀಗಾಯಿತು, ಹೋದ ವರ್ಷ ಹಾಗಾಯಿತು, ಅಂದರು. ತಮ್ಮ ತಮ್ಮ ದಾರಿ ಹಿಡಿದರು. ನಾನು ಶೀಲ್ಕ್ ಗಂಟನ್ನ ಜಗನ್ ಮೋಹನ್ ಬಂಗ್ಲಿ ಕಾಂಪೌಂಡ್ ಗೋಡೆಗೊರಗಿಸಿದ್ದೆ. ಅದನ್ನ ಮತ್ತೆ ತಲೆ ಮೇಲಕ್ಕೇರಿಸಿದೆ.

ಪುಟ್ಟಪಾತ್‌ನಲ್ಲೇ ಕುಕ್ಕರಿಸಿ ಕೈಮೇಲೆ ತಲೆ ಇರಿಸಿಕೊಂಡಿದ್ದ, ಚೀನಿ. ಅವನು ಮೇಲಕ್ಕೇಳಲೇ ಇಲ್ಲ. ಆವ್ರೋ ಅಂದೆ, ದೇರ್ ಹೋಗಯಾ ಅಂದೆ, ಭಾಯಿ ಅಂದೆ. ಕಿವಿ ಕದ ಹಾಕಿಬಿಟ್ಟಿದ್ದ. ಗಂಟನ್ನ ಮತ್ತೆ ಒರಗಿಸಿ, ಅವನ ಮಗ್ಗುಲಲ್ಲೇ ನಾನೂ ಕೂತೆ. ಬಗ್ಗಿ ಅವನ ಮುಖ ನೋಡಿದೆ.

ಅಳುತ್ತ ಇದ್ದ, ಪ್ರಾಣಿ.....ಬಿಕ್ಕಿ ಬಿಕ್ಕಿ....ಎಳೆಯ ಮಕ್ಕಳ ಹಾಗೆ. ಯಾಕಪ್ಪ ಅಂತ ಕೇಳೋಣವೆಂದರೆ, ಅವನ ಮಾತು ನನಗೆ ಬರದು, ನನ್ನ ಮಾತು ಅವನಿಗೆ ತಿಳಿಯದು. ಇಬ್ಬರಿಗೂ ಬಳಕೆಯಾಗಿದ್ದ ತುರುಕ್ ಭಾಷೆ ಅಷ್ಟಕ್ಕೆಲ್ಲ ಸಾಲದು. ಎದೆಯೊಳಗಿನ ಸಂಕಟಾನ ತೋಡಿಕೊಳ್ಳಬೇಕಾದರೆ, ಒಳಗಣ್ಣಿನ ನೋಟಾನ ನಾಲಗೆಯಿಂದ ನುಡಿಯ ಬೇಕಾದರೆ, ಮಾತು ಮೂಟೆಗಟ್ಟಲೆ ಬೇಕಾಗುತ್ತದೆ. "ಚಂದ" ಅಂತೀವಿ. ಊಟವೂ ಚಂದವೆ, ಹುಡುಗಿಯೂ ಚಂದವೆ, ಬಂಗ್ಲೀನೂ ಚಂದ, ನಡತೆಯೂ ಚಂದ, ಸಂಗೀತ ಚಂದ, ಸಂಸಾರ ಚಂದ. ಒಂದೊಂದರ ಚಂದ ಒಂದೊಂದು ತರಹ; ತರಹೇವಾರಿ ಹೇಳುವುದಕ್ಕೆ ತರಹೇವಾರಿ ಮಾತು ಬೇಕು. ಹಾ ಅಂತೀವಿ. ನೋವಾದರೂ ಹಾ, ಸಂಕಟವಾದರೂ ಹಾ, ಸಂತೋಷವಾದರೂ ಹಾ....ಆ ಮಾತು ಏನೇನೂ ಸಾಲದು. ಜೈಮುನಿ ಆಡುತ್ತಾನಲ್ಲಾ ಹಾಗೆ ಆಡಿದರೆ, ಕನ್ನಡ ಚಂದ.

ಅಷ್ಟು ಮಾತು ಇದ್ದರೆ, ಎಲ್ಲ ನಮೂನೆ ಸುಖ ದುಃಖ ಹುಟ್ಟು ಸಾವು ಎಲ್ಲಾನ್ನೂ ಒಬ್ಬರಿಗೊಬ್ಬರು ಪಸಂದಾಗಿ ತೋಡಿಕೊಳ್ಳಬಹುದು....ಆದರೆ ಅವತ್ತು, ನಾವಿಬ್ಬರೂ ಒಬ್ಬರಿಗೊಬ್ಬರು, ಒಬ್ಬರಿಗಿಂತ ಒಬ್ಬರು, ಮೂಕ ಪ್ರಾಣಿಗಳು.

ಏನೋ ಒಂದು ಸಂಕಟ ಕೊರೆಯುತ್ತಾ ಇದೆ ಚೀನಿ ಎದೆಯನ್ನ ಅನ್ನೋದು ಮಾತ್ರ ಗೊತ್ತಾಯಿತು ನನಗೆ. ಅವನಿಗೆ ಸಮುದ್ರದಾಚೆ, ಹೊತ್ತು ಮೂಡುವ ತಾವಿಂದಾಚೆ, ಅವನ ಊರಲ್ಲಿ ಒಂದು ಸಣ್ಣ ಹೆಣ್ಣು ಮಗು ಇದ್ದಿರಬೇಕು, ಅಥವ ಹಾಲಿ ಇರಬೇಕು. ಈ ಹುಡುಗಿಯ ಹಾಗೆ ಅದೂ ನಿಗಿ ನಿಗಿ ಅಪರಂಜಿ. ಅದರ ಚಿಂತೆ ಹತ್ತಿ ಚೀನಿ ಅಳುತ್ತಿರಬೇಕು, ಎಂದುಕೊಂಡೆ. ಇಲ್ಲ, ಅದೂನೂ ಪಾಪ ಇಂಥ ಯಾವುದೋ ಗಂಡಾಂತರ ಬಡಿದು ಹೊರಟೇಬಿಟ್ಟಿತ್ತೋ, ತಂದೆ ತಾಯಿ ಕೈತಪ್ಪಿ? ಅವನು ಹೇಳಲೊಲ್ಲ, ಅಳು ನಿಲ್ಲಿಸಲೊಲ್ಲ. ಜನ ಮಾತ್ರ ಸುತ್ತ ಗಿರಕಾಯಿಸಿಕೊಂಡು, ಏನಾಯಿತೊ ಇವನಿಗೆ, ಕೊಡೋ ಅವನಿಗೆ ಒಂದು ಕಪ್ ಚಾನ, ಅಂತ ನನ್ನನ್ನ ತಿವಿದರು.

ಆದರೆ ಚಾಗೆ ಆರುವ ಬೆಂಕಿಯೆ ಅದು? ಅದು ತಾನಾಗಿಯೇ ಇಂಗಿ ಆರಿ ಬೂದಿಯಾಗಬೇಕು. ನಾವು ಏನು ಹೇಳಿದರೂ, ಅದಕ್ಕೆ ತುಪ್ಪ; ಗಾಳಿ. ಅವರವರ ದುಃಖಾನ ಅವರವರೇ ನುಂಗಿ ಜೀರ್ಣಿಸಿ ಕೊಳ್ಳಬೇಕೇ ಹೊರತು ನಿನ್ನ ಗಂಟ್ನ ನನ್ನ ಹೆಗಲ ಮೇಲಿರಿಸು ಅಂತ ಹೇಳುವುದಕ್ಕೆ ದೇವರೂ ಹಿಂದು ಮುಂದು ನೋಡುತ್ತಾನೆ. ಅಭಿಮನ್ಯು ಸತ್ತಾಗ ಸುಭದ್ರೆ ದುಃಖಾನ ಕೃಷ್ಣ ಏನು ಮಾಡಿದ?

ಸತ್ತವರಿಗಾಗಿ ಅತ್ತರೆ ಮೂರು ಕಾಸಿನ ಪ್ರಯೋಜನ ಇಲ್ಲ. ಯಾವ ಟೇಶನಿಗೆ ಟಿಕೀಟು ಕೊಂಡುಕೊಂಡು ರೈಲು ಹತ್ತಿರುತ್ತಾನೋ ಸತ್ತವನು? ಅಲ್ಲಿಯ ತನಕ ನಮಗೆ ಅವನ ಕೂಡ ಸರಸ ಸಲ್ಲಾಪ, ಅದು ಬಂತು ಅಂದ್ರೆ ಅವನು ಇಳಿದೇ ಬಿಡುತ್ತಾನೆ. ನಿಲ್ಲು ಅಂದ್ರೆ

ನಿಲ್ಲುತ್ತಾನೆಯೆ? ಅಲ್ಲಿಯವರೆಗೆ ಅವನ ಸಹವಾಸ ದೊರೆತದ್ದೇ ಬಂತು. ಅಲ್ಲಿಂದ ಮುಂದಕ್ಕೆ ನಮ್ಮ ಕೈಯಲ್ಲಿರುವ ಟಿಕೀಟಿನಷ್ಟು ನಮ್ಮ ಪ್ರಯಾಣ. ನಮ್ಮ ಟೇಶನ್ ಬಂದ್ರೆ ನಾವೂ ಇಳಿಯುವವರೇ. ಹತ್ತು ವವರು ಹತ್ತುತ್ತಲೇ ಇರುತ್ತಾರೆ, ಇಳಿಯುವವರು ಇಳೀತಲೇ ಇರುತ್ತಾರೆ. ರೈಲು ಹೋಗ್ತಾನೇ ಇರುತ್ತದೆ.

ಒಂದು ಗಳಿಗೆ ಅತ್ತ ಮೇಲೆ ಇದನ್ನೆಲ್ಲ ಚೀನಿ ತಾನಾಗಿಯೇ ಅರಿತುಕೊಂಡ, ನಾವು ಯಾರೂ ಹೇಳದೇನೇ.

ಯಾಕೆ ಹೇಳಿದೆ ಅಂದರೆ, ಏಳು ಸಮುದ್ರ ದಾಟಿಹೋದರೂ, ತೊಗಲಿಗೆ ಅರಶಿನ ಬಳಿದರೂ, ಅಪಸಿಗೂ ಹೆಂಡತಿಯ ಮೇಲೆ ಆದರ, ಮಕ್ಕಳ ಮೇಲೆ ಪ್ರೀತಿ, ತಂದೆ ತಾಯಿ ಮೇಲೆ ಗೌರವ, ದೋಸ್ತಿಯ ಮೇಲೆ ನಂಬಿಕೆ ಇದ್ದೇ ಇರುತ್ತದೆ. ಸರಕ್ಕನೆ ಮನಸ್ಸು ಅವರ ಕಡೆ ಹರಿದೇ ಹರಿಯುತ್ತದೆ, ನೋಡಿ.

ಎಂಟೊಂಬತ್ತು ತಿಂಗಳು ನಾನು ಅವನ ಭಾರ ಹೊತ್ತೆ. ನಜರ್ ಬಾಕಲು ಅಗ್ರಾರ ಈವರ್ಸಾ ಲೈನ್ ಒಂಟಿಕೊಪ್ಲು ಎಲ್ಲ ತುಳಿದು ತುಳಿದು ನಾಲ್ಕು ಜೊತೆ ಕೆರ ಸವೆಸಿದೆ. ಊರಿನವರಿಗೆ ಸುದ್ದಿ ಮುಟ್ಟಿಸದೆ ಕದ್ದೇ ತಿರುಗಿದೆ, ಅಸ್ಮಿ.

# ಅಕ್ಕಿ ಕಾಳು

ಕುಂಬಾರಪೇಟೆ ಜವರಪ್ಪನ ಹೋಟ್ಲಲ್ಲಿ ನಮ್ಮ ನೆರೆಹಳ್ಳಿ ಹೈದನೊಬ್ಬ ತಟ್ಟೆ ತೊಳೆಯುತ್ತಿದ್ದ. ಅವನ ಮಾತಿನ ಮೇಲೆ ಜವರಪ್ಪ ನನಗೆ ತಿಂಗಳಿಗೆ ಐದು ರೂಪಾಯಿ ರೇಟಿನಂತೆ ಹಿಟ್ಟು ಹಾಕುತ್ತಿದ್ದ. ತಬ್ಬಲಿ ದೇವರಿಗೆ ತಂಬಿಟ್ಟೇ ನೈವೇದ್ಯ. ಅಲ್ಲದೆ ಚೀಸೀ ಕೊಡುವ ಕಾಸ್ನಲ್ಲಿ ಒಬ್ಬನ ಹತ್ತಿರ ದಿನವೂ ಐದಾಣೆ ತುಂಬುತ್ತಿದ್ದೆ. ಆರಕ್ಕೋ ಮೂರಕ್ಕೋ ಪಡಖಾನೆಗೂ ಹೋಗಿ ಬುರುಡೆ ಬಸಿದುಕೊಳ್ಳವೆ. ಹಾಗೆ ಕುಡಿದರೇನೇ ಖುಷಾಮತ್ತು; ದಿನವೂ ಕುಡಿದರೆ ಅದರ ಆನಂದ ಕಮ್ಮಿ. ನಾಲಗೆಗೆ ಸೋಕುತ್ತಲೂ ನಾಕಲೋಕ ಕಾಣಿಸಬೇಕು, ಗಂಟಲೊಳಗಿಳಿಯುತ್ತಲೂ ಗಂಧರ್ವರ ಹಾಡು ಕೇಳಿಸಬೇಕು, ಹೊಟ್ಟೆ ಗಿಳಿಯುತ್ತಲೂ ಬಗ್ಗಿಸುವುದು ಮೋಹಿನಿ ಅವತಾರ ಅನ್ನಿಸಬೇಕು, ಎದೆಗೆ ಕಾವು ಹತ್ತಿ ಎಂಟೆದೆ ಶೂರನಾಗಬೇಕು, ಚಂಡ ಪ್ರಚಂಡ ಜಗದೇಕ ಮಲ್ಲ ಭುಜಬಲ ಪ್ರತಾಪನಾಗಬೇಕು, ತೋಳು ತೊಡೆ ಎಲ್ಲ. ತಲೆ ತುಂಬ ಅಮಲು ಹತ್ತಿತು ಅಂದರೆ ಕಣ್ಣುಮುಚ್ಚಿ ಕೂತಲ್ಲೇ ಕೂರಬೇಕು. ಆಗ ಮಳೆಗಾಲದ ತಂಪು, ಬೆಳದಿಂಗಳ ಇಂಪು, ಆಷಾಢದ ಗಾಳಿ, ಗೇರುಸೊಪ್ಪೆಯ ಸೊಗಸು, ತಾಪೆ ನೋಡುವಾಗಿನ ಮಝ್ಹು, ಜಾಜಿಹೂವಿನ ವಾಸನೆ, ಬೆಳ್ಳುಳ್ಳಿ ಚಟ್ಣಿ ಖಾರ ಅವರೆಕಾಳು ಉಪ್ಪಿಟ್ಟಿನ ರುಚಿ ಎಲ್ಲವೂ ಒಟ್ಟಿಗೆ ಬಡೀತದೆ ಮನಸ್ಸಿಗೆ. ಬಕೆಟ್‌ಗಟ್ಟಲೆ ದಿನವೂ ಬಗ್ಗಿಸೋ ಇಸಮುಗಳಿಗೆ ಇಂಥ ಸುಖ ಸಿಗುವುದಿಲ್ಲ.... ಮೂವತ್ತೊಂದನೆಯ ದಿನ ಅವನು ನನಗೆ ಬಿಡಿಕಾಸು ಕಮ್ಮಿ ಇಲ್ಲದೆ ಹತ್ತು ರೂಪಾಯಿ ಕೊಡುವನು, ಬೇಡ ಅಂದರೆ ಲೆಕ್ಕಕ್ಕೆ ಜಮ ಬರೆದುಕೊಳ್ಳುವನು.

ಅಲ್ಲೂ ಬಂತೂ ನನಗೆ ಬುಲಾವ್. ತಟ್ಟೆ ತೊಳೆಯುತ್ತಿದ್ದ ಹೈದನ ಪಿತೂರಿ ಅದು. ಚೋಟುದ್ದದ ಹೀಚು, ಕಳ್ಳನನ್ನ ನಂಬಿದರೂ

ಕುಳ್ಳನನ್ನ ನಂಬಬಾರದು ಅಂತಾರೆ; ನಿಜ. ಉಪಕಾರ ಮಾಡೋಣ ಅಂತ ಹೊರಟನಂತೆ, ದಡ್ಡ, ನನಗೂ ನಮ್ಮವರಿಗೂ! ಉಪಕಾರ ಮಾಡುವುದೇ ತಪ್ಪು. ಅವ ಕಷ್ಟದಲ್ಲಿದಾನಲ್ಲಾ ಅಂತ ನಾವು ಅವನನ್ನ ಎತ್ತುವುದಕ್ಕೆ ಹೋಗಿ, ಹೇಗೆ ಎತ್ತುವುದು ಅಂತ ಗೊತ್ತಿಲ್ಲದೆ, ಇನ್ನೂ ಒಂದಿಷ್ಟು ಬದಿಯಲ್ಲೇ ಅದುಮುತ್ತೇವೆ. ಅವ ಕಷ್ಟದಲ್ಲಿದಾನೆ ಅಂತ ನಮಗೇನೋ ಅನ್ನಿಸಬಹುದು. ಆದರೆ ಅವನ ಮನ ಕಂಡವರು ಯಾರು? ಅವನಿಗದೇ ರೂಢಿಯಾಗಿರಬಹುದು, ಅದು ಅವನಿಗೆ ಒಗ್ಗಿರಬಹುದು, ಅದನ್ನೇ ಅವನು ತನ್ನ ತಪಸ್ಸು ಅಂತ ತಿಳಿದಿರಬಹುದು. ನಾವು ಯಾರು, ಅವನ ಹತ್ತಿರ ಹೋಗಿ "ಲೋ, ನೀನು ಇರುವುದು ಕಷ್ಟದಲ್ಲಿ, ನಿನಗೆ ಗೊತ್ತಿಲ್ಲ, ನನಗೆ ಗೊತ್ತು, ನಿನ್ನನ್ನ ನಾನು ಉದ್ಧಾರ ಮಾಡುತ್ತೇನೆ ಬಾ. ನನ್ನ ಕೈ ಹಿಡಿದುಕೊ, ನಾನು ಗೊತ್ತು ಮಾಡಿರುವ ಸುಖದ ಕಡೆ ನಿನ್ನನ್ನೆಳೆದು ಸಾಗಿಸುತ್ತೇನೆ" ಅಂತ ಹೇಳುವುದಕ್ಕೆ? ಅದಕ್ಕೇ ನೋಡಿ ಹಿರಿಯರು ಒಂದೇ ಮಾತಿನಲ್ಲಿ ಇದನ್ನೆಲ್ಲ ಉಢಾಯಿಸಿಬಿಟ್ಟರೋದು — ಕರ್ಮ ಅಂತ. ಅವನ ಕರ್ಮ ಅವನು ಅನುಭವಿಸಲಿ. ಅವನಿಗೆ ಉಪಕಾರ, ನೀನು ಸುಮ್ಮನಿರುವುದು. ನಿನಗೆ ಬುದ್ಧಿ ಇದ್ದರೆ ನಿನ್ನನ್ನ ನೀನೇ ತಿದ್ದಿಕೊ. ಅವನ ತಂಟೆಗೆ ಹೋಗಬೇಡ. ಅವನ ದಾರಿ ಅವನೇ ಕಂಡುಹಿಡಿದುಕೊಳ್ಳುತ್ತಾನೆ, ದೇವರು ಅವನೊಳಗೂ ಮಡಗಿದಾನೆ ಒಂದು ಹಣತೆಯನ್ನ. ಅದಕ್ಕೆ ಎಣ್ಣೆ ತುಂಬುವುದು ಬತ್ತಿ ಇರಿಸಿಕೊಳ್ಳುವುದು, ಹೊತ್ತಿಸಿ ಹಿಡಿದು ನಡೆಯುವುದು, ಗಾಳಿ ಮಳೆಗೆ ಆರದೆ ಕಾಪಾಡುವುದು, ಇವೆಲ್ಲ ಅವನ ಜವಾಬ್ದಾರಿ. ನಿನ್ನ ಹಣತೆ ನಿನಗೆ, ಅವನದು ಅವನಿಗೆ ಅಂತ ಈ ಉಪಕಾರಿ ಮುಂದಿಗೆ ಹೇಳಬೇಕು ಅನ್ನಿಸುತ್ತದೆ, ನನಗೆ ಕೆಲವು ವೇಳೆ.

ಆ ಹೈದ ಪಾಪ ಉಪಕಾರ ಮಾಡೋಣ ಅಂತ ಹೊರಟು ನನ್ನ ತಲೆಗೆ ತಂದ. ನನ್ನ ಸುದ್ದಿ ತಿಳಿಯುತ್ತಲೂ, ಅವನಿಗೆ ಬೆಳ್ಳಿ ಬೆಟ್ಟ ಚಿನ್ನದ ಗಣಿ ಎರಡೂ ಒಟ್ಟಿಗೆ ಸಿಕ್ಕಿದ ಹಾಗಾಯಿತು. ಮಕ್ಕಳನ್ನೂ

ಹಿಡಿದುಕೊಂಡು ಬಂದೇಬಿಟ್ಟಳು. ಇನ್ನು ಆ ರಂಗಿ ಮುಂದೆ ಈ ಶಿಂಗನೆ ? ಮೂಗುದಾರ ಹಾಕಿ ಎಳೆದೇಬಿಟ್ಟಳು, ತಿರುಮಲಾಪುರಕ್ಕೆ.

ಹಾಗೆಯೇ, ಆರು ತಿಂಗಳು ಒಂದು ವರ್ಷ ಹಳ್ಳಿಯಲ್ಲೇ ಹೇಗೋ ಜೀವನ ಮಾಡಿದೆ, ಚೀನಿ ಕೊಟ್ಟ ಕಾಸಿನ ಗಂಟಿನ ಆಧಾರದ ಮೇಲೆ. ಅಷ್ಟುಹೊತ್ತಿಗೆ ನನ್ನ ಮಗಳು ಲಕ್ಷ್ಮೀನ ಯಾರು ಯಾರೋ ಕೇಳು ವುದಕ್ಕೆ ಷುರು. ಆವಾಗಲೇ ಗೊತ್ತಾದದ್ದು ನನಗೆ, ನಾನು ಮದ್ರಾಸಿಂದ ಬಂದು ಹತ್ತು ಹನ್ನೆರಡು ವರ್ಷ ಆಯಿತು ಅಂತ, ಲಕ್ಷ್ಮಿಗೆ ಮದುವೆ ವಯಸ್ಸು ಅಂತ. ನನ್ನ ಹೆಂಡತಿಯ ಸಾಕು ತಾಯಿಯ ಮಗನಿಗೆ ಕೊಡೋಣ ಅಂತ ನಾನು ಆಗಾಗ ಹೇಳುತ್ತಿದ್ದೆ ಇವಳಿಗೆ. ಅವನೂ ಈಚೆಗೆ ಚಿಗುರಿಕೊಂಡು, ಒಳ್ಳೆಯ ಹೆಸರು ಗಳಿಸಿ ಮೋಪಾಗಿದ್ದ. ನಾಲ್ಕೆಕ್ರೆ ದರ್ಖಾಸ್ತು ಹಿಡಿದು ಎಕ್ರೆಗೆ ಒಂಬತ್ತು ಟನ್ ಕಬ್ಬು, ಎಂಟು ಮೊಳದ್ದು, ಮಂಡ್ಯ ಕ್ವಾಟರಿಗೆ ಹೊಡೆದಿದ್ದ ಗೊಬ್ಬರ ಹಿಂಡಿ ಎಲ್ಲ ಸಾಲ ತೆಗೆದು. ಅದಕ್ಕೆ ಅವನಿಗೆ ಇನಾಮು ಕೊಡಿಸಿ, ಊರಲ್ಲೆಲ್ಲ ಎತ್ತಿನ ಗಾಡಿಯಲ್ಲಿ ಕೂರಿಸಿ ಮೆರವಣಿಗೆ ಮಾಡಿಸಿದ್ದರು. ಇನ್ನು ಅವನಂಥ ಅಳಿಯನಿಗೆ ಯಾವ ಬೇಯೇ ಎಲ್ಲೆಲ್‌ಬೀನೂ ಸಮ ಬರಲಾರ, ಅಂದೆ ನಾನು ಅವಳಿಗೆ ಕಲಿತ ಮಂದಿ ಸುಮ್ಮನೆ ಒಟ ಒಟ ಒಟ ಲೆಚ್ಚರ್ ಹೊಡೆದು ಕಂಡವರ ಕಣ್ಣಿಗೆ ಮಣ್ಣೆರಚಿ ಅವರ ಕೈಯಿಂದ ಕಾಸು ಕಸಿದು ಘೋಂಗಿ ಹೊಡೀತಾರೆ ಅಷ್ಟೆ. ಅವನೇ ನಿಜವಾದ ಗಾಂಧಿ ಅಂದೆ, ನಾನು. ಆದರೆ ಇವಳು ಬೇಡ ಅಂದು ಬಿಟ್ಟಳು. ಆ ಹುಡುಗನ ತಾಯಿಗೆ ಹೆಣ್ಣುಮಕ್ಕಳನ್ನು ಸಾಕುವುದಕ್ಕೆ ಬರುವುದಿಲ್ಲ, ಹೊಡೀತಾಳೆ ಬಡೀತಾಳೆ, ಹೊಟ್ಟೆಗೆ ಹಾಕದೆ ಸಾಯಿಸು ತ್ತಾಳೆ, ಕೆಟ್ಟ ಕೆಟ್ಟದಾಗಿ ಬೈತಾಳೆ ಅಂದಳು. ಅಲ್ಲಿಗೆ ಬಿಟ್ಟೆ ನಾನು ಆ ಮಾತ್ನ.

ಇನ್ನೊಂದು ಗಿರಾಕಿ ಬಂದಿತ್ತು, ಕರುಳು ಬಳ್ಳಿಯದಲ್ಲ, ದೂರದ ನಂಟತನ. ಉಡುವುದಕ್ಕೆ ಉಣ್ಣುವುದಕ್ಕೆ ಕಮ್ಮಿ ಇಲ್ಲದ ಜಾಗ. ಹೆಣ್ಣು

ಮಕ್ಕಳೇ ಇರಲಿಲ್ಲ ಅವರ ಮನೆಯಲ್ಲಿ. ಅಲ್ಲಾದರೆ ನಮ್ಮ ಲಕ್ಷ್ಮಿಗೆ ಬಾಳೆಹಣ್ಣಿನ ಗುಡಾಣವೇ ಸಿದ್ಧ, ಅಂತ ಸುದ್ದಿ ಬಂತು.

ನಮ್ಮೂರು ಗೌಡರೇ ಮಧ್ಯಸ್ಥಿಕೆ ಮಾತಾಡಿ ಕರೆದುಕೊಂಡು ಬಂದರು, ಹುಡುಗನ ಕಡೆಯವರನ್ನ. ಮೂರು ಜನ ದಂಪತಿ ಸಮೇತ, ಪರುಪ್ಪು ಅನ್ನಕ್ಕೆ ಬಂದರು. ಯಥಾಪ್ರಕಾರ ಒಡವೆ ವಸ್ತ್ರ ಉಚ್ಚೆಳ್ಳೆಣ್ಣೆ ತುಪ್ಪ ಕರ್ಪೂರ ಊದುಕಡ್ಡಿ ಹಣ್ಣು ಕಾಯಿ ಬೆಲ್ಲ ಮೂವತ್ತು ರೂಪಾಯಿ ತೆರ ಎಲ್ಲಾನ್ನೂ ತಂದು ಮಡಗಿದರು, ಸಭೆ ಮುಂದೆ. ನಾವು ಆಗಬಹುದು ಅಂತ ಸೀ ಊಟಾನ್ನೂ ಹಾಕಿದೆವು. ಹುಡುಗ ಪರವಾ ಇಲ್ಲ ಅಂತ ಗೊತ್ತಿತ್ತು. ಗರಡಿ ಸಾಧನೆ ಮಾಡಿ ಕಟ್ಟು ಮಸ್ತಾಗಿದ್ದ. ಜೈಮುನಿ ತನಕ ಓದೂ ಬಂದಿತ್ತು. ಸಾವಿರ ಪುಸ್ತಕಾನ ಒಂದು ಸಲ ಓದುವುದಕ್ಕಿಂತ ಜೈಮುನೀನ ಸಾವಿರ ಸಲ ಓದು, ಅಂತ ಹೇಳುವರು, ನಮ್ಮೂರು ಗೌಡರು.

ಮದುವೆ ಗೊತ್ತುಮಾಡುವುದು ಎಂದರೆ, ಸುಮ್ಮನೆ ಬೀದೀಲಿ ನಿಂತು ದನಕರ ಬೆಲೆ ಹೊಂದಿಸುವುದಲ್ಲ, ನಮ್ಮಲ್ಲಿ. ಒಲು ಶಿಸ್ತು, ರೂಢಿ ಅಂದರೆ ರೂಢಿ. ಒಂದೊಂದು ಹೆಜ್ಜೆಗೂ ಮಾಮೂಲು. ನಾಲ್ಕು ಜನ ಅರಿತು ಒಪ್ಪಿ ಊರವರೆಲ್ಲ ಯಜಮಾನರೆಲ್ಲಿ ಹೂಂ ಅಂದು ಆಗಬೇಕಾದ ಸಂಬಂಧ ಅದು. ನಾಳೆ ಏನೋ ಎತ್ತೋ? ತಂಟೆ ತಕರಾರು ಕಾಣಿಸಿದರೆ, ನ್ಯಾಯ ಹೇಳಿ ಪಂಚಾಯ್ತಿ ಮಾಡುವವರು ಅವರು ತಾನೆ?

ಆಮೇಲೆ ಇಬ್ಬರೂ ಕೂಡಿ ಜೋಯಿಸರನ್ನ ಕಂಡು ಲಗ್ನ ಕಟ್ಟಿಸಿ ಕೊಂಡು ಬಂದೆವು. ಚೀನೀ ಬಾಬ್ತು ಅರವತ್ತು ರೂಪಾಯಿ ಇತ್ತು ನನ್ನಲ್ಲಿ. ಅಷ್ಟರಲ್ಲೇ ನಿಭಾಯಿಸಬೇಕು ಅಂತ ನಾನು. ಆದರೆ ಗಾದೇನೇ ಇದೆಯಲ್ಲಾ, ಮದುವೆ ಮಾಡಿ ನೋಡು ಅಂತ. ಸಾಲಾನೂ ಆಯಿತು, ಎಪ್ಪತ್ತೈದೂ ಚಿಲ್ರೆ.

ಸರಿ! ಅವರೊಂದಿಷ್ಟು ನಂಟರು ಪಂಟರು ಬಂದು, ವಾಲಗ ಕೇಳುತ್ತ, ಊರ ಮುಂದೆ ನಿಂತರು. ಇತ್ತಲಾಗಿಂದ ನಾವು ವಾಲಗ ಊದುತ್ತ ಗಂಡಿಗೆ ನದರ್ ಗಿದರ್ ಬಾಬ್ತು ಒಂದು ಚಿಪ್ಪು ಬಾಳೆಹಣ್ಣು, ಒಂದು ಪಾವು ಅಡಿಕೆ, ಒಂದು ಕಟ್ಟು ಎಲೆ, ಒಂದು ಕಟ್ಟು ಹೊಗೆ ಸೊಪ್ಪು, ಕರೀ ಗಡಿಗೇಲಿ ಬೆಲ್ಲದ ಹಾಲು, ಎಲ್ಲವನ್ನೂ ಛತ್ರಿ ಕೆಳಗೆ ಹೊತ್ತು ಸಾಗಿಸಿಕೊಂಡು ಹೋಗಿ, ಅವರನ್ನ ಹೊಸ ಚಾಪೆ ಮೇಲೆ ಕೂರಿಸಿ ಬಂದಿರಾ ಅಂತ ಕೇಳಿ, ಒಪ್ಪಿಸಿದೆವು.

ಕೆಲವರಿದಾರೆ, ಕಮ್ಮಿ ಜನ, ಹಳ್ಳಿಗಳಲ್ಲಿ. ಚುಟಕ ಮಾತಿಗೆ ರೇಗಿ ಕಿವಿ ಕಚ್ಚುವವರಿಗೆಲ್ಲ ಕಿಮ್ಮತ್ತು ಕೊಟ್ಟು, ಥೂ, ಹೋಗೋ, ನಿನಗೆ ಕೊಡೋದೇ ಇಲ್ಲ, ನೀನು ಸೇರು ತುಪ್ಪ ತರಲಿಲ್ಲ ಅಚ್ಚೇರು ತಂದೆ, ಅಂತ ಬೈದು, ನಿಮ್ಮ ನಂಟತನ ನೆಗೆದುಬಿದ್ದುಹೋಗಲಿ ಅಂತ ದೂರಿ, ಯಜಮಾನರ ಮಾತನ್ನ ಗಾಳಿಗೆ ತೂರಿ, ಜಗಳಕ್ಕೆ ಕಾಲು ಕೆರೆದು, ಹೆಣ್ಣಿಗೆ ತಿಕಡಿ ಹಿಡಿಸಿ ಒಲ್ಲೆ ಅನ್ನು ಬಾವಿಗೆ ಬೀಳುತ್ತೇನೆ ಅನ್ನು ಅಂತ ಹೇಳಿಕೊಟ್ಟು, ಮಾನನಷ್ಟ ಮಾಡುತ್ತಾರೆ, ಇಬ್ಬರಿಗೂ. ಪಾರ್ಟಿ ಬಿದ್ದಿರೋ ಊರಲ್ಲಿ ಇದು ಸಾಮಾನ್ಯ. ಆದರೆ ನಾವು ಹಾಗಲ್ಲ, ನಿಮ್ಮ ದಯೆಯಿಂದ. ಆ ಮುತ್ತರಾಯಪ್ಪನ ಕಡೆಗಣ್ಣಿನ ನೋಟ, ಅಷ್ಟು ತೀಕ್ಷ್ಣ. ನಮ್ಮೂರಲ್ಲಿ ನೂರೆಂಟುಂಟು ಕೆಟ್ಟದ್ದು, ಆದರೆ ಪಾರ್ಟಿ ಒಂದಿಲ್ಲ. ಪಾರ್ಟಿ ಚಿಗುರಿದರೆ ನಮ್ಮ ಗೌಡರು ಅಲ್ಲೇ ಚಿವುಟಿ ಬಿಡುತ್ತಾರೆ, ಕಿವಿ ಕಿತ್ತು ಊರಿಂದ ಒದ್ದೋಡಿಸುವುದಕ್ಕೂ ಸೈ, ಅವರು.

ಲಕ್ಷ್ಮೀ ಮದುವೇ ಸಂಭ್ರಮ ಎಲ್ಲ ಇನ್ನೂ ನನ್ನ ಕಣ್ಣಿಗೆ ಕಟ್ಟಿದ ಹಾಗಿದೆ. ಮದುವೆ ಶೋಭಾನ ಅಂದರೆ ಮೊಮ್ಮಕ್ಕಳು ಮರಿಮಕ್ಕಳು ಹೆತ್ತವರಿಗೂ ಕೂಡ, ಹಿಂದಿನದರ ನೆನಪಿನಲ್ಲಿ, ಹರೆಯ ಬರುತ್ತದೆ. ಗಂಡು ಡ್ರೆಸ್ ಮಾಡಿಕೊಂಡು — ಕುದುರೆ ಸಿಗಲಿಲ್ಲ, ಎತ್ತಿನ ಮೇಲೆ ಕೂರಿಸಿದ್ದೆವು — ದೇವಸ್ಥಾನಕ್ಕೆ ಹೋಗಿ ಕೈ ಮುಗಿದದ್ದು, ಅಲ್ಲಿಂದ

ಹುಡುಗನನ್ನ ನಡೆಸಿಕೊಂಡು ಬಂದದ್ದು, ತಳಿ ಹಿಡಿದದ್ದು, ನಡೆಮುಡಿ ಹಾಸಿದ್ದು, ಚಪ್ರ ಸೇರಿದ್ದು, ಎಲ್ಲ ಈಗಲೂ ನೆನಪಿದೆ ನನಗೆ. ಗಂಡಿನವರು ಬಿದಿರಿನ ಪೆಟ್ಟಿಗೆಯಲ್ಲಿ ಹನ್ನೆರಡು ಕಾಯಿ, ಡಜನ್ ತಂಬಿಟ್ಟಿನುಂಡೆ, ಡಜನ್ ಬೆಲ್ಲದ ಅಚ್ಚು, ಅಷ್ಟೇ ಬಾಳೆಹಣ್ಣು ಇರಿಸಿ ಮೇಲೊಂದು ಬಿಗಿಯುವ ಸೀರೆ — ಅದೇ ಹೆಣ್ಣಿನ ತಾಯಿಗೆ — ಎಲ್ಲ ಯಥಾಪ್ರಕಾರ ತಂದರು. ಲೆಕ್ಕಾಚಾರ ಅಂದರೆ ಸಡಿಲ ಬಿಡುವ ಹಾಗಿಲ್ಲ. ಶಾಸ್ತ್ರ ಅಂದರೆ ಅದು !

ಸರಿ ! ಚಪ್ರದಲ್ಲಿ ಜೋಯಿಸರು ನಡುವೆ ಪರದೆ ಹಿಡಿದರು, ಹುಡುಗಿಯನ್ನ ತಂದು ಈಚೆ ನಿಲ್ಲಿಸಿದೆವು. ಇಬ್ಬರ ಕೈಯಲ್ಲೂ ಎಲೆ ಅಡಿಕೆ ಕಂಠೀರಾಯನ ಹಣ ಚುಚ್ಚಿದ ಬಾಳೆಹಣ್ಣು ಕೊಟ್ಟೆವು. ಪರದೆ ತೆಗೆದು ಅಲ್ಲೇ ನಿಲ್ಲಿಸಿ ತಾಯಿ ತಂದೆ ಧಾರೆ ಎರೆದರು, ಬಂದ ಜನರೆಲ್ಲ ಧಾರೆ ಎರೆದು ಅಕ್ಕಿಕಾಳು ಚೆಲ್ಲಿ ಮಕ್ಕಳಾಗಲಿ ಮನೆ ಮಠ ತುಂಬಲಿ ಅಂತ ಆಶೀರ್ವಾದ ಮಾಡಿದರು.

ಇಲ್ಲ, ಇಲ್ಲ ! ಜಗಳ ಪಗಳ ಏನೂ ಆಗಲಿಲ್ಲ. ಸಲೀಸಾಗಿ ಜರುಗಿತು. ಗಂಡಿನ ಕಡೆಯವರೇನೋ ಕೀಟಲೆ ಎತ್ತಿದರು. ಆದರೆ ನಮ್ಮೂರಲ್ಲಿ ಅವರ ಬೇಳೆ ಬೇಯಲಿಲ್ಲ. ಹೆಣ್ಣು ಹೆಂಗಸೇರೇನೋ ಧಡಾ ಧುಡುಂ ಪ್ರಾರಂಭಿಸಿದರಂತೆ ಒಳಗೆ. ಗೌಡರ ಮೊದಲನೆಯ ಹೆಂಡತಿ, ರಪ್ ಅಂತ ಎರಡು ಬಿಟ್ಟರೆ ನೋಡು, ಮೂತಿ ತಿರುಗಿಸಿಕೊಂಡುಬಿಡುತ್ತದೆ ಬೆನ್ನ ಕಡೆ, ಅಂತ ಗದ್ದಲ ಮಾಡಿ, ಅದರ ಸದ್ದಡಗಿಸಿಬಿಟ್ಟರಂತೆ, ಆಮೇಲೆ ತಿಳಿಯಿತು.

ಹುಂ, ಇನ್ನೇನು ? ಧಾರೆ ಆಯಿತು ಅಂದರೆ ಮುಖ್ಯವಾದದ್ದು, ಬಳಗದ ಭೋಜನೆ. ತಟ್ಟೆಯಲ್ಲಿ ತಾಳಿ ಎಲೆ ಅಡಿಕೆ ಬಾಳೆಹಣ್ಣು ತಂಬಿಟ್ಟು ಬೆಲ್ಲ ಕಾಯಿ ಇರಿಸಿ ಶರಣು ಮಾಡಿಕೊಂಡು ಜೋಯಿಸರ ಕೈಲಿ ಕೊಟ್ಟು, ಹುಡುಗ ಅದನ್ನೆತ್ತಿ ಕನ್ಯೆ ಕೊರಳಿಗೆ ಕಟ್ಟುವುದು.

ಆಮೇಲೆ ಇಬ್ಬರೂ ಕೈತೊಳೆದು ಸೆರಗಿಗೆ ಗಂಟು ಹಾಕಿಕೊಂಡು — ಆ ಗಂಟನ್ನ ಬಾಗಿಲು ತಲಪುವುದರೊಳಗೆ ಹುಡುಗ ಎಡಗೈಯಿಂದಲೇ ಬಿಚ್ಚಬೇಕು ಅಂತ ನೇಮ — ಕರೀ ಕಂಬಳಿ ಮೇಲೆ ಕೂತು, ಬೂವ.

ಬೂವಾದಲ್ಲಿ, ನೋಡಿ, ಒಳ್ಳೆ ಅರ್ಥ ಇದೆ. ಎರಡು ಕಡೆ ಬೀಗರೂ ಮದುವೆಯಿಂದ ಒಂದೇ ಮನೆಯುವರಂತಾದರು ಅಂತ ಹಿರಿಯರು ಬೂವಾದಿಂದ ಸಾಧಿಸಿಬಿಟ್ಟಿದಾರೆ. ಗಂಗಾಳದಲ್ಲಿ ತೇವಟಿಗೆ ಮಡಗಿ, ಏಳೆಂಟು ಜನ ಅವರು ಏಳೆಂಟು ಜನ ನಾವು ಒಟ್ಟಿಗೆ ಕೈ ಇಕ್ಕಿ ಎತ್ತಿ ಕೊಂಡು ತಿನ್ನಬೇಕು; ಅದು ಶಾಸ್ತ್ರ. ಇಂಥದ್ದನ್ನೆಲ್ಲ ಈಗ ಹಳ್ಳಿ ಗಮಾರರ ಅಚಾರ ಅಂತ ಇಂಗ್ಲೀಷ್ ಕಲಿತ ಮಂದಿ ಟೋಪಿ ಮಂದಿ ಬಿಡುತ್ತಾ ಇದಾರೆ. ಅದಕ್ಕೇ ಒಬ್ಬನ ಬುಡಕ್ಕೆ ಒಬ್ಬ ಬತ್ತಿ ಇಡುವ ದುಶ್ಚಾಳಿ ಹಬ್ಬಿರೋದು, ದೇಶದ ತುಂಬ.

ಅಲ್ಲಿಗೆ ಮುಗಿಯಿತು, ಮುಕ್ಕಾಲು ಮೂರುವೀಸೆ ಶಾಸ್ತ್ರ ಎಲ್ಲ. ಓ! ಮರೆತೆ. ಇದನ್ನೂ ಬರೆದುಕೊಳ್ಳಿ .... ಬೂವಾ ತೀರಿತು ಅಂದ್ರೆ, ಅಗಲವಾದ ಒಂದು ರೌಂಡ್ ಗಂಗಾಳದಲ್ಲಿ ನಡುವೆ ಹತ್ತು ಸೇರು ಅಡಿಕೆ ಗುಡ್ಡೆ ಇರಿಸಿ ಸುತ್ತಲೂ ಎಲೆ ಜೋಡಿಸಿ ಅದನ್ನ ಗಂಡಿನ ಕೈಲಿ ಎತ್ತಿ ಇಡಿಸಿ ಎಲ್ಲರಿಗೂ ಹೆಸರು ಹೇಳಿ ಕೊಡಿಸಬೇಕು. ಮಠ ದೇವಸ್ಥಾನ ಪಟೇಲ ಚೇರ್ಮನ್ ಕುಳವಾಡಿ ಸಹಿತ ಹೆಸರು ಹೇಳಬೇಕು, ಕೊಡ ಬೇಕು, ನಂತರ ಮುಯ್ಯಿ, ದಾನ, ಬ್ರಾಂಬರಿಗೆ ಬಡವರಿಗೆ ಕಿರಿ ಜನರಿಗೆ! ಗಂಡು ಹೆಣ್ಣು ಇಬ್ಬರೂ ಸುಸ್ತಾಗಿ ಸೊಂಟ ಹಿಡಿದುಬಿಟ್ಟಿರು ತ್ತಾರೆ, ಅಷ್ಟುಹೊತ್ತಿಗೆ. ಅಡ್ಡಬಿದ್ದು ಕೈಮುಗಿದು, ಎದ್ದು, ಕೂತು, ಕೊಟ್ಟು, ಕೊಂಡು.

ಮೂರು ಗಂಟೆ ಹೊತ್ತಿಗೆ — ಅಡುಗೆಯವರ ಕೈಚಳಕ ಕಮ್ಮಿಯಾ ದಾದರೆ ಐದಾಗುವುದೂ ಉಂಟು — ಊಟ. ನಾವು ತಿರುಪತಿ ಒಕ್ಕಲಾದ್ದ ರಿಂದ, ಬರೀ ಕಾಯಿಪಲ್ಯ, ಜೊತೆಗೆ ಬಿಳಿ ಅನ್ನ ಕಡಲೆಬೇಳೆ ಪಾಯಸ.

ಅಂತೂ ಪ್ರತಿ ಒಬ್ಬನೂ ಅವನ ಯೋಗ್ಯತೆ ಮೀರಿದ ಒಂದು ಊಟ ಹಾಕ್ತಾನೆ, ಎಲ್ಲರಿಗೂ. ಬಡವರಿಗೆ ಬಗ್ಗರಿಗೆ ಹಿಟ್ಟು ಎಸರು ಪಾಯಸ. ಯಾಕೆಂದರೆ, ಕೊಟ್ಟು ದಣಿಸುವುದಕ್ಕಾಗದಿದ್ದರೂ, ಇಟ್ಟು ದಣಿಸಬಹುದು, ನೋಡಿ.

ಹೀಗೆ ನಡೆಸಿದ ಲಕ್ಷ್ಮಿ ಮದುವೇನ, ಭಗವಂತ. ಚಿಲ್ಲರೆ ಸಾಲದಲ್ಲೋ ಅಂದರೆ ಚಿಲ್ಲರೆ ಒದಗಿಸಿದ. ರೂಪಾಯಿ ಇಲ್ಲವಲ್ಲೋ ಅಂದರೆ, ಉಂಡುಂಡೆ ರೂಪಾಯಿಯನ್ನೇ ಕೊಡಿಸಿದ.

ಈಗ ಅವಳು ಗಂಡನ ಕೂಡ ಸುಖವಾಗಿದಾಳೆ. ಕಟ್ಟಿಕೊಂಡ ಮೇಲೆ, ನಮ್ಮ ದೇಶದಲ್ಲಿ, ಯಾವನೂವೇ ಯಾವಳೂವೇ, ಥೆ! ಇದಕ್ಕಿಂತ ಅದೇ ಚೆನ್ನ, ಅಂತ ಆದರ ಹಿಂದೆ ಅಲೆಯುವುದಿಲ್ಲ; ಅಂಥ ನಾಯಿಗಳು ಬಹಳ ಕಮ್ಮಿ. ನೋಡುತ್ತ ಬನ್ನಿ ನೀವು, ಗಂಡ ಹೆಂಡಿರ ಜೋಡಿಗಳನ್ನ, ರೈಲಲ್ಲಿ ಬಸ್‌ನಲ್ಲಿ ಬೀದಿಯಲ್ಲಿ. ಸಾಮ್ಯವಾಗಿರುವುದು ನೂರಕ್ಕೊಂದೇ ಒಂದು. ಎಳ್ಳು ಅಕ್ಕಿ, ಒನಕೆ ಒರಳು, ಏಣಿ ಮಣೆ ಇಂಥವೇ ಜಾಸ್ತಿ. ಆದರೂ ಹೇಗೋ ಸುಧಾರಿಸಿಕೊಂಡೇ ಹೋಗ್ತಿರುತ್ತಾರೆ. ನಮಗೆ ನಗು ಬರುತ್ತದೆ; ಅವರಿಗೆ ನಗು ಬರುವುದಿಲ್ಲ, ಒಬ್ಬರನ್ನೊಬ್ಬರು ನೋಡಿದಾಗ. ಕರ್ಮ ಅಂತಾರೆ, ಧರ್ಮ ಅಂತಾರೆ, ರಾಮ ಸೀತೆ ಅಂತಾರೆ, ಅರಿಶ್ಚಂದ್ರ ಚಂದ್ರಮತಿ ಅಂತಾರೆ, ಮುಂದಿನ ಜನ್ಮದಲ್ಲಿ ಇದನ್ನ ಕೊಂಚ ರಿಪೇರಿ ಮಾಡಿ ಕೊಡಿಸೋ ನನಗೆ ಅಂತಾರೆ, ಅಷ್ಟೆ. ಮತ್ತೊಬ್ಬರ ಪದಾರ್ಥದ ಮೇಲೆ ಕೈ ಇಕ್ಕುವುದು ಕಡಮೆ.

ಕಲಿತ ಮಂದಿಗೆ ಈ ದುರ್ಬದ್ಧಿ ಹೆಚ್ಚು, ದೇವರನ್ನೇ ಎತ್ತಿ ಬಿಸಾಕು ತ್ತಾರೆ ಅವರು; ಧರ್ಮ ಅಂದರೆ ಯಾರೋ ಬರೆದ ಕುತಂತ್ರ, ಕರ್ಮ ಅಂದರೆ ಯಾರೋ ಮಾಡಿಟ್ಟ ಮೋಸ, ಸತ್ಯ ಅಂದರೆ ಅನುಕೂಲಕ್ಕೆ ತಕ್ಕ ಉಪಾಯ, ಅಂತಾರೆ, ಅವರು. ದೊಡ್ಡ ದೊಡ್ಡವರೆಲ್ಲ ಹುಳುಕು ಕತೆ, ಕೊಳಕು ಸಿನಿಮ, ಥಳಕು ನಾಟಕ ಬರೆಯುವವರನ್ನೇ ಹೊಗಳುತ್ತಾರೆ

ಈಗ, ಅದನ್ನ ನೋಡಿ ಹುಡುಗರೂ ದುರ್ಬುದ್ಧಿ ಕಲಿಯುತ್ತವೆ. ಅದರಂತೆ ಇದ್ದರೇನೇ ಫೇಶನ್ನು ಅಂತ ಅವೂನೂ ಮಂಕುಬೀಳುತ್ತವೆ.

ಕುಲದ ಕಟ್ಟು ಇರೋದು ನೆಮ್ಮದಿಯಾಗಿ ಬಾಳುವುದಕ್ಕೆ. ಎಲ್ಲರೂ ತಮ್ಮ ವಸ್ತುವನ್ನ ಮೂಲೆಗೆಸೆದು ಉಳಿದವರ ವಸ್ತುವಿಗೆ ಆಸೆಪಟ್ಟರೆ, ಖೂನಿ ಎಷ್ಟು, ಕೆರೆ ಬಾವಿಗೆ ಬೀಳೋದೆಷ್ಟು, ನೇಣೆಷ್ಟು, ಮಾರಾಮಾರಿ ಎಷ್ಟು, ಲೆಕ್ಕ ಇಡಲು ಸಾಧ್ಯವೇ ?

ಮುಖ್ಯ, ಹರೆಯದ ಪ್ರಾಯದಲ್ಲಿ ಅದಬ್‌ನಲ್ಲಿರಬೇಕು, ಮನುಷ್ಯ. ನನ್ನನ್ನೇ ನೋಡಿ. ಮೆಷೀನ್‌ನಲ್ಲಿದ್ದಾಗ, ಕೆಟ್ಟ ಸಹವಾಸಕ್ಕೆ ಬಿದ್ದು ಕೆಟ್ಟೇ ಹೋದೆ. ಒಂದು ತಲೆ ಅಲ್ಲ, ಹತ್ತು ತಲೆ ತುಂಬ ಮೆದುಳು ತುಂಬಿಕೊಂಡಿದ್ದ ರಾವಣೇಶ್ವರನನ್ನೂ ಕೂಡ ಕೆಡಿಸಲಿಲ್ಲವೆ, ಅವನ ಹತ್ತಿರದವರು ?

ಏನು ಅನ್ನುವವಳು ಇಲ್ಲದ ಮೇಲೆ ಏನಿದ್ದರೇನು? ಹೆಂಡಿರು ನಮಗೆ ಬರೇ ಹೆಂಡಿರೊಂದೇ ಅಲ್ಲ. ಹೀಗಲ್ಲ ಹಾಗೆ ಅಂತ ಹೇಳಿ ಕೊಡುವ ಅಕ್ಕನೂ ಹೌದು, ಅಕ್ಕರೆಯಿಂದ ಸಾಕಿ ಸಲಹುವ ತಾಯಿಯೂ ಹೌದು; ಅವಳ ತಲೆ ಸರಸ್ವತಿಯದು; ಕೈ ಲಕ್ಷ್ಮಿಯದು. ಇದನ್ನರಿಯದ ಪೆದ್ದು ಗಂಡಸು ಅವಳನ್ನ ಹೆಂಡದ ಮಟ್ಟಕ್ಕಿಳಿಸಿ ಸಿನಿಮ ಮಾಡ್ತಾನೆ, ಕತೆ ಕಟ್ಟುತ್ತಾನೆ. ಅವನ್ನೋದಿ, ನೋಡಿ, ಈಗಿನ ಹೈಕಳೆಲ್ಲ ರಂಭೆ ತಿಲೋತ್ತಮೆಯರೇ ಬೇಕು, ಅಂತ ಹಟ ಹಿಡೀತಾರೆ. ಆದರೆ ಅವರಲೆಷ್ಟು ಮಂದಿ ಮನ್ಮಥರಿದಾರೆ, ಲೆಕ್ಕ ಹಾಕಿ. ಕನ್ನಡಿ ಹಿಡೀರಿ. ಆಗ ಅವರೇ ತಮ್ಮ ಕಪಿ ಮೂತಿ ನೋಡಿ ನಾಚಿಕೊಳ್ಳುತ್ತಾರೆ.

ಯಾಕೆ ಹೇಳಿದೆ ಅಂದ್ರೆ, ನನ್ನ ಅಳಿಯ, ಪಾಪ, ಪೇಟೇಲಿದ್ದರೂನೂ, ನನ್ನ ಮಗಳು ಅಂಥ ಸುಂದರಿಯಲ್ಲದಿದ್ದರೂ — ಕುಳ್ಳಿ, ಸಿಡುಬಿನ ಮೊಡವೆ ಬೇರೆ–ಅವಳಿಗೆ ತಪ್ಪದೆ ನಡೆದು ಕೊಳ್ಳುತ್ತಿದಾನೆ, ತಹಲ್‌ವರೆಗೂ.

ಹಳ್ಳಿಗೆ ಹೋದ ಕೆಲಸ ಪೂರೈಸಿದರೂ, ನನ್ನನ್ನ ಇವಳು ಬಿಡಲೇ ಇಲ್ಲ. ಅಲ್ಲೇ ಹುಟ್ಟಿ ಅಲ್ಲೇ ಬೆಳೆದ ಹೆಣ್ಣಿಗೆ ಅದೇ ತೌರು. ನಾನು ನಾಲ್ಕು ಪೇಟೆ ಸುತ್ತಿದವನು; ಸದಾ ನೂರಾರು ಜನ ನಾಲ್ಕಾರು ಭಾಷೆ ಆಡೋದನ್ನ ಕಿವಿಯಲ್ಲಿ ತುಂಬಿಕೊಂಡವನು. ಹಳ್ಳಿಯಲ್ಲಿ ಕತ್ತಲಾಯಿ ತೆಂದರೆ ಕದ ಎಲ್ಲ ಬಂದ್; ಸಿಟೀಲಿ ಕತ್ತಲಾದ ಮೇಲೇನೇ ಕಣ್ಣಿಗೆ ಹಬ್ಬ. ಕತ್ತಲಾಯಿತೆಂದರೆ ಹಳ್ಳೀಲಿ ಕಂಬಳಿ ಹೊದ್ದು ಬಿದ್ದು ಕೊಳ್ಳೋದೇ; ಮಿಣಕ್ಕನೆ ಒಂದು ದೀಪ ಕೂಡ ಇರುವುದಿಲ್ಲ — ನನಗದು ಬೇಜಾರು. ಊರು ಅಂದರೆ, ಝಗ ಝಗ ಅಂತ ಸಾಲಾಗಿ ವೈಲಿಗಟ್ಟಲೆ ಕುಂಬಳಕಾಯಿ ದೀಪ ಉರಿಯಬೇಡವೆ, ರಸ್ತೆ ಎರಡು ಪಕ್ಕದಲ್ಲೂ?

## ರಾಮನ ವನವಾಸ

ಕೊರಗುತ್ತ ಕೊರಗುತ್ತ ಹೇಗೋ ಇರೋಣ ಅಂದರೆ, ಇನ್ನೊಂದು ಮನೋರೋಗ ಬೇರೆ ಅಂಟಿಕೊಂಡಿತು. ಎಡವಿದ ಕಾಲೇ ಎಡವುತ್ತೆ. ನನ್ನ ಮಗನಿಗೆ ಹದಿನೈದು ಹದಿನಾರು ವರ್ಷ. ಆದರೂ ಬೆಳವಣಿಗೆ ಸಾಲದು. ದನ ಎಮ್ಮೆ ಕುರಿ ಚೆನ್ನಾಗಿಯೇ ಕಾಯುವನು; ಬೇಸಾಯಕ್ಕೂ ಹೋಗಿ ಕೂಲಿ ತರುವನು; ಗಾಡಿ ಎತ್ತು ಸಲೀಸಾಗಿ ಹೊಡಿಯುವನು. ಮೆದುಳು ಬಲು ಚುರುಕು; ಮಾತೂ ಅಷ್ಟೆ. ಎಲ್ಲರೂ ಅವನನ್ನ ಅತ್ತಲಾಗಿತ್ತಲಾಗೆ ಚಾಕರಿ ಹೇಳಿ ಓಡಿಸುವವರೇ, ಹಳ್ಳಿಯಲ್ಲಿ ಎಂಥ ಅಮಾಸೆ ಕತ್ತಲಲ್ಲೂ ಕಳೆದು ಹೋದ ಎಮ್ಮೆ ಹುಡುಕುತ್ತ ಯಾರು ಹೇಳಿದರೂ, ಹೊರಟು ಬಿಡುವನು; ದೆಯ್ಯ ದೆವ್ವ ಭೂತ ಪಿಶಾಚಿ ಒಂದರ ಹೊರಿಕೆಯೂ ಇಲ್ಲ, ಅವನಿಗೆ. ಮನೆಯವರೆಲ್ಲ ದುಡಿದರೂ ನಮ್ಮ ಹೊಟ್ಟೆಗೆ ಸಾಲದೆ ಬರುವಾಗ, ಮ್ಮದುವೆ ಸಾಲ ಎಪ್ಪತ್ತೈದು ಚಿಲ್ರೆ ತೀರಿಸುವುದು ಹೇಗೆ ನಾನು? ಇನ್ನು ಅದಕ್ಕೆ ಬಡ್ಡಿ? ಸಾಲ ತಲೆ ಹೊರೆ, ಬಡ್ಡಿ ಬಂಡಿಹೊರೆ! ಒಂದಾಣೆ, ತಿಂಗಳಿಗೆ. ಆಲಕ್ಕೆ ಹೂವಿಲ್ಲ, ಸಾಲಕ್ಕೆ ಕೊನೆ ಇಲ್ಲ, ಹಳ್ಳಿಗಳಲ್ಲಿ. ಯಾವನೋ ನನ್ನಂಥವನು ಸಾಲ ಮಾಡಿ ಓಲೆ ತಂದು, ಓಲೆ ಮಾರಿ ಬಡ್ಡಿಗೆ ಕೊಟ್ಟನಂತಲ್ಲಾ, ಹಾಗೆ ಏರುತ್ತಾ ಇತ್ತು, ವಿಷ ಏರುವ ಹಾಗೆ.

ಮನೆ ತೋರಿಸಿದ್ದೆವು ಅನ್ನಿ, ಸಾಹುಕಾರನಿಗೆ. ಅವನೂ ಕಾದ, ಕಾದ, ಕೊನೆಗೆ ತಗಾದೆ ಶುರು. ಕೇಸು ಲಾಯರಿ ಕೋರ್ಟು ಕಚೇರಿ ಜಪ್ತಿ ಆಮೀನು, ಅಂತ ಹೆದರಿಸಿದ. ನಾನು ಇನ್ನಿಲ್ಲ ಅಂತ ಕೈಮುಗಿದೆ; ಅವಳು ಕಾಲು ಹಿಡಿದುಕೊಂಡೇ ಬಿಟ್ಟಳು. ಆಗ ಅಲ್ಲೇ ಇದ್ದ, ರಾಮು.

ಅವಳನ್ನ ಈಚೆಗೆ ಎಳೆದ — ಆಕಾಶ ಹರಿದುಬೀಳುವಾಗ, ಅಂಗೈ ಒಡ್ಡಿದರೆ ತಡೆದೀತೆ? ಬಿದ್ದೇ ಬಿದ್ದಿತು, ತಲೇಮೇಲೆ.

ಮಗ ಕಾಣಿಸಿಕೊಂಡನೋ ಇಲ್ಲವೋ, ಸಾಹುಕಾರ ಏನು ಮಾಡಿದ? ಇವನನ್ನ ನನ್ನ ಮನೆಯಲ್ಲಿ ಜೀತಕ್ಕೆ ಇರಿಸು, ಬಡ್ಡಿ ಗಿಡ್ಡಿ ಏನೂ ಬೇಡ, ಅವನಿಗೂ ಊಟಕ್ಕಿಕ್ಕುತ್ತೇನೆ, ಬೇಕಾದ ಹಾಗೆ ಕೆಲಸ ತೆಗೀತೇನೆ ಕಲಿಸುತ್ತೇನೆ, ನಿನ್ನ ಕೈಲಿ ಕಾಸು ಕೂಡಿದಾಗ ಅರವತ್ತು ರೂಪಾಯಿ ಒಟ್ಟಾಗಿ ಕೊಡು ಸಾಕು, ನಿನ್ನ ಸಾಲ ವಜಾ, ಮಗನನ್ನೂ ಬಿಡಿಸಿ ಕೊಂಡು ಹೋಗು, ಅಂದ.

ಹಳ್ಳಿಯವರು ನಾವು, ಮಾತು ಅಂದರೆ ತಲೆ ತಲೆ ಬಿದ್ದರೂ ಹಿಂತೆಗೆಯುವುದಿಲ್ಲ. ನಮಗೆ ಸಬ್‌ರೆಜಿಸ್ಟ್ರಿ ರೂಬುರೂಬು ಹೆಬ್ಬೆಟ್ಟು ರುಜು ಸಾಕ್ಷಿ ಸ್ಟಾಂಪು ಏನೂ ಬೇಕಿಲ್ಲ. ಹೇಳುವವನು ಕಳ್ಳನಾದರೆ, ಕೇಳುವವ ಮಂಕನಾದರೆ, ಅವೆಲ್ಲ ಊರುಗೋಲು ಬೇಕು. ನಮ್ಮ ಮಾತಿಗೆ ಒಳಗಿರುವ ಪರಮಾತ್ಮನೇ ಸಾಕ್ಷಿ; ಹೊರಗೆ ಬೆಳಗುವ ಸೂರ್ಯ ನಾರಾಯಣನೇ ಸಬ್‌ರೆಜಿಸ್ಟ್ರಿ; ನಿಂತಿರುವ ಭೂಮಿತಾಯೇ ಪತ್ರ; ಬೀಸುವ ಗಾಳಿಯೇ ಸ್ಟಾಂಪು. ನಂಬಿಕೆ ಮೇಲೆ ನಡಿಯುವವರು ನಾವು. ಆಷಾಢದಲ್ಲಿ ಗಾಳಿ ಬೀಸುತ್ತೆ, ಶ್ರಾವಣದಲ್ಲಿ ಮಳೆ ಬರುತ್ತೆ, ಬಾವಿ ತೋಡಿದರೆ ನೀರು, ಹುಲ್ಲು ಹಾಕಿದರೆ ಹಾಲು ಕೊಡುತ್ತೆ, ಎಲ್ಲ ಬರೀ ನಂಬಿಕೆ. ಆದ್ದರಿಂದ ಅಷ್ಟು ಪ್ರೀತಿಯಿಂದ ಅವನು ನನ್ನ ಮಗನನ್ನ ಜೀತಕ್ಕಿಟ್ಟುಕೊಂಡು, ಅಸಲಲ್ಲಿ ಕೊಂಚ ಬಡ್ಡಿ ಪೂರ್ತ ಬಿಟ್ಟುಕೊಡುತ್ತೇನೆ ಅಂದಾಗ ನಾನು ಹೂಂ ಅಂದೇಬಿಟ್ಟೆ, ಕಡ್ಡಿ ಮುರಿದ ಹಾಗೆ ಕೋ ಅಂತ ರಾಮನ ಕೈಹಿಡಿದು ದಶರಥಮಾರಾಯ ಇಶ್ವಾಮಿತ್ರನ ಮಡಿಲಲ್ಲಿ ಮಗನನ್ನಿಟ್ಟ ಹಾಗೆ ಇಟ್ಟೇ ಬಿಟ್ಟೆ.

ನಮ್ಮ ಮನೆಗಿಂತ ಅವನಿಗೆ ಎರಡು ಹೊತ್ತು ರುಚಿಯಾದ ಮುದ್ದೆ ಬೀಳುತ್ತೆ ಎಂಬ ಖಾತ್ರಿ ನನಗೆ. ಸಾಹುಕಾರರ ಮನೇಲಿದ್ದರೆ, ಅವರ

ಮಕ್ಕಳ ಸಹವಾಸ ಬಿದ್ದು ಕೊಂಚ ಅಕ್ಷರವನ್ನೂ ಕಲಿಯಬಹುದು, ಇನ್ನೂ ಜಾಣನಾಗಬಹುದು ಏಟು ಬಿದ್ದರೂ ಬೀಳಬಹುದು ಅನ್ನಿ; ಬಿದ್ದರೆ ಬೀಳಲಿ. ಸಾವಿರ ಉಳಿಪೆಟ್ಟಿಗೆ ಒಂದು ವಿಗ್ರಹ. ಉದ್ಧಾರ ವಾಗುವುದಕ್ಕೆ ತಾನೆ ಬೈಯುವುದು? ಇಸ್ಕೂಲು ಕಾಲೇಜು ನಮ್ಮ ಹಣೆಯಲ್ಲಿ ಬರೆಯಲಿಲ್ಲ. ಯಾವ ರಾಮ ರಾಜ್ಯ ಆಳಿದರೂ ಯಾವ ರಾಯ ರಾಜ್ಯ ಕಳೆದುಕೊಂಡರೂ ರಾಗಿ ಬೀಸುವುದು ತಪ್ಪಿದ್ದಲ್ಲ ನಮಗೆ. ಚೆನ್ನಾಗಿ ಅರೆದು ಅರೆದು ದುಡಿಸುವವನು ಸಿಕ್ಕಿದರೆ ಅದೇ ನಮ್ಮ ಪುಣ್ಯ, ಅಂತ ನಾನೂ ಹೂಂ ಅಂದೆ.

ಅವಳನ್ನೊಪ್ಪಿಸುವುದಕ್ಕೆ ಒಂದು ವಾರ ಹಿಡಿಯಿತು. ಜೀತಕ್ಕೊಪ್ಪಿ ಸಿದ್ದ ನಮ್ಮ ಪಕ್ಕದ ಹಳ್ಳಿಯವನೊಬ್ಬ ಅವರ ಮನೆ ಬಾವಿಗೆ ಬಿದ್ದು ಸತ್ತ, ಹಿಂಸೆ ತಾಳಲಾರದೆ ಅದನ್ನೇ ನೆನೆದು ಗೋಳಾಡಿದಳು. ಬಿಡಿಸಿ ತರುವುದಕ್ಕೆ ನಮಗೆಲ್ಲಿ ತ್ರಾಣ? ಇದ್ದೊಬ್ಬ ಮಗನನ್ನ ಗುಡೀಗೆ ಹಾಕಿದರು ಅಂತ ಊರವರೆಲ್ಲ ದೂರುತ್ತಾರೆ, ಅಂತ ರಾಗ ತೆಗೆದಳು. ಆದರೆ ಹೆಣ್ಣು ಹೆಂಗಸನ್ನ ಹತೋಟಿಗೆ ತರುವ ಪಟ್ಟುಗಳು ಯಾವುವು ಅಂತ ನಮಗೆ ಗೊತ್ತಿಲ್ಲವೆ? ತಹಬಂದಿಗೆ ತಂದೆ, ಬೇಗ.

ಮೊದಲು ಒಂದೆರಡು ದಿನ ಅವಳು ಊಟ ಕೂಡ ಮಾಡಲಿಲ್ಲ. ದೆವ್ವ ಬಡಿದ ಹಾಗೆ ಕೂತೇ ಇದ್ದಳು. ಮಾತಾಡಿಸಿದವರ ಮೇಲೆ ರೇಗಿ ಎಗರಾಡುವಳು. ಸದಾ ಸಿಡಿಮಿಡಿ. ಮುಕ್ಕಾಲು ಹುಚ್ಚೇ ಹಿಡಿದಿತ್ತು. ಮಲಗಿದ್ದಾಗ ಎಲ್ಲಿ ಕತ್ತು ಹಿಸುಕುತ್ತಾಳೋ ಎಂಬ ಭಯ ನನಗೆ. ಅಲ್ಲಾ, ನನ್ನಲ್ಲೇನು ತಪ್ಪು? ನಮ್ಮ ಸೀಮೆಯಲ್ಲಿ ಯಾರೂ ತಮ್ಮ ಮಕ್ಕಳನ್ನ ಜೀತಕ್ಕೆ ಇರಿಸುವುದೇ ಇಲ್ಲವೆ? ಸಾಲಕ್ಕಾಗದ ಮಗ ಇದ್ದೇನು ಫಲ? ತಾಯಿ ತಂದೆಗಿಂತ ಚೆನ್ನಾಗಿ ನೋಡಿಕೊಳ್ಳುವ ಸಾಹುಕಾರರೇ ಇಲ್ಲವೇ, ಲೋಕದಲ್ಲಿ? ಬಾವಿಗೆ ಒಬ್ಬ ಬಿದ್ದ ಅಂದರೆ, ನಾನೊಂದು ಸಂಗತಿ ಕೇಳಿದೇನೆ, ಅದಕ್ಕೇನು ಜವಾಬು ಕೊಡುತ್ತಾಳೆ ಅವಳು? ಚೆನ್ನಪಟ್ಟಣದ ಹತ್ತಿರ ನನ್ನಂಥ ದುರಾದೃಷ್ಟವಂತ ಒಬ್ಬ ಮಗನನ್ನ

ಜೀತಕ್ಕಿಟ್ಟ; ಆ ಹುಡುಗ ಬಲು ಜಾಣ; ಸಾಹುಕಾರರ ಮಗಳನ್ನೇ ಹೊಡೆದ; ಲಗ್ನವೂ ಆಯಿತು ಅವರಿಬ್ಬರಿಗೆ. ಗುಟ್ಟನಲ್ಲೇ ಎಡವಟ್ಟಾದದ್ದು, ಮದುವೇಲಿ ಸಮಾಪ್ತಿ .... ನಮ್ಮ ರಾಮುನಿಗೂ ಏಕೆ ದೇವರು ಅಂಥ ಸುಯೋಗವನ್ನ ಹಣೇಲಿ ಬರೆದಿರಬಾರದು? ಏನೇನೋ ಹೇಳಿ ನೋಡಿದೆ, ಗಿಣಿಗೆ ಹೇಳುವ ಹಾಗೆ, ನಾಲಗೆ ಬತ್ತಿತು, ಲಾಯರಿ ಪಾಯಿಂಟುಗಳನ್ನೆಲ್ಲ, ಆದರೂ, ಅಯ್ಯೋ, ಅಪ್ಪಾ, ನನ್ನ ಮಗನನ್ನ ಕರೆದು ತನ್ನಿ, ಅಂತ ಇವಳ ಗುಲ್ಲೋ ಗುಲ್ಲು! ಇದೆಂಥ ಫಜೀತಿ ಅಂತ ನಾನು ತಲೆ ಚಚ್ಚುವೆ ಒಳಗೆ ನನಗೂ ಕುದಿತವೆ. ಆದರೂ ತಿಳಿವಳಿಕಸ್ಥರು ಹೊರಗೂ ಕುದಿಯುವುದಿಲ್ಲ; ಶಾಂತವಾಗಿರುತ್ತಾರೆ. ನಾನು ತೆಪ್ಪಗಿದ್ದೆನಲ್ಲಾ, ನನ್ನ ಹೊಟ್ಟೆಯೊಳಗೆ ಸಂಕಟ ಇಲ್ಲ, ಅಂತ ಅವಳ ಊಹೆ! ಅದಕ್ಕೇ ಅವಳು ರೇಗಿದ್ದು. ನಿವಾರಿಸುವುದಕ್ಕಾಗದ ಗೋಳನ್ನ ಮುಖದಲ್ಲಿ ತೋರಿಸಿ ಇತರರನ್ನೂ ಗೋಳಾಡಿಸುವುದು ಯಾವ ನ್ಯಾಯ?

ಅವಳಿಗೀ ಗುಟ್ಟು ಗೊತ್ತಿಲ್ಲ. ಕಂದನನ್ನ ಪರರ ಮನೆಯಲ್ಲಿ ಬಿಸಾಕಿ ಪೀಡೆ ಕಳೆಯಿತು ಅಂತ ತೆಪ್ಪಗಿದೇನೆ, ಅಂತ ಅವಳು; ಸಾಲದ ಹಣ ಕೊಟ್ಟು ಬಿಡಿಸುವುದೇ ಇಲ್ಲ ನಾನು ಎಂದೆಂದಿಗೂ ಅಂತ ಗುಮಾನಿ .... ಇಲ್ಲ ಕಣೆ, ಇಲ್ಲ ಕಣೆ, ಅಂತ ಹೇಳಿ ಹೇಳಿ, ಸಮಾಧಾನಕ್ಕೆ ತರುವುದಕ್ಕೆ ಮೂರು ತಿಂಗಳು ಹಿಡಿಯಿತು.

ಮೊದಲೇ ಗೂನು, ಅದರ ಮೇಲೆ ಇದೊಂದು ಕುರ! ಊರಾಚೆ ರಸ್ತೆ ಕರೆಯುತ್ತಲೇ ಇತ್ತು, ನನ್ನನ್ನ. "ಬಾರೋ, ಕರೆದುಕೊಂಡು ಹೋಗುತ್ತೇನೆ, ದೇಶ ವಿಶಾಲವಾಗಿದೆ, ನಿನ್ನ ಹೊಟ್ಟೆ ಬಟ್ಟೆಗೆಷ್ಟು ಬೇಕು ಮಹಾ, ನೌಕರಿ ಸಿಕ್ಕರೆ ನಿನ್ನವರಿಗೂ ಕಳುಹಿಸು, ಮಗನನ್ನು ಉಳಿಸುವುದಕ್ಕೆ ಅಲ್ಲಿ ಕೂತರೆ ಆಗುತ್ತದೆಯೆ ...." ಅಂತ. ಒಂದು ದಿವಸ ಏನು ಮಾಡಿದೆ? ಮೂಡಲಲ್ಲಿ ಸೂರ್ಯ ಹುಟ್ಟುವಾಗ, ಅದು ನನ್ನನ್ನ ನೋಡಿ, ಇಲ್ಲೇ ಕುಕ್ಕರಬಡಿದಿದ್ದೀಯಾ ಇನ್ನೂ, ಅಂತ ಅಣಕಿಸುವ ಹಾಗೆ ತೋರುವುದು. ಸಂಜೆ ಹೊತ್ತು ಮುಳುಗುವಾಗ, ಲೋ! ಇದೊಂದು ದಿನ

ಹಾಳುಮಾಡಿದೆಯಲ್ಲೋ ಇಲ್ಲೇ ಒದ್ದಾಡಿ, ಅಂತ ಸೂರ್ಯ ನನ್ನನ್ನ ನೋಡಿ ನಕ್ಕು ಮರೆಯಾದ ಹಾಗೆ ತೋರುವುದು.

ಕಡೆಗೆ, ಅವತ್ತು ಶುಕ್ರವಾರ, ಹೊಲಕ್ಕೆ ಹೋಗಿದ್ದವನು ಹೇಳದೆ ಕೇಳದೆ, ಕಾಲುದಾರಿ ಮೇಲೆ ಕೆರೆ ಏರಿ ಹಿಡಿದು, ಕೆರೇ ಹಳ್ಳ ದಾಟಿ ದೊಡ್ಡ ರಸ್ತೆ ಹಿಡಿದು, ನಡೆದೇ ಬಿಟ್ಟೆ ಉದ್ದಕ್ಕೂ. ನನ್ನ ಹಟ್ಟೆಯದು ಒಂದು ಒಕ್ಕಣ್ಣೆಮ್ಮೆಗೆ ಹೇಗೆ ತಿಳಿಯಿತೋ ಏನೋ, ಅರ್ಧ ಹರದಾರಿ ನನ್ನ ಹಿಂದೇನೇ ಬಂತು. ಎಷ್ಟು ಕಲ್ಲು ಬೀರಿದರೂ, ಹಿಂದಕ್ಕೆ ಹೋಗಲೊಲ್ಲದು.

ಗೊತ್ತಿಲ್ಲ, ಗುರಿ ಇಲ್ಲ. ಎಲ್ಲಿಗಾದರೂ ಹೋಗಿ ಏನಾದರೂ ದುಡಿದು ಎಪ್ಪತ್ತೈದು ರೂಪಾಯಿ ಲಪಟಾಯಿಸಿ ಸಾಹುಕಾರನ ಮೂತಿ ಮೇಲೆ ಎಸೆದು ರಾಮನ ವನವಾಸ ಮುಗಿಸಿ ಪಾಯಸ ಮಾಡಿಸಿ ಉಂಡು ಹಾಯಾಗಿ ಮಲಗಬೇಕು. ಇದನ್ನ ಮಾಡದೆ ಇದ್ದರೆ, ಹುಟ್ಟಿದ್ದು ಹುಟ್ಟಿಸಿದ್ದು, ಎರಡೂ ಸುಳ್ಳು, ಅಂತ ನಿಶ್ಚಯಮಾಡಿದೆ. ಬಿರುಬಿರನೆ ಕಾಲು ಹಾಕಿದೆ.

ಅಂಗಾಲಿಗೆ ತ್ರಾಣ ಇದ್ದರೆ, ಬಂಗಾಳ ತನಕ ಹೋಗಬಹುದು. ಹೋಗುತ್ತ ಹೋಗುತ್ತ, ಕೆಂಗಲ್ ಆಂಜನೇಯಸ್ವಾಮಿ ಗುಡಿ ಸಿಕ್ಕಿತು. ಅದರ ಮುಂದೆ ಕಾಲಿನದು ಕಳಚಿ ನಿಂತೆ, ಬೇಕೆ ಬೇಡವೆ ಎಂಬ ಉಯ್ಯಾಲೆ ಮನಸ್ಸಿಗೆ.

ಬೇಕು ಅಂತ ಉತ್ತರ ಬಂತು. ಹೌದು, ನನ್ನಂಥವನಿಗಾಗಿಯೇ ದೇವರು, ಗುಡಿ, ಪೂಜೆ ಎಲ್ಲ. ಶ್ರೀಮಂತರಿಗೇನು ? ಹಣವೇ ದೇವರು. ಹಣದ ಬಲವೊಂದಿದ್ದರೆ ಸಾಕು, ದೇವರನ್ನ ಅವರ ತಿಜೋರಿಯೊಳಗೆ ಸೇರಿಸಿ ಬೀಗ ಹಾಕಬಹುದು. ಖಾಯಿಲೆ ಬಂತು: ಸಾವಿರಗಟ್ಟಲೆ ಬಿನಾಕಿ ಕಾರಲ್ಲೇ ಡಾಕ್ಟರನ್ನ ಮನೆಗೇ ಬರಮಾಡಿಕೊಂಡು, ಅಂಗಾಂಗ ಗಳನ್ನೇ ಕತ್ತರಿಸಿ ಎಸೆಯಬಹುದು; ಚಿನ್ನದ ರಸವನ್ನೇ ಕುಡಿಸಬಹುದು.

ಹಲ್ಲಿನ ಹುಳುಕು ಮುಚ್ಚುವುದಕ್ಕೆ ಚಿನ್ನದ ಪುಡೀನ ಭರ್ತಿ ಮಾಡಿ ಕೊಳ್ಳುತ್ತಾರೆ, ಶ್ರೀಮಂತರು. ಅವರ ಮನೆಯಲ್ಲಿ ಲಕ್ಷ್ಮಿಯಂಥ ಕೂಸು ಹುಟ್ಟಿದರೆ, ದಾದಿಯರ ಕೈಗೆ ಕೊಟ್ಟು ರಬ್ಬರ್ ಗಾಡೀಲಿ ಕೂರಿಸಿ ನೂಕಿಸುತ್ತಾರೆ; ಮಕ್ಕಳಿಗೆ ಬೂಟ್ಸು ಹಾಕುವವನೊಬ್ಬ, ಮೂಗೊರಸು ವವಳೊಬ್ಬಳು, ಗಾಳಿ ಕುಡಿಸುವವನೊಬ್ಬ, ಪಾಠ ಹೇಳುವುದಕ್ಕೊಬ್ಬ ಮನೆ ಮೇಷ್ಟರು ; ಓದಿಸಿ ಓದಿಸಿ ಪಾಸುಮಾಡಿಸಿ ಶ್ರೀಮಾನ್ ಮಹಾರಾಜ ರಿಂದಲೇ ಮೆಡ್ಲು ಕೊಡಿಸಬಹುದು; ದಿವಾನರ ಸ್ವಹಸ್ತ ಅಮೀಲ್ದಾರಿ ಕೊಡಿಸಿ ಕುದುರೆ ಹತ್ತಿಸಬಹುದು; ತಾಲ್ಲೋಕನ್ನೆಲ್ಲ ಹದ್ದುಬಸ್ತಿನಲ್ಲಿಟ್ಟು ಅವರ ಕೈಯಿಂದ ಬೆದರಿಸಬಹುದು. ಶ್ರೀಮಂತರಿಗೆ ದೇವರೇಕೆ? ದೇವರ ಶಿಫಾರ್ಸು ಅವರ ಮರ್ಜಿ ಏನೂ ಬೇಕಿಲ್ಲ, ದೇವರು ಅನ್ನೋದು ಕುರುಡನ ಕೈಗೋಲು, ಬಡವನ ಥೈಲಿ, ಕುಂಟನಿಗೆ ಕೊಂಕುಳು ಗೋಲು, ರೋಗಿಗೆ ಹಾಸಿಗೆ, ಸಾಲದಲ್ಲಿ ಮುಳುಗಿರುವವನಿಗೆ ಅವನೇ ತೆಪ್ಪ, ಕಣ್ಣೀರು ಬಿಡುತ್ತಿರುವವನಿಗೆ ಅವನೇ ಕೈವಸ್ತ್ರ, ಕತ್ತಲಲ್ಲಿ ತೊಳಲು ವವನಿಗೆ ಅವನೇ ಕೈದೀವಿಗೆ.

ಅಂದಮೇಲೆ, ನಾನು ಒಳಕ್ಕೆ ಹೋಗಲೇಬೇಕಾಯಿತು. ನೆಟ್ಟಗೆ ಗರ್ಭಗುಡಿ ತನಕ ಹೋದೆ ಮಿಣ ಮಿಣ ದೀಪ ಉರಿಯುತ್ತಿತ್ತು. ಬಿಸಿಲಿನಿಂದ ಕತ್ತಲೆಗೆ ಒಂದೇ ಕ್ಷಣದಲ್ಲಿ ನುಗ್ಗಿದ್ದರಿಂದ, ಏನೂ ಕಾಣಿಸಲಿಲ್ಲ, ನನಗೆ. ಆದರೆ ಕೇಳಿಸಿತು! ಏನು ಕೇಳಿತು, ಅಂತೀರಾ? ಗುಡಿಯೊಳಗೆ ಒಬ್ಬ ಕೆಮ್ಮುತ್ತ ಇದ್ದದ್ದು, ಕೇಳಿಸಿತು.

ಆ ಕೆಮ್ಮಲು ತುಂಬ ಭಯಂಕರದ ಗೋಳಿನ ಕೆಮ್ಮಲು. ಹನುಮಂತನ ಕಿವಿ ಅದನ್ನ ಕೇಳಿ ಒಡೆಯದೆ ಇರುತ್ತದೆಯೆ, ಅಂತ ನನಗೆ ಗುಮಾನಿ. ಅವನ ಕೆಮ್ಮಲು ಕೇಳಿ ನಾನು ದೇವರ ಸುದ್ದಿಯನ್ನೇ ಮರೆತೆ. ಇದೆಂಥ ರೋಗವಪ್ಪ, ಹೀಗೂ ಉಂಟೆ ವ್ಯಾಧಿ, ನಾಲ್ಕು ಬಾರಿ ಹೀಗೆ ಕೆಮ್ಮಿದರೆ ಎದೆಗೂಡಿನೆಲುಬೆಲ್ಲ ಚೂರು ಚೂರಾಗುತ್ತದಲ್ಲಾ ಎಂಥ 'ಗಾಮ'ನಿಗೂ? ಇವನು ಯಾರು ಇವನು, ಹೀಗೆ ಕೆಮ್ಮುವವನು?

ದೇವಾಂಶದವನೋ, ಅಸುರಾಂಶದವನೋ, ನರಮನುಷ್ಯನಿರಲಾರ, ಅಂತ ನನಗೆ ಸಂದೇಹ. ಕಿಬ್ಬೊಟ್ಟೆಯಿಂದ ಬಳ್ಳಿಬಳ್ಳಿಯ ಹಾಗೆ ಹಂತ ಹಂತವಾಗಿ ಗಂಟಲತನಕ ಏರಿಬರುವುದು, ಸಿಡಿದು ಸಿಡಿದು. ಕಣ್ಣುಗಳೆರಡೂ ನೀಲೀ ರತ್ನಗಳ ಹಾಗೆ ಹೊಳೆಯುವುದು. ಕೊಹ್ ಕೊಹ್ ಕೊಹ್ ಅಂತ ಒಂದರ ಹಿಂದೊಂದು ಸಾಲುಗಟ್ಟುವಾಗ, ಗೋಡೆ, ಹೊಕ್ ಹೊಕ್ ಅಂತ ದನಿ ಕೊಡುವುದು. ಒಂದು ಸಲ ಕೆಮ್ಮಿ ಮುಗಿಸಿದ ಅಂದರೆ, ಹಾಹಾ ಅಂತ ಸಂಕಟದಲ್ಲಿ ನರಳುವನು.

ಆಗ ನನಗನ್ನಿಸಿತು: ಮಗನನ್ನ ಜೀತಕ್ಕಿರಿಸಿರುವುದು ಒಂದೇ ತಾನೆ, ನನ್ನ ಗೋಳು. ಆದರೆ, ಇವನ ಹಾಗೆ ಹಗಲು ರಾತ್ರೆ ಸತ್ತೆ ಸತ್ತೆ ಅಂತ ಕೆಮ್ಮಿ ಬದುಕುವ ಬರಹವನ್ನು ನನ್ನ ಹಣೆಯಲ್ಲಿ ಬರೆಯುವುದಕ್ಕೆ ಮರೆತನಲ್ಲಾ ಭಗವಂತ, ಅದಕ್ಕಾಗಿ, ಇಕೊ, ಹಣ್ಣು ಕಾಯಿ, ಅಂತ, ಅವನ್ನು ತಂದು ದೇವರಿಗೆ ಒಪ್ಪಿಸೋಣ ಅನ್ನಿಸಿತು, ನನಗೆ.

ಗುಡಿಯ ಮುಂದಿನ ಅಂಗಡಿಗೆ ಹೋದೆ. ಚೌಕಾಶಿ ಮಾಡುತ್ತ, ಅವನ ಹತ್ತಿರ ವಿಚಾರಿಸಿದೆ, ಯಾರಪ್ಪ ಅದು, ಗುಡಿಯೊಳಗೆ ಗಲಾಟೆ ಮಾಡುವವನು, ಅಂತ. ಅವನ ಹೃದಯ ತೆಂಗಿನಕಾಯಿಯಷ್ಟು ಕಠಿಣ, ಹೊರಕ್ಕೆ; ಒಳಗೆ ನೀರು, ಸಿಹಿ ನೀರು. "ಬಿಡೋ, ಗೌಡಾ! ಅವನ ಕಥೆ ನಿನಗೇಕೆ? ನಿನ್ನ ಪಾಡಿಗೆ ನೀನು ಹನುಮಂತನಿಗೆ ಹರಕೆ ಸಲ್ಲಿಸಿ ಬಿಟ್ಟು, ನಡೀತಿರು ಮುಂದಕ್ಕೆ" ಅಂದ. ನಾನೇನೂ ಜವಾಬು ಕೊಡಲಿಲ್ಲ. "ಅಯ್ಯೋ! ಲೋಕದಲ್ಲಿ ಅಣ್ಣ ತಮ್ಮ ಬಂದೆಯಾ ಹೋದೆಯಾ ಬದುಕಿದೆಯಾ ಸತ್ತೆಯಾ ಎಂಬೋ ಕನಿಕರ ಇಂಗಿಹೋಯ್ತೆ?" ಅಂದುಕೊಂಡೆ. ಆಗ ಅವನು, "ಅವನ ಸಂಕಟ ನೋಡಲಾರದೆ, ನಾವೆಲ್ಲ ಹೋಗಿ, ಟಿ.ಬಿ. ಹತ್ತಿರ ಕೂತಿದ್ದರು, ಚಿರಂಜೀವಿಸ್ವಾಮಿ, ಅವರನ್ನ ಗುಡಿಯೊಳಕ್ಕೆ ಕರೆದುಕೊಂಡು ಹೋಗಿ, ಅವನ ನಾಡಿ ಹಿಡಿಸಿದೆವು. ಆದರೆ, ಹಾಳಾದವನು ಅವನು ಒಪ್ಪಿದರೆ ತಾನೆ?.... ನನ್ನ ಹೊಟ್ಟೆ ಮೇಲೆ ಹೊಡೆಯಬೇಡಿರೋ!

ನನ್ನ ಸಂಪಾದನೆಗೆ ಕಲ್ಲು ಹಾಕಬೇಡಿರೋ! ಈ ಕೆಮ್ಮಲೊಂದರಿಂದಲೇ ನಾನು ಹೊಟ್ಟೆ ಹೊರೆದುಕೊಳ್ಳೋದು. ಬೆಂಗಳೂರು ಮಾರ್ಕೆಟ್ ಚೌಕ ದಲ್ಲಿ, ಆಸ್ಪತ್ರೆ ಗೋಡೆಗೆ ಒರಗಿಕೊಂಡು, ಹೀಗೆ ನಾನು ಕೆಮ್ಮುತ್ತಾ ಇದ್ದರೆ, ಮುಂದುಗಡೆ ಹಾಸಿದ ಹರಕು ಬಟ್ಟೆ ಮೇಲೆ, ಸಂಜೆಯೊಳಗೆ, ಮೂರು ರೂಪಾಯಿನಷ್ಟು ಉದುರುವುದು, ತೂತಿನ ಕಾಸುಗಳು. ಈ ಮನೆಹಾಳು ಸ್ವಾಮಿ ಈಗ ನನ್ನ ಕೆಮ್ಮಲು ವಾಸಿಮಾಡಿಬಿಟ್ಟರೆ, ನಾಳೆಯಿಂದ ನಾನು ಗೆಯ್ದು ತಿನ್ನಬೇಕಾಗುತ್ತದೆ. ಇಷ್ಟು ವರ್ಷ ಮಾಡದ ಕೆಲಸ ನಾಳೆಯಿಂದ ನಾನು ಹೇಗೆ ಮಾಡಲಿ" ಅಂತ ಅವನು ಗೋಳಾಡಿದ. "ಹೋಗ್ತೀರೋ ಇಲ್ಲವೋ ನನ್ನ ಹತ್ತಿರದಿಂದ? ಕ್ಯಾಕರಿಸಿ ಉಗೀತೇನೆ, ಮೂತಿ ಮೇಲೆ" ಅಂತ ಗದರಿಸಿದ, ಸ್ವಾಮೀನ. "ಬೇಡ, ಗೌಡ! ಅವನ ತಂಟೆಗೆ ಹೋಗ ಬೇಡ. ಅವನ ಕೆಮ್ಮಲಿನ ವಿಚಾರ ನೀನು ಕೆದಕುವುದಕ್ಕೆ ಹೋದರೆ, ನಿನ್ನ ಮುಖಕ್ಕೂ ಬಿದ್ದೀತು, ಉಗಳು ನೀರು" ಅಂದ, ಅಂಗಡಿಯವ. "ಬೆಂಗಳೂರು ಪೇಟೆ ಶ್ರೀಮಂತರೆಲ್ಲ ಮೀಟಿಂಗ್ ಮಾಡಿ, ತಿರಕರನ್ನೆಲ್ಲ ವ್ಯಾನಿಗೆ ತುಂಬಿ ಸರ್ಕಾರಿ ಬಂಗ್ಲಿಗೆ ಸಾಗಿಸಿ, ಸೊಂಟ ಬಗ್ಗಿಸಿ ದುಡಿಸುತ್ತಾ ರಂತಲ್ಲಾ, ಅದಕ್ಕೆ ಹೆದರಿ ಅವನು ಮೈಸೂರಿಗೋ ಮಡಕೇರಿಗೋ ಮಂಗ ಳೂರಿಗೋ ದೇಶಾಂತ್ರ ಹೊರಟಿದ್ದನಂತೆ. ಇಲ್ಲಿಯತನಕ ಬಸ್ಸಲ್ಲಿ ಬಂದ. ಕೂತಿದ್ದವರ ಕೋಪ ತಾಳಲಾರದೆ, ಡ್ರೈವರಪ್ಪ ಇಲ್ಲೇ ಇಳಿಸಿ ಮುಂದಕ್ಕೆ ನಡೆದ, ನಿನ್ನೆ" ಅಂದ, ಅವನು.

ಹೀಗೂ ಉಂಟೆ? ಹೊಟ್ಟೆ ಹೋಳಾಗುವಷ್ಟು ಕೆಮ್ಮುತ್ತಿದ್ದರೂ, ಆ ಕೆಮ್ಮು ಕಳೆದುಕೊಂಡರೆ, ಆ ಹೊಟ್ಟೆ ತುಂಬುವುದಿಲ್ಲ, ಅದನ್ನ ಉಳಿಸಿ ಕೊಂಡಾದರೂ ಆ ಡೊಗರನ್ನು ಭರ್ತಿ ಮಾಡೋಣ, ಎಂಬ ಬುದ್ಧಿಯನ್ನ ಅವನಿಗೆ ಯಾವ ದೇವರು ಕೊಟ್ಟ? ಜೀವ ಇರುವ ತನಕ ಜೀವಾನ ಹೇಗಾ ದರೂ ಉಳಿಸಿಕೊಳ್ಳಬೇಕು, ಎಂಬ ಹಂಬಲ, ಬಯಕೆ. ಕೈಕಾಲು ಮುರಿದು ಕಣ್ಣು ಕಿವಿ ಹೋಗಿ ಹಲ್ಲೆಲ್ಲ ಉದುರಿ ಮೈ ಎಲ್ಲ ಕೀವು ತುಂಬಿದರೂ, ಸತ್ತೆ ಅಂತ ಹೇಳುವುದಿಲ್ಲ, ಪ್ರಾಣಿ. ಮಣ್ಣು ತಿಂದರೂ, ಮಣ್ಣಾಗಬಾರದು,

ಎಂಬ ಹಟ. ಬದುಕಿದರೆ, ಎಂದಾದರೊಂದು ದಿನ ಬುಧದೆಸೆ ಬಂದೀತು, ಎಂಬ ಕನಸು.

ಚಿರಂಜೀವಿ ಸ್ವಾಮಿಗಳನ್ನ ಒಂದು ಕಣ್ಣು ನೋಡಿ ಮುಂದಕ್ಕೆ ಹೊರಡೋಣವೆ, ಅಂತ ಅರೆಗಳಿಗೆ ಯೋಚನೆ ಹೊಳೆಯಿತು. ಆದರೆ, ಬರೀ ಕೈಲಿ ಹೋಗುವುದು ಹೇಗೆ? ಸ್ವಾಮಿಗಳು ನನ್ನನ್ನೂ ಎಳೆದು ನನ್ನ ತಲೇನ್ನೂ ಬೋಳಿಸಿದರೆ, ರಾಮನ ಗತಿಯೇನು? ಅಂತ ಚಿಂತೆ ಹತ್ತಿತು. ನನ್ನಂಥ ನೊಣಕ್ಕೆ ಸಿಂಬಳವೇ ಸುಖ ಅಂತ ನಾಲ್ಕು ಹೆಜ್ಜೆ ನಡೆದೆ. ಹಿಂದಿನಿಂದ ಒಂದು ಬಸ್ಸು ಬಂತು. ಬಸ್ಸು ಬಂದ್ರೆ ಏನು ಮಾಡಬೇಕು, ಅಂತ ನನಗೆ ಅಷ್ಟರಲ್ಲೇ ಗೊತ್ತಿತ್ತು ರಸ್ತೆಗಡ್ಡ ಕೈ ಹಿಡಿಯಬೇಕು. ಅವನು ನಿಲ್ಲಿಸುತ್ತಲೂ, ಅದರ ಎಡಕ್ಕೆ ಓಡಿ, ಹಿಂದಿನ ತೊಟ್ಟಿಯೊಳಕ್ಕೆ ನುಗ್ಗಿ ತಳದಲ್ಲಿ ಹಾಕಿರುವ ಮೂಟೆಗಳ ಮೇಲೆ ಕೂರಬೇಕು. ಮುಂದಿನ ಸೀಟು ಪೋಲೀಸಿನವರಿಗೆ, ಎರಡನೇ ಬೆಂಚು ಹೆಣ್ಣುಮಕ್ಕಳಿಗೆ, ಮೂರನೆಯದು ಪೇಟೆಯವರಿಗೆ; ತೊಟ್ಟಿ ಹಳ್ಳಿಯವರಿಗೆ. ಕೂತ ತಕ್ಷಣ ಕಂಡಕ್ಟರ ಹತ್ತಿರ ಟಿಕೀಟಿನ ಹಣಕ್ಕೆ ಚೌಕಾಶಿ ಮಾಡಬೇಕು. ಸರಿ! ನಾನೂ ಮಾಡಿದೆ, ನಾಲ್ಕು ಮೈಲಿಯಷ್ಟು ದೂರ. ಅವನೊಪ್ಪಲಿಲ್ಲ; ನಾನು ಜಗ್ಗಲಿಲ್ಲ. ಕೊನೆಗೆ, ಇಳಿಸೇಬಿಟ್ಟ. ಹೋಗಲಿ, ಏನು ಮಹಾ ನಷ್ಟ, ನಾಲ್ಕು ಮೈಲಿ ಬಿಟ್ಟೆ ಕೂರಿಸಿದನಲ್ಲಾ ಅಂತ ನಾನೂ ಇಳಿದು, ಇನ್ನೊಂದು ಬಸ್ಸಿಗೆ ಕೈ ಒಡ್ಡಿದೆ.

ಹಾಗೂ ಹೀಗೂ, ನನ್ನ ಹಳೆಯ ಬೆಂಗಳೂರಿಗೆ ಬಂದೆ. ಕೊಕ್ಕರೆ ಸೃಷ್ಟಿ ಮಾಡಿದ ದೇವರು, ಕೆರೆಯನ್ನೂ ಸೃಷ್ಟಿ ಮಾಡಲಿಲ್ಲವೆ? ನನಗೂ ಎಲ್ಲೋ ಅನ್ನ ಮಡಗಿರುತ್ತಾನೆ, ನನ್ನ ಮಗನ ಶಾಪಕ್ಕೂ ವಿಮೋಚನೆ ಉಂಟು, ಅಂತ ಅರಳೇಪೇಟೆಯಲ್ಲೇ ಸುತ್ತಾಡಿದೆ. ನನ್ನ ಹಳೆಯ ಮೆಷೀನ್ ದೋಸ್ತಿಗಳು ಒಬ್ಬನಾದರೂ ಎದುರಿಗೆ ಸಿಕ್ತಾನೆ, ಅನ್ನೋ ಭರವಸೆ ನನಗೆ. ಮನುಷ್ಯ ತನ್ನ ಹುಟ್ಟಿದವರ ನಡುವೇನೇ ಬಾಳಬೇಕು.

ಬಡವರಿಗೆ ಬಡವರೇ ಶರಣು; ಕಾರಲ್ಲಿ ಓಡಾಡುವವರಿಗೆ ಕಾಲುನಡಿಗೆ ಯವನ ಕೆಳೆತನ ಏಕೆ? ಬಡವನ ಕೈ ಶ್ರೀಮಂತರ ತೋಳೆತ್ತರಕ್ಕೆ ಬೆಳೆದೀತೆ?

ಎದುರಿಗೆ ಸಿಕ್ಕಿದವರ ಮೂತಿಯನ್ನೆಲ್ಲ ದುರುದುರನೆ ನೋಡುವೆ, ಅಂದರೆ, ಸುಮಾರು ನನ್ನ ವಯಸ್ಸಿನವರನ್ನು ಮಾತ್ರ. ಮನುಷ್ಯನ ಮುಖ ವರ್ಷ ವರ್ಷಕ್ಕೂ ಕೊಂಚ ಕೊಂಚ ಮಾರ್ಪಾಟಾಗುತ್ತಲೇ ಇರುತ್ತದೆ ಹಣೆಯಲ್ಲಿ ಗೆರೆ, ಕೆನ್ನೆಯಲ್ಲಿ ಗುಳಿ, ಬಾಯಲ್ಲಿ ತೂತು, ಹೆಚ್ಚುತ್ತಲೇ ಇರುತ್ತದೆ. ಬರೀ ಮೋರೆಯಿಂದ ಮಾತ್ರ ಗುರುತು ಹಿಡಿಯುವುದು ಕಷ್ಟ. ದನಿಯೇ ಗುರುತಿಗೆ ಐನಾತಿ ಸಾಕ್ಷಿ. ಹಳೆಯ ಮುಖವೆಲ್ಲ ಹೊಸದಾಗಿ ಕಾಣಿಸಿದುವು. ಅವರಿಗೂ ನನ್ನ ಮೋರೆ ಹೊಸದಾಗಿ ಕಂಡಿರಬೇಕು. ಕೆಂಗಯ್ಯಶೆಟ್ರನ್ನು ವಿಚಾರಿಸಿದೆ. ಅವರ ಮಗ ಚಿಂತಾಮಣಿಯಲ್ಲಿ ಊದ ಕಡ್ಡಿ ಅಂಗಡಿ ಇಟ್ಟು ಪಾಪರಾಗಿದ್ದನಂತೆ. ಶೆಟ್ರು ಹೊರಟು ಹೋಗಿ ಆರು ತಿಂಗಳಾಯಿತಂತೆ, ಮೊಮ್ಮಗ ಅಳುತ್ತ ಹೇಳಿದ. ಇನ್ನು ಯಾರು ದಿಕ್ಕು? ಕಂಗಾಲಾಗಿ, ಗೂಡ್ಸ್‌ಷೆಡ್ ಗೋಡೆಗೆ ಒರಗಿಕೊಂಡು ಅರಳೀ ಪೇಟೆಯಲ್ಲಿ ಬೀಡಿ ಸೇದುತ್ತ ನಿಂತಿದ್ದೆ.

ಆಗ, ನಿಮ್ಮ ಮನೆ ಕಟ್ಟಿಸಿದರಲ್ಲಾ, ಕಂಟ್ರಾಕ್ಟಯ್ಯನವರು, ಅವರು ನನ್ನನ್ನು ಕಂಡು, ನನ್ನ ಹತ್ತಿರಕ್ಕೆ ಬಂದರು. ಮುಕ್ಕಾಲು ಸೇದಿದ್ದ ಬೀಡಿ ತುಂಡನ್ನ ಬಿಸಾಕಿದೆ. ಅವರ ಹಣೆ ವಿಭೂತಿ ನೋಡುತ್ತಲೂ, ಕೈ ಎರಡೂ ತಾವಾಗಿಯೇ ಜೋಡಿಸಿಕೊಂಡುವು. ನಮಸ್ಕಾರ, ಸ್ವಾಮಿ, ಅಂದ್ರೆ, ಹಟಾತ್ತನೆ. ಅವರದು ಕಬ್ಬಿಣ ಬಂದಿತ್ತು; ಸುಂಕ ಕಟ್ಟಿ ಬಿಡಿಸಿ ಕೊಂಡಿದ್ದರು. ಅದನ್ನೆತ್ತಿ ಗಾಡಿಯಲ್ಲಿಡಲು ಕೂಲಿಯವ ಒಬ್ಬನೂ ಸಿಗ ಲಿಲ್ಲ; ಗೂಡ್ಸ್ ಕೂಲಿಗಳೆಲ್ಲ ಆನೆ ಬೇಕು, ಕುದುರೆ ಬೇಕು, ಅಂತ ದುಬಾರಿ ಕೇಳಿದರು. ಪರದಾಡುತ್ತಿದ್ದರು, ನಡು ರಸ್ತೆಯಲ್ಲಿ. ಆಗ, ಪರಮಾತ್ಮ ಅವರಿಗೆ ನನ್ನನ್ನ ತೋರಿಸಿ ಕೊಟ್ಟ.

ಲೋ, ಅಂದರು. ಹಾ, ಎಂದೆ. ಕಾಂಕ್ರೀಟಿನ ಕಂಬಿ, ಉದ್ದುದ್ದನೆಯದು, ಆರವತ್ತೆಪ್ಪತ್ತಿತ್ತು. ತೋಚಿದ್ದು ಕೊಡಿ, ಸ್ವಾಮಿ, ಎಂದೆ. ನನ್ನ ತ್ರಾಸ ನಿಮಗೇ ಗೊತ್ತಿದೆ; ಆದರೊಂದು, ಬೆಳಗ್ಗಿಂದ ಹೊಟ್ಟೆ ಖಾಲಿ, ನಾಷ್ಟಾ ಮಾಡಿಲ್ಲ, ರಟ್ಟೆ ಸೋತಿದೆ, ಎಂದೆ. ಗುರುತಿಲ್ಲ, ಪರಿಚಯವಿಲ್ಲ, ಆದರೂ ರಕ್ತ ಮಾಂಸ ಒಂದೇ ಅಲ್ಲವೆ, ಕರುಳಿಗೆ ಕರುಳು ಕೂಗಿ ಹೇಳುವುದಿಲ್ಲವೆ, ಕೊಡೋಣ ಎಂದು ಅನ್ನಿಸಿತು, ಅವರಿಗೆ. ಎಂಟಾಣೆ ಇತ್ತು ಕೈಗೆ, ನೋಡು, ಆ ಹೋಟ್ಲಿಗೆ ಹೋಗಿ, ಬೇಗ, ಚೆನ್ನಾಗಿ ತಿಂದು ಬಾ, ನಾನು ಇಲ್ಲೇ ಇರುತ್ತೇನೆ, ಅಂದರು.

ತಿಂದು ಬಂದೆ; ಅವರ ಜೋಡೆತ್ತಿನ ಗಾಡಿ ಹೊಡೆಯುವ ಆಳಿನ ಸಂಗಡ, ನಾನೂ ಸರಳನ್ನೆಲ್ಲ ಎತ್ತಿ ಇರಿಸಿದೆ. ಬಾರೋ ನೀನೂವೆ, ನಿನ್ನ ಹೆಸರೇನು, ಗೌಡನೋ ನೀನು, ಯಾವೂರು, ಬಾ, ಮನೇತನಕ, ಅಲ್ಲಿ ಇಳಿಸುವುದಕ್ಕೂ ಆಗುತ್ತದೆ, ಅಂದರು. ಅಷ್ಟು ದಯೆ, ಅವರದು. ಸರಿ! ಮನೆಗೆ ಬಂದದ್ದೂ ಆಯಿತು, ಇಳಿಸಿದ್ದೂ ಆಯಿತು ತಕ್ಷಣ, ನಾನು ಸರಕ್ಕನೆ ಹೋಗಿ ಅವರ ಕಾಲು ಹಿಡಿದುಕೊಂಡೆ. ನಾನು ನಿಮ್ಮ ದಾಸ, ತೇಲಿಸಿ ಮುಳುಗಿಸಿ, ನಿಮ್ಮನ್ನು ನಾನು ಬಿಡೆ, ನನ್ನ ಭಾರ ನಮ್ಮ ರಾಮನ ಭಾರ, ನಿಮ್ಮ ತಲೆ ಮೇಲೆ, ಎಂದೆ. ಎತ್ತುಗಳನ್ನ ಕೊಟ್ಟಿಗೆಗೆ ಕಟ್ಟೋ ಅಂದರು; ಭಾರಿ ಎತ್ತುಗಳು; ಹಳ್ಳಿಕಾರ್ ಜಾತಿ; ಒಂದೆತ್ತು ಮಲಗಿದರೆ, ಒಂದು ಅಂಕಣ ಭರ್ತಿ. ಎಳೆದುಕೊಂಡು ಹೋಗಿ, ಕಟ್ಟಿದೆ.

ಆ ಹಳ್ಳದಲ್ಲಿ, ನಿಮ್ಮ ಮನೆಗೆ ಗುದ್ದಲಿ ಪೂಜೆ ಮಾಡುವುದಕ್ಕೆ ಮೊದಲು, ಇದೇ ಅಯ್ಯ ಕಟ್ಟಿಸಲಿಲ್ಲವೆ ಮುದ್ರೆಯವರ ಮನೆಯನ್ನ, ಅಲ್ಲಿ ನನಗೆ ಚೆಂಗೂಲಿ ಕೆಲಸ, ವಾಚ್‌ಮನ್ ಕೆಲಸ, ಎರಡನ್ನೂ ಕೊಟ್ಟರು.

ದಿನಕ್ಕೆ ಹನ್ನೆರಡಾಣೆ, ಅಂದರೆ, ಭಾನುವಾರ ಬಿಡುವು, ಕೂಲಿ ಇಲ್ಲ. ಶನಿವಾರ ಶನಿವಾರ ಬಟವಾಡೆ.

ಮೊದಲನೆಯ ಶನಿವಾರವೇ ನನಗೆ ಹೇಳಿದರು, "ಲೋ! ಚೆಲುವಾ! ನಿನ್ನ ಕುಡಿಕೆಯಲ್ಲಿ ಈ ಬೆಂಗಳೂರು ಪೇಟೆ ಅವಾಂತರ ತಡೆದು ದುಡ್ಡು

ನಿಲ್ಲುವುದಿಲ್ಲ; ಕರಗಿ ಕರ್ಪೂರವಾಗುತ್ತದೆ. ಕುಡಿಯೋ ಚಟ ಇದೆ ನಿನಗಿನ್ನೂ." ಎಲಾ ಮಹರಾಯ, ಅದನ್ನ ಹೇಗೆ ಪತ್ತೆ ಹಚ್ಚಿದರು ಈ ಇನ್‌ಸ್ಪೇಟರು ಅಂತ ನನಗೆ ಆಶ್ಚರ್ಯವಾಯಿತು. "ನಿನ್ನ ಹೆಸರಲ್ಲಿ ನಾನು ವಾರ ವಾರವೂ, ಎರಡು ದಿನದ ಕೂಲಿ, ಒಂದೂವರೆ ರೂಪಾಯಿ, ಟಪಾಲ್ ಕಚೇರೀಲಿ ಜಮಾ ಮಾಡುತ್ತೇನೆ, ವರ್ಷ, ವರ್ಷ ಅರೆಯಲ್ಲಿ ನಿನ್ನ ಮಗನನ್ನ ಬಿಡಿಸಿ ಇಲ್ಲಿಗೇ ತಾ, ಅಂದರು.

ಆಹ! ಕುಣಿದಾಡಿಬಿಟ್ಟೆ, ನಾನು. ಇರುವುದಕೊಂದು ಷೆಡ್ಡಾಯಿತು; ನವರಾತ್ರಿಯಲ್ಲಿ ಅಯ್ಯನವರೇ ನಮಗೆಲ್ಲ ಕರೀ ಚಡ್ಡಿ ಕರೀ ಷರ್ಟು ಒಂದೊಂದು ಇನಾಮು ಕೊಡುತ್ತಾರೆ, ಅವು ಚಿಂದಿಯಾಗುವ ತನಕ ಬಟ್ಟೆ ಯೋಚನೆ ಬೇಕಾಗಿಲ್ಲ; ತಿನ್ನೋಕೆ ಉಣ್ಣೋಕೆ ರೂಪಾಯಿ; ಭಾನುವಾರ ಭಾನುವಾರ ಮಾವಳ್ಳಿ ಬಯಾಸ್ಕೋಪು, ಎಂಥದಾದರೂ ಒಂದು ಸ್ಟಂಟ್ ಚಿತ್ರ; ಅವಯ್ಯನ ಸೇವೆ. ಆರಾಮವಾಯಿತು, ಬದುಕು.

ಹನ್ನೆರಡು ಹದಿನೈದು ತಿಂಗಳು ಅಂತ ಲೆಕ್ಕ ತಿಳಿಯುವುದಕ್ಕೆ ಷೆಡ್ ಗೋಡೆ ಮೇಲೆ ಗೀಟ್ ಎಳೆಯುವೆ, ಅಮಾಸೆ ಅಮಾಸೆಗೆ ಸರಿಯಾಗಿ, ಇದ್ದಿಲು ಚೂರಿಂದ. ಒಂಬತ್ತೋ ಹತ್ತೋ ಆಗಿವೆ; ಅವತ್ತು ಅಯ್ಯನವರ ಮನೆಯಲ್ಲಿ ಯಾವುದೋ ಹಬ್ಬ; ಮೂರು ಗಂಟೇಗೇನೇ ಕೆಲಸ ಬಂದ್ ಮಾಡಿ, ಹೆಣ್ಣಾಳು ಗಂಡಾಳು ಎಲ್ಲ ಬನ್ರೋ, ಅನ್ನ ಸಾರು ಪಾಯಸ, ಅಂತ ಹೇಳಿದ್ದರು ಹಿಂದಿನ ದಿನವೇ............ನಾವೂನೂ ಮಂತ್ರಕ್ಕಿಂತ ಉಗುಳು ಬಿರುಸು ಅಂತ ಕೆಲಸಕ್ಕಿಂತ ಹರಟೇನೇ ಜಾಸ್ತಿ ಅಂತ ಓಡಾಡುತ್ತಿದ್ದೆವು. ಕಾಲಾವಧಿ ಸುತ್ತ, ಹಳ್ಳದ ಕುಂಟೆಯಿಂದ, ಅಡ್ಡೆ ಕಟ್ಟಿ ಆಚೆ ಒಂದು ಸೀಮೆ ಎಣ್ಣೆ ಟಿನ್ ಈಚೆ ಒಂದು ಟಿನ್ ಭರ್ತಿ, ನೀರು ಹೊರುವುದೇ ನನ್ನ ಡೂಟಿ; ಮಾಡುತ್ತಿದ್ದೆ;........

ರಾಮು ಬಂದ....ಆಗ, ನೀವು ಊರಲ್ಲಿರಲಿಲ್ಲ; ಚಿತ್ರಕಲ್ ದುರ್ಗಕ್ಕೆ ತಮ್ಮನ ಮಗಳ ಮದುವೆಗೆ ಹೋಗಿದ್ದಿರಿ........

# ಮದ್ದೂರು ವಾಲಿ

ಹೂಂ. ನನ್ನ ಮಗ....ರಾಮು. ಜೊತೆಗೆ, ನನ್ನ ಅಳಿಯನೂ.... ಅಡ್ಡೆಯನ್ನ ಅಲ್ಲೇ ಕುಕ್ಕರ ಬಡಿದೆ. ನೋಡು, ಮಾವ, ಮೊದಲು ಒಳ್ಳೆಯ ಸುದ್ದಿಯನ್ನೇ ಹೇಳುತ್ತೇನೆ ನಿನಗೆ, ಮೊಮ್ಮಗಳು ಹುಟ್ಟಿದಾಳೆ, ಅಂದ, ಅಳಿಯ, ನಗುತ್ತ. ಎರಡನೆಯದು ಏನಪ್ಪ, ಎಂಬೋ ಪೇಚಿಗೆ ಸಿಕ್ಕಿದ್ದ ನನಗೆ ಆ ಸುದ್ದಿ ಅಷ್ಟು ಒಗ್ಗಲಿಲ್ಲ. ಸಂಸಾರ ಅಂತ ಹೂಡಿದ ಮೇಲೆ ಕಾಲ ಕಾಲಕ್ಕೆ ಅಂಥವು ಆಗಲೇಬೇಕು, ಆಗಿಯೇ ಆಗುತ್ತೆ. ದೇವರ ನಿಯಾಮಕ. ಹೂಂ, ಆದಿರಲಿ, ಕೆಟ್ಟ ಸುದ್ದಿಯನ್ನೂ ಊದಿಬಿಡಪ್ಪ ಕಿವಿಯಲ್ಲಿ, ಅಂದೆ, ನೆಲದಮೇಲೆ ಕೂತುಕೊಂಡೇ. ಬಿಡು, ಮಾವ, ಕೆಟ್ಟದ್ದು ಅಂದರೆ ತೀರ ಅಂಥದ್ದೇನೂ ಅಲ್ಲ. ಪ್ರಪಂಚದಲ್ಲಿ ಇದುವರೆಗೂ ಎಷ್ಟೋ ಕಡೆ, ಎಂಥೆಂಥ ಮಹನೀಯರುಗಳಿಗೂ ಎಂಥೆಂಥ ಭಾರಿ ಅಧಿಕಾರಿಗಳಿಗೂ ಆಫೀಸರುಗಳಿಗೂ ಆಗಿರೋದೇನೇ ಅಂದ. ಸರಿ, ಗೊತ್ತಾಯಿತು, ಕೊಂಕಣ ಸುತ್ತಿ ಮೈಲಾರಕ್ಕೇಕೆ ಬರುತ್ತೀಯ, ರಾಮನ ತಾಯಿ ಸತ್ತು ಹೋದಳು, ತಾನೆ, ಅಂದೆ ನಾನು, ಎದ್ದು ನಿಂತುಕೊಂಡು.

ಸತ್ತುಗಿತ್ತಿಲ್ಲ. ಬದುಕಿದಾಳೆ. ಆದರೆ, ನಮಗೆ ಅವಳಿಂದ ಇನ್ನು ಪ್ರಯೋಜನ ಇಲ್ಲ. ಮದ್ದೂರಲ್ಲಿ ಒಬ್ಬನನ್ನು ಕಟ್ಟಿಕೊಂಡು ಅವಳು ಅಲ್ಲೇ ಇದಾಳೆ, ಊರು ಕೇರಿ ಬಿಟ್ಟು ಅಲ್ಲೇ ಮೊಖಾಮು, ಅಂದ.

ಕಂಠ ಮಟ್ಟ ರೋಷ. ಮೈ ಎಲ್ಲ ಉರಿ ಹತ್ತಿತು. ಅಡ್ಡೆ ಡಬ್ಬಗಳನ್ನೆ, ಎರಡನ್ನೂವೆ, ಕಾಲಿಂದ ಒದ್ದು ಜಜ್ಜಿದೆ. ನಿಂತಲ್ಲೇ ಹಾರಾಡಿ, ಕೆಟ್ಟ ಕೆಟ್ಟ ಮಾತನ್ನೆಲ್ಲ ಆಡಿದೆ. ನಿಮ್ಮ ಮುಂದೆ ಹೇಳುವುದಲ್ಲ ಅವನ್ನ. ಆವಳನ್ನೂ ಆ ಮದ್ದೂರವನನ್ನೂ ನರಕಕ್ಕೆ ತಳ್ಳಿದೆ; ಅಂಥ ರೋಗ ಇಂಥ ರೋಗ ತಗುಲಲಿ, ಅಂತ ಕೂಗಾಡಿದೆ. ಜೊತೆಗಾರರು ಚೆಂಗೂಲಿಯವರು

ಗಾರೆಯವರು ಹೆಣ್ಣಾಳು ಎಲ್ಲ ಬಂದರು,—ತಮಾಷೆ ನೋಡೋಕೆ. ಬಿಡೋ, ಹೊಗೆಯಾಡೋ ಸೌದೇನ ಹೊರಕ್ಕೆ ಬಿಸಾಕೊ, ಸೂಳೆ ಗಂಡ ಸುಖವಾಗಿ ಬಾಳ, ಅಂದರು ಕೆಲವರು. ಹೆಣ್ಣು ಜಾತೀನೇ ಹೀಗೆ ಅಂತ ಒಬ್ಬ ರೇಗಿದ, ಅಲ್ಲಿದ್ದ ಹೆಂಗಸರನ್ನ ನೋಡಿ. ಅವರೆಲ್ಲ ಗೊಳ್ಳಂತ ನಕ್ಕರು. ಹೆಂಡರನ್ನ ಆಳುವ ಛಾತಿ ಇಲ್ಲದವ, ನೀನೆಂಥ ಮಂಗ, ಅಂತ ನನ್ನನ್ನ ಕೇಳಿದ ಒಬ್ಬ ಹೋಗೋ, ಹೋಗಿ ಪಂಚಾಯ್ತಿ ಮಾಡಿ ಬಿಡಿಸಿಕೊಂಡುಬಾ, ಮೀಸೆ ಹೊತ್ತ ಭೂಪನಾಗಿದ್ದರೆ, ಅಂದರು. ನನಗಿನ್ನೂ ರೇಗಿತು. ಹೆಣ್ಣು ಜಾತಿಯನ್ನೆಲ್ಲ ಒಟ್ಟಾಗಿ ದೂರಬೇಡ, ನನ್ನ ತಾಯಿ ಇದ್ದರು, ಮಾಲಕ್ಷ್ಮಿ, ನನ್ನ ಮಗಳಿದಾಳೆ, ಪಾರ್ವತಿ ಅಂದೆ. ಹೆಣ್ಣನ್ನ ಬೈದರೆ, ನಿಮ್ಮ ನಿಮ್ಮ ತಾಯಿಯನ್ನು ಗಳಿದ ಹಾಗೆ, ಅಂದೆ. ಆದರೂ ನನ್ನ ಕೋಪ ಅಡಗಲಿಲ್ಲ— ಮೈ ಬೆಚ್ಚಗಾಗಿತ್ತು. ಮುಂಡಿಗೆ ನಡುಕ ಹತ್ತಿತ್ತು.

ಆಗ, ರಾಮು ಬಿದ್ದ, ನನ್ನ ಕಣ್ಣಿಗೆ. ನನ್ನ ಜ್ಞಾನ ಶುದ್ಧವಾಯಿತು. ಮಗನೆದುರು, ಹೆತ್ತ ತಾಯನ್ನ ಸೂಳೆ ಹಾದರಗಿತ್ತಿ ಅಂತ ಬೈದೆನಲ್ಲಾ, ಅಂತ, ನಾನು ನಾಲಿಗೆ ಕಚ್ಚಿಕೊಂಡೆ. ಎಳೆಯ ಮನಸ್ಸು; ತಾವರೆ ಹೂವಿನ ಎಸಳಿನಂತಹ ಹೃದಯ; ಜೀತಕ್ಕೆ ಕೊಟ್ಟ ಸಾಹುಕಾರನ ಹಿಂಸೆ ಬೇರೆ; ಹುಟ್ಟಿದ್ದೆಲ್ಲೋ ಸಾಕುವವರಾರೋ? ಅವನು ಹೆದರಿ ಚೀರಿದರೆ, ನನ್ನ ಗತಿ ಏನಾಗುತ್ತಿತ್ತು? ಪುಣ್ಯಕ್ಕೆ ಅಲ್ಲಿದ್ದವರೊಬ್ಬರಿಗೂ, ಮಗ ಯಾವುದು ಯಾರದು ಅಂತ ಗೊತ್ತಿರಲಿಲ್ಲ. ನಡೀರಪ್ಪ ಷೆಡ್ಡಿಗೆ, ಪಾಪಿಷ್ಠೆ ಕಥೆ ಇಲ್ಲಿ ಯಾಕೆ ಚಚ್ಚಾಕದಲ್ಲಿ ಅಂದೆ. ಅಯ್ಯನವರ ಮನೇಗೆ ಹೇಳಿ ಕಳುಹಿಸಿದೆ, ಒಪ್ಪತ್ತು ರಜ, ಅಂತ. ಅಂಗಡಿಯಿಂದ ಈರುಳ್ಳಿ ಆಲೂಗಡ್ಡೆ ತರಿಸಿದೆ, ಹುಳಿಗೆ. ಬಿಸ್ಕತ್ತು ಕಡಲೆಕಾಯಿ ಬೆಲ್ಲದುಂಡೆ ಎಲ್ಲ ತಂದೆ.

ಬಾಗಿಲನ್ನ ಬಿಗಿಯಾಗಿ ಎಳೆದುಕೊಳ್ಳಿ, ಅಂದ, ಅಳಿಯ, ಅವಳ ಕಥೆ ಹೇಳುವುದಕ್ಕೆ ಮೊದಲು. ಇದನ್ನೆಲ್ಲ ನಾನು ಹೇಗೆ ನಾಚಿಕೆ ಇಲ್ಲದೆ ಪಬ್ಲಿಕ್ ಮಾಡಲಿ? ಹೇಳು, ಅಂತೀರಾ? ಹುಂ. ಆಗಲಿ. ಹೆಣ್ಣು ಗಂಡು ಕೆಡುವುದು ಹೊಸದಲ್ಲ, ಲೋಕದಲ್ಲಿ. ಸುಗ್ರೀವನ ಹೆಂಡತೀನ

ವಾಲಿ ಹೊಡೆದುಕೊಂಡು ಹೋದ, ರಾಮಾಣ್ಯದ ಕಾಲದಲ್ಲೇ. ಸುಳ್ಳು ಪಳ್ಳು ಕಳ್ಳತನ, ಇವೆಲ್ಲ ನಮ್ಮ ಒಡಹುಟ್ಟು ಆದ್ದರಿಂದಲೇ, ಒಬ್ಬಳು ಒಬ್ಬನ ಕೂಡ, ಸಾಯುವ ತನಕ ಸುಖವಾಗಿ ಬಾಳಿದಳು, ಅನ್ನೋದೇ ನಿಜ ವಾದ ಆಶ್ಚರ್ಯದ ಕಥೆ. ಜಾರುವುದು ಸುಲಭ, ಸಡಿಲಬಿಟ್ಟರಾಯಿತು. ಜಾರಿದಳು ಅಂತ ಕಥೆ ಬರೆಯುವುದು ಸುಲಭ; ಲೇಖನೀನ ಹರಿಯಬಿಟ್ಟರೆ ಸಾಕು, ಬರೆಯುವವನ ಮನ ಎತ್ತ ಕಡೆ ಹರಿಯುತ್ತದೋ ಅತ್ತ ಕಡೆ ಅದೂ ಗೀಚುತಾನೇ ಹೋಗುತ್ತೆ. ಆದರೆ, ಏರುವುದೇ ಪ್ರಯಾಸ. ಗರತಿಯಾಗಿ ಬಾಳಿದಳು ಅಂತ ಬರೆಯುವ ಮನಸ್ಸು, ಅದಕ್ಕೆ ಬೇಕಾದ ಬಿಗಿ, ಇರುವವರೇ ಕಡಿಮೆ. ನಿಮ್ಮ ಮಗ, ಚಿಕ್ಕವರು, ಓದುತ್ತಿದ್ದರು, ಒಂದು ದಪ್ಪ ಪುಸ್ತಕ. ಏನಪ್ಪ ಅದು ಅಂತ ಮೊನ್ನೆ ಕೇಳಿದೆ; ಉದ್ದಕ್ಕೂ ಅದರಲ್ಲಿ ಬರೆದಿರುವ ಕಥೇನ ನನಗೆ ಹೇಳಿದರು. ಥೂ, ಥೂ! ಅದನ್ನ ಬರೆದವನ ಮನಸ್ಸು ಎಂಥ ಚರಂಡಿಯಲ್ಲಿ ಹರಿಯುತ್ತೆ! ಇನ್ನೊಬ್ಬರ ವಸ್ತುವಿಗೆ ಆಸೆಪಡುವ ಹಂದಿಗಳೇ ಉದ್ದಕ್ಕೂ, ಕಥೇಲಿ. ಪಾಪ, ಚಿಕ್ಕವರು ಅದೇ ಸರಿಯಾದ ಮಾರ್ಗ ಅಂತ ತಿಳಿದುಕೊಂಡರೋ ಏನೋ, ತುಂಬ ಖುಷಿಯಾಗಿ ಹೇಳು ತ್ತಿದ್ದರು, ನನಗೆ ಆ ಹೊಲಸನ್ನ! ಇಲ್ಲಿಂದ ಮಾರ್ಕೆಟ್ ತನಕ, ದಾರಿ ಸವೆಸಿದೆವು, ಆ ಕಥೆಯಿಂದ. ಅರ್ಧ ಕೇಳಿದ ಮೇಲೆ ನಾನೇ ಹೇಳಿದೆ, ಚಿಕ್ಕವರಿಗೆ, "ಸ್ವಾಮಿ ನಿಲ್ಲಿಸಿ, ಇನ್ನು ಇದು ಹೇಗೆ ಹೇಗೆ ಮುಂದಕ್ಕೆ ಹೋಗುತ್ತೆ ಅಂತ ನಾನೇ ತಿಳಿದುಕೊಂಡುಬಿಟ್ಟೆ. ಬರೆದಿರುವವನ ಮನಕ್ಕೆ ಮಾನ ಇಲ್ಲ. ಹಾದರದ ಮೇಲೇನೇ ಅವರ ಲೇಖನಿ ಓಡಾಡೋದು...." ಅಂದೆ. "ವಿಷ, ಸ್ವಾಮಿ, ಆ ಪುಸ್ತಕ; ಹೆಂಡದ ಸಮಾನ; ಚಟ ಹತ್ತಿದರೆ, ನಯನೀತೀನ್ನೇ ಇಲ್ಲಾ ಅನ್ನಿಸಿಬಿಡುತ್ತದೆ", ಅಂದೆ, ಚಿಕ್ಕಯ್ಯನವರಿಗೆ.

ಶೂರ ಅಂದರೆ ಯಾರು? ಆಸೆಯೂ ಇದ್ದು, ವಸ್ತು ಇದ್ದು, ಅವಕಾಶವೂ ಇದ್ದಾಗ, ಥೂ! ಇದರ ಹಣೇಬರಹ ಇಷ್ಟೆ, ಇದು ತಳ ಇಲ್ಲದ ಜೌಗು, ಅಂತ ಕಾಲಿಡದೆ ಮೆಯಿನ್ ರೋಡ್ನಲ್ಲೇ ಹೋಗುತ್ತಾನಲ್ಲಾ, ಅವನು.

ಗಂಡು ಹೆಣ್ಣು ನಾಯಿಜನ್ಮ ತಾಳುವುದಕ್ಕೆ ತಾಪತ್ರಯಪಡಬೇಕೇನು? ಅವಳಿಗೆ ಖಾಯಿಲೆ, ಅವನು ಗೈರ್‌ಹಾಜರು, ಬೇರೆ ಗಿರಾಕಿ, ಸೂಳೆ ಕೇರಿ, ಪೋಲೀ ಸಹವಾಸ, ಸಿನಿಮಾ ಕಥೆ, ಹಾಳು ಪೇಪರುಗಳು, ಜಾತ್ರೆ ಸಂತೆ ಪರಿಷೆ ತೇರು ನೂರೆಂಟಿರುತ್ತದೆ; ಅವನಿಗೂ, ಅವಳಿಗೂ. ಗಂಡ ಹೆಂಡತಿ ರಾಗಿರೊಟ್ಟಿ ಮೇಲೆ ಬೆಣ್ಣೆಮುದ್ದೆ ಇಟ್ಟಹಾಗಿದ್ದರೂ ಅವರು ಜನ್ಮಪೂರ ಒಬ್ಬರಿಗೊಬ್ಬರು ಕಣ್ಣಾಗಿ, ಒಂದೇ ಪಕ್ಷಿಯ ರೆಕ್ಕೆಯಾಗಿ ಹೊಂದಿಕೊಂಡು ತೃಪ್ತಿಯಾಗಿ ಆನಂದವಾಗಿ ಇರುತ್ತಾರಲ್ಲಾ, ಬಹು ಮಂದಿ, ಅವರಿಗೆ ಕೈಮುಗಿಯಬೇಕು, ಕಲಿತ ಮಂದಿ. ಅವರನ್ನ ಹಾಡಬೇಕು, ಹೊಗಳಬೇಕು, ಮೆರಸಬೇಕು; ಎಡವುವುದೇ ದೊಡ್ಡಸ್ತಿಕೆ, ಜಾರುವುದೇ ಜಾಣತನ, ನಾಯಿಯದೇ ನಾಗರಿಕ ಅಂದರೆ, ಹೆಂಡ ಕುಡಿದವನೇ ಹೆಡ್ ಮೇಸ್ತ್ರಿ, ಹುಚ್ಚನಿಗೇ ಮೆಚ್ಚುಗೆ, ಹಂದಿಗೇ ಮರ್ಯಾದೆ, ಬೆತ್ತಲೆ ತಿರುಗುವ ಮೃಗಕ್ಕೇ ಪೂಜೆ.

ಅಳಿಯ ಹೇಳುತ್ತಾ ಇದ್ದ ಕಥೆ ಕೇಳಿ, ನಾನು ನನ್ನನ್ನೇ ದೂರಿದೆ. ಹೌದು; ಪರಸ್ಥಳದಲ್ಲಿ ನಾನೂ ಜಾರಿದ್ದೆ; ಈಗ, ಇವಳೂ ಕೆಸರು ತುಳಿದಳು, ನಾನು ಕೈ ಬಿಟ್ಟಾಗ, ಅದಕ್ಕೆ ನಾನೇಕೆ ಅವಳ ಮೇಲೆ ಕಿಡಿ ಕಾರಬೇಕು? ಗಂಡ ಕೊಡುವ ಎಲ್ಲ ಪರೀಕ್ಷೆಯಲ್ಲೂ ಹೆಂಡತಿ ಗೆಲ್ಲಲೇ ಬೇಕು, ಅವನು ಮಾತ್ರ ಒಂದು ಪರೀಕ್ಷೆಯನ್ನೂ ಒಪ್ಪುವುದಿಲ್ಲ, ಅಂದರೆ, ಅರ್ಥವಿಲ್ಲ. ಮರ ಇಲ್ಲದೆ ಬಳ್ಳಿ ನೆಟ್ಟಗೆ ನಿಂತೀತೆ? ಗಂಡಿನ ಆಸರೆ ಹೆಣ್ಣಿಗೆ ಬೇಕೇ ಬೇಕು. ಸುತ್ತಿದ್ದ ಮರ ಮಾಯವಾದರೆ ಬೆಳೆಯುವ ಬಳ್ಳಿ ಏನು ಮಾಡೀತು? ಅಹಲ್ಯೆಯಂಥ ರುಷಿ ಪತ್ನೀನೇ, ಬೆಳಗಿನಜಾವ ಒಬ್ಬ ರೂಪವಂತ ಬಂದು, ಬಾಗಿಲಾಚೆ ಶಿಳ್ಳೆ ಹೊಡೆದಾಗ, ಬಾಗಿಲು ತೆಗೆದಳಂತೆ, ಅಂಥವಳಿಗೆ ಶ್ರೀರಾಮ ಮೋಕ್ಷ ಕೊಟ್ಟು ಬದುಕು ಹೋಗು ಅಂದನಂತೆ, ಇನ್ನು ಇವಳನ್ನೇಕೆ ಶಪಿಸಬೇಕು, ನಾನು? ನಾನೂ ಆ ರುಷಿಯ ಹಾಗೆಯೇ ಇಕೊ, ಸಂಸಾರ ಸಗಣಿ ಸಮಾನ ಅಂತ ಬಿಸಾಕಿ ಊರಾಚೆ ಹೊರಡಲಿಲ್ಲವೆ? ಯಾವನೋ ದೇವೇಂದ್ರ ಬಂದ; ಅಹಲ್ಯೆಯನ್ನ ಊರಿಂದ ಹಾರಿಸಿದ. ಕಾವಿ ಉಡುವ ಯೋಚನೆ ಮಾಡುವವರಿಗೆಲ್ಲ ಇದೇ ಗೋಳು ಕಾದೇ

ಇರಬೇಕು, ಅಂತ ನಾನು ಅಂದುಕೊಂಡೆ. ಅಲ್ಲದೆ, ಇನ್ನೊಂದು, ಅವಳನ್ನ ಬೆಂಗಳೂರಲ್ಲಿ ಅರಳೇಪೇಟೆಯಲ್ಲಿರಿಸಿ ಅಷ್ಟು ಪ್ರೀತಿಯಿಂದ ಸಾಕಿದಮೇಲೆ, ಹಳ್ಳಿ ಕಡೆಗೆ ಕಳುಹಿಸಿದವನು, ಬೊಂಬಾಯಿಗೆ ಹೊರಟೆ, ತಿರುಗಿ, ನಾಲ್ಕೈದು ವರ್ಷ ಮಾತನಾಡಿಸಲೇ ಇಲ್ಲ—ಅದು ನ್ಯಾಯವೋ? ಅದಕ್ಕೆಲ್ಲ ಮುಯ್ಯಿ ತೀರಿಸಬೇಕೆಂದು ಕಾದಿತ್ತು, ಅದರ ಆತ್ಮ. ಬೊಂಬಾಯಿಂದ ಬಂದಮೇಲೆ, ನನ್ನ ರೀತೀನೇ ಕೊಂಚ ತಲೆ ಕೆಳಗು ಅಂತ ಅವಳಿಗೆ ತಿಳಿದಿರಬೇಕು. ಏನೇನೋ ಕಲಿತು ಬಂದ ಕದೀಮ ಅಂತ ಅವಳು ಪತ್ತೆ ಹಚ್ಚಿರಬೇಕು. ಹಚ್ಚದೆ ಇರುತ್ತಾಳೆಯೆ? ಗಂಡಸರು ಮಂಕರು; ಆದರೆ, ಹೆಣ್ಣುಮಕ್ಕಳು ಅಂಥ ವಿಷಯದಲ್ಲಿ ತುಂಬ ಜಾಣರು. ಎಂಜಲು, ಅಂದರೆ, ಅವರಿಗೆ ಕ್ಷಣದಲ್ಲಿ ತಿಳಿಯುತ್ತೆ.

ಅದೂ ಅಲ್ಲದೆ, ನನ್ನದಿನ್ನೊಂದು ತಪ್ಪು ಇದೆ. ಹೆಣ್ಣನ್ನು ಒಲಿಸಬೇಕಾದರೆ, ಗಂಡು ಬಾಯಿ ಮುಚ್ಚಿ ಕೂಡಬೇಕು. ಗುಡುಗು ಮಳೆ ಏನೇ ಬರಲಿ, ಕೋಣನ ಹಾಗೆ ಕುಕ್ಕರಿಸಿರಬೇಕು. ಸಮಯ ಕಾದು, ನಿಧಾನವಾಗಿ, ಹೌದು, ಹೌದು, ನೀನು ಹೇಳಿದ್ದೆಲ್ಲ ಸರಿ, ಆ....ದ... ರೆ, ಅಂತ ಪಾಯಿಂಟ್ ಹಿಡಿದು ಸಾಧಿಸಬೇಕು. ಅದು ಜಾಣತನ. ಅದನ್ನು ಮಾಡದೆ, ಅವಳು ಎತ್ತರದ ಶ್ರುತಿಯಲ್ಲಿ ಕಿರಿಚಿದರೆ, ಇವನು ಅದಕ್ಕಿಂತ ಎತ್ತರದಲ್ಲಿ ಹಿಡಿದರೆ, ಭೂತಕ್ಕೆ ಧೂಪ ಹಾಕಿದ ಹಾಗಾಗುತ್ತೆ. ಗಂಡಿಗಿಂತ ಹೆಣ್ಣಿಗೆ ಕರಕರೆ ಹೆಚ್ಚು, ಕಸಿವಿಸಿ ಅಪಾರ. ಅವಳು ರೇಗೋದು ಕೂಗೋದು ಚೌಕಾಶಿ ಮಾಡೋದು ಸಹಜ. ಗಳಿಸುವುದು ಗಂಡಾದರೆ, ಉಳಿಸುವುದು ಬೆಳೆಸುವುದು ಹೆಣ್ಣಿನ ಡ್ಯೂಟಿ. ಬಿರುಗಾಳಿ ಬಡೀತದಲ್ಲಾ ಅಂತ ಏಕ್‌ದಂ ನಿಲ್ಲಿಸುವುದಕ್ಕೆ ಹೊರಟರೆ, ನಮ್ಮ ಪ್ರಾಣವೇ ಪಡಚ. ಇಲ್ಲ, ನಾವೂ ಎದುರುಗಾಳಿ ಬೀರಿದರೆ, ಅದೂ ಅನಾಹುತ. ಆದರೆ, ಅವಳು ಕೂಗಾಡುತ್ತಿದ್ದಾಗ, ನಾನೂ ಕೆರಳಿಬಿಡುತ್ತಿದ್ದೆ.

ಮುಖ್ಯ, ಯಾರು ಯಾರಿಗೆ ವಶ? ಹೇಳಿ. ಡ್ರೈವರಪ್ಪ ಚಕ್ರ ಹಿಡಿದು ಕೂತುಕೊಳ್ಳುತ್ತಾನೆ, ಸೀಟಿನ ಮೇಲೆ. ಭಲಾ, ಈ ಭೂತ ನನ್ನ

ವಶ, ಅಂತ ಬಾಯಿ ಚಪ್ಪರಿಸುತ್ತಾನೆ. ಹಾಗೆ ತಿರುಗಿಸಿದರೆ ಹಾಗೆ ವಾಲುತ್ತೆ, ಹೀಗೆ ತಿರುಗಿಸಿದರೆ ಹೀಗೆ ತಿರುಗುತ್ತೆ, ಅಂದುಕೊಳ್ಳುತ್ತಾನೆ. ಅದನ್ನೊತ್ತಿದರೆ ಉತಾರ್‌ನಲ್ಲಿ ಹತ್ತುತ್ತೆ, ಇದನ್ನದುಮಿದರೆ, ಇಳಿಜಾರಲ್ಲಿ ನಿಲ್ಲುತ್ತೆ, ಅಂತ ಭುಜ ತಟ್ಟಿಕೊಳ್ಳುತ್ತಾ. ಆದರೆ, ಆಗೋದೇನು, ಬಸ್‌ನಲ್ಲಿ? ಮುಗುಚೋದೆಷ್ಟು, ಡಿಕ್ಕಿ ಎಷ್ಟು, ನಿಂತಲ್ಲಿಂದ ಕದಲದೆ ಸತ್ಯಾಗ್ರಹ ಹೂಡೋದೆಷ್ಟು! ಜೀವ ಇಲ್ಲದ ಎಂಜಿನ್ನೇ ಹೀಗೆ, ಹೋಗೋ ಮುಂಕೆ, ನಾನು ನಿನ್ನ ವಶವಾದೇನಾ, ಅಂತ ಹಿಂಗಾಲಿಂದ ಒದೆಯುವಾಗ, — ಜೀವವೂ ಇದ್ದು, ಹಸಿವು ದಾಹ ತೀಟೆ ತಿನಿಸು ಉರಿನೋವು ಹಮ್ಮು ಹಂಕಾರ ಎಲ್ಲ ಬಲವಾಗಿ ಬೇರೂರಿರುವ ಹೆಣ್ಣು, ಅಥವ, ಗಂಡು, ಮತ್ತೊಬ್ಬರ ವಶ ಹೇಗಾದೀತು? ಭ್ರಮೆ, ಬರೀ ಭ್ರಾಂತು, ವಶ ಅಂತ ತಿಳಿಯುವುದು.

ಬಿಡೋ, ಈ ಮಗ, ನಿನ್ನ ಹೆಂಡತಿ, ನೀನು, ಎಲ್ಲ ಸುಖವಾಗಿರುವಾಗ, ಕಣ್ಣು ಮುಚ್ಚಿಬಿಡುತ್ತೇನೆ, ಅಂದೆ, ಅಳಿಯನಿಗೆ. ರಾಮು, ಪಾಪ, ನಾನು ಮಾತಾಡುತ್ತಿದ್ದಾಗ ನನ್ನ ಮೋರೇನ, ಅವನ ಭಾವಯ್ಯ ಮಾತಾಡುತ್ತಿದ್ದಾಗ ಅವನ ಮೋರೇನ, ನೋಡುತ್ತಲೇ ಕೂತಿದ್ದ. ಏನೂ ಅರಿಯದ ಕೂಸು. ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದರೆ, ಈ ವಯಸ್ಸಿಗೆ ಆ ಮಗು ಕಿಲೀನಾಗಿ ಗುಂಡು ಗುಂಡಗೆ ಕ್ರಾಪ್ ಬಾಚಿಕೊಂಡು ಏಬೀಸೀಡಿ ಹೇಳುತ್ತ, ನಿಮ್ಮ ಮಗನ ಹಾಗೆ, ಬೈಸಿಕಲ್ಲಿನ ಮೇಲೆ, ದೊಡ್ಡ ಇಸ್ಕೂಲಿಗೆ ಹೋಗುತ್ತಿದ್ದ; ನನ್ನ ನತದೃಷ್ಟ ಹೊಟ್ಟೆಯಲ್ಲಿ ಹುಟ್ಟಿ, ಕಂಡವರ ಮನೆ ಕದನ್ನಕ್ಕೆ ಕಾದು, ಕಡ್ಡಿ ಮೈ, ಕಜ್ಜಿ ಕಾಲು, ಮೋಟು ಬನೀನು, ಹರಕಪರಕ ಕೂದಲು, ಸೊಟ್ಟ ಪಟ್ಟ ಹಲ್ಲು, ಉಬ್ಬಿದ ಹೊಟ್ಟೆ, ಹೀಗಾಗಿ, ತಾಯಿ ತೊರೆದ ತಬ್ಬಲಿಯಾಗಿ, ನನ್ನ ಪೆಡ್ಡಲ್ಲಿ ಶೇಂಗಾಯಿ ತಿನ್ನುತ್ತಿತ್ತು. ನನ್ನ ಕಣ್ಣಲ್ಲಿ ನೀರಿಳಿಯಿತು. ರಾಮುನನ್ನ ಬಿಡಿಸಬೇಕು, ಇನ್ನೆಷ್ಟು ತಿಂಗಳಿದೆ ಇನ್ನೂ, ಅಂತ ಗೋಡೆ ನೋಡಿದೆ. ಆದಕ್ಕೆ ಸಂಕ್ರಾಂತಿ ದಿನ ಸುಣ್ಣ ಬಳಿದಿದ್ದೆ; ಮರೆತೇ ಹೋಗಿತ್ತು, ನನಗೆ. "ಇವನ ಹಂಗೊಂದಿದೆ ನನಗೆ; ಇವನನ್ನ ಬಿಡಿಸಿತಂದರೆ, ಆಯಿತು ನನ್ನ ಆಯುಸ್ಸಿನ ಆಸೆ", ಅಂದೆ.

ಆಗ, ಅಳಿಯ ನನ್ನ ಕೈ ಹಿಡಿದ. "ನಡೆದಿರುವುದನ್ನ ಕೇಳು! ರಾಮು, ಪಾಪ, ಓಡಿ ಬಂದುಬಿಟ್ಟಿದಾನೆ. ಆ ಸಾಹುಕಾರನ ಬಾಯಿ ಸಕ್ಕರೆ, ಕೈ ಕೊಕ್ಕರೆ. ಅವನು ಮೊನ್ನೆ ಎರಡನೆಯದೊಂದನ್ನು ತಂದ. ಆದೊಂದು ಲಂಕಿಣಿ. ಅದಕ್ಕೆ ಮನೆಯಲ್ಲಿರುವ ಆಳುಗಳ ಮೇಲೆಲ್ಲ ಗುಮಾನಿ. ಎಲ್ಲದರ ಮೇಲೂ ನಿಗ. ಎಂಜಲು ಕೈ ಕೊಡವಿದರೆ, ಅಗಳು ಹಾರುತ್ತಲ್ಲಾ, ಎಂಬ ಭಳು. ಎಷ್ಟು ಮಕ್ಕಳನ್ನು ತಿಂದು ಹುಟ್ಟಿದಾಳೋ ಆ ತಾಟಕಿ! ಸಾಹುಕಾರನ ಮೊದಲನೆಯ ಸಂಬಂಧದ ಮಕ್ಕಳನ್ನೇ ಹೊಡೆದು ಸಾಯಿಸುತ್ತಾಳೆ. ಇನ್ನು ರಾಮುನನ್ನ ಉಳಿಸಿಯಾಳೆಯೆ?" ಎನ್ನುವುದರೊಳಗೆ, ರಾಮು, ಆ ಮಾರಮ್ಮನ ರೂಪ ನೆನೆದು ಗೊಳೋ, ಅಂತ ಅಳುವುದಕ್ಕೆ ಪ್ರಾರಂಭ ಮಾಡಿದ.

"ಸಿಲ್ಲಿಸೋ, ಮಗ! ಸಾಕು. ಲೋಕ ಇನ್ನೂ ಪೂರ್ತ ಪಾಷಾಣ ಆಗಿಲ್ಲ. ನಮ್ಮ ಅಯ್ಯನವರ ಹತ್ತಿರ ಹೋಗಿ ಬರೋಣ", ಅಂದೆ, ನಾನು. ರಾಮುನ ಮೇಲೆ, ಅವನನ್ನ ಕಾಣದೆ ಇದ್ದರೂ, ಅವರ ಕಡೆಗಣ್ಣು ಆಗಲೇ ಬಿದ್ದಿತ್ತು. ಪಾಪ, ಅವರಿಗೆ ಮಕ್ಕಳೇ ಇರಲಿಲ್ಲ. ಇದ್ದಿದ್ದರೆ, ಚೊಚ್ಚಲು ಕೂಸಿಗೆ ರಾಮುನಷ್ಟೇ ವಯಸ್ಸಾಗಿರೋದು. ಆ ತಾಯಿಗೂ ಮಕ್ಕಳು ಅಂದರೆ ತಂಬ ಪ್ರೀತಿ; ಕಂಡವರ ಕೂಸನ್ನೆಲ್ಲ ಬಾಚಿ ತಬ್ಬುತ್ತಾರೆ; ಕೆಲವರಂತಲ್ಲ, ಅವರು. ಅವಕ್ಕೆ ತಲೆ ಬಾಚಿ ಅಂಗಿ ತೊಡಿಸಿ ಬೊಟ್ಟಿಟ್ಟು ಹೂ ಮುಡಿಸಿ....ಕಾಲು ಚೀಲ ಹೊಲೆದು....ಕುಲಾವಿ ಹಾಕುತ್ತಲೇ ಇರುತ್ತಾರೆ, ಉಲ್ಲನ್ ದಾರ ಉದ್ದನೆ ಸೂಜಿ ಹಿಡಿದು.

ಅವರಿಬ್ಬರೂ ಮನೆಯಲ್ಲಿರುವಾಗ, ಊಟ ಮಾಡಿ ಎಲೆ ಅಡಿಕೆ ಜಗಿದು ಈಚೆಗೆ ಬರುವಾಗ, ಬಾಗಿಲಾಚೆ ಇವನನ್ನೂ ನಿಲ್ಲಿಸಿಕೊಂಡು ಕೆಮ್ಮೋಣ. ಏನೋ ಚೆಲುವಾ, ಅಂತಾರೆ, ಅಯ್ಯನವರು. ಯಾವುದೋ ಈ ಮಗ, ಅಂತಾರೆ ಅಮ್ಮಾವರು. ಇವನನ್ನೇನೋ ನೀನು ಜೀತಕ್ಕಿರಿಸಿದ್ದು, ಅಂತಾರೆ, ಅಯ್ಯನವರು. ಪಾಪ, ಪಾಪ, ಏನೂ ಅರಿಯದ ಹಸುಳೆ, ಎಷ್ಟು ಬಡವಾಗಿಬಿಟ್ಟಿದೆ, ಅಂತಾರೆ ಅಮ್ಮಾವರು. ಅಲ್ಲಿಗೆ ಗೆದ್ದೆ,

ನಾನು. "ಅಯ್ಯೋ! ಈ ಮಗ ಸಂಕಟಪಡುವುದನ್ನ ನಾನು ನೋಡಲಾರೆ! ಆ ಸಾಹುಕಾರ ಹೊಡೀತಿದ್ದ, ಅಂತ ಕಣ್ಣೀರಿಡುತ್ತಿದ್ದಿ; ಇನ್ನು ಇವನು ಅಲ್ಲಿಗೆ ಹೋದರೆ, ತಪ್ಪಿಸಿಕೊಂಡ ಕೋಪಕ್ಕೆ, ಬರೆ ಹಾಕಿದರೂ, ಹಾಕಿದ", ಅಂತ, ಕಣ್ಣೊರಸಿಕೊಳ್ಳುತ್ತಾರೆ, ಅಮ್ಮಾವರು. ನನ್ನ ಹಣ ಕೂಡಿರುವುದು, ಕೊಂಚ ಕಮ್ಮಿ ಇದ್ದರೂ, ಭರ್ತಿ ಮಾಡೇ ಮಾಡುತ್ತಾರೆ, ಅಯ್ಯನವರು.... ಹೀಗೆ, ಅಳಿಯನಿಗೆ ಭವಿಷ್ಯ ಹೇಳಿದೆ.

ಚಾಚೂ ತಪ್ಪದೆ, ಹಾಗೆಯೇ ನಡೆಯಿತು. ಕೆಮ್ಮಿದೆ, ಬಾಗಿಲು ತೆರೆದರು, ಕೇಳಿದರು, ಕಣ್ಣೀರಿಟ್ಟರು; ಹನ್ನೊಂದೂವರೆ ರೂಪಾಯಿ ಚಿಲ್ಲರೆ, ಸಾಲದೆ ಬಂತು; ಸೇರಿಸಿಕೊಟ್ಟರು. ಕಿರುಬನ ಬಾಯಿಂದ ಕುರಿಮರಿಯನ್ನ ಈಚೆಗೆ ಎಳೆದೆ. "ಊರಿಗೆ ಹೋಗಿ ನಿನ್ನ ಹುಡುಗ, ನಿನ್ನ ಹೆಂಡತಿ, ತಾಯಿ ಮಗ ತಂದೆ ಮೂರು ಜನವೂ ಇಲ್ಲಿಗೆ ಬನ್ನಿ; ಎಲ್ಲರೂ ಸೇರಿ ಒಂದು ಬಾರಿ ತಿರುಪತಿಗೆ ಹೋಗಿ ಬನ್ನಿ, ನಿಮ್ಮ ಸಮಸ್ತ ಸಾಲವೂ ಅಲ್ಲಿಗೆ ಪರಿಹಾರ", ಅಂದರು, ಅಮ್ಮಾವರು.

ತಾಯಿ ಮಗ ತಂದೆ, ತಾಯಿ ತಂದೆ ಮಗ, ಮಗ ತಾಯಿ ತಂದೆ,.... ಮೂರೇ ಮೂರು ಮಾತು, ಸಣ್ಣ ಮಾತು,....ಹೂವು ಜೇನು ಹುಳ, ನೆಲ ಬೀಜ ಪೈರು....ಒಂದಿಲ್ಲದಿದ್ದರೆ ಇನ್ನೊಂದು ಕುರುಡು,....ಈಗ, ನನ್ನ ಸಂಸಾರದಲ್ಲಿ, ಆಣಿ ಮುತ್ತೇ ಇಲ್ಲ. ಹಣೆ ಇದೆ, ಮೂಗಿದೆ, ಮಧ್ಯೆ ಕಣ್ಣೇ ಇಲ್ಲ.

ಕಳಂಕವನ್ನೇ ಅರಿಯದ ಆ ಸೀತಾಮ್ಮನೆದುರು ನನ್ನ ಹೆಂಡತೀ ಅಸಹ್ಯ ಹೇಳಿ, ಅವಳು ತಪ್ಪಿದಳು, ನಾನು ಅಯೋಗ್ಯ, ರಾಮು ತಬ್ಬಲಿ, ಅಂತ ನಾನು ಹೇಳಲಿಲ್ಲ. ಹೇಳುವುದಕ್ಕೆ ನಾಲಗೆ ಏಳಲಿಲ್ಲ. "ಹೌದವ್ವಾ! ಇಲ್ಲಿಗೇ ಕರೆದು ತರುತ್ತೇನೆ, ಇವನನ್ನ: ಹಾಲಲ್ಲಾದರೂ ಅದ್ದಿ, ನೀರಲ್ಲಾದರೂ ಅದ್ದಿ" ಅಂದೆ. ಅಯ್ಯನವರದು ಕೊಂಚ ಕುಚೇಷ್ಟೆ. "ಯಾವುದರಲ್ಲಿ ಅದ್ದಿದರೂ ಉಸಿರು ಕಟ್ಟುತ್ತಲ್ಲೋ?" ಅಂದರು. ಅಮ್ಮಾವರು ನಕ್ಕರು.

"ಅಪಶಕುನ ನುಡಿಯಬೇಡಿ" ಅಂತ ಗಂಡನನ್ನು ದಂಡಿಸಿದರು. "ಹಾಗೆಯೇ ಮಾಡು, ಚೆಲುವಾ" ಅಂತ, ಅಭಯ ಇತ್ತರು.

ಅಳಿಯನ ಸಂಗಡಲೇ ರಾಮನನ್ನೂ ಹಣವನ್ನೂ ರವಾನಿಸಿದೆ. ನಾನು ಹೇಗೆ ನನ್ನ ಹಳ್ಳಿಗೆ ಮುಖ ತೋರಿಸಲಿ? ಹೆಂಡತಿಯನ್ನೂ ಮದ್ದೂರಿನವನ ಹತ್ತಿರ ಜೀತಕ್ಕಿರಿಸಿದಾನೆ, ಅಂತ ಗೌಡರೇ ನಗುತ್ತಾರೆ. ಜಗುಲಿ ಜಗುಲೀಲೂ ಕಿಲಕಿಲ ಅಂತಾರೆ, ಜನ. ಅಂಥ ತೋಳನೇ ಹಳ್ಳಕ್ಕೆ ಬಿದ್ದರೆ, ಆಳಿಗೊಂದು ಕಲ್ಲು ಬೀರುತ್ತಾರೆ. ಇನ್ನು ನನ್ನಂಥ ಕುರಿ ಬಿದ್ದರೆ....ಕೇಳಬೇಕೆ?

ರೈಲು ಸ್ಟೇಷನ್ ತನಕ ಹೋದೆ, ಅಷ್ಟೆ. ಬಿಡಿಸಿದ ಹುಡುಗನನ್ನ ಆದಷ್ಟು ಬೇಗ ಬೆಂಗಳೂರಿಗೆ ಕಳುಹಿಸಿಕೊಡು, ಅಂತ, ಅಳಿಯನಿಗೆ ನೂರು ಸಲ ಹೇಳಿದ್ದೆ. ಆದರೂ, ಅವನ ಮುಖವೇ ಕಾಣೆ, ತಿಂಗಳಾಯಿತು, ಎರಡು ತಿಂಗಳಾಯಿತು. ಅಮ್ಮಾವರಿಗೂ ಹೇಳಿ ಹೇಳಿ ಸಾಕಾಯಿತು. ಊರಿಗೆ ಹೋಗಿ ವಿಚಾರಿಸೋ, ಅಂತ ನನ್ನನ್ನ ತಿವಿಯುವರು. ನನಗೋ ಊರು ಅಂದರೆ, ಎದೆ ನಡಗುವುದು. ಮಗಳ ಮನೆಗೂ ನಮ್ಮೂರಿಗೂ ಹತ್ತು ಹರದಾರಿ, ದೂರ ನಡೆದೇ ಹೋಗಬೇಕು, ಇಲ್ಲ, ಎತ್ತಿನಗಾಡಿ. ಅವನ ಹಳ್ಳಿಯೂ ಮದ್ದೂರು ಹೊಳೆ ಈಚೇನೇ.

ಕಾದು ಕಾದು ಕಣ್ಣಲ್ಲಿ ಹೂವು ಬಿತ್ತು. ಆಮೇಲೊಂದು ಕಾಗದ ಬಂತು, ಅಯ್ಯನವರ ಹೆಸರಿಗೆ, ಕವರು. ರಾಮನನ್ನ ತಾವೇ ಇರಿಸಿ ಕೊಂಡಿದೇವೆ, ನಾನೂ ಅವರ ಊರಿಗೆ ಹೋಗಬೇಕು, ಬೆಂಗಳೂರು ಇನ್ನು ನನಗೆ ಒಗ್ಗುವುದಿಲ್ಲ, ಅಂತ ಬರೆದಿದ್ದ.

# ತೂಕಡಿಕೆ

ಒಬ್ಬರಿಗೂ ನಾನು ಸುದ್ದಿ ಬಿಟ್ಟುಕೊಡಲಿಲ್ಲ. ನನ್ನ ಮನಸ್ಸಿನಲ್ಲೇ ಕಡೆದೆ ವಿಚಾರವನ್ನ. ಹೋದರೆ ಹೇಗೆ? ಇದ್ದರೆ ಹೇಗೆ? ರಾತ್ರಿ ಎಲ್ಲಾ ನಿದ್ದೆಯೇ ಬರದು. ನಿನ್ನೆ ಬಂದೇಬಿಟ್ಟ ಖುದ್ದಾಗಿ, ವಾರಂಟ್ ಸಹಿತ, ಅಳಿಯ ಅವನ ಊರಿಂದ.

ಇನ್ನೇನು? ನನಗೂ ವಯಸ್ಸಾಯಿತು, ಮುದುಕ ಮುಶಿಲಿವಾಡು ಅಂತ ಚಿಕ್ಕವರೆಲ್ಲ, ಬಟ್ಟತಲೆ ನರೆಕೂದಲು ಗುಳಿಬಿದ್ದ ಕೆನ್ನೆ ನೋಡಿ ನಗುತ್ತಿದಾರೆ. ನಗಲಿ, ನಗಲಿ, ಎಷ್ಟು ದಿನ ನಕ್ಕಾರು? ಅವರಿಗೂ ಅದೇ ಗತಿ ಅಂತ ಕಾಣರು. ನನ್ನ ಮೈ ಪಿಸುಗುಟ್ಟುತ್ತಲೇ ಇದೆ, ಇಟ್ಟಿಗೆ ಹೊರುವಾಗ ಕೈ ನಡುಗುತ್ತಲ್ಲೋ, ಅಡ್ಡೆ ಹೊರುವಾಗ ಮಂಡಿ ಮಡಿಸಿ ಹೋಗುತ್ತಲ್ಲೋ, ಕಿವಿಗೆ ಮಂದ ಬಡಿಯಿತಲ್ಲೋ, ಅಂತ!

ಕಾವೇರಿ ಹೊಳೆ. ಭಾಗಮಂಡಲದಲ್ಲಿ ಕೂಸು; ತೊದಲುತ್ತ ತೆವಳುತ್ತ ಚುಂಚನಕಟ್ಟೆಗೆ ಬರುತ್ತದೆ, ಮಗು! ಅಲ್ಲಿಂದ ಮುಂದಕ್ಕೆ ಓಟ, ಕುಣಿತ, ಕುಪ್ಪಳಿಸುವ ಕೂಸು! ಕನ್ನಂಬಾಡಿಕಟ್ಟೆ ತೂರಿಕೊಂಡು, ಶಿವಸಮುದ್ರದಲ್ಲಿ ಥಂಗ್ ಅಂತ ನೆಗೀತಾಳೆ, ಪ್ರಾಯ ತುಂಬಿದ ಹುಡುಗಿ; ಹೋಗ್ತಾ ಹೋಗ್ತಾ, ಮದ್ರಾಸ್ ಕಡೆಯುವರು ಹೇಳ್ತಾರೆ, ಶಾಂತ; ನಿಧಾನ. ತಂಜಾವೂರು ಅಂತ ಇದೆಯಂತೆ. ಅಲ್ಲಿ, ನೀರು ಹರಿಯುತ್ತೋ ಇಲ್ಲ ನಿಂತೇ ಇದೆಯೋ ಅಂತ ತೋರುತ್ತದಂತೆ. ಅಂತು ಇಂತು, ಗಲಾಟೆ ಇಲ್ಲದೆ, ಬೆಳದಿಂಗಳಿನ ಕಾಡಿನಲ್ಲಿ, ಮರದ ಮೇಲಿಂದ ಹಳದಿ ಮುದಿ ಎಲೆ ಸದ್ದಿಲ್ಲದೆ ನೆಲಕ್ಕುದುರುವಂತೆ, ಕಾವೇರಿ ಹತ್ತಾರು ಸೀಮೆ ಸುತ್ತಿ, ಆತ್ಮವನ್ನ ದಡದಿಂದ ದಡದವರೆಗೂ ಅಗಲವಾಗಿ ಆಳವಾಗಿ ತುಂಬಿ, ಸಮುದ್ರ ಎಂಬ ಪರಮಾತ್ಮನಲ್ಲಿ ಸೇರಿಸಿಬಿಡುತ್ತಾಳಂತೆ. ಹಾಗೆಯೇ, ಈ ಜೀವವೂ ಇಷ್ಟು

ತನಕ ಹರಿದು ಬಂತು; ಅಗಲವೋ ಆಳವೋ, ಅಂತೂ, ನಿಧಾನವಾಗುತ್ತ ಬಂತು; ಇನ್ನು ಸಮುದ್ರ ಸೇರುವುದೊಂದೇ ಬಾಕಿ.

ಅದೂ ಅಲ್ಲದೆ, ಈ ನಾಟಕವನ್ನ ಎಷ್ಟು ದಿವಸ ನೋಡುತ್ತ ಕುಳಿತಿರುವುದು? ಬೇಜಾರು ಹಿಡಿಸುತ್ತದೆ, ಈ ಬದುಕು. ಸೂರ್ಯ ಮೂಡೋದು ಮುಳುಗುವುದು, ಜೀವ ಹುಟ್ಟೋದು ಸಾಯೋದು, ಮಳೆಗಾಲ ಚಳಿಗಾಲ ಬಿಸಿಲುಗಾಲ, ಕೂಸು ಹುಡುಗ ಧಾಂಡಿಗ ಮುದುಕ, ಹೂಡೋದು ಬಿತ್ತೋದು ಬೆಳೆಯೋದು ಕುಯ್ಯುವುದು, ಕೇರೋದು ಕುಟ್ಟೋದು, ಉಣ್ಣೋದು, ಕೂಡಿಡುವುದು ಕಾದಾಡುವುದು ಕಳೆದುಕೊಳ್ಳುವುದು, ಸ್ನೇಹ ಸೆಣಸು ಸೇಡು—ಒಂದೇ ರಾಗ, ಒಂದೇ ತಾಳ; ತೂಕಡಿಕೆ ಬರುತ್ತದೆ. ಆ ತೂಕಡಿಕೆಯೇ ಮುಪ್ಪು; ನಿದ್ದೆಯೇ, ಸಾವು! ಅಷ್ಟಲ್ಲದೆ, ಅದರೊಳಗೇನಿದೆ, ಮಹಾ?

ನನ್ನ ಚಿಕ್ಕಂದಿನಲ್ಲಿ ನಡೀತಿದ್ದರು; ಈಗ ಬಸ್ಸು ರೇಲು, ನಾಳೆ ಏರೋಪ್ಲೇನು; ಅಂತೂ, ಹೊರಡೋದು ಹೋಗೋದು ಸೇರುವುದು, ಅದು ಮಾತ್ರ ನಿತ್ಯ. ಹಿಂದೆ, ಬಿಲ್ಲು ಬಾಣ, ಗದೆ, ಒನಕೆ; ಈಗ, ಗನ್ನು ಗುಂಡು ಬಾಂಬು; ಅಂತೂ, ಕಡಿಯುವುದು, ಕೊಲ್ಲುವುದು, ತಪ್ಪಿಲ್ಲ. ಹಿಂದೆ, ಕಂಬಳಿ ಹೊದೆಯುವುದು. ಈಗ, ಅದೇ ಕಂಬಳೀನ ಹೊಲೆದು ತೊಟ್ಟು ಸೂಟು ಅಂತ ಮೆರೀತಾರೆ. ಬೆಚ್ಚಗಿರುವುದೊಂದು ಬೇಕು, ಅವತ್ತೂ, ಇವತ್ತೂ.

ಪ್ರಪಂಚ ಇರುವವರೆಗೂ, ಕೂಡೋದು ಹುಟ್ಟೋದು ತೆವಳೋದು ತೊದಲೋದು ನಗೋದು ಅಳೋದು ಕಿತ್ತು ತಿನ್ನೋದು ಬಡಿದು ಹಂಚೋದು, ದೊಡ್ಡದಕ್ಕೆ ತಲೆ ಬಾಗೋದು ಸಣ್ಣದಕ್ಕೆ ಹೇಸೋದು, ಜೀವಕ್ಕೆ ಇದ್ದೇ ಇರುತ್ತದೆ. ನಾಲಗೆಗೆ ರುಚಿ, ಕಣ್ಣಿಗೆ ಅಂದ, ಕಿವಿಗೆ ಇಂಪು, ಮನಕ್ಕೆ ತಂಪು, ಸೋಂಕಿಗೆ ಸುಖ, ತರತರಹ, ಕಾಲಕಾಲಕ್ಕೆ; ಆದರೆ ಆನಂದ, ಒಂದೇ.

ಇದೇ ಆಟ ನಾವೂ ಆಡುತ್ತೇವೆ; ಸುತ್ತ, ಜನ ಆಡುವುದನ್ನ ನೋಡುತ್ತೇವೆ. ಆದ್ದರಿಂದ, ತೂಕಡಿಕೆ, ನಿದ್ದೆ; ನ್ಯಾಯವೆ. ನನ್ನ ವಯಸ್ಸಾದವನಿಗೆ, ಸಾಕಪ್ಪ, ಮನೆಗೆ ಹೋಗೋಣ, ಅನ್ನಿಸಿಬಿಡುತ್ತದೆ. ಮನೆಯಿಂದ 'ಬಾ' ಅಂತ ಕರೀತಾನೆ. ಅದನ್ನೇ ಕಾಯ್ತಿರುತ್ತಾನೆ ತಿಮ್ಮಪ್ಪ, ತಂದೆ; ಕೂಗು ಕೇಳಿಸುತ್ತಲೂ 'ಬಂದೆ', ಅಂತ ಓಡುತ್ತಾನೆ, ಪ್ರಾಣಿ. ಅವನ ಮನೆಗೆ ಅವನು ಹೋದರೆ, ಉಳಿದವರು ಯಾಕೆ ಅಳಬೇಕು?....

ಹೋಗಿ ಬರುತ್ತೇನೆ, ಸ್ವಾಮಿ. ಅಳಿಯ ಮಗಳು ರಾಮು ಇವರನ್ನ ನೋಡುತ್ತ, ಹಳ್ಳಿ ಮಂಚದಮೇಲೆ, ಹಣತೆ ಬೆಳಕಿನಲ್ಲಿ, ಹೊಳೆಯಾಚೆ ದನ ಕರ ಕುರಿ ಅಂಬಾ ಅಂತ ಕೂಗೋ ಸದ್ದನ್ನು ಕಿವೀಲಿ ತುಂಬಿಕೊಂಡು, ಕಣ್ಣು ಮುಚ್ಚುತ್ತೇನೆ. 'ಏನೋ ಚೆಲುವಾ', ಅಂತ ದೇವರು ಕೇಳಿದರೆ, ನನಗೆ ಯಾರ ಮೇಲೂ ಕೋಪ ಇಲ್ಲ, ಯಾರ ಮೇಲೂ ಹೊಟ್ಟೆಕಿಚ್ಚಿಲ್ಲ ದೇವರು, ನೀನು ಆಡಿಸಿದೆ, ನಾನು ಆಡಿದೆ, ಆದರೆ ಇಂಥ ಪಾರ್ಟು ಇನ್ನು ಯಾರಿಗೂ ಕೊಡಬೇಡಪ್ಪ, ಬಡತನ ಗೋಳು ರೋಗ ಇವು ಇಲ್ಲದೆ ಇರುವ ನಾಟಕ ಕಟ್ಟಿ ಜಗತ್ತಿನಲ್ಲಿ ಆಡಿಸು, ಪರಮಾತ್ಮಾ, ಅಂತ ಜವಾಬು ಕೊಡುತ್ತೇನೆ. ನನಗೇನು ಭಯ, ದೇವರಾದರೇನು? ಯಾರಾದರೇನು?

ಓಂಕಾರ್ ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ೨.

# ನಾ. ಕಸ್ತೂರಿ
## ಇವರ ಇತರ ಕನ್ನಡ ಗ್ರಂಥಗಳು

**ಕಾದಂಬರಿಗಳು**

ಗಾಳಿಗೋಪುರ
ಚಕ್ರದೃಷ್ಟಿ
ಶಂಖವಾದ್ಯ

**ಹರಟೆಗಳು**

ಯದ್ವಾ ತದ್ವಾ
ಡೊಂಕುಬಾಲ
ಅಲ್ಲೋಲ—
—ಕಲ್ಲೋಲ
ಉಪಾಯ ವೇದಾಂತ

**ನಾಟಕಗಳು**

ಗಗ್ಗಯ್ಯನ ಗಡಿಬಿಡಿ ಮತ್ತು ಇತರ ನಾಟಕಗಳು
ರಾಮಕೃಷ್ಣಯ್ಯನ ದರ್ಬಾರು
ಚಿತ್ರವಿಚಿತ್ರ

**ಕವನಸಂಗ್ರಹ**

ಅಣಕು—ಮಿಣುಕು

“ಅನರ್ಥಕೋಶ” ಎಂಬ ಹೊಸ ಬಗೆಯ ಅರ್ಥಕೋಶ

**ಭಾಷಾಂತರಗಳು**

ಪಾತಾಳದಲ್ಲಿ ಪಾಪಚ್ಚಿ
ದಿಲ್ಲೀಶ್ವರನ ದಿನಚರಿ

---

ಅಚ್ಚಿನಲ್ಲಿ: **ಮಂಕುಬೂದಿ**

---

# ‘ಬಾಳಬೆಳಕಿನ’ ಇತರ ಕೃತಿಗಳು

## ಸಿದ್ಧವಾಗಿವೆ

೧. ಕರ್ಮಯೋಗಿ — ತಿರುಕ
೨. ಉದ್ಧಾರ — ,,
೩. ಹಣ್ಣು – ಕಾಯಿ — ,,
೪. ಮೂರು ನಾಟಕಗಳು — ,,
  ೧. ಕರ್ಮಶೇಷ
  ೨. ಗುರುದಕ್ಷಿಣೆ
  ೩. ಶಿವನ ಸಂಸಾರ
೫. ರಣಚಂಡಿ — ,,
೬. ಉಷಾ ಸ್ವಯಂವರ — ,,
೭. ಕೊನೆಯ ಗುಟುಕು — ,,
೮. ಪೂಜೆ — ,,
೯. ದೇವರ ಉಪವಾಸ — ,,
೧೦. ಮೂಳೆಯ ಹಂದರ — ,,
೧೧. ಚಿತೆಯೋ ಸಮಾಧಿಯೋ? — ,,
೧೨. ದೇವರು ಯಾರು? — ಶ್ರೀ ಮೂರ್ತಿ

## ಅಚ್ಚಿನಲ್ಲಿ

೧. ಶಿವಪ್ರಸಾದ — ತಿರುಕ
೨. ಸಾಧನ — ಶ್ರೀ ಮೂರ್ತಿ